epaper - karnatakamalla.com

ಕರ್ನಾಟಕ ಮಲ್ಲ

TEL: 24715208, Fax:24715237

ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ


KARNATAKA MALLA, MUMBAI

ಸಂಪುಟ : 35 ಸಂಚಿಕೆ : 139 ರವಿವಾರ 21-06-2026 ಬೆಲೆ: ₹ 6 ಪುಟಗಳು - 12

ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ಕರ್ನಾಟಕ ಮಲ್ಲ
KARNATAKA MALLA MUMBAI
ಸಾಪ್ತಾಹಿಕ ಪುರವಣಿ
ಪುಟ - II 21-06-2026



2026 ರ ಜೂನ್ 21 ಭಾನುವಾರದಂದು ಹನ್ನೆರಡನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷದ ಪ್ರಮುಖ ರಾಷ್ಟ್ರೀಯ ಕಾರ್ಯಕ್ರಮವು ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೋಲ್ಕತ್ತಾದಲ್ಲಿ ಹಮ್ಮಿಕೊಳ್ಳಲಿದೆ. ಆಯುಷ್ ಸಚಿವಾಲಯವು ನಿಗದಿಪಡಿಸಿದ ಈ ವರ್ಷದ ಅಧಿಕೃತ ಥೀಮ್ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ'. ಅರ್ಥಾತ್ ವಯಸ್ಸಾದಂತೆ ಬರುವ ದೈಹಿಕ ಸಮಸ್ಯೆಗಳನ್ನು ನಿಯಂತ್ರಿಸಿ, ಸಕ್ರಿಯ ಮತ್ತು ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವುದು. ಈ ವರ್ಷದ ಮುಖ್ಯ ಕಾರ್ಯಕ್ರಮವು ಕೋಲ್ಕತ್ತಾದ 'ಸಿಟಿ ಆಫ್ ಜಾಯ್' ನಲ್ಲಿ ನಡೆಯುತ್ತಿದೆ.

ವಯಸ್ಸಾದಂತೆ ಉತ್ತಮ ಆರೋಗ್ಯ, ಮಾನಸಿಕ ಶಾಂತಿ ಮತ್ತು ಸಕ್ರಿಯ ಜೀವನಶೈಲಿಯನ್ನು ಉತ್ತೇಜಿಸುವುದರ ಮೇಲೆ ಇದನ್ನು ಕೇಂದ್ರೀಕರಿಸಲಾಗಿದೆ.

ಇಂದಿನ ವೇಗದ ಜಗತ್ತಿನಲ್ಲಿ ಮಾನಸಿಕ ಶಾಂತಿ ಮತ್ತು ದೈಹಿಕ ಸದೃಢತೆ ಎಲ್ಲರಿಗೂ ಅತ್ಯಗತ್ಯ. ಯೋಗವು ನಮ್ಮ ದೇಹವನ್ನು ಮಾತ್ರವಲ್ಲದೆ ನಮ್ಮ ಮನಸ್ಸನ್ನೂ ಆರೋಗ್ಯವಾಗಿಡುವ ದಿವ್ಯಸಾಧನವಾಗಿದೆ. ಯೋಗದ ಈ ಮಹತ್ವವನ್ನು ಎತ್ತಿ ತೋರಿಸಲು, ಅಂತಾರಾಷ್ಟ್ರೀಯ ಯೋಗ ದಿನವನ್ನು ಪ್ರತಿ ವರ್ಷ ಪ್ರಪಂಚದಾದ್ಯಂತ ಆಚರಿಸಲಾಗುತ್ತಿದೆ. ಈ ದಿನವು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಪ್ರಪಂಚದಾದ್ಯಂತ ಜನರು ತಮ್ಮ ದಿನಚರಿಯಲ್ಲಿ ಯೋಗವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ. ಶಾಲಾಕಾಲೇಜುಗಳು ಸೇರಿದಂತೆ ವಿವಿಧ ಸರ್ಕಾರಿ ಸಂಸ್ಥೆಗಳು ಆ ಸಮಯ ಯೋಗ ತರಬೇತಿಗಳನ್ನು ಆಯೋಜಿಸುತ್ತವೆ.

ಜೂನ್ 21 ವಿಶ್ವ ಯೋಗದಿನ. 2014 ರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಪ್ರಸ್ತಾವನೆಯ ಮೇರೆಗೆ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಜೂನ್ 21 ನ್ನು ಅಂತಾರಾಷ್ಟ್ರೀಯ ಯೋಗ ದಿನವೆಂದು ಘೋಷಿಸಿತು. ಈ ಜಾಗತಿಕ ಮನ್ನಣೆಯು ಪ್ರಪಂಚದಾದ್ಯಂತ ಯೋಗ ಸಂಬಂಧಿತ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳಲ್ಲಿ ವ್ಯಾಪಕ ಭಾಗವಹಿಸುವಿಕೆಗೆ ಕಾರಣವಾಯಿತು.

ಯೋಗವು ದೇಹವನ್ನು ಆರೋಗ್ಯವಾಗಿಡುವ ಒಂದು ವಿಧಾನ ಮಾತ್ರವಲ್ಲ, ಅದು ಆತ್ಮ, ಮನಸ್ಸು ಮತ್ತು ದೇಹದ ನಡುವೆ ಸಮತೋಲನವನ್ನು ಸೃಷ್ಟಿಸುವ ಅದ್ಭುತ ವಿಜ್ಞಾನವೂ ಆಗಿದೆ. ಆಧುನಿಕ ಜೀವನದ ಗಡಿಬಿಡಿಯ ಮತ್ತು ಒತ್ತಡದ ದಿನಚರಿಯಲ್ಲಿ, ಯೋಗವು ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿಯೂ ನಮಗೆ ಶಾಂತಿಯನ್ನು ನೀಡಬಲ್ಲದು. ಈ ಮಹತ್ವವನ್ನು ಅರ್ಥಮಾಡಿಕೊಂಡು ಪ್ರತಿವರ್ಷ ಜೂನ್ 21 ರಂದು ಅಂತಾರಾಷ್ಟ್ರೀಯ ಯೋಗ ದಿನವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಯೋಗದ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವ ಉದ್ದೇಶದಿಂದ ಈ ದಿನವನ್ನು ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ನಿಯಮಿತ ಯೋಗಾಭ್ಯಾಸವು ನಮ್ಮ ದೇಹವನ್ನು ಸದೃಢಗೊಳಿಸುತ್ತದೆ, ಆರೋಗ್ಯಕರಗೊಳಿಸುತ್ತದೆ ಮತ್ತು ರೋಗಗಳ ವಿರುದ್ಧ ಹೋರಾಡಲು ಶರೀರವನ್ನು ಹೆಚ್ಚು ಸಮರ್ಥವಾಗಿಸಲು ಸಹಾಯ ಮಾಡುತ್ತದೆ.ಈ ದಿನವನ್ನು ಭಾರತೀಯ ಸಂಸ್ಕೃತಿಯಲ್ಲಿ ಮಾತ್ರವಲ್ಲದೆ ಯೋಗ ವಿಜ್ಞಾನದಲ್ಲಿಯೂ ಅತ್ಯಂತ ಸಕಾರಾತ್ಮಕ ಮತ್ತು ಶಕ್ತಿಯುತ ದಿನವೆಂದು ಪರಿಗಣಿಸಲಾಗಿದೆ. ಅದಕ್ಕಾಗಿಯೇ ಈ ದಿನಾಂಕವನ್ನು ಜಾಗತಿಕ ಯೋಗ ಆಚರಣೆಗೆ ಆಯ್ಕೆ ಮಾಡಲಾಗಿದೆ.

ಶತಮಾನಗಳಿಂದಲೂ ಯೋಗವಿದ್ಯೆ ಭಾರತ ಸಂಸ್ಕೃತಿಯಲ್ಲಿ ಮುಂಚೂಣಿಯಲ್ಲಿದೆ. ಭಾರತವು ಯೋಗಕ್ಕೆ ಅಂತಾರಾಷ್ಟ್ರೀಯ ಮನ್ನಣೆ ಕೊಡಿಸಿತು ಮತ್ತು ಯೋಗದ ಮೂಲಕ ಸಾಂಸ್ಕೃತಿಕ ಏಕತೆಯನ್ನು ಉತ್ತೇಜಿಸಿತು. ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ. ಇದು ದೇಹವನ್ನು ರೋಗ ಮುಕ್ತವಾಗಿಸುತ್ತದೆ ಮತ್ತು ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ. ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಈ ಚಟುವಟಿಕೆ ಈಗ ವಿದೇಶಗಳಲ್ಲಿಯೂ ಜನಪ್ರಿಯವಾಗಿದೆ. ಯೋಗವು ನಮ್ಮ ಜೀವನದಲ್ಲಿ ಅಪಾರ ಮಹತ್ವವನ್ನು ಹೊಂದಿದೆ. ಯೋಗವು ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿಯೂ ಪ್ರಯೋಜನಕಾರಿಯಾಗಿದೆ. ಮಕ್ಕಳಿಂದ ಹಿಡಿದು ವಯಸ್ಕರವರೆಗೆ ಎಲ್ಲರಿಗೂ ದಿನವೂ ಸ್ವಲ್ಪ ಹೊತ್ತಾದರೂ ಯೋಗ ಮಾಡಲು ಸೂಚಿಸಲಾಗಿದೆ. ಇದು ದೇಹವನ್ನು ಬಲಪಡಿಸುತ್ತದೆ, ದೈಹಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ದೂರವಿಡುತ್ತದೆ, ರೋಗಗಳಿಂದ ಪರಿಹಾರ ನೀಡುತ್ತದೆ ಮತ್ತು ಹೊಟ್ಟೆಯಿಂದ ಮೂಳೆಗಳವರೆಗಿನ ಸಮಸ್ಯೆಗಳನ್ನು ದೂರವಿಡುವಲ್ಲಿ ಪರಿಣಾಮಕಾರಿಯಾಗಿದೆ. ಆದ್ದರಿಂದಲೇ ಯೋಗದ ಮಹತ್ವದ ಬಗ್ಗೆ ಜನರಿಗೆ ಅರಿವು ಮೂಡಿಸಲು, ಪ್ರತಿ ವರ್ಷ ಜೂನ್ 21 ರಂದು ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತದೆ. ಈ ಸಮಯದಲ್ಲಿ ಪ್ರಪಂಚದಾದ್ಯಂತದ ಜನರು ಸಾಮೂಹಿಕವಾಗಿ ಯೋಗಾಭ್ಯಾಸ ಮಾಡುತ್ತಾರೆ.

ಕಳೆದ ವರ್ಷ 2025 ರ ಯೋಗ ದಿನದ ಥೀಮ್ 'ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ' ಎಂದಿತ್ತು.2024 ರ ಅಂತಾರಾಷ್ಟ್ರೀಯ ಯೋಗ ದಿನದ ಥೀಮ್ 'ಸ್ವಯಂ ಮತ್ತು ಸಮಾಜಕ್ಕಾಗಿ ಯೋಗ' ಎಂದಿರಿಸಲಾಗಿತ್ತು. ಯಾರು ಯೋಗವನ್ನು ನಿಯಮಿತವಾಗಿ ಮಾಡುತ್ತಿದ್ದಾರೋ ಅಂತಹ ವ್ಯಕ್ತಿಯ ಜೀವನವನ್ನು ಹೆಚ್ಚು ಕಾಲ ಬದುಕುವಂತೆ ಮಾಡುತ್ತದೆ.ಮನ್ ಕಿ ಬಾತ್ ಸಮಯದಲ್ಲಿ ಪ್ರಧಾನಿ ಮೋದಿ ಅವರು ಯೋಗದ ಮೂಲಕ ಇಡೀ ಜಗತ್ತನ್ನು ಆರೋಗ್ಯವಂತವಾಗಿಸುವುದು ನಮ್ಮ ಗುರಿ ಎಂದು ಹೇಳುತ್ತಿದ್ದಾರೆ.

ಯೋಗವು ಆರೋಗ್ಯಕರ ಮತ್ತು ಸಮತೋಲಿತ ಜೀವನಶೈಲಿಯನ್ನು ಪ್ರೋತ್ಸಾಹಿಸುತ್ತದೆ. ಧ್ಯಾನ ಮತ್ತು ಯೋಗವು ಮಾನಸಿಕ ಶಾಂತಿಯನ್ನು ನೀಡುತ್ತದೆ, ಇದು ಸಕಾರಾತ್ಮಕ ಆಲೋಚನೆಗಳಿಗೆ ಕಾರಣವಾಗುತ್ತದೆ ಮತ್ತು ಜನರು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುತ್ತದೆ.ಯೋಗವು ವ್ಯಕ್ತಿಗೆ ಎಲ್ಲ ರೀತಿಯಿಂದಲೂ ಪ್ರಯೋಜನಕಾರಿಯಾಗಿದೆ. ಅದೇ ಸಮಯದಲ್ಲಿ ಉತ್ತಮ ಜೀವನಶೈಲಿಗಾಗಿ ಯೋಗವೂ ಸಹ ಅನಿವಾರ್ಯ. ಒಬ್ಬ ವ್ಯಕ್ತಿಗೆ ಚಿಕ್ಕ ವಯಸ್ಸಿನಿಂದಲೇ ಯೋಗ ಮಾಡುವ ಅಭ್ಯಾಸವಿದ್ದರೆ, ಆ ದೇಹವು ರೋಗಗ್ರಸ್ತವಾಗುವುದಿಲ್ಲ, ಬೊಜ್ಜು ಕೂಡಾ ದೂರವಿರುತ್ತದೆ, ಚರ್ಮವು ಹೊಳೆಯುತ್ತದೆ, ಕೂದಲು ಬಲಗೊಳ್ಳುತ್ತದೆ, ಅಧಿಕ ರಕ್ತದೊತ್ತಡ ಅಥವಾ ಅಧಿಕ ಕೊಲೆಸ್ಟ್ರಾಲ್‌ನಂತಹ ಸಮಸ್ಯೆಗಳೂ ಬರುವುದಿಲ್ಲ.ಅವರ ಮಾನಸಿಕ ಸಮಸ್ಯೆಗಳು ಸಹ ದೂರವಿರುತ್ತವೆ ಎಂದಿದ್ದಾರೆ. ಯೋಗವು ಪ್ರಾಚೀನ ಭಾರತೀಯ ಸಂಪ್ರದಾಯವಾಗಿದ್ದು ಈಗ ಅದು ಜಾಗತಿಕ ಸಂಸ್ಕೃತಿಯ ಭಾಗವಾಗಿದೆ. ಯೋಗದ ಮೂಲಕ ಭಾರತ ಮತ್ತು ವಿದೇಶಗಳ ಯೋಗಿಗಳು ಪರಸ್ಪರ ಸಂಪರ್ಕ ಸಾಧಿಸುತ್ತಾರೆ ಮತ್ತು ಸಾಂಸ್ಕೃತಿಕ ಏಕತೆಯನ್ನು ಉತ್ತೇಜಿಸುತ್ತಾರೆ. ಯೋಗವು ಸಾವಿರಾರು ವರ್ಷಗಳ ಹಿಂದೆಯೇ ಭಾರತದಲ್ಲಿ ಹುಟ್ಟಿಕೊಂಡ ಒಂದು ಪ್ರಾಚೀನ ವಿದ್ಯೆಯಾಗಿದೆ. ಇದು ದೈಹಿಕ ಭಂಗಿಗಳು (ಆಸನಗಳು), ಉಸಿರಾಟದ ವ್ಯಾಯಾಮಗಳು (ಪ್ರಾಣಾಯಾಮ), ಧ್ಯಾನ ಮತ್ತು ನೈತಿಕ ತತ್ವಗಳನ್ನು ಒಳಗೊಂಡಿದೆ. ಯೋಗಾಭ್ಯಾಸವು ಮನಸ್ಸು, ದೇಹ ಮತ್ತು ಚೈತನ್ಯವನ್ನು ಸಂಯೋಜಿಸುವ ಮೂಲಕ ವ್ಯಕ್ತಿಯ ಸಮಗ್ರ ಯೋಗಕ್ಷೇಮವನ್ನು ಉತ್ತೇಜಿಸುತ್ತದೆ.

ಅಂತಾರಾಷ್ಟ್ರೀಯ ಯೋಗ ದಿನವನ್ನು ಜೂನ್ 21 ರಂದು ಆಚರಿಸುವುದಕ್ಕೂ ಮಹತ್ವವಿದೆ. ಉತ್ತರ ಗೋಳಾರ್ಧದಲ್ಲಿ ವರ್ಷದ ಅತಿ ಉದ್ದದ ದಿನವಾದ ಬೇಸಿಗೆಯ ಗ್ರೀಷ್ಮ ಸಂಕ್ರಾಂತಿಯೊಂದಿಗೆ ಆ ದಿನ ಹೊಂದಿಕೆಯಾಗಿದೆ. ಈ ಆಯ್ಕೆಯು ಸೂರ್ಯ ಮತ್ತು ಯೋಗದ ನಡುವಿನ ಪ್ರಮುಖ ಸಂಪರ್ಕವನ್ನು ಸಂಕೇತಿಸುತ್ತದೆ, ಪ್ರಕೃತಿ ಮತ್ತು ಮಾನವ ದೇಹದ ನಡುವಿನ ಸಾಮರಸ್ಯವನ್ನು ಒತ್ತಿಹೇಳುತ್ತದೆ.

ಯೋಗದ ಸಾರ್ವತ್ರಿಕ ಆಕರ್ಷಣೆ ಮತ್ತು ಸಮಾಜದಲ್ಲಿ ಉತ್ತಮ ಆರೋಗ್ಯ ಮತ್ತು ಸಾಮರಸ್ಯವನ್ನು ಉತ್ತೇಜಿಸುವ ವೇದಿಕೆಯಾಗಿರುವುದನ್ನು ಗಮನಿಸಿ ಅದರ ಸಾಮರ್ಥ್ಯವನ್ನು ವಿಶ್ವಸಂಸ್ಥೆಯೂ ಗುರುತಿಸಿದ್ದು ಮಾನ್ಯತೆ ನೀಡಿದೆ. ಯೋಗಾಭ್ಯಾಸ ಮಾಡುವುದರಿಂದ, ವ್ಯಕ್ತಿಯು ಸ್ವಯಂ ಅರಿವು, ಸಾವಧಾನತೆ ಮತ್ತು ಜೀವನಕ್ಕೆ ಸಮತೋಲಿತ ವಿಧಾನವನ್ನು ಬೆಳೆಸಿಕೊಳ್ಳಬಹುದು.

ಈ ದಿನದಂದು ಯೋಗ ಉತ್ಸಾಹಿಗಳು ಮತ್ತು ವೃತ್ತಿಪರರು ವಿವಿಧ ನಗರಗಳು ಮತ್ತು ಪಟ್ಟಣಗಳಲ್ಲಿ ಕಾರ್ಯಾಗಾರಗಳು, ಪ್ರದರ್ಶನಗಳು ಮತ್ತು ಸಾಮೂಹಿಕ ಯೋಗ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ಈ ಕಾರ್ಯಕ್ರಮಗಳು ಎಲ್ಲಾ ವಯಸ್ಸಿನ ಜನರು ಯೋಗದ ಪರಿವರ್ತನಾ ಶಕ್ತಿಯನ್ನು ಅನುಭವಿಸಲು ಪ್ರೋತ್ಸಾಹಿಸುತ್ತವೆ. ಅಂತಾರಾಷ್ಟ್ರೀಯ ಯೋಗ ದಿನದ ಸಮಗ್ರ ಸ್ವರೂಪವು ವಿವಿಧ ಸಂಸ್ಕೃತಿಗಳು, ಧರ್ಮಗಳು ಮತ್ತು ನಂಬಿಕೆಗಳ ವ್ಯಕ್ತಿಗಳು ಒಟ್ಟಾಗಿ ಸೇರಿ ಯೋಗದ ಏಕತೆಯನ್ನು ಆಚರಿಸಲು ಅನುವು ಮಾಡಿಕೊಡುತ್ತದೆ.ಅಂತಾರಾಷ್ಟ್ರೀಯ ಯೋಗ ದಿನವು ಯೋಗದ ಅಪಾರ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವ ಪ್ರಮುಖ ಜಾಗತಿಕ ಆಚರಣೆಯಾಗಿದೆ. ಈ ದಿನವನ್ನು ಆಚರಿಸುವ ಮೂಲಕ ಪ್ರಪಂಚದಾದ್ಯಂತ ಜನರು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು, ಆಂತರಿಕ ಸಾಮರಸ್ಯವನ್ನು ಬೆಳೆಸಿಕೊಳ್ಳಲು ಮತ್ತು ತಮ್ಮೊಂದಿಗೆ ಮತ್ತು ತಮ್ಮ ಸುತ್ತಲಿನ ಪ್ರಪಂಚದೊಂದಿಗೆ ಸಂಪರ್ಕದ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಪ್ರೇರೇಪಿಸಲ್ಪಡುತ್ತಾರೆ.

ಶ್ರೀನಿವಾಸ ಜೋಕಟ್ಟೆ.

ಆರಂಭವಾದ ಕತೆ: ಡಿಸೆಂಬರ್ 11, 2014 ರಂದು 'ಅಂತಾರಾಷ್ಟ್ರೀಯ ಯೋಗ ದಿನ'ವನ್ನು ಜೂನ್ 21 ರಂದು ಆಚರಿಸುವ ಪ್ರಸ್ತಾಪವನ್ನು ವಿಶ್ವ ಸಂಸ್ಥೆಯ 177 ಸದಸ್ಯರು ಅನುಮೋದಿಸಿದರು. ಭಾರತದ ಈ ಪ್ರಸ್ತಾವನೆಯನ್ನು 90 ದಿನಗಳಲ್ಲಿ ಸಂಪೂರ್ಣ ಬಹುಮತದಿಂದ ಅಂಗೀಕರಿಸಲಾಗಿತ್ತು.ಇದು ವಿಶ್ವ ಸಂಸ್ಥೆಯಲ್ಲಿ ಪ್ರಸ್ತಾವಿತ ದಿನವನ್ನು ಅಂಗೀಕರಿಸಲು ತೆಗೆದುಕೊಂಡ ಅತ್ಯಂತ ಕಡಿಮೆ ಸಮಯವಾಗಿದೆ ಎಂಬ ಹೆಗ್ಗಳಿಕೆ ಪಡೆದಿದೆ. ಅದಕ್ಕಿಂತ ಮೊದಲು ಸೆಪ್ಟೆಂಬರ್27, 2014 ರಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಅಳವಡಿಸಿಕೊಳ್ಳುವಂತೆ ವಿಶ್ವ ಸಮುದಾಯಕ್ಕೆ ಮನವಿ ಮಾಡಿದ್ದರು. ಅಲ್ಲಿ ಅವರು 'ಯೋಗವು ಭಾರತದ ಪ್ರಾಚೀನ ಸಂಪ್ರದಾಯದ ಅಮೂಲ್ಯ ಕೊಡುಗೆಯಾಗಿದೆ. ಇದು ಮನಸ್ಸು ಮತ್ತು ದೇಹದ ಏಕತೆಯನ್ನು ಸಂಕೇತಿಸುತ್ತದೆ; ಮನುಷ್ಯ ಮತ್ತು ಪ್ರಕೃತಿಯ ನಡುವೆ ಸಾಮರಸ್ಯವಿದೆ; ಇದು ಒಳನೋಟ, ಸಮತೋಲನ ಮತ್ತು ತೃಪ್ತಿಯನ್ನು ಒದಗಿಸುತ್ತದೆ ಮತ್ತು ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಸಮಗ್ರ ವಿಧಾನವನ್ನು ಸಹ ನೀಡುತ್ತದೆ. ಇದು ಕೇವಲ ವ್ಯಾಯಾಮದ ಬಗ್ಗೆ ಅಲ್ಲ, ಬದಲಾಗಿ ನಿಮ್ಮೊಳಗೆ, ಪ್ರಪಂಚ ಮತ್ತು ಪ್ರಕೃತಿಯೊಳಗೆ ಏಕತೆಯ ಭಾವವನ್ನು ಕಂಡುಕೊಳ್ಳುವುದರ ಬಗ್ಗೆ ಇದೆ. ನಮ್ಮ ಬದಲಾಗುತ್ತಿರುವ ಜೀವನಶೈಲಿಯ ಬಗ್ಗೆ ಜಾಗೃತರಾಗುವ ಮೂಲಕ, ಹವಾಮಾನ ಬದಲಾವಣೆಯನ್ನು ನಿಭಾಯಿಸಲು ನಮಗೆ ಸಹಾಯ ಮಾಡಬಹುದು. ಆದ್ದರಿಂದ ಅಂತರರಾಷ್ಟ್ರೀಯ ಯೋಗ ದಿನವನ್ನು ಅಳವಡಿಸಿಕೊಳ್ಳುವತ್ತ ನಾವು ಕೆಲಸ ಮಾಡೋಣ' ಎಂದಿದ್ದರು ಸಾಮಾನ್ಯ ಸಭೆಯಲ್ಲಿ.ಮುಖ್ಯವಾಗಿ ಯೋಗದಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಿಸುತ್ತದೆ. ದೇಹವು ಆರೋಗ್ಯಕರವಾಗಿರುತ್ತದೆ ಮತ್ತು ರೋಗಗಳಿಂದ ರಕ್ಷಿಸಲ್ಪಡುತ್ತದೆ. ಯಾರಾದರೂ ಯಾವುದೇ ಕಾಯಿಲೆಯಿಂದ ಬಳಲುತ್ತಿದ್ದರೆ, ನಿಯಮಿತ ಯೋಗವು ಅದನ್ನು ತಡೆಗಟ್ಟುವಲ್ಲಿ ಪರಿಣಾಮಕಾರಿ ಎನಿಸಿದೆ. ಹಾಗಾಗಿ ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗವನ್ನು ಮಾಡಲು ಮರೆಯದಿರೋಣ.

ಯೋಗದ ಮಹತ್ವವನ್ನು ಎತ್ತಿ ತೋರಿಸಲು, ಪ್ರತಿವರ್ಷ ಪ್ರಪಂಚದಾದ್ಯಂತ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದ್ದು ಈ ದಿನವು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಪ್ರಪಂಚದಾದ್ಯಂತ ಜನರು ತಮ್ಮ ದಿನಚರಿಯಲ್ಲಿ ಯೋಗವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ.

ಕುಟುಂಬದ ಒಳಿತಿಗಾಗಿ ನಿರಂತರ ಶ್ರಮಿಸುವ ಅಪ್ಪ

ನಮ್ಮ ದೇಶದ ನಾಗರಿಕತೆಯಲ್ಲಿ ಹೆತ್ತವರಿಗೆ ದೇವರ ಸ್ಥಾನಮಾನವಿದೆ. ಬದಲಾಗುತ್ತಿರುವ ಜಾಗತಿಕ ಸನ್ನಿವೇಶದಲ್ಲಿ ನಮ್ಮ ಹೊಸ ಪೀಳಿಗೆಯು ಈ ಗುಣಗಳನ್ನು ಮರೆಯಲಾರಂಭಿಸುತ್ತಿದೆ. ಇಂತಹ ದೃಶ್ಯದ ನಡುವೆ ವಿಶ್ವ ಅಪ್ಪಂದಿರ ದಿನಾಚರಣೆಯನ್ನು ವಿಶೇಷವಾಗಿ ಆಚರಿಸುವ ಪರಂಪರೆ ಇಂದು ನಮ್ಮ ದೇಶದಲ್ಲೂ ಕಾಣುತ್ತಿದ್ದೇವೆ.ಪಾಶ್ಚಿಮಾತ್ಯ ನಾಗರಿಕತೆಯ ಅನುಕರಣೆಯೊಂದಿಗೆ ನಮ್ಮ ದೇಶದಲ್ಲಿಯೂ ಅನೇಕ 'ದಿನಾಚರಣೆಗಳು' ಒಳಬಂದಿವೆ . ಅವುಗಳಲ್ಲಿ ವಿಶ್ವ ಅಪ್ಪಂದಿರ ದಿನವೂ ಒಂದು. ಈ ದಿನದಂದು ಮಕ್ಕಳು ತಮ್ಮ ತಂದೆಗೆ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆ. ಈ ದಿನವನ್ನು ಆಚರಿಸುವುದರಿಂದ ಮಕ್ಕಳು ಮತ್ತು ಅಪ್ಪನ ನಡುವಿನ ಸಂಬಂಧವು ಇನ್ನಷ್ಟು ಗಾಢವಾಗುತ್ತದೆ.ಈ ದಿನವನ್ನು ತಂದೆಯು ಕುಟುಂಬಕ್ಕೆ ನೀಡಿದ ನಿಸ್ವಾರ್ಥ ಪ್ರೀತಿ, ತ್ಯಾಗ ಮತ್ತು ಕೊಡುಗೆಗಳನ್ನು ಗೌರವಿಸಲು ಮೀಸಲಿಡಲಾಗಿದೆ. ವಿಶ್ವ ಅಪ್ಪಂದಿರ ದಿನದ ಬಗ್ಗೆ ಒಂದು ಕುತೂಹಲಕಾರಿ ಸಂಗತಿಯೆಂದರೆ ಅದು ಹುಟ್ಟಿಕೊಂಡಿದ್ದು ಪಶ್ಚಿಮದಲ್ಲಿ. ಕೆಲವು ದೇಶಗಳು ಜೂನ್ ತಿಂಗಳ ಮೂರನೇ ಭಾನುವಾರದಂದು ಈ ದಿನವನ್ನು ಆಚರಿಸಿದರೆ, ಹಲವು ದೇಶಗಳಲ್ಲಿ ಈ ದಿನವನ್ನು ನಾಲ್ಕನೇ ಭಾನುವಾರವೂ ಆಚರಿಸುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ತಂದೆಯ ಮಹತ್ವ ಮತ್ತು ಗೌರವ ಯಾವಾಗಲೂ ಅಗ್ರ ಸ್ಥಾನದಲ್ಲಿದೆ. ವಿಶ್ವ ಅಪ್ಪಂದಿರ ದಿನವನ್ನು ಆಚರಿಸುವುದರ ಹಿಂದೆ ಒಂದು ಪ್ರಮುಖ ಇತಿಹಾಸವನ್ನು ಕಾಣಬಹುದು. ಈ ದಿನದ ಆಚರಣೆಯನ್ನು ಪ್ರಥಮವಾಗಿ ಯುನೈಟೆಡ್ ಸ್ಟೇಟ್ಸ್ ನಿವಾಸಿ ಸೋನೋರಾ ಸ್ಮಾರ್ಟ್ ಡಾಡ್ ಪ್ರಾರಂಭಿಸಿದರು.ಅಮೇರಿಕನ್ ಅಂತರ್ಯುದ್ಧದ ಅನುಭವಿ ವಿಲಿಯಂ ಜಾಕ್ಸನ್ ಸ್ಮಾರ್ಟ್ ಅವರ ಪುತ್ರಿ ಸೊನೊರಾಗೆ ಸಂಬಂಧಿಸಿದೆ. ವಾಷಿಂಗ್ಟನ್ ಸ್ಪೋಕೇನ್‌ನಲ್ಲಿ ವಾಸಿಸುತ್ತಿದ್ದ ಸೊನೊರಾ ಅವರ ತಾಯಿ ತನ್ನ ಆರನೇ ಮಗುವಿಗೆ ಜನ್ಮ ನೀಡುವ ಸಮಯದಲ್ಲಿ ನಿಧನರಾದರು. ಸೋನೋರಾ ತನ್ನ ತಂದೆಯೊಂದಿಗೆ ತನ್ನ ಕಿರಿಯ ಸಹೋದರರನ್ನು ಬೆಳೆಸಿದಳು. ಸೋನೋರಾಳ ತಂದೆ ತಮ್ಮ ಎಲ್ಲಾ ಮಕ್ಕಳನ್ನು ಚೆನ್ನಾಗಿ ನೋಡಿಕೊಂಡರು, ಅದನ್ನು ನೋಡಿದ ಸೋನೋರಾ ತನ್ನ ತಂದೆಗೆ ಗೌರವವನ್ನು ಸಲ್ಲಿಸುವ ನಿರ್ಧಾರ ತಳೆದರಂತೆ. ತಂದೆಯ ದಿನಾಚರಣೆಯನ್ನು ಮೊದಲು ಅನಧಿಕೃತವಾಗಿ ಅಮೆರಿಕದಲ್ಲಿ 1907 ರಲ್ಲಿ ಆಚರಿಸಲಾಯಿತು. ಆದರೆ ಅಧಿಕೃತವಾಗಿ 1910 ರಲ್ಲಿ ಪ್ರಾರಂಭವಾಯಿತು. ಹಾಗಿದ್ದೂ ತಜ್ಞರಲ್ಲಿ ತಂದೆಯ ದಿನಾಚರಣೆಯ ನಿಖರವಾದ ದಿನಾಂಕದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇತಿಹಾಸಕಾರರ ಪ್ರಕಾರ ಸೋನೋರಾ ಸ್ಮಾರ್ಟ್ ಡಾಡ್ ಈ ದಿನವನ್ನು ಪ್ರಾರಂಭಿಸಿದ್ದರು.



ತಾಯಂದಿರ ದಿನದ ಜೊತೆಗೆ, ಜಗತ್ತು ಪ್ರತಿ ವರ್ಷ ತಂದೆಯ ದಿನವನ್ನೂ ಆಚರಿಸುತ್ತದೆ. ಈ ದಿನದಂದು ಮಕ್ಕಳು ತಮ್ಮ ತಂದೆಯ ಬೆಂಬಲಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಾರೆ, ಕೇಕ್ ಕತ್ತರಿಸುತ್ತಾರೆ ಮತ್ತು ಉಡುಗೊರೆಗಳನ್ನು ನೀಡುತ್ತಾರೆ.ಕೆಲವೆಡೆ, ಅವರು ತಮ್ಮ ತಂದೆಯಿಂದ ಪಾರ್ಟಿಯನ್ನು ಸಹ ಪಡೆಯುತ್ತಾರೆ. ಇಡೀ ಕುಟುಂಬವು ಈ ದಿನವನ್ನು ಹಬ್ಬದಂತೆ ಆಚರಿಸುತ್ತದೆ! 1924 ರಲ್ಲಿ ಆಗಿನ ಯುಎಸ್ ಅಧ್ಯಕ್ಷ ಕ್ಯಾಲ್ವಿನ್ ಕೂಲಿಡ್ಜ್ ತಂದೆಯ ದಿನವನ್ನು ಅನುಮೋದಿಸಿದರು. ನಾಲ್ಕು ದಶಕಗಳ ನಂತರ, 1966 ರಲ್ಲಿ ಅಧ್ಯಕ್ಷ ಲಿಂಡನ್ ಜಾನ್ಸನ್ ಜೂನ್ ಮೂರನೇ ಭಾನುವಾರದಂದು ತಂದೆಯ ದಿನವನ್ನು ಆಚರಿಸುವುದಾಗಿ ಘೋಷಿಸಿದರು. ಈ ದಿನವು ಈಗ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಅಧಿಕೃತ ರಜಾದಿನವಾಗಿದೆ.

ಭಾರತದಲ್ಲಿ ಈ ವರ್ಷ ಅಪ್ಪಂದಿರ ದಿನವನ್ನು ಮೂರನೇ ವಾರ ಜೂನ್ 21ರಂದು ಆಚರಿಸಲಾಗುತ್ತಿದೆ. ತಂದೆಯ ಮೇಲಿನ ಗೌರವ ಮತ್ತು ಪ್ರೀತಿಯನ್ನು ವ್ಯಕ್ತಪಡಿಸಲು ಪ್ರಪಂಚದಾದ್ಯಂತ ಮಕ್ಕಳು ಈ ದಿನವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಆದರೆ ಸ್ಪೇನ್ ಮತ್ತು ಪೋರ್ಚುಗಲ್ ನಲ್ಲಿ ಇದನ್ನು ಆಗಸ್ಟ್ ನಲ್ಲಿ ಆಚರಿಸಲಾಗುತ್ತದೆ. ಅದೇ ಸಮಯದಲ್ಲಿ, ಥೈಲ್ಯಾಂಡ್ ನಲ್ಲಿ, ತಂದೆಯ ದಿನವನ್ನು ಡಿಸೆಂಬರ್5 ರಂದು ಆಚರಿಸಲಾಗುತ್ತದೆ. ಪ್ರತಿಯೊಬ್ಬರೂ ತಂದೆಯೊಂದಿಗೆ ಕಳೆದ ಬಾಲ್ಯದ ನೆನಪುಗಳು ನಮ್ಮ ನಮ್ಮ ಜೀವನದ ಅತ್ಯಂತ ಸುಂದರ ಕ್ಷಣಗಳಾಗಿವೆ. ತಂದೆಯ ಸರಳ ಮತ್ತು ಸಭ್ಯ ನಡವಳಿಕೆ ಅನುಕರಣೀಯ. ಜೀವನದ ಸಣ್ಣ ಮತ್ತು ದೊಡ್ಡ ತಪ್ಪುಗಳಿಗೆ, ಅವರು ಕ್ಷಮಿಸಿ ತಿದ್ದಿದವರು. ಎಲ್ಲೆಲ್ಲಿ ಮಕ್ಕಳಿಗೆ ಕೀಳರಿಮೆಯ ಭಾವ ಕಾಡುತ್ತಿತ್ತೋ ಆವಾಗಲೆಲ್ಲ ತಪ್ಪಿನ ಅರಿವಾಗುವಂತೆ ಮಾಡುತ್ತಿದ್ದರಿಂದ ತಪ್ಪು ಪುನರಾವರ್ತನೆ ಆಗುವ ಸಾಧ್ಯತೆಗಳು ತೀರಾ ಕಡಿಮೆ ಇರುತ್ತಿತ್ತು. ತಂದೆಯ ಬಾಂಧವ್ಯವನ್ನು ನೆನಪಿಟ್ಟುಕೊಳ್ಳಲು ವಿಶ್ವ ಅಪ್ಪಂದಿರ ದಿನವನ್ನು ಆಚರಿಸಲಾಗುತ್ತದೆ. ಅರ್ಥಾತ್ ತಾಯಿಗೆ ಸಿಗುವ ಗೌರವ ಅವರಿಗೂ ಸಿಗಬೇಕು.

ತಂದೆ ಶಿಸ್ತಿನ ಜೀವನ ನಡೆಸುವ ಶಿಕ್ಷಣವನ್ನು ಕಲಿಸಿದ್ದಾರೆ.ಇವುಗಳನ್ನು ನೋಡಿಯೇ ಮಕ್ಕಳ ದಿನಚರಿಯೂ ಶಿಸ್ತಿನಿಂದ ಕೆಲಸ ಮುಗಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳುತ್ತದೆ. ವಾತಾವರಣಕ್ಕೆ ತಕ್ಕಂತೆ ನಡೆದುಕೊಳ್ಳುವುದು, ಪ್ರೀತಿಸುವುದು, ಏನಾದರೂ ತೊಂದರೆಯಾದಾಗ ಬೈಯುವುದು ಕೂಡ ಅವರಿಗೆ ಗೊತ್ತು, ಅವರ ನಿಲುವುಗಳು ಆವಾಗ ಚೆನ್ನಾಗಿ ಕಾಣದಿದ್ದರೂ ನಿಧಾನವಾಗಿ ಅರ್ಥವಾಗುತ್ತದೆ ಅವರು ಇದನ್ನು ತನ್ನ ಮಕ್ಕಳ ಒಳಿತಿಗಾಗಿ ಮಾಡುತ್ತಾರೆಂದು.ಯಾವುದೇ ತಂದೆ ತನ್ನ ಇಡೀ ಜೀವನವನ್ನು ತನ್ನ ಮಕ್ಕಳ ಶಿಕ್ಷಣಕ್ಕಾಗಿ ಕುಟುಂಬ ನಿರ್ವಹಣೆಗಾಗಿ ಮುಡಿಪಾಗಿಡುತ್ತಾನೆ. ತನ್ನ ಕುಟುಂಬದ ಒಳಿತಿಗಾಗಿ ಸದಾ ಶ್ರಮಿಸುತ್ತಾ ಇರುತ್ತಾನೆ. ಪ್ರಪಂಚದಲ್ಲಿ ವ್ಯಾಖ್ಯಾನಿಸಲಾಗದ ಪದಗಳಲ್ಲಿ ತಂದೆ ಎಂಬ ಪದವೂ ಸೇರಿದೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ತನಗಿಂತ ಹೆಚ್ಚಾಗಿ ತನ್ನ ಮಕ್ಕಳ ಪ್ರಗತಿಯನ್ನು ಬಯಸುವ ವ್ಯಕ್ತಿ ಎಂದರೆ ತಂದೆ. ತನ್ನ ಮಕ್ಕಳು ತನಗಿಂತ ಹೆಚ್ಚು ಯಶಸ್ವಿಯಾಗುವುದನ್ನು ನೋಡಲು ಬಯಸುವ ವಿಶ್ವದ ಏಕೈಕ ವ್ಯಕ್ತಿ ತಂದೆ. ನಮ್ಮ ಜೀವನದಲ್ಲಿ ಪ್ರತಿದಿನವೂ ನಮ್ಮ ಹೆತ್ತವರಿಗಾಗಿ ಇರಬೇಕು.ಅಪ್ಪನ ಈ ದಿನದಂದು ಮಕ್ಕಳು ತಮ್ಮ ಪ್ರೀತಿಯನ್ನು ತಮ್ಮ ತಂದೆಗೆ ಅರ್ಪಿಸುತ್ತಾರೆ.ಅಪ್ಪ ಎಂಬ ಈ ವ್ಯಕ್ತಿ ಕುಟುಂಬದಲ್ಲಿ ಅತ್ಯುನ್ನತ ಶಿಸ್ತು ಮತ್ತು ಸಮಾಜದಲ್ಲಿ ಅತ್ಯುನ್ನತ ಗುರುತನ್ನು ಹೊಂದಿದವರಾಗಿದ್ದಾರೆ. **ಜೇಯಸ್**

ಅಪ್ಪನ ತ್ಯಾಗ - ಮಕ್ಕಳ ಬದುಕಿನ ಬೆಳಕು

'ವಿಶ್ವ ಅಪ್ಪಂದಿರ ದಿನ'

ಒಬ್ಬ ತಂದೆ ಎಂದರೆ ಕೇವಲ ಮನೆಯ ಮುಖ್ಯಸ್ಥನಲ್ಲ. ಆತ ಕುಟುಂಬದ ಬೆನ್ನೆಲುಬು, ಮನೆಯ ಶಕ್ತಿ ನಂಬಿಕೆ ಮತ್ತು ಧೈರ್ಯದ ಪ್ರತೀಕ. ಮಕ್ಕಳ ಕನಸುಗಳಿಗೆ ನೆರಳಾಗಿ ನಿಲ್ಲುವ ಮಹಾನ್ ವ್ಯಕ್ತಿ. ತನ್ನ ಸುಖವನ್ನು ಮರೆತು ಹೆಂಡತಿ ಮಕ್ಕಳ ಭವಿಷ್ಯಕ್ಕಾಗಿ ಹಗಲಿರುಳು ದುಡಿಯುವ ನಿಸ್ವಾರ್ಥ ಹೃದಯವೇ 'ಅಪ್ಪ' . ಅಂತಹ ಮಹಾನ್ ವ್ಯಕ್ತಿಗೆ ಗೌರವ ಸಲ್ಲಿಸುವ ದಿನವೇ 'ವಿಶ್ವ ಅಪ್ಪಂದಿರ ದಿನ'.

ಅಪ್ಪನ ಪ್ರೀತಿ ಬಹುಸಾರಿ ಮಾತಿನಲ್ಲಿ ಕಾಣಿಸದು. ಅದು ಅವರ ತ್ಯಾಗದಲ್ಲಿ ಕಾಣಿಸುತ್ತದೆ. ಈಗಿನ ಕಾಲದಲ್ಲಿ ಹಲವಾರು ಮಕ್ಕಳು ತಂದೆಯ ಶ್ರಮವನ್ನು ಸರಿಯಾಗಿ ಅರ್ಥೈಸಿಕೊಳ್ಳುವುದಿಲ್ಲ. ಆದರೆ ಒಂದು ದಿನ ಜೀವನದ ಹೊಣೆಗಾರಿಕೆ ತಮ್ಮ ಮೇಲೆ ಬಂದಾಗ ತಂದೆಯ ಮಹತ್ವ ಖಂಡಿತವಾಗಿಯೂ ಅರಿವಾಗುತ್ತದೆ. ಅಪ್ಪನ ಪ್ರೀತಿ ತಾಯಿಯ ಪ್ರೀತಿಯಂತೆ ಹೊರಗೆ ಕಾಣಿಸದೇ ಇರಬಹುದು. ಆದರೆ ಅದು ಸಮುದ್ರದ ಆಳದಂತೆ ಅಪಾರ. ಅವರು ತಮ್ಮ ನೋವನ್ನು ಮರೆತು ಸಂಸಾರದ ಸಂತೋಷಕ್ಕಾಗಿ ಹಗಲು ರಾತ್ರಿ ಶ್ರಮಿಸಿದ್ದಾರೆ .ಮಕ್ಕಳ ಭವಿಷ್ಯ ಸುಂದರವಾಗಿರಲಿ ಎಂದು ತಮ್ಮ ಕನಸುಗಳನ್ನೇ ಬಲಿಕೊಡುತ್ತಾರೆ. ಮನೆಗೆ ದಣಿದು ಬಂದರೂ ಹೆಂಡತಿ ಮಕ್ಕಳ ಮುಖದಲ್ಲಿ ನಗು ಕಂಡರೆ ಅವರ ಆಯಾಸವೇ ಮಾಯವಾಗುತ್ತದೆ. ಬದುಕಲ್ಲಿ ಸೋತಾಗ ಅಥವಾ ಗೆದ್ದಾಗ ಜೊತೆಯಲ್ಲಿ ಇರುವುದು ಅಪ್ಪ ಮಾತ್ರ.



ನನ್ನ ಅಪ್ಪ ಕೂಡ ಹಾಗೆಯೇ. ಏಳು ಮಕ್ಕಳನ್ನು ಸಾಕಿ ಪ್ರತಿಯೊಬ್ಬರಿಗೂ ವಿದ್ಯೆ ಬುದ್ಧಿ ಸಂಸ್ಕಾರ ಮತ್ತು ಬದುಕಿನ ಮೌಲ್ಯಗಳನ್ನು ಕಲಿಸಿ ದೊಡ್ಡವರನ್ನಾಗಿ ಮಾಡಿದ ಮಹಾನ್ ವ್ಯಕ್ತಿ. ಮನೆಯ ಪರಿಸ್ಥಿತಿ ಹೇಗಿದ್ದರೂ ಮಕ್ಕಳ ವಿದ್ಯಾಭ್ಯಾಸದಲ್ಲಿ ಎಂದಿಗೂ ಹಿಂದೆ ಸರಿಯಲಿಲ್ಲ. 'ನನ್ನ ಮಕ್ಕಳು ನನಗಿಂತ ದೊಡ್ಡವರಾಗಬೇಕು' ಎಂಬ ಕನಸೇ ಅವರ ಬದುಕಿನ ಉದ್ದೇಶವಾಗಿತ್ತು.

ಅವರು ತಮ್ಮ ಕಷ್ಟವನ್ನು ಮಕ್ಕಳ ಮುಂದೆ ಎಂದಿಗೂ ತೋರಿಸಲಿಲ್ಲ. ತಿನ್ನದೇ ಇದ್ದರೂ ಮಕ್ಕಳ ಹೊಟ್ಟೆ ತುಂಬಿಸಿದರು. ದೂರ ದೂರದ ಊರಿಗೆ ಹೋಗಿ ಕೆಲಸ ಮಾಡಿ ನಿದ್ರೆ ಬಿಟ್ಟು ಮಕ್ಕಳ ಭವಿಷ್ಯಕ್ಕಾಗಿ ಶ್ರಮಿಸಿದರು. ಜೀವನದಲ್ಲಿ ಎಷ್ಟೇ ಸಂಕಷ್ಟ ಬಂದರೂ ಧೈರ್ಯ ಕಳೆದುಕೊಳ್ಳದೆ ಕುಟುಂಬವನ್ನು ಮುನ್ನಡೆಸಿದರು ಅವರ ಬೆವರ ಹನಿ ಇಂದು ಮಕ್ಕಳ ಯಶಸ್ಸಾಗಿ ಅರಳಿದೆ. ಇಂದು ಮಕ್ಕಳು ಎಲ್ಲರೂ ತಮ್ಮ ಕಾಲಿನ ಮೇಲೆ ನಿಂತಿದ್ದಾರೆ. ಸಮಾಜದಲ್ಲಿ ಗೌರವದಿಂದ ಬದುಕುತ್ತಿದ್ದಾರೆ. ಆದರೆ ಈ ಸಂತೋಷವನ್ನು ಕಣ್ಣಾರೆ ನೋಡಲು ನಮ್ಮ ಅಪ್ಪ ಮಾತ್ರ ಇಂದು ನಮ್ಮ ಜೊತೆಯಲ್ಲಿ ಇಲ್ಲ. ಇದೇ ಬದುಕಿನ ಅತ್ಯಂತ ನೋವು. ಮನೆ ತುಂಬಾ ಜನ ಇದ್ದರೂ ಅಪ್ಪನ ಸ್ಥಾನ ಖಾಲಿಯೇ ಕಾಣುತ್ತದೆ. ಅವರ ಮಾತು ಅವರ ಕಾಳಜಿ ಅವರ ಮಮತೆ ಅವರ ಗದರಿಕೆ ಎಲ್ಲವೂ ಇಂದು ನೆನಪುಗಳಾಗಿ ಉಳಿದಿವೆ.

ಆ ಕಾಲದಲ್ಲಿ ಏಳು ಜನರಿಗೆ ವಿದ್ಯಾಭ್ಯಾಸಕೊಟ್ಟು ಸಾಕುವುದು ಸುಲಭದ ಮಾತಲ್ಲ. ನನ್ನ ಅಪ್ಪ ಕಠಿಣ ಪರಿಶ್ರಮಿ. ಯಾರ ಹಂಗು ಇಲ್ಲದೆ ಸ್ವತಂತ್ರವಾಗಿ ದುಡಿದು ಮಕ್ಕಳನ್ನು ಸಾಕಿದರು. ಯಾವ ಆಸ್ತಿ ಪಾಸ್ತಿಯು ಇರಲಿಲ್ಲಾ. ಅಮ್ಮನಿಗೆ ಮನೆಯ ಕೀಲಿ ಕೈ ಕೊಟ್ಟು ಸಂಸಾರವನ್ನು ಚಂದವಾಗಿ ನಡೆಸಿಕೊಂಡು ಹೋಗುವಂತೆ ಮಾರ್ಗದರ್ಶನ ನೀಡುತ್ತಿದ್ದರು. ಅಪ್ಪಂದಿರಿಗೆ ಹೆಣ್ಣು ಮಕ್ಕಳೆಂದರೆ ಬಹಳ ಪ್ರಿಯ. ಹಾಗೆಯೇ ಹೆಣ್ಣು ಮಕ್ಕಳಿಗೂ ಕೂಡ ಅಪ್ಪನೆಂದರೆ ಎಲ್ಲಿಲ್ಲದ ಪ್ರೀತಿ. ಕಿರಿಯ ಮುದ್ದಿನ ಮಗಳಾದ ನನ್ನಲ್ಲಿ ಅಪ್ಪನಿಗೆ ಹೇಳಲಾರದಷ್ಟು ಪ್ರೀತಿ. ಪ್ರತಿ ಹೆಣ್ಣು ಮಕ್ಕಳಿಗೂ ಅಪ್ಪನೇ ನಿಜವಾದ ಹೀರೋ. ನನ್ನ ವಿದ್ಯಾಭ್ಯಾಸದ ಪ್ರತಿ ಹಂತದಲ್ಲೂ ನನಗೆ ಬೆಂಬಲವಾಗಿ ಮಾರ್ಗದರ್ಶಕರಾಗಿದ್ದರು. ಬದುಕಿನಲ್ಲಿ ಹೇಗೆ ನಿಲ್ಲಬೇಕು, ಹೇಗೆ ಹೋರಾಡಬೇಕು, ಹೇಗೆ ಮಾನವೀಯತೆಯಿಂದ ಬದುಕಬೇಕು ಎಂಬ ಪಾಠಗಳನ್ನು ಅವರು ಮಾತಿಗಿಂತ ತಮ್ಮ ನಡೆ ನುಡಿಗಳ ಮೂಲಕ ಕಲಿಸಿದ್ದಾರೆ. ಅವರು ಯಾವಾಗಲೂ ಹೇಳುತ್ತಿದ್ದರು 'ಸೋಲು ಅಂತಿಮವಲ್ಲ ಮತ್ತೆ ಎದ್ದು ನಿಲ್ಲುವ ಧೈರ್ಯವೇ ನಿಜವಾದ ಜಯ' ಎಂದು.

ಅಪ್ಪ ನನಗೆ ಕೇವಲ ತಂದೆಯಲ್ಲ, ಒಳ್ಳೆಯ ಸ್ನೇಹಿತ ಹಾಗೂ ಗುರುವಾಗಿದ್ದರು. ಕೆಲವೊಮ್ಮೆ ಗದರುತ್ತಿದ್ದರು, ಹುಸಿಕೋಪ ತೋರಿಸಿಕೊಳ್ಳುತ್ತಿದ್ದರು. ಏನಾದರೂ ಸಾಧಿಸಬೇಕೆಂದು ಪದೇಪದೇ ಹೇಳುತ್ತಿದ್ದರು. ಸಮಾಜದಲ್ಲಿ ನಾಲ್ಕು ಜನರು ನಮ್ಮನ್ನು ಒಳ್ಳೆಯ ರೀತಿಯಲ್ಲಿ ಗುರುತಿಸುವಂತೆ ಬೆಳೆಯಬೇಕು. ನಾಲ್ಕು ಜನರಿಗೆ ಉಪಕಾರಿ ಆಗಿರಬೇಕು ಎಂಬುದೇ ಅವರ ಮಾತಾಗಿತ್ತು. ಅಪ್ಪನ ಪ್ರೀತಿ ತ್ಯಾಗ ಮತ್ತು ಶ್ರಮಕ್ಕೆ ನಾನು ಸದಾ ಋಣಿ . ಅವರ ಜೊತೆ ನಾನು ಕಳೆದಂತಹ ದಿನಗಳು ಇಂದು ನೆನಪು ಮಾತ್ರ.

ಅಪ್ಪ ಬದುಕಿರುವಾಗ ಅವರ ಮೌಲ್ಯ ಅಷ್ಟು ಅರ್ಥವಾಗದೆ ಇರಬಹುದು. ಆದರೆ ಅವರು ಇಲ್ಲದಾಗ ಅವರ ಪ್ರತಿಯೊಂದು ತ್ಯಾಗದ ಅರ್ಥ ಗೊತ್ತಾಗುತ್ತದೆ. ಮರದ ನೆರಳು ಕಳೆದು ಹೋದಾಗ ಅದರ ಮಹತ್ವ ಗೊತ್ತಾಗುತ್ತದೆ ಎಂಬಂತೆ ಅಪ್ಪನ ಅಭಾವ ಇಂದು ಪ್ರತಿಕ್ಷಣವೂ ಕಾಡುತ್ತದೆ.ನನ್ನ ಅಪ್ಪ ನಮಗೆ ಕೇವಲ ಬದುಕನ್ನೇ ಕೊಟ್ಟಿಲ್ಲ, ಬದುಕನ್ನು ಹೇಗೆ ಬದುಕಬೇಕು ಎಂಬುದನ್ನೂ ಕಲಿಸಿದರು. ಸತ್ಯ, ಪ್ರಾಮಾಣಿಕತೆ, ಪರಿಶ್ರಮ ಮತ್ತು ಮಾನವೀಯತೆ ಎಂಬ ಅಮೂಲ್ಯ ಪಾಠಗಳನ್ನು ಬೋಧಿಸಿದರು. ಅವರು ದೇಹವಾಗಿ ನಮ್ಮ ಜೊತೆ ಇಲ್ಲದಿದ್ದರೂ ಅವರ ಆದರ್ಶಗಳು ನಮ್ಮ ಉಸಿರಿನಲ್ಲೇ ಜೀವಂತವಾಗಿದೆ. ನನ್ನ ಅಪ್ಪ ಎಲ್ಲರಿಗೂ ಮಾದರಿ ಅಪ್ಪ ಎಂಬುದನ್ನು ನಾನು ಹೆಮ್ಮೆಯಿಂದ ಹೇಳಿಕೊಳ್ಳಬಲ್ಲೆ.

ಅಪ್ಪಾ...ನೀವು ನಮ್ಮ ಜೊತೆ ಇಲ್ಲದಿದ್ದರೂ ನಿಮ್ಮ ಆಶೀರ್ವಾದ ನಮ್ಮ ಬದುಕಿನ ದಾರಿದೀಪ. ನೀವು ಬೆಳೆಸಿದ ಮಕ್ಕಳು ಇಂದು ನಿಮ್ಮ ಹೆಸರನ್ನು ಹೆಮ್ಮೆಯಿಂದ ಹೊತ್ತು

ವಾಣಿ ರಘುನಾಥ್ ಕಣ್ವತೀರ್ಥ.

ಸಾಗುತ್ತಿದ್ದಾರೆ. ನಿಮ್ಮ ತ್ಯಾಗಕ್ಕೆ ಸಮಾನವಾದದ್ದು ಈ ಜಗತ್ತಿನಲ್ಲಿ ಯಾವುದು ಇಲ್ಲ. ನಿಮ್ಮ ನೆನಪು ಸದಾ ನಮ್ಮ ಹೃದಯದಲ್ಲಿ ಅಮರ. ತಂದೆಯಂದಿರ ದಿನವೆಂದರೆ ಕೇವಲ ಶುಭಾಶಯ ಹೇಳುವ ದಿನವಲ್ಲ. ನಮ್ಮ ಜೀವನಕ್ಕಾಗಿ ಮೌನವಾಗಿ ಹೋರಾಡುವ ಆ ಮಹಾನ್ ವ್ಯಕ್ತಿಗೆ ಕೃತಜ್ಞತೆ ಸಲ್ಲಿಸುವ ದಿನ.

ನನ್ನ ಅಪ್ಪನಂತಹ ಎಲ್ಲಾ ತಂದೆಯಂದಿರಿಗೂ ಹೃದಯಪೂರ್ವಕ ವಂದನೆಗಳು. ನನ್ನ ಮಗಳಿಗೂ ಅಪ್ಪನೆಂದರೆ ಪಂಚಪ್ರಾಣ. ನನ್ನ ಮಗಳ ಅಪ್ಪನಿಗೂ ತಂದೆಯಂದಿರ ದಿನದ ಶುಭಾಶಯಗಳು. ಅಮ್ಮನ ಪ್ರೀತಿ ಜೀವನಕ್ಕೆ ಜೀವ ತುಂಬಿದರೆ ಅಪ್ಪನ ಬೆಂಬಲ ಜೀವನಕ್ಕೆ ದಿಕ್ಕು ನೀಡುತ್ತದೆ.













ಮುಲುಂಡ್ ಬಂಟ್ಸ್‌ನ 18ನೇ ವಾರ್ಷಿಕ ಮಹಾಸಭೆಯು ಜೂ.17 ರಂದು ಮುಲುಂಡ್ ಬಾಸುರಿ ಹೋಟೇಲ್‌ನಲ್ಲಿ ಜರಗಿದ ಸಂದರ್ಭ ಮುಲುಂಡ್ ಬಂಟ್ಸ್‌ನ ನಿರ್ಗಮನ ಅಧ್ಯಕ್ಷ ಸಿಎ ಕರುಣಾಕರ ಶೆಟ್ಟಿ ಮತ್ತು ನೂತನ ಅಧ್ಯಕ್ಷ ಕೃಷ್ಣಪ್ರಸಾದ್ ಶೆಟ್ಟಿ ಮತ್ತು ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಮುಲುಂಡ್ ಬಂಟ್ಸ್‌ನ ಮಾಜಿ ಅಧ್ಯಕ್ಷರುಗಳು ಹಾಗೂ ವಿಶ್ವಸ್ಥರುಗಳಾದ ಎನ್ .ವಿವೇಕ್ ಶೆಟ್ಟಿ, ಡಾ. ಸತ್ಯಪ್ರಕಾಶ್ ಶೆಟ್ಟಿ, ಎಸ್ ಬಿ. ಶೆಟ್ಟಿ , ಪ್ರಕಾಶ್‌ಚಂದ್ರ ಶೆಟ್ಟಿ, ವಸಂತ್ ಶೆಟ್ಟಿ ಪಲಿಮಾರು, ಶಾಂತಾರಾಮ್ ಬಿ. ಶೆಟ್ಟಿ ಮತ್ತು ಥಾಣೆ ಬಂಟ್ಸ್‌ನ ಅಧ್ಯಕ್ಷ ಅಶೋಕ್ ಶೆಟ್ಟಿ ಮೊದಲಾದವರನ್ನು ಗೌರವಿಸಲಾಯಿತು. ಇದೇ ಸಂದರ್ಭ ಮಹಿಳಾ ವಿಭಾಗದ ಮಾಜಿ ಕಾರ್ಯಾಧ್ಯಕ್ಷೆಯರುಗಳಾದ ಪ್ರಭಾ ಬಿ. ಶೆಟ್ಟಿ, ವಿನುತಾ ಎಸ್. ಶೆಟ್ಟಿ, ರತ್ನಾ ವಸಂತ್ ಶೆಟ್ಟಿ ಅವರನ್ನು ಗೌರವಿಸಲಾಯಿತು. ಮಹಿಳಾ ವಿಭಾಗದ ನಿಕಟಪೂರ್ವ ಕಾರ್ಯಾಧ್ಯಕ್ಷೆ ಆರತಿ ವೈ. ಶೆಟ್ಟಿ ದಂಪತಿಯನ್ನು ಮತ್ತು ಯುವ ವಿಭಾಗದ ನಿಕಟಪೂರ್ವ ಕಾರ್ಯಾಧ್ಯಕ್ಷೆ ಶರಧಿ ಶೆಟ್ಟಿಯವರನ್ನು ಸನ್ಮಾನಿಸಲಾಯಿತು. ಮಹಿಳಾ ವಿಭಾಗದ ನೂತನ ಕಾರ್ಯಾಧ್ಯಕ್ಷೆ ಶಶಿಪ್ರಭಾ ಕೆ. ಶೆಟ್ಟಿ ಮತ್ತು ಯುವ ವಿಭಾಗದ ನೂತನ ಕಾರ್ಯಾಧ್ಯಕ್ಷ ಕ್ಷಿತೀಶ್ ಶೆಟ್ಟಿಯವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಸಿಎ ಕರುಣಾಕರ್ ಶೆಟ್ಟಿ, ಕೃಷ್ಣಪ್ರಸಾದ್ ಶೆಟ್ಟಿ ಹಾಗೂ ಪದಾಧಿಕಾರಿಗಳಾದ ವೇಣುಗೋಪಾಲ್ ಶೆಟ್ಟಿ , ಸಿಎ ಗಣೇಶ್ ಶೆಟ್ಟಿ, ಸುರೇಶ್ ಕೆ. ಶೆಟ್ಟಿ ಕಡಂದಲೆ, ಶೇಖರ್ ಎನ್. ಶೆಟ್ಟಿ, ಎಚ್.ಉದಯ ಕುಮಾರ್ ಶೆಟ್ಟಿ ಹಾಗೂ ಮಹಿಳಾ ವಿಭಾಗದ ಪದಾಧಿಕಾರಿಗಳನ್ನು ಕಾಣಬಹುದು. ಚಿತ್ರ : ಗುರುದತ್ತ್ ಪೂಂಜ ಮುಂಡ್ಕೂರು.

ಬಂಟರ ಸಂಘ ಮುಂಬಯಿ : ಡೊಂಬಿವಲಿ ಪ್ರಾದೇಶಿಕ ಸಮಿತಿ ಮಹಿಳಾ ವಿಭಾಗದ ವತಿಯಿಂದ ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ ವೈದ್ಯಕೀಯ ವಿಚಾರ ಸಂಕಿರಣ

ಡೊಂಬಿವಲಿ, ಜೂ. 20- ಬಂಟರ ಸಂಘ ಮುಂಬಯಿ ಡೊಂಬಿವಲಿ ಪ್ರಾದೇಶಿಕ ಸಮಿತಿಯ ಮಹಿಳಾ ವಿಭಾಗದ ವತಿಯಿಂದ ಜೂನ್ 21ರ ಆದಿತ್ಯವಾರದಂದು ಸಂಜೆ 5:00 ಗಂಟೆಯಿಂದ 7:00 ಗಂಟೆಯವರೆಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ ವೈದ್ಯಕೀಯ ವಿಚಾರ ಸಂಕಿರಣ ನಡೆಯಲಿದೆ.

ಯೋಗ ಶಾಸ್ತ್ರದಲ್ಲಿ ಪರಿಣತಿಯನ್ನು ಪಡೆದಿರುವ ಹಾಗೂ ಯೋಗ ಪ್ರಕಾಶ ದರ್ಶಿನಿ ಬಿರುದಾಂಕಿತೆ ಪದ್ಮಪ್ರಿಯಾ ಬಲ್ಲಾಳ್ ಯೋಗ ಹಾಗೂ ಪ್ರಾಣಾಯಾಮದಿಂದಾಗುವ ಪ್ರಯೋಜನಗಳ ಬಗ್ಗೆ ವಿವರಣೆ ನೀಡಲಿರುವರಲ್ಲದೆ ಪ್ರಾತ್ಯಕ್ಷಿಕವಾಗಿ ಯೋಗ ಹಾಗೂ ಪ್ರಾಣಾಯಾಮ ಮಾಡಿ ತೋರಿಸಲಿರುವರು ಹಾಗೂ ಖ್ಯಾತ ಮಕ್ಕಳ ತಜ್ಞೆ ಡಾ। ಹೇತಲ್ ಸಿಂಗ್ ಅವರಿಂದ ವೈದ್ಯಕೀಯ ವಿಚಾರ ಸಂಕಿರಣ ನಡೆಯಲಿದೆ.

ಯೋಗ ಹಾಗೂ ವೈದ್ಯಕೀಯ ವಿಚಾರ ಸಂಕಿರಣವು ಡೊಂಬಿವಲಿ ಪೂರ್ವದ ಅಚ್ಚೆ ಪಾಡದ ಅಯ್ಯಪ್ಪ ಮಂದಿರದ ಸಭಾಗೃಹದಲ್ಲಿ ನಡೆಯಲಿದ್ದು, ಕಾರ್ಯಕ್ರಮದ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ಬಂಟರ ಸಂಘ ಮುಂಬಯಿಯ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ವಹಿಸಲಿರುವರು. ಈ ಸಂದರ್ಭ ಉಪಾಧ್ಯಕ್ಷ ಮಹೇಶ್ ಬಿ. ಶೆಟ್ಟಿ, ಗೌ. ಪ್ರ. ಕಾರ್ಯದರ್ಶಿ ಡಾ. ಆರ್. ಕೆ. ಶೆಟ್ಟಿ, ಗೌ. ಪ್ರ. ಕೋಶಾಧಿಕಾರಿ ಸಿಎ ರಮೇಶ್ ಶೆಟ್ಟಿ, ಜೊತೆ ಕಾರ್ಯದರ್ಶಿ ಗಿರೀಶ್ ಶೆಟ್ಟಿ ತೆಳ್ಳಾರ್, ಜೊತೆ ಕೋಶಾಧಿಕಾರಿ ಶಶಿಧರ್ ಶೆಟ್ಟಿ ಇನ್ನಂಜೆ, ಪೂರ್ವ ವಲಯದ ಸಮಿತಿಗಳ ಸಮನ್ವಯಕ ಸುಕುಮಾರ್ ಎನ್. ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಚಿತ್ರಾ ಆರ್. ಶೆಟ್ಟಿ, ಯುವ ವಿಭಾಗದ ಕಾರ್ಯಾಧ್ಯಕ್ಷ ಸವಿನ್ ಶೆಟ್ಟಿ ಉಪಸ್ಥಿತರಿರುವರು.

ಡೊಂಬಿವಲಿ ಸಮಿತಿಯ ಕಾರ್ಯಾಧ್ಯಕ್ಷ ಆನಂದ್ ಡಿ. ಶೆಟ್ಟಿ ನೇತೃತ್ವದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಪರಿಸರದ ಸರ್ವ ತುಳು-ಕನ್ನಡ ಬಾಂಧವರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ, ಸಂಚಾಲಕ ಕರುಣಾಕರ್ ಶೆಟ್ಟಿ ಕಲ್ಲಡ್ಕ, ಉಪ ಕಾರ್ಯಾಧ್ಯಕ್ಷ ಪ್ರಭಾಕರ್ ಆರ್. ಶೆಟ್ಟಿ, ಕಾರ್ಯದರ್ಶಿ ಹೇಮಂತ್ ಎಸ್. ಶೆಟ್ಟಿ, ಕೋಶಾಧಿಕಾರಿ ಸಚಿನ್ ಶೆಟ್ಟಿ, ಜೊತೆ ಕಾರ್ಯದರ್ಶಿ ಜಯಂತ್ ಶೆಟ್ಟಿ, ಜೊತೆ ಕೋಶಾಧಿಕಾರಿ ಪ್ರಭಾಕರ್ ಶೆಟ್ಟಿ ಕಲ್ಲಡ್ಕ, ಯುವ ವಿಭಾಗದ ಕಾರ್ಯಾಧ್ಯಕ್ಷ ಪ್ರಜ್ವಲ್ ಬಿ. ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಯೋಗಿನಿ ಸುಕುಮಾರ್ ಶೆಟ್ಟಿ, ಉಪ ಕಾರ್ಯಾಧ್ಯಕ್ಷೆ ಲತಾ ಆನಂದ್ ಶೆಟ್ಟಿ, ಕಾರ್ಯದರ್ಶಿ ಪೂರ್ಣಿಮಾ ಸುರೇಶ್ ಶೆಟ್ಟಿ, ಕೋಶಾಧಿಕಾರಿ ಸುಧಾ ಹೇಮಂತ್ ಶೆಟ್ಟಿ, ಜೊತೆ ಕಾರ್ಯದರ್ಶಿ ಶಿಲ್ಪಾ ಸಂತೋಷ್ ಶೆಟ್ಟಿ, ಜೊತೆ ಕೋಶಾಧಿಕಾರಿ ಪ್ರತಿಭಾ ಯಶವಂತ ಶೆಟ್ಟಿ ಹಾಗೂ ಸಮಿತಿಯ ಸರ್ವ ಸದಸ್ಯರು ವಿನಂತಿಸಿದ್ದಾರೆ.


epaper - karnatakamalla.com

ಕರ್ನಾಟಕ ಮಲ್ಲ

TEL: 24715208, Fax:24715237 | ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ | KARNATAKA MALLA, MUMBAI

ಸಂಪುಟ : 35 ಸಂಚಿಕೆ : 139 ರವಿವಾರ 21-06-2026 ಬೆಲೆ: ₹ 6 ಪುಟಗಳು - 12

ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ಬೆಸ್ಟ್ ಮುಷ್ಕರ : ಮುಂದುವರೆದ ಪ್ರಯಾಣಿಕರ ಪರದಾಟ



ಪ್ರಾಮಾಣಿಕ ಸ್ನೇಹಿತರು ಯಾರು? ಸಮಯ ಸಾಧಕರು ಯಾರು ಎಂಬುವುದನ್ನು ತಿಳಿಯ ಬೇಕಾದರೆ ಒಮ್ಮೆ ಸಂಪೂರ್ಣ ಸೋತಂತೆ ನಟಿಸಿ ಬಿಡಿ. ಪ್ರಾಮಾಣಿಕ ಸ್ನೇಹಿತರು ಬೆಟ್ಟದ ತುದಿಯಲ್ಲಿದ್ದರೂ ಭೇಟಿಯಾಗುತ್ತಾರೆ.

3 ಪವನ್‌ರಾಜೇ ನಿಂಬಾಳ್ಕರ್ ಹತ್ಯೆ ಪ್ರಕರಣ: ಅಮಿತ್ ಶಾಹ ಜತೆಗೆ ಮಾತನಾಡಿದ ಏಕನಾಥ್ ಶಿಂದೆ

ಅಮೆರಿಕ -ಇರಾನ್ ಮಾತುಕತೆ ಇಂದು ಸ್ವಿಟ್ಜರ್ಲೆಂಡ್‌ನಲ್ಲಿ ಆರಂಭ; ಲೆಬನಾನ್ ಸಂಘರ್ಷಕ್ಕಾಗಿ ಹಾರ್ಮುಜ್ ಮುಚ್ಚಿದ ಇರಾನ್ 5

ಕೈ ಸ್ವಚ್ಛವಿದ್ದರೆ ವ್ಯವಹಾರಕ್ಕೆ ತೊಂದರೆಯಿಲ್ಲ. ನಾಲಿಗೆ ಸ್ವಚ್ಛವಿದ್ದರೆ ಸಂಬಂಧಗಳಿಗೆ ತೊಂದರೆಯಿಲ್ಲ. ಮನಸ್ಸು ಸ್ವಚ್ಛವಿದ್ದರೆ ಪ್ರೀತಿಗೆ ತೊಂದರೆಯಿಲ್ಲ. ಈ ಮೂರು ಸ್ವಚ್ಛವಿದ್ದರೆ ಜೀವನದಲ್ಲಿ ಯಾವುದಕ್ಕೂ ತೊಂದರೆಯಿಲ್ಲ.

ಬಿಜೆಪಿ,ಎನ್‌ಡಿಎ ಮುಂಬರುವ ಹಲವು ವರ್ಷಕಾಲ ದೇಶವನ್ನು ಆಳಲಿವೆ : ಅಮಿತ್ ಶಾಹ

"ಏಕನಾಥ್ ಶಿಂದೆ ನೇತೃತ್ವದ ಪಕ್ಷ ಮಾತ್ರ ಶಿವಸೇನೆ"



ಕೊಲ್ಹಾಪುರ, ಜೂ.20 - ಪ್ರಧಾನಿ ನರೇಂದ್ರ ಮೋದಿಯವರ 12 ವರ್ಷಗಳ ಅಧಿಕಾರಾವಧಿಯು ಕೇವಲ ಆರಂಭವಾಗಿದೆ ಮತ್ತು ಮುಂಬರುವ ಹಲವು ವರ್ಷಗಳ ಕಾಲ ದೇಶದಲ್ಲಿ ಬಿಜೆಪಿ ಮತ್ತು ಎನ್‌ಡಿಎ ಆಡಳಿತ ಇರಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾಹ ಹೇಳಿದರು.

ಪ್ರಧಾನಿ ಮೋದಿಯವರ 12 ವರ್ಷಗಳ ಅಧಿಕಾರಾವಧಿಯು ಸ್ವತಂತ್ರ ಭಾರತದ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ ಮತ್ತು ಪುನರುಜ್ಜೀವನ ಭಾರತವನ್ನು ಸೃಷ್ಟಿಸಲು ಹಾಗೂ ಜಾಗತಿಕವಾಗಿ ದೇಶದ ಪ್ರತಿಷ್ಠೆಯನ್ನು ಹೆಚ್ಚಿಸಲು ಅದು ಸುವರ್ಣಾಕ್ಷರಗಳಲ್ಲಿ ಕೆತ್ತಲ್ಪಡುತ್ತದೆ ಎಂದು ಶಾಹ ತಿಳಿಸಿದರು. 'ಪ್ರಧಾನಿ ನರೇಂದ್ರ ಮೋದಿಯವರ 12 ವರ್ಷಗಳ ಅಧಿಕಾರಾವಧಿಯು ಪುನರುಜ್ಜೀವನ ಭಾರತವನ್ನು ಸೃಷ್ಟಿಸಲು ಮತ್ತು ಪ್ರಪಂಚದಾದ್ಯಂತ ದೇಶದ ಪ್ರತಿಷ್ಠೆಯನ್ನು ಹೆಚ್ಚಿಸಲು ಕಾರಣವಾಯಿತು ಎಂದು ಸ್ವತಂತ್ರ ಭಾರತದ ಇತಿಹಾಸದಲ್ಲಿ ಬರೆಯಬೇಕಾಗುತ್ತದೆ' ಎಂದು ಮಹಾರಾಷ್ಟ್ರದಲ್ಲಿ ಅಂಬಾಬಾಯಿ ಮಂದಿರ ಕಾರಿಡಾರ್ ಯೋಜನೆಯನ್ನು ಉದ್ಘಾಟಿಸಿದ ಬಳಿಕ ನಡೆದ 5ನೇ ಪುಟಕ್ಕೆ

ಪರ್ಭಾನಿ: ಹನುಮಾನ್ ಮಂದಿರದ ಛಾವಣಿ ಕುಸಿದು ಐವರ ಸಾವು, 18 ಮಂದಿಗೆ ಗಾಯ



ಛತ್ರಪತಿ ಸಂಭಾಜಿನಗರ, ಜೂ.20 - ಮಹಾರಾಷ್ಟ್ರದ ಪರ್ಭಾನಿ ಜಿಲ್ಲೆಯ ಯಶ್ವಾಡಿ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ಹನುಮಾನ್ ಮಂದಿರದ ಛಾವಣಿ ಕುಸಿದು ಕನಿಷ್ಠ ಐವರು ಸಾವನ್ನಪ್ಪಿದ್ದಲ್ಲದೆ, ಇತರ 18 ಜನರು ಗಾಯಗೊಂಡಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಈ ಗ್ರಾಮವು ಛತ್ರಪತಿ ಸಂಭಾಜಿನಗರದಿಂದ ಸುಮಾರು 190 ಕಿ.ಮೀ ದೂರದಲ್ಲಿರುವ ಮನ್ವತ್ ರೋಡ್‌ನಲ್ಲಿದೆ. ನಿರ್ಮಾಣ ಹಂತದಲ್ಲಿರುವ 'ಸಭಾ-ಮಂಟಪ' ಅಥವಾ ಹೊರ ಸಭಾಂಗಣದ ಛಾವಣಿಯ ಒಂದು ಭಾಗವು ಮಧ್ಯಾಹ್ನ 3.30ರ ಸುಮಾರಿಗೆ ಕುಸಿದಿದೆ.ಪೊಲೀಸರು ಮತ್ತು ಜಿಲ್ಲಾಡಳಿತ ತಮ್ಮ ತಂಡಗಳನ್ನು ಕಳುಹಿಸಿದ್ದು, ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಭಕ್ತರ ಸಾವಿನ ಬಗ್ಗೆ ದುಃಖ ವ್ಯಕ್ತಪಡಿಸಿ, ಗಾಯಾಳುಗಳಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳಿದರಲ್ಲದೆ,ಮೃತರ ಸಂಬಂಧಿಕರಿಗೆ ತಲಾ 5 ಲಕ್ಷ ರೂ.ಗಳ ಆರ್ಥಿಕ ನೆರವು ನೀಡಲಾಗುವುದು ಎಂದು ಘೋಷಿಸಿದರು.

ಪರ್ಭಾನಿಯ ಯಶ್ವಾಡಿಯಲ್ಲಿ ಸಂಭವಿಸಿದ ಘಟನೆ ದುರದೃಷ್ಟಕರ. ಈ ದುರದೃಷ್ಟಕರ ಘಟನೆಯಲ್ಲಿ ಕೆಲವು ಭಕ್ತರು ಸಾವನ್ನಪ್ಪಿದ್ದಾರೆ. ನಾನು ಅವರಿಗೆ ನನ್ನ ಹೃತ್ಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತೇನೆ. ಅವರ ಕುಟುಂಬಗಳ ದುಃಖದಲ್ಲಿ ನಾವು ಕೂಡ ಭಾಗಿಯಾಗಿದ್ದೇವೆ. ಈ ಘಟನೆಯಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.ಸ್ಥಳೀಯ ಆಡಳಿತ ಅಧಿಕಾರಿಗಳು ಸ್ಥಳದಲ್ಲಿದ್ದಾರೆ ಮತ್ತು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳು ಕೂಡ ತ್ವರಿತಗತಿಯಲ್ಲಿ ನಡೆಯುತ್ತಿವೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಮೃತರನ್ನು ಸಂತೋಷ್ ಗಡಾಡೆ (ಮಂಥಾ ನಿವಾಸಿ), ಆಕಾಶ್ ಸುರ್ದುಸೆ (ಪರ್ಭಾನಿ), ಮುನೇಶ್ ಅಗರ್ವಾಲ್ (26, ಜಿಂಟೂರ್), ಸೂರಜ್ ಪೋಪಟ್ಕರ್(20, ಮನ್ವತ್), ಮತ್ತು ಶ್ರೀಕೃಷ್ಣ ಗವಾರೆ (38, ವಡ್ವಾನಿ-ಬೀಡ್) ಎಂದು ಗುರುತಿಸಲಾಗಿದೆ. ದುರಂತದಲ್ಲಿ ಐವರು ಜನರು ಸಾವನ್ನಪ್ಪಿರುವುದು ದೃಢಪಟ್ಟಿದ್ದರೂ, ಇಲ್ಲಿಯವರೆಗೆ ಸುಮಾರು 25 ಜನರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಶನಿವಾರ, ಹನುಮಂತ ದೇವರಿಗೆ ಸಂಬಂಧಿಸಿದ ದಿನವಾದ್ದರಿಂದ ಮಂದಿರದಲ್ಲಿ ಭಕ್ತರ ದಂಡು ಕಂಡುಬಂದಿದೆ ಎಂದು ಮತ್ತೊಬ್ಬ ಅಧಿಕಾರಿ ಹೇಳಿದ್ದಾರೆ. 5ನೇ ಪುಟಕ್ಕೆ

ಇಂದು ಅಂತಾರಾಷ್ಟ್ರೀಯ ಯೋಗ ದಿನ; ಪ್ರಧಾನಿ ಜೊತೆ ವ್ಯಾಯಾಮಕ್ಕೆ 6 ಲಕ್ಷ ಸಂಸ್ಥೆಗಳ ನೋಂದಣಿ



ಹೊಸದಿಲ್ಲಿ, ಜೂ.20 - ನಾಳೆ 12ನೇ ಅಂತಾರಾಷ್ಟ್ರೀಯ ಯೋಗ ದಿನ (ಐಡಿವೈ) - 2026ನ್ನು ಆಚರಿಸಲು ಭಾರತ ಸಜ್ಜಾಗಿರುವುದರಿಂದ, ಆಯುಷ್ ಸಚಿವಾಲಯದ ಯೋಗ ಸಂಗಮ್ ಪೋರ್ಟಲ್ 6 ಲಕ್ಷ ನೋಂದಣಿಗಳನ್ನು ತಲುಪುವ ಮೂಲಕ ಪ್ರಮುಖ ಮೈಲಿಗಲ್ಲನ್ನು ಸಾಧಿಸಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಇದು ದೇಶಾದ್ಯಂತದ ಸಂಸ್ಥೆಗಳು ಮತ್ತು ಸಮುದಾಯಗಳಲ್ಲಿ ಅಭೂತಪೂರ್ವ ಉತ್ಸಾಹವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿಕೆ ತಿಳಿಸಿದೆ.

ಯೋಗ ದಿನ 2026ರ ಪ್ರಮುಖ ಉಪಕ್ರಮವಾದ ಯೋಗ ಸಂಗಮ್, ಸಾಮಾನ್ಯ ಯೋಗ ಪ್ರೋಟೋಕಾಲ್ (ಸಿವೈಪಿ) ಆಧಾರದ ಮೇಲೆ ಸಿಂಕ್ರೊನೈಸ್ ಮಾಡಿದ ಯೋಗ ಅವಧಿಗಳ ಮೂಲಕ ರಾಷ್ಟ್ರದಾದ್ಯಂತ ಸಂಸ್ಥೆಗಳು ಮತ್ತು ಸಮುದಾಯಗಳನ್ನು ಸಂಪರ್ಕಿಸುವ ಗುರಿಯನ್ನು ಹೊಂದಿದೆ.

ಒಂದೇ ಸ್ಥಳ ಆಚರಣೆಯನ್ನು ಮೀರಿ, ಈ ಉಪಕ್ರಮವು ಭಾರತದಾದ್ಯಂತದ ಸಂಸ್ಥೆಗಳು ತಮ್ಮದೇ ಆದ ಸ್ಥಳಗಳಲ್ಲಿ ಯೋಗ ಅವಧಿಗಳನ್ನು ನಡೆಸಲು ಅನುವು ಮಾಡಿಕೊಡುತ್ತದೆ ಮತ್ತು ಒಂದು ಸಾಮೂಹಿಕ ರಾಷ್ಟ್ರೀಯ ಚಳುವಳಿಯ ಭಾಗವಾಗುತ್ತದೆ. ನೋಂದಾಯಿತ ಸಂಸ್ಥೆಗಳು ಜೂ.21 ರಂದು ರಾಷ್ಟ್ರವ್ಯಾಪಿ ಯೋಗ ಸಂಗಮ ಆಂದೋಲನದಲ್ಲಿ ಭಾಗವಹಿಸಲು ಮತ್ತು ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಏಕಕಾಲದಲ್ಲಿ ಯೋಗಾಭ್ಯಾಸ ಮಾಡಲು ತಮ್ಮ ಸ್ಥಳಗಳಲ್ಲಿ ಭಾಗವಹಿಸುವವರನ್ನು ಸಜ್ಜುಗೊಳಿಸುತ್ತವೆ. 5ನೇ ಪುಟಕ್ಕೆ

ಇಂದು ನೀಟ್ - ಯುಜಿ ಮರುಪರೀಕ್ಷೆ ; ಬಿಗಿ ಭದ್ರತೆ

ದೇಶ ವಿದೇಶಗಳ 565 ನಗರಗಳಲ್ಲಿ ಮರುಪರೀಕ್ಷೆ; ವಾಯುಪಡೆ ಮೂಲಕ ಪ್ರಶ್ನೆಪತ್ರಿಕೆ ಸಾಗಾಟ

ಹೊಸದಿಲ್ಲಿ, ಜೂ.20 - ರಾಷ್ಟ್ರವ್ಯಾಪಿ ಆಕ್ರೋಶ, ರಾಜಕೀಯ ಘರ್ಷಣೆ ಮತ್ತು ಕಾನೂನು ಸವಾಲುಗಳಿಗೆ ಕಾರಣವಾದ ಪ್ರಶ್ನೆಪತ್ರಿಕೆ ಸೋರಿಕೆಯ ಆರೋಪದ ಕಾರಣ ಮೂಲ ಪರೀಕ್ಷೆಯನ್ನು ರದ್ದುಗೊಳಿಸಿದ ಸುಮಾರು 7 ವಾರಗಳ ಬಳಿಕ ರವಿವಾರ ನೀಟ್- ಯುಜಿ ಮರು ಪರೀಕ್ಷೆ ನಡೆಯಲಿದ್ದು, ಸುಮಾರು 22.79 ಲಕ್ಷಕ್ಕೂ ಹೆಚ್ಚು ವೈದ್ಯಕೀಯ ಆಕಾಂಕ್ಷಿಗಳು ಈ ಮರುಪರೀಕ್ಷೆಗೆ ಹಾಜರಾಗಲಿದ್ದಾರೆ.

ವೈದ್ಯಕೀಯ ಪ್ರವೇಶ ಪರೀಕ್ಷೆಯನ್ನು ಸುಗಮ, ಸುರಕ್ಷಿತ ಹಾಗೂ ಪಾರದರ್ಶಕವಾಗಿ ನಡೆಸುವುದನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನಗಳ ಭಾಗವಾಗಿ ನೀಟ್- ಯುಜಿ 2026 ಮರು ಪರೀಕ್ಷೆಗೆ ಮುಂಚಿತವಾಗಿ ಶನಿವಾರ ದೇಶಾದ್ಯಂತ ರಾಷ್ಟ್ರವ್ಯಾಪಿ ಅಣಕು ಪರೀಕ್ಷೆ ನಡೆಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರ ರಾಜಧಾನಿಯಲ್ಲಿರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಕಚೇರಿಯಲ್ಲೂ ಭದ್ರತೆಯನ್ನು ಬಿಗಿಗೊಳಿಸಲಾಗಿದೆ.

ಭಾರತದ 551 ನಗರಗಳು ಮತ್ತು ವಿದೇಶಗಳ 14 ನಗರಗಳಲ್ಲಿ ಮರುಪರೀಕ್ಷೆ ಮಧ್ಯಾಹ್ನ 2 ರಿಂದ 5.15 ರವರೆಗೆ ನಡೆಯಲಿದೆ. ಪರಿಹಾರ ಸಮಯಕ್ಕೆ ಅರ್ಹರಾಗಿರುವ ಅಂಗವಿಕಲ (ಪಿಡಬ್ಲ್ಯೂಡಿ/ ಪಿಡಬ್ಲ್ಯೂಬಿಡಿ) ಅಭ್ಯರ್ಥಿಗಳು ಸಂಜೆ 6.20 ರವರೆಗೆ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ.

ಅಭ್ಯರ್ಥಿಗಳು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ರವರೆಗೆ ತಮ್ಮ ಪರೀಕ್ಷಾ ಕೇಂದ್ರಗಳಿಗೆ ವರದಿ ಮಾಡಿಕೊಳ್ಳುವಂತೆ ಕೇಳಿಕೊಳ್ಳಲಾಗಿದೆ. ಮಧ್ಯಾಹ್ನ 1.30ಕ್ಕೆ ಪ್ರವೇಶ ದ್ವಾರಗಳು ಸರಿಯಾಗಿ ಮುಚ್ಚಲ್ಪಡುತ್ತವೆ ಮತ್ತು ಬಳಿಕ ಯಾವುದೇ ಸಂದರ್ಭದಲ್ಲೂ ಯಾವುದೇ ಅಭ್ಯರ್ಥಿಗೆ ಪ್ರವೇಶವನ್ನು ಅನುಮತಿಸಲಾಗುವುದಿಲ್ಲ ಎಂದು ಸಂಸ್ಥೆ ತಿಳಿಸಿದೆ.

ಗೌಪ್ಯ ಸಾಮಗ್ರಿಗಳನ್ನು ಸುರಕ್ಷಿತವಾಗಿ ಸಾಗಿಸುವ ಕಾರ್ಯವನ್ನು ಹೊಂದಿರುವ ಜಿಲ್ಲಾಡಳಿತಗಳು, ಪೊಲೀಸ್ ಪಡೆಗಳು ಮತ್ತು ಬೆಂಗಾವಲು ತಂಡಗಳೊಂದಿಗೆ ಮರುಪರೀಕ್ಷೆಗೆ ಸಂಪೂರ್ಣವಾಗಿ ಸಿದ್ಧವಾಗಿದೆ ಎಂದು ಎನ್‌ಟಿಎ ಹೇಳಿದೆ. 5ನೇ ಪುಟಕ್ಕೆ

2006ರ ಪವನ್‌ರಾಜೆ ನಿಂಬಾಳ್ಕರ್ ಹತ್ಯೆ ಪ್ರಕರಣ: ಮಾಜಿ ಸಚಿವ ಪದಮ್‌ಸಿಂಹ ಪಾಟೀಲ್ ಸೇರಿ 8 ಜನರ ಖುಲಾಸೆ

ಮುಂಬಯಿ, ಜೂ.20 - 2006ರಲ್ಲಿ ನಡೆದ ತಮ್ಮ ಸೋದರಸಂಬಂಧಿ ಹಾಗೂ ಎನ್‌ಸಿಪಿ ನಾಯಕ ಪವನ್‌ರಾಜೆ ನಿಂಬಾಳ್ಕರ್ ಮತ್ತು ಅವರ ಚಾಲಕನ ಹತ್ಯೆ ಪ್ರಕರಣದಲ್ಲಿ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಪದಮ್‌ಸಿಂಹ ಪಾಟೀಲ್ ಮತ್ತು ಇತರ 7 ಜನರನ್ನು ಶನಿವಾರ ಇಲ್ಲಿನ ವಿಶೇಷ ನ್ಯಾಯಾಲಯ ಖುಲಾಸೆಗೊಳಿಸಿದ್ದು, ಪ್ರಾಸಿಕ್ಯೂಷನ್ ಕೊಲೆ ಪಿತೂರಿಯ ಸಂದರ್ಭವನ್ನು ಸಾಬೀತುಪಡಿಸಲು ವಿಫಲವಾಗಿದೆ ಎಂದು ಅದು ಹೇಳಿದೆ.

ಪ್ರಾಸಿಕ್ಯೂಷನ್‌ನ ಪ್ರಮುಖ ಸಾಕ್ಷಿಯ ಹೇಳಿಕೆಗಳಲ್ಲಿ ವಿರೋಧಾಭಾಸಗಳಿರುವುದರಿಂದ ಅವರ ಸಾಕ್ಷ್ಯವು ವಿಶ್ವಾಸಾರ್ಹವಲ್ಲ ಎಂದು ನ್ಯಾಯಾಲಯ ತಿಳಿಸಿದೆ ಇಂತಹ ಹೈ ಪ್ರೊಫೈಲ್ ಕೊಲೆ ಪ್ರಕರಣದಲ್ಲಿ ಆರೋಪಿಗಳ ಮೊಬೈಲ್ ಫೋನ್‌ಗಳು ಅಥವಾ ಕರೆ ವಿವರ ದಾಖಲೆಗಳಂತಹ ನಿರ್ಣಾಯಕ ಡಿಜಿಟಲ್ ಸಾಕ್ಷ್ಯಗಳನ್ನು ಸಂಗ್ರಹಿಸಲು ವಿಫಲವಾಗಿರುವುದಕ್ಕೆ ಪ್ರಕರಣದ ತನಿಖೆ ನಡೆಸುತ್ತಿದ್ದ ಕೇಂದ್ರ ತನಿಖಾ ದಳ (ಸಿಬಿಐ)ವನ್ನು ನ್ಯಾಯಾಲಯ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತು. 5ನೇ ಪುಟಕ್ಕೆ

ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಿದ್ಧಿ ವಿನಾಯಕ ಮಂದಿರಕ್ಕೆ ಭೇಟಿ



(ಚಿತ್ರ,ವರದಿ - ದಿನೇಶ್ ಕುಲಾಲ್)

ಮುಂಬಯಿ,ಜೂ.20 - ಕರ್ನಾಟಕದ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರಿಂದು ಖಾಸಗಿ ಕಾರ್ಯಕ್ರಮಕ್ಕಾಗಿ ದೇಶದ ವಾಣಿಜ್ಯ ನಗರಿ ಮುಂಬಯಿಗೆ ಆಗಮಿಸಿದ್ದ ಸಂದರ್ಭ ಸಾಂತಕ್ರೂಸ್ ವಿಮಾನ ನಿಲ್ದಾಣದಲ್ಲಿ ಅಪಾರ ಸಂಖ್ಯೆಯಲ್ಲಿ ತುಳು- ಕನ್ನಡಿಗರು ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಕಾಂಗ್ರೆಸ್ ಪಕ್ಷದ ಯುವ ಮುಖಂಡ ಮಿಥುನ್ ರೈ ಕೂಡ ಈ ವೇಳೆ ಶಿವಕುಮಾರ್ ಜತೆಗಿದ್ದರು. ಮುಖ್ಯಮಂತ್ರಿ ಹುದ್ದೆ ವಹಿಸಿಕೊಂಡ ಬಳಿಕ ಶಿವಕುಮಾರ್ ಅವರ ಮೊದಲ ಮುಂಬಯಿ ಭೇಟಿ ಇದಾಗಿದೆ.

ಕನ್ನಡಿಗರೆಲ್ಲರು ತನಗೆ ನೀಡಿದ ಪ್ರೀತಿಯ ಗೌರವವನ್ನು ಸ್ವೀಕರಿಸಿದ ಬಳಿಕ ಶಿವಕುಮಾರ್ ಅವರು ಮುಂಬಯಿಯ ಪ್ರಸಿದ್ಧ ದಾದರ್‌ನ ಪ್ರಭಾದೇವಿಯಲ್ಲಿರುವ ಸಿದ್ಧಿ ವಿನಾಯಕ ಮಂದಿರಕ್ಕೆ ಭೇಟಿ ನೀಡಿ ವಿಶೇಷ ಪೂಜೆಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಹಾರಾಷ್ಟ್ರ ಕಾಂಗ್ರೆಸ್ ಪಕ್ಷದ ಮುಖಂಡರು,ಚಿಣ್ಣರ ಬಿಂಬದ ರೂವಾರಿ ನಿವೃತ್ತ ಪೊಲೀಸ್ ಅಧಿಕಾರಿ ಪ್ರಕಾಶ್ ಭಂಡಾರಿ,ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿಯ ಸಂಸ್ಥಾಪಕ ತೋನ್ಸೆ ಜಯಕೃಷ್ಣ ಎ. ಶೆಟ್ಟಿ,ಹೋಟೆಲ್ ಉದ್ಯಮಿ ಪರ್ವತ್ ಶೆಟ್ಟಿ ಮತ್ತಿತರ ತುಳು ಕನ್ನಡಿಗರು ಕೂಡ ಉಪಸ್ಥಿತರಿದ್ದರು.

ಭಯೋತ್ಪಾದನೆ ಸಂಬಂಧಿತ ಪ್ರಕರಣ: ಮಹಾರಾಷ್ಟ್ರ ಎಟಿಎಸ್‌ನಿಂದ ಪರ್ಭಾನಿಯಲ್ಲಿ ಶೋಧ; ಹಲವರ ಬಂಧನ

ಮುಂಬಯಿ, ಜೂ.20 - ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ರಾಜ್ಯದ ಪರ್ಭಾನಿ ಜಿಲ್ಲೆಯ 15 ಸ್ಥಳಗಳಲ್ಲಿ ಶೋಧ ನಡೆಸಿದ್ದು, ಭಯೋತ್ಪಾದನೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಹಲವಾರು ಶಂಕಿತರನ್ನು ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆನ್‌ಲೈನ್ ಮೂಲಭೂತೀಕರಣ ಮತ್ತು ಇತರ ಅನುಮಾನಾಸ್ಪದ ಚಟುವಟಿಕೆಗಳಲ್ಲಿ ಕೆಲವು ವ್ಯಕ್ತಿಗಳು ಭಾಗಿಯಾಗಿದ್ದಾರೆ ಎಂಬ ಗುಪ್ತಚರ ಮಾಹಿತಿಯ ಬಳಿಕ ಎಟಿಎಸ್‌ನ ಛತ್ರಪತಿ ಸಂಭಾಜಿನಗರ ಮತ್ತು ನಾಂದೇಡ್ ಘಟಕಗಳ ತಂಡಗಳು ಶೋಧ ನಡೆಸಿವೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಶಂಕಿತರಿಂದ ದಾಖಲೆಗಳು, ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳು ಮತ್ತು ಇತರ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಅವರನ್ನು ಪ್ರಶ್ನಿಸಲಾಗುತ್ತಿದೆ ಎಂದು ಅವರು ಹೇಳಿದರು.

www.dhoutiyog.co.in

ಜೀರ್ಣಕ್ರಿಯೆಯ ಆರೋಗ್ಯಕ್ಕಾಗಿ ಯೋಗಾಭ್ಯಾಸ ಮಾಡಿ ಧೌತಿ ಯೋಗದಿಂದ ಹೊಟ್ಟೆಯನ್ನು ಸ್ವಚ್ಛವಾಗಿಡಿ !

Dhouti-Yog®

ಚೂರ್ಣ ಮತ್ತು ಮಾತ್ರೆಗಳು

ಅಜೀರ್ಣ, ಮಲಬದ್ಧತೆ, ಗ್ಯಾಸ್, ಆಮ್ಲೀಯತೆ, ಮೂಲವ್ಯಾಧಿ ಇತ್ಯಾದಿಗಳಿಗೆ ಪರಿಣಾಮಕಾರಿ ಪರಿಹಾರ.



- ಯಾವುದೇ ಅಡ್ಡ ಪರಿಣಾಮಗಳಿಲ್ಲ, ಅಭ್ಯಾಸವಿಲ್ಲ.
- ಆಯುರ್ವೇದ ತಜ್ಞರಿಂದ ಗಿಡಮೂಲಿಕೆ ಪದಾರ್ಥಗಳನ್ನು ಬಳಸಿ ರೂಪಿಸಲಾಗಿದೆ; ಕಳೆದ 50 ವರ್ಷಗಳಿಂದ ಲಕ್ಷಾಂತರ ಜನರು ನಂಬಿ ಬಳಸುತ್ತಿರುವ ಔಷಧಿ!
- ಹೊಟ್ಟೆಯಲ್ಲಿ ಸೆಳೆತ ಉಂಟಾಗದಂತೆ ನಿಧಾನವಾಗಿ ಸ್ವಚ್ಛಗೊಳಿಸುತ್ತದೆ. ಶುದ್ಧೀಕರಣದ ನಂತರ ನೀವು ತಾಜಾತನವನ್ನು ಅನುಭವಿಸುತ್ತೀರಿ, ಚೈತನ್ಯ ಭರಿತರಾಗುತ್ತೀರಿ, ಉತ್ತಮ ಹಸಿವನ್ನು ಅನುಭವಿಸುತ್ತೀರಿ ಮತ್ತು ಆಮ್ಲೀಯತೆ ಕಡಿಮೆಯಾಗುವುದನ್ನು ಗಮನಿಸುತ್ತೀರಿ.

ಶುದ್ಧ ಹೊಟ್ಟೆ, ಉತ್ತಮ ಆರೋಗ್ಯ !

ಎಲ್ಲಾ ವೈದ್ಯಕೀಯ, ಆಯುರ್ವೇದ ಅಂಗಡಿಗಳಲ್ಲಿ ಮತ್ತು ಅಮೆಜಾನ್, ಜಿಯೋ ಮಾರ್ಟ್, ಟಾಟಾ 1ಎಂಜಿ, ಫ್ಲಿಪ್‌ಕಾರ್ಟ್‌ನಲ್ಲಿಯೂ ಲಭ್ಯವಿದೆ.

ಸಂಪರ್ಕ - ಡಾ. ಅಭಿಜಿತ್ (ಆಯುರ್ವೇದಾಚಾರ್ಯ) 9422011723

• ಈ ಔಷಧಿಯನ್ನು ನಿಮ್ಮ ಮನೆ ಬಾಗಿಲಿಗೆ ತಲುಪಿಸಲು, ಅಮೇಜಾನ್‌ಗೆ ಭೇಟಿ ನೀಡಿ ಅಥವಾ ನಮ್ಮ ವೆಬ್‌ಸೈಟ್ www.dhoutiyog.co.in ಗೆ ಭೇಟಿ ನೀಡಿ • ಕ್ಯಾಶ್ ಆನ್ ಡೆಲಿವರಿ ಲಭ್ಯವಿದೆ !

ತಯಾರಕ - ಸಿದ್ಧ ಫಾರ್ಮಾ, ಪುಣೆ, GMP ಪ್ರಮಾಣೀಕೃತ ಕಂಪನಿ

ಮೂಲವ್ಯಾಧಿಯಿಂದ ಉಂಟಾಗುವ ಬಿರುಕು ನೋವು, ಉರಿ ಮತ್ತು ರಕ್ತಸ್ರಾವಕ್ಕೆ ಧೌತಿ ಯೋಗ್ ಕ್ರೀಮ್ ಅನ್ನು ಬಳಸಿರಿ



PATANJALI® पतंजलि®



ಅಂತಾರಾಷ್ಟ್ರೀಯ ಯೋಗ ದಿನ
ಯೋಗ ಆಹ್ವಾನ

ಮೂಲಭೂತವಾಗಿ, ನಾವು ಭಾರತೀಯರು ಯೋಗಿಗಳ ವಂಶಸ್ಥರು. ಕಾಲವು ನಮ್ಮನ್ನು ಪಂಗಡಗಳು, ಜಾತಿಗಳು ಮತ್ತು ಸಮುದಾಯಗಳಾಗಿ ವಿಭಜಿಸಿರಬಹುದು, ಆದರೆ ಕೃತಘ್ನತೆಯ ಪಾಪವನ್ನು ದೂರವಿಡಲು ನಾವು ನಮ್ಮ ಪೂರ್ವಜರಿಗೆ ಋಣಿಯಾಗಿರಬೇಕು. ಹೀಗಾಗಿ, ನಾವು ಒಟ್ಟಾಗಿ ಯೋಗಾಭ್ಯಾಸ ಮಾಡೋಣ - ಪ್ರತಿ ಹಳ್ಳಿ ಮತ್ತು ನಗರದ ನೆರೆಹೊರೆಗಳಲ್ಲಿ 10, 20, 50, ಅಥವಾ 100 ಜನರ ಗುಂಪುಗಳನ್ನು ರಚಿಸೋಣ ಮತ್ತು ಹೆಚ್ಚಿನ ಜನರನ್ನು ಪ್ರೇರೇಪಿಸಲು ಈ ಕೂಟಗಳ ಫೋಟೋಗಳು ಮತ್ತು ರೀಲ್‌ಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳೋಣ.

ಯೋಗ, ಆಯುರ್ವೇದ ಮತ್ತು ಸ್ವದೇಶಿ ಮೂಲಕ ಸ್ವಾವಲಂಬಿ ಭಾರತವನ್ನು ನಿರ್ಮಿಸಲು ಇತರರನ್ನು ಪ್ರೇರೇಪಿಸುವ ಪ್ರತಿಜ್ಞೆಯನ್ನು ನೀವೇ ತೆಗೆದುಕೊಳ್ಳಿ.

ವಿರೋಧ- ಯೋಗ, ಆಯುರ್ವೇದ, ಸ್ವದೇಶಿ ಮತ್ತು ಸನಾತನ ಸಂಸ್ಕೃತಿಯನ್ನು ತೀವ್ರವಾಗಿ ವಿರೋಧಿಸುವ ಮತ್ತು ನಾಶಮಾಡುವ ಪಿತೂರಿಯಲ್ಲಿ ಹಲವಾರು ದುಷ್ಟ ಶಕ್ತಿಗಳು ಸಕ್ರಿಯವಾಗಿವೆ. ನಿಜವಾದ ರಾಷ್ಟ್ರೀಯವಾದಿ "ಸನಾತನಿ" ಆತ್ಮಗಳು ಈ ದೇವಾಸುರ ಸಂಗ್ರಾಮ (ಒಳ್ಳೆಯದು ಮತ್ತು ಕೆಟ್ಟದ್ದರ ನಡುವಿನ ಯುದ್ಧ) ಅಥವಾ ಧರ್ಮಯುದ್ಧ (ಸದಾಚಾರದ ಯುದ್ಧ) ದಲ್ಲಿ ಪತಂಜಲಿ ಮತ್ತು ಪೂಜ್ಯ ಸ್ವಾಮಿ ರಾಮದೇವ್‌ಜಿ ಅವರೊಂದಿಗೆ ಪೂರ್ಣ ಹೃದಯದಿಂದ ದೃಢವಾಗಿ ನಿಲ್ಲಬೇಕು. ಧರ್ಮ (ಸದಾಚಾರ) ಇರುವಲ್ಲಿ ವಿಜಯವಿದೆ; ಸತ್ಯ ಮಾತ್ರ ಜಯಗಳಿಸುತ್ತದೆ. (ಯತೋ ಧರ್ಮ: ತತೋ ಜಯಃ, ಸತ್ಯಮೇವ ಜಯತೇ.)

ಲೂಟಿ- ಆಕ್ಸ್‌ಫ್ಯಾಮ್ ಇಂಟರ್‌ನ್ಯಾಷನಲ್ ವರದಿ ಮತ್ತು ಅಂತರ್ಜಾಲದಲ್ಲಿ ಲಭ್ಯವಿರುವ ಇತರ ಅಧಿಕೃತ ಮೂಲಗಳನ್ನು ಎಐ ಪರಿಕರಗಳನ್ನು ಬಳಸಿಕೊಂಡು ಅನ್ವೇಷಿಸಬಹುದು, ವಿದೇಶಿ ಕಂಪನಿಗಳು ಕಳೆದ 200-250 ವರ್ಷಗಳಲ್ಲಿ ನಮ್ಮ ರಾಷ್ಟ್ರವನ್ನು 100 ಟ್ರಿಲಿಯನ್‌ಗಿಂತಲೂ ಹೆಚ್ಚು ಲೂಟಿ ಮಾಡಿವೆ ಎಂದು ಖಚಿತಪಡಿಸಿಕೊಳ್ಳಲು ಬಹುರಾಷ್ಟ್ರೀಯ ಕಂಪನಿಗಳು, ಮೆಕಾಲೆಯ ಶಿಕ್ಷಣ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಅಧೀನತೆಯು ಈ ಮಹಾನ್ ಭಾರತ ರಾಷ್ಟ್ರವನ್ನು ವಿನಾಶದ ಅಂಚಿಗೆ ತಳ್ಳಿದೆ. 500-1000 ವರ್ಷಗಳ ಹಿಂದಿನ ನಮ್ಮ ಸುವರ್ಣ ಯುಗವನ್ನು ನೆನಪಿಸಿಕೊಳ್ಳುತ್ತಾ, ಭಾರತ ವಿರೋಧಿ ಶಕ್ತಿಗಳನ್ನು ಸೋಲಿಸಿ ನಮ್ಮ ಋಷಿಗಳು (ಋಷಿಗಳು ಮತ್ತು ಮುನಿಗಳು) ಮತ್ತು ಹುತಾತ್ಮರ ದೃಷ್ಟಿಕೋನವನ್ನು ಅರಿತುಕೊಳ್ಳುವ ಅದ್ಭುತ ಮತ್ತು ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸಲು ನಾವು ದಣಿವರಿಯದೇ ಮತ್ತು ಒಗ್ಗಟ್ಟಿನಿಂದ ಕೆಲಸ ಮಾಡೋಣ.

ಪತಂಜಲಿಯು ಕೊಡುಗೆ - ಪೂಜ್ಯ ಸ್ವಾಮಿ ರಾಮದೇವ್ ಜಿ, ಆಚಾರ್ಯ ಶ್ರೀ ಬಾಲಕೃಷ್ಣ ಜಿ ಮತ್ತು ಪತಂಜಲಿ ಸಂಘಟನೆಯ ಅವಿರತ ಪ್ರಯತ್ನಗಳ ಮೂಲಕ, ಯೋಗ, ಆಯುರ್ವೇದ, ಸ್ವದೇಶಿ ಮತ್ತು ಸನಾತನ ಸಂಸ್ಕೃತಿಯ ವೈಭವವು ಈಗ ಇಡೀ ಜಗತ್ತನ್ನು ತಲುಪಿದೆ. ಪತಂಜಲಿಯು ಈ ಉದಾತ್ತ ಸೇವೆಗೆ ಲಕ್ಷಾಂತರ ಕೋಟಿ ರೂಪಾಯಿಗಳಷ್ಟು ಅಪಾರ ಮೊತ್ತವನ್ನು ಕೊಡುಗೆ ನೀಡಿದೆ. ಸುಮಾರು 10,000 + ಸಂಶೋಧನಾ ಪ್ರೋಟೋಕಾಲ್‌ಗಳಿಗೆ ಬದ್ಧವಾಗಿ, ಪತಂಜಲಿ ವಿದ್ವಾಂಸರು ಅಂತರರಾಷ್ಟ್ರೀಯ ನಿಯತಕಾಲಿಕಗಳಲ್ಲಿ 500+ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಪತಂಜಲಿಯು ರಾಷ್ಟ್ರವ್ಯಾಪಿ ನೆಟ್‌ವರ್ಕ್-ಒಳಗೊಂಡಿರುವ ಸಂಸ್ಥೆಗಳಾದ ಪತಂಜಲಿ ಗುರುಕುಲಂ, ಆಚಾರ್ಯಕುಲಂ, ಪತಂಜಲಿ ವಿಶ್ವವಿದ್ಯಾಲಯ, ಭಾರತೀಯ ಶಿಕ್ಷಾ ಮಂಡಳಿ (BSB), ಪತಂಜಲಿ ವೃತ್ತಿಜೀವನ ಅಕಾಡೆಮಿ, ಪತಂಜಲಿ ನಾಗರಿಕ ಸೇವೆಗಳ ಅಕಾಡೆಮಿ (PCSA), ಪತಂಜಲಿ ವೆಲ್‌ನೆಸ್, ಪತಂಜಲಿ ಯೋಗಗ್ರಾಮ್, ನಿರಾಮಯಂ, ಪತಂಜಲಿ ಸಂಶೋಧನಾ ಪ್ರತಿಷ್ಠಾನ ಮತ್ತು ಗೋಶಾಲೆಗಳಾದ್ಯಂತ ಲಕ್ಷಾಂತರ ಸ್ವಯಂಸೇವಕರ ನಿಸ್ವಾರ್ಥ ಸಮರ್ಪಣೆ ಮತ್ತು ತಪಸ್ಸಿನಿಂದ ಪ್ರೇರಿತರಾಗಿ - ಒಂದು ಐತಿಹಾಸಿಕ ಸೇವಾ ಧ್ಯೇಯವು ನಡೆಯುತ್ತಿದೆ. ನೂರಾರು ತಪಸ್ವಿಗಳ ತಪಸ್ಸು, ಲಕ್ಷಾಂತರ *ಕರ್ಮಯೋಗಿಗಳ* ನಿಸ್ವಾರ್ಥ ಸೇವೆ ಮತ್ತು ಕೋಟ್ಯಂತರ ಸಹ ನಾಗರಿಕರ ಬೆಂಬಲ ನಮ್ಮ ಶಕ್ತಿ. ನಮ್ಮ ಕೊನೆಯ ಉಸಿರಿನ ವರೆಗೂ ಭಾರತ ಮಾತೆ ಮತ್ತು ಮಾನವೀಯತೆಯ ಸೇವೆಗೆ ನಮ್ಮ ಸಂಪೂರ್ಣ ಅಸ್ತಿತ್ವವನ್ನು ಅರ್ಪಿಸುವುದು ನಮ್ಮ ಗಂಭೀರ ಸಂಕಲ್ಪವಾಗಿದೆ.

ಯೋಗದ ಸದ್ಗುಣಗಳನ್ನು ಮತ್ತು ರಾಮ, ಕೃಷ್ಣ ಮತ್ತು ಶಿವನ ಸದ್ಗುಣಗಳನ್ನು ಅಳವಡಿಸಲು ಮತ್ತು ಸಾಕಾರಗೊಳಿಸಲು ಪತಂಜಲಿಯೊಂದಿಗೆ ಸಂಪರ್ಕ ಸಾಧಿಸಿ. ಸನಾತನ ಧರ್ಮವು ಕೇವಲ ಬೋಧಿಸುವುದಲ್ಲ, ಬದಲಾಗಿ ಕಾರ್ಯರೂಪಕ್ಕೆ ತರುವುದು

ಆಸ್ಥಾ ಮತ್ತು ಇಂಡಿಯಾ ಟಿವಿಯಂತಹ ಚಾನೆಲ್‌ಗಳಿಗೆ ಟ್ಯೂನ್ ಮಾಡುವ ಮೂಲಕ ಅಥವಾ ಯೂಟ್ಯೂಬ್‌ನಲ್ಲಿ ವಿಷಯವನ್ನು ಪ್ರವೇಶಿಸುವ ಮೂಲಕ ಯೋಗಾಭ್ಯಾಸ ಮಾಡುವುದನ್ನು ದೈನಂದಿನ ಅಭ್ಯಾಸವನ್ನಾಗಿ ಮಾಡಿಕೊಳ್ಳಿ.

आस्था LIVE Everyday 5:00 am to 7:30 am and 8:00 pm | संस्कार Everyday 9:00 am | INDIA TV Everyday 8:00 am | YouTube Swami Ramdev | Acharya Bal Krishna

ಪತಂಜಲಿಯು ಸಂಶೋಧನಾ-ಆಧಾರಿತ ಆರೋಗ್ಯ ಉತ್ಪನ್ನಗಳು ಮತ್ತು ಔಷಧಿಗಳು ಹಾಗೂ ಸ್ವದೇಶಿ ಉತ್ಪನ್ನಗಳಾದ - ಹಸು ತುಪ್ಪ, ದಂತ ಕಾಂತಿ, ಜೇನುತುಪ್ಪ, ಕೇಶ್ ಕಾಂತಿ, ಶರ್ಬತ್, ಜ್ಯೂಸ್‌ಗಳನ್ನು ಖರೀದಿಸಲು - Google ನಲ್ಲಿ " ಪತಂಜಲಿ ಅಂಗಡಿ ಹತ್ತಿರ ನನ್ನ" ಎಂದು ಹುಡುಕಿ. ಈ ಉತ್ಪನ್ನಗಳು ದೇಶಾದ್ಯಂತದ ಪ್ರಮುಖ ಅಂಗಡಿಗಳಲ್ಲಿ ಲಭ್ಯವಿದೆ. ಇಲ್ಲದಿದ್ದರೆ, ಅವುಗಳನ್ನು ಸ್ಟಾಕ್ ಮಾಡಲು ನಿಮ್ಮ ಅಂಗಡಿಯವರನ್ನು ವಿನಂತಿಸಿ.

ಹೆಚ್ಚಿನ ವಿವರಗಳಿಗಾಗಿ, ಪತಂಜಲಿಯ ಪ್ರಮುಖ ಸಂಸ್ಥೆಗಳ ವೆಬ್‌ಸೈಟ್‌ಗಳಿಗೆ ಭೇಟಿ ನೀಡಿ.

ಸಮಗ್ರ ಆರೋಗ್ಯದ ಪ್ರಯೋಜನಗಳನ್ನು ಅನುಭವಿಸಲು ಪತಂಜಲಿ ವೆಲ್ನೆಸ್‌ಗೆ ಭೇಟಿ ನೀಡಿ; ನೋಂದಣಿಗಾಗಿ, ದಯವಿಟ್ಟು ಸಂಪರ್ಕಿಸಿ: 8954-666-111

ಭಾರತೀಯ ಶಿಕ್ಷಾ ಮಂಡಳಿ ಮತ್ತು ಪತಂಜಲಿ ನಾಗರಿಕ ಸೇವಾ ಅಕಾಡೆಮಿಯ ಕುರಿತು ವಿಚಾರಣೆಗಾಗಿ, ಸಂಪರ್ಕಿಸಿ: 8954-555-999

ಪಂಚಖಾತರಿ ಯೋಜನೆಗಳಿಂದ ಅರ್ಹ ಫಲಾನುಭವಿಗಳಿಗೆ ತೊಂದರೆ ಆಗಬಾರದು : ಸಿಎಂ ಡಿ.ಕೆ.ಶಿವಕುಮಾರ್



ಬೆಂಗಳೂರು,ಜೂ.20- ಪಂಚಖಾತರಿ ಯೋಜನೆಗಳಿಂದ ಒಬ್ಬನೇ ಒಬ್ಬ ಅರ್ಹ ಫಲಾನುಭವಿಗಳಿಗೆ ತೊಂದರೆ ಆಗಬಾರದು. ಅನರ್ಹ ಫಲಾನುಭವಿಗಳಿಂದ ಯೋಜನೆಯ ದುರುಪಯೋಗಕ್ಕೆ ಮಾತ್ರ ಕಡಿವಾಣ ಹಾಕಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಸ್ಪಷ್ಟವಾಗಿ ಹೇಳಿದ್ದಾರೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಹಲವು ಫಲಾನುಭವಿಗಳು ಬ್ಯಾಂಕ್ ಸಾಲ ಪಡೆದಿರುತ್ತಾರೆ. ಸಾಲದ ಖಾತೆಗೆ ಗೃಹಲಕ್ಷ್ಮೀ ಹಣ ಹೋದ ತಕ್ಷಣ ಆ ಹಣ ಸಾಲದ ಮೊತ್ತಕ್ಕೆ ಜಮೆ ಆಗುತ್ತದೆ. ಆದ್ದರಿಂದ ಅಂತಹ ಫಲಾನುಭವಿಗಳು ಖಾತೆ ಬದಲಾಯಿಸಿರುತ್ತಾರೆ. ಇಂಥಾ ಫಲಾನುಭವಿಗಳಿಗೆ ತೊಂದರೆ ಆಗಬಾರದು ಎಂದರು.

ಗೃಹಜ್ಯೋತಿ ಗ್ಯಾರಂಟಿ ಯೋಜನೆ ಜಾರಿ ಆಗುವಾಗ ಹೆಚ್ಚಿನ ದುರುಪಯೋಗ ಆಗದ ಹಾಗೆ ಎಚ್ಚರಿಕೆ ವಹಿಸಲಾಗಿತ್ತು. ಇದೇ ಎಚ್ಚರಿಕೆ ಇತರೆ ಯೋಜನೆಗಳಲ್ಲೂ ಅನುಸರಿಸಿದ್ದರೆ ದುರುಪಯೋಗದ ಪ್ರಮಾಣ ಕಡಿಮೆ ಆಗುತ್ತಿತ್ತು. ಮೃತಪಟ್ಟಿರುವ ಫಲಾನುಭವಿಗಳಿಗೂ ಗೃಹಲಕ್ಷ್ಮೀ ಹಣ ಹೋಗುತ್ತಿರುವುದು ಪತ್ತೆಯಾಗಿದೆ. ಈ ರೀತಿಯ ದುರುಪಯೋಗ ತಡೆಗಟ್ಟಬೇಕು. ಗೃಹಲಕ್ಷ್ಮೀ ಹಣ ಫಲಾನುಭವಿಗಳ ಖಾತೆಗೆ ಜಮೆಯಾದ ತಕ್ಷಣ ಅವರ ಮೊಬೈಲಿಗೆ ಧ್ವನಿ ಸಂದೇಶದ ಮೂಲಕ ಖಚಿತಪಡಿಸಬೇಕು ಎಂದರು.

ಏರ್‌ಟೆಲ್ ಆಪ್ ಬ್ಯಾಂಕ್‌ನಲ್ಲಿ ಏರ್‌ಟೆಲ್ ಸಿಮ್ ಬಳಕೆದಾರರು ತೆರೆಯಲು ಅವಕಾಶವಿರುವ ಖಾತೆಗಳನ್ನು ತೆರೆದು ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರಕರಣಗಳು ಪತ್ತೆಯಾಗಿವೆ ಎನ್ನುವ ಬಗ್ಗೆ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಖಾತೆಗಳು ಕರ್ನಾಟಕ ರಾಜ್ಯದಲ್ಲಿ ಮಾತ್ರ ಇರಬೇಕು. ಇತರೆ ರಾಜ್ಯಗಳಲ್ಲಿರುವ ಖಾತೆಗಳಿಗೆ ಹಣ ಹೋಗುತ್ತಿರುವುದು ಪತ್ತೆಯಾಗಿದೆ. ಇವುಗಳಿಗೆ ತಡೆ ಹಾಕಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ನಮ್ಮ ರಾಜ್ಯದ ಯೋಜನೆಗಳು ನಮ್ಮ ರಾಜ್ಯದ ಫಲಾನುಭವಿಗಳಿಗೆ ಮಾತ್ರ ಸಿಗಬೇಕು. ಇತರೆ ರಾಜ್ಯದ ಮತದಾರರಿಗೆ ಯೋಜನೆಯ ಲಾಭ ಆಗುತ್ತಿದೆ. ಇದನ್ನು ತಡೆಯಬೇಕು. ಅನುಕೂಲಸ್ಥರು ಯಾರಾದರೂ ಗ್ಯಾರಂಟಿ ಯೋಜನೆಗಳನ್ನು ಸ್ವಯಂಪ್ರೇರಿತವಾಗಿ ಬಿಟ್ಟು ಕೊಡುವ ಮೂಲಕ ಇತರೆ ಅರ್ಹ ಫಲಾನುಭವಿಗಳಿಗೆ ನೆರವಾಗಲು ಮುಂದಾದರೆ ಅಂಥವರನ್ನು ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಕೇಂದ್ರದ ನೀತಿಗಳಿಂದ ಬಡವರು ಮತ್ತು ಮಧ್ಯಮ ವರ್ಗದವರ ಮೇಲೆ ಬೀಳುತ್ತಿರುವ ಆರ್ಥಿಕ ಹೊರೆ, ಬೆಲೆ ಏರಿಕೆಯ ಪರಿಣಾಮಗಳು ಮತ್ತು ತಲಾ ಆದಾಯ ಕುಸಿಯುತ್ತಿರುವ ಬಗ್ಗೆಯೂ ಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಚರ್ಚೆ ನಡೆಸಿದರು. ಗೃಹಲಕ್ಷ್ಮೀ ಯೋಜನೆ ಜಾರಿಯಲ್ಲಿ ಬರುತ್ತಿರುವ ಎರಡು ಪ್ರಮುಖ ತಾಂತ್ರಿಕ ಸಮಸ್ಯೆಗಳ ಬಗ್ಗೆ ಕೂಲಂಕುಷವಾಗಿ ಸಮಾಲೋಚನೆ ಮಾಡಿದರು.

ಮರಣ ಹೊಂದಿದ ಫಲಾನುಭವಿಗಳ ಸಂಖ್ಯೆ ಸಕಾಲದಲ್ಲಿ ದೊರೆಯದಿರುವ ಬಗ್ಗೆ ಇ-ಕೆವೈಸಿ ಹಾಗೂ ಬ್ಯಾಂಕ್ ಖಾತೆ, ಎನ್.ಪಿ.ಸಿ.ಐ ನಿಷ್ಕ್ರಿಯವಾಗಿರುವ ಫಲಾನುಭವಿಗಳ ಕುರಿತಂತೆ ಚರ್ಚೆ ನಡೆಸಲಾಯಿತು.

ಸಿಎಜಿ ವರದಿಯಲ್ಲಿ ಉಲ್ಲೇಖವಾಗಿರುವ ಸಂಗತಿಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು. ಒಂದೇ ಖಾತೆಯಲ್ಲಿ ಹಲವು ಫಲಾನುಭವಿಗಳು ಗೃಹಲಕ್ಷ್ಮೀ ಹಣ ಪಡೆಯುತ್ತಿದ್ದಾರೆ. ಮೂರು ಲಕ್ಷ ಕಂತುಗಳಲ್ಲಿ ಒಟ್ಟು 60 ಕೋಟಿ ರೂಪಾಯಿ ಹಣ ಸೋರಿ ಹೋಗಿದೆ ಎನ್ನುವ ಬಗ್ಗೆ ಎಜಿ ವರದಿ ನೀಡಿದೆ.ಒಬ್ಬರೇ ಹಲವು ಖಾತೆಗಳನ್ನು ನೋಂದಾಯಿಸಿರುವುದನ್ನು ಸಹ ಎಜಿ ವರದಿ ಪತ್ತೆ ಮಾಡಿದೆ. ಈ ಹಿಂದೆ ಪಡೆದ ಅರ್ಜಿಗಳಲ್ಲಿ ಉಲ್ಲೇಖವಾಗಿರುವ ಅಂಶಗಳ ನೈಜತೆ ಬಗ್ಗೆ ಪರಿಶೀಲನೆ ನಡೆಸದಿರುವ ಬಗ್ಗೆ ಪ್ರಸ್ತಾಪಿಸಲಾಯಿತು. ಶಕ್ತಿ ಯೋಜನೆಯಡಿ ಮೇ ಅಂತ್ಯದವರೆಗೆ 763 ಕೋಟಿ ಮಹಿಳೆಯರು ಫಲಾನುಭವಿಗಳಾಗಿದ್ದು, ಅವರಿಗೆ 20047.69 ಕೋಟಿ ರೂಪಾಯಿ ವಿನಿಯೋಗಿಸಲಾಗಿದೆ. 2026-27ನೇ ಸಾಲಿಗೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಎಲ್ಲರನ್ನೂ ಸೇರಿಸಿ 10ಲಕ್ಷ ಉಚಿತ ಬಸ್ ಪಾಸ್ದ ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಅಂದಾಜಿಸಲಾಗಿದೆ.

ಗೃಹ ಜ್ಯೋತಿ ಯೋಜನೆಯಡಿ ಮೇ ಅಂತ್ಯದವರೆಗೆ 1.65 ಕೋಟಿ ಫಲಾನುಭವಿಗಳು ಯೋಜನೆಯ ಲಾಭ ಪಡೆದಿದ್ದಾರೆ. ಹೊರರಾಜ್ಯದಿಂದ ಇಲ್ಲಿಗೆ ಬಂದು ನೆಲೆಸಿ ಗೃಹ ಜ್ಯೋತಿ ಲಾಭ ಪಡೆಯುತ್ತಿರುವವರ ಮಾಹಿತಿ ಸಂಗ್ರಹಿಸಲು ಸೂಚಿಸಲಾಗಿದೆ. ಮತಪಟ್ಟಿಯಲ್ಲಿ ಹೆಸರಿರುವ ಮತದಾರರು ಮಾತ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿರುತ್ತಾರೆ. ಆದ್ದರಿಂದ ವಿಶೇಷ ಸಮಗ್ರ ಪರಿಷ್ಕರಣೆ ಸಂದರ್ಭದಲ್ಲಿ ಫಲಾನುವಿಗಳು ತಮ್ಮ ಹೆಸರು ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಆದೇಶಿಸಿದರು.

ಅನ್ನಭಾಗ್ಯ ಯೋಜನೆಯಡಿ 11561 ಕೋಟಿ ರೂ.ಗಳನ್ನು ಡಿಬಿಟಿ ಮೂಲಕ ಫಲಾನುಭವಿಗಳ ಖಾತೆಗೆ ವರ್ಗಾಯಿಸಲಾಗಿದೆ. ಜುಲೈ-2023 ಯಿಂದ ಡಿಸೆಂಬರ್-2024ರ ವರೆಗೆ ಒಟ್ಟು 72,02,33,970 ಫಲಾನುಭವಿಗಳಿಗೆ ಒಟ್ಟು ರೂ. 11561.05 ಕೋಟಿಗಳನ್ನು ಡಿಬಿಟಿ ವರ್ಗಾವಣೆ ಮಾಡಲಾಗಿದೆ.ತದನಂತರ 2025ನೇ ಫೆಬ್ರವರಿ ತಿಂಗಳಿನಿಂದ ಇಲ್ಲಿಯವರೆಗೆ ಪ್ರಸ್ತುತ ರಾಜ್ಯದಲ್ಲಿರುವ ಒಟ್ಟು 4,44,67,942 ಫಲಾನುಭವಿಗಳಿಗೆ ಪ್ರತಿ ತಿಂಗಳು ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ 5 ಕೆ.ಜಿ. ಅಕ್ಕಿಯನ್ನು ವಿತರಿಸಲಾಗುತ್ತಿದೆ. ಕಾಳಸಂತೆಯಲ್ಲಿ ಅನ್ನಭಾಗ್ಯ ಅಕ್ಕಿ ಅಕ್ರಮ ಮಾರಾಟವಾಗುತ್ತಿರುವುದನ್ನು ನಿಗ್ರಹಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಹ ಮುಖ್ಯಮಂತ್ರಿ ಆದೇಶಿಸಿದರು.

ಸಭೆಯಲ್ಲಿ ಸಚಿವರಾದ ಕೆ ಎಚ್ ಮುನಿಯಪ್ಪ, ಕೆ ಜೆ ಜಾರ್ಜ್, ಪ್ರಿಯಾಂಕ್ ಖರ್ಗೆ, ಸಿಎಂ ಮುಖ್ಯ ಸಲಹೆಗಾರ ಸುನಿಲ್ ಕನಗೋಳ್, ಸರಕಾರದ ಮುಖ್ಯ ಕಾರ್ಯದರ್ಶಿ ಡಾ ಶಾಲಿನಿ ರಜನೀಶ್, ಸಿಎಂ ಆರ್ಥಿಕ ಸಲಹೆಗಾರ ಎಲ್ ಕೆ ಅತೀಕ್, ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್‌ಸಿಂಗ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ದಿನೇಶ್ ಗೂಳಿಗೌಡ, ಎಸ್ ಆರ್‌ಪಾಟೀಲ್, ಪುಷ್ಪಾ ಅಮರನಾಥ್, ಮೆಹರುಸ್ ಖಾನ್, ಬೆಂಗಳೂರು ಜಿಲ್ಲೆ ಅಧ್ಯಕ್ಷ ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

ಸಾರ್ವಜನಿಕರ ಕುಂದುಕೊರತೆ ನಿವಾರಣೆಗೆ 'ಪ್ರಜಾಸೇವೆ ಇಲಾಖೆ' ಸ್ಥಾಪನೆ : ಸಿಎಂ ಡಿ.ಕೆ. ಶಿವಕುಮಾರ್



ಬೆಂಗಳೂರು, ಜೂ.20- ಸಾರ್ವಜನಿಕರ ಕುಂದುಕೊರತೆಗಳು, ಸಾರ್ವಜನಿಕ ಹೋರಾಟಗಳ ಅಹವಾಲುಗಳನ್ನು ಆಲಿಸಲು 'ಪ್ರಜಾಸೇವೆ ಇಲಾಖೆ'ಯನ್ನು ಹೊಸದಾಗಿ ಪ್ರಾರಂಭ ಮಾಡಲಾಗುತ್ತಿದೆ. ಸಚಿವರಿಗೆ ಇದರ ಪ್ರತ್ಯೇಕ ಜವಾಬ್ದಾರಿ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರ ಕಷ್ಟ ಭಾವನೆಗಳನ್ನು ಅರಿತು, ಕಾನೂನು ಚೌಕಟ್ಟಿನಲ್ಲಿ ಸ್ಪಂದಿಸುವುದು ನಮ್ಮ ಸರ್ಕಾರದ ಗುರಿ. ಹೀಗಾಗಿ ಈ ಇಲಾಖೆಗೆ ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸಲಾಗುವುದು. ಅವರು ಎಲ್ಲಾ ಸಮಸ್ಯೆಗಳನ್ನು ಪರಿಶೀಲನೆ ಮಾಡಿ ಮಾಹಿತಿ ನೀಡುವ ಕೆಲಸ ಮಾಡಲಾಗುವುದು. ಈ ಮೂಲಕ ಜನರಿಗೆ ನ್ಯಾಯ ಒದಗಿಸಲು ಸರ್ಕಾರ ಮುಂದಾಗಿದೆ. ನನಗೆ ಹಾಗೂ ಇತರೇ ಸಚಿವರಿಗೆ ನೀಡಿದ ಮನವಿಗಳನ್ನು ಈ ಇಲಾಖೆ ಅಡಿಯಲ್ಲಿ ತರಲು ಆಲೋಚಿಸಲಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರು ಜವಾಬ್ದಾರಿಯ ಜಿಲ್ಲೆಯ ಕ್ಷೇತ್ರಗಳಲ್ಲಿ ವಾರಕ್ಕೆ ಒಮ್ಮೆ ಸ್ಥಳೀಯ ಶಾಸಕರೊಂದಿಗೆ ಈ ಇಲಾಖೆ ಮೂಲಕ ಜನಸ್ಪಂದನ ಸಭೆಗಳನ್ನು ನಡೆಸಬೇಕು. ಆನಂತರ ಅದನ್ನು ಪರಿಶೀಲಿಸುವ ಕೆಲಸ ಮಾಡಲಾಗುವುದು ಎಂದರು.

31.05.2026 ರ ಒಳಗೆ ಪೂರ್ಣಗೊಂಡಿರುವ ಎಲ್ಲಾ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ವಿನಾಯಿತಿ ನೀಡಲಾಗಿದ್ದು, ಈ ವಿಚಾರವಾಗಿ ಸರ್ಕಾರಿ ಆದೇಶ ಬಂದ ದಿನದಿಂದ 15 ದಿನಗಳ ಕಾಲಾವಕಾಶ ನೀಡಲಾಗುವುದು. ಕಟ್ಟಡ ಮಾಲೀಕರು ಕಟ್ಟಡದ ಜೊತೆಗಿನ ಫೋಟೋ ಹಾಗೂ ಜಿಪಿಎಸ್ ದಾಖಲೆ ಕಡ್ಡಾಯವಾಗಿ ಸಲ್ಲಿಕೆ ಮಾಡಬೇಕು ಎಂದರು.

ಗ್ರಾಮೀಣ ಭಾಗದ, ರೇಷ್ಮೆ ಸಾಕಾಣಿಕೆ ಮನೆ, ಕೊಟ್ಟಿಗೆಗಳಿಗೆ ವಿನಾಯಿತಿ ನೀಡಲಾಗಿದೆ. ಹೊಸದಾಗಿ ನಿರ್ಮಾಣ ಮಾಡಿದರೆ ಅವಕಾಶವಿಲ್ಲ. ಇಂಧನ ಸಚಿವರು, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಸಚಿವರ ಬಳಿ ಇದರ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಯಾದಗಿರಿಯ ವೈದ್ಯಕೀಯ ವಿಜ್ಞಾನ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ನೂತನ 200 ಹಾಸಿಗೆ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ. 18 ಕೋಟಿ ರೂ. ವೆಚ್ಚದಲ್ಲಿ ಕಾರವಾರ ವೈದ್ಯಕೀಯ ವಿಜ್ಞಾನ ಶಿಕ್ಷಣ ಸಂಸ್ಥೆಗಳ ಆರು ಸಿವಿಲ್ ಕಾಮಗಾರಿಗಳಿಗೆ ಮತ್ತು ಬೆಂಗಳೂರು ವೈದ್ಯಕೀಯ ಸಂಶೋಧನಾ ಆಸ್ಪತ್ರೆಗೆ ಸುಮಾರು 60 ಕೋಟಿ ವೆಚ್ಚದಲ್ಲಿ ವೈದ್ಯಕೀಯ ಉಪಕರಣಗಳ ಖರೀದಿಗೆ ಆಡಳಿತಾತ್ಮಕ ಅನುಮೋದನೆ ಎಂದು ಮಾಹಿತಿ ನೀಡಿದರು.

620 ನೂತನ ಬಸ್‌ಗಳ ಖರೀದಿಗೆ 235 ಕೋಟಿ ರೂ. ವೆಚ್ಚ ಸೇರಿದಂತೆ ಎಲ್ಲಾ ಸಾರಿಗೆ ನಿಗಮಗಳ ಅಡಿಯಲ್ಲಿ 11 ಕಡೆ ಎಲೆಕ್ಟ್ರಿಕ್ ಬಸ್‌ಗಳ ಡಿಪೋಗಳನ್ನು ತೆರೆಯಲು 112 ಕೋಟಿ ವೆಚ್ಚ ಮಾಡಲಾಗುವುದು. 30 ಕೋಟಿ ರೂ. ವೆಚ್ಚದಲ್ಲಿ ಸಂಡೂರು ತಾಲ್ಲೂಕು ಕೇಂದ್ರದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣ. 620 ಬಸ್ ಗಳ ಪೈಕಿ ಗ್ರಾಮೀಣ ಪ್ರದೇಶಗಳಿಗೆ 400 ಬಸ್‌ಗಳು ಹಾಗೂ ವಾಯುವ್ಯ ಸಾರಿಗೆ ನಿಗಮಕ್ಕೆ 220 ಬಸ್ ಗಳ ಖರೀದಿಗೆ ಅನುಮತಿ ನೀಡಲಾಗಿದೆ ಎಂದರು.

ಯುಪಿಎಸ್ ಸೇರಿದಂತೆ ಇತರೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ಒಂದೇ ಸೂರಿನಡಿ ಎಲ್ಲಾ ಅನುಕೂಲ ದೊರೆಯಬೇಕು ಎನ್ನುವ ಕಾರಣಕ್ಕೆ ಕೆಐಡಬ್ಲ್ಯೂಬಿ ವತಿಯಿಂದ ನವ ದೆಹಲಿಯಲ್ಲಿ ಕರ್ನಾಟಕ ಭವನ 4 ಅನ್ನು ನಿರ್ಮಾಣ ಮಾಡಲು 80 ಕೋಟಿಗೆ ಅನುಮೋದನೆ ನೀಡಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡ ಹಾಗೂ ಶೇ 50, ಇತರೇ ಸಮುದಾಯದ ವಿದ್ಯಾರ್ಥಿಗಳಿಗೆ ಶೇ. 50 ರಷ್ಟು ಮೀಸಲು ಇಡಲಾಗಿದೆ ಎಂದರು.

ಸುಪ್ರೀಂ ಕೋರ್ಟಿನಲ್ಲಿರುವ ವ್ಯಾಜ್ಯಗಳ ಇತ್ಯರ್ಥಕ್ಕೆ ದೆಹಲಿಯ ಕಾನೂನು ವಿಭಾಗವನ್ನು ಮತ್ತಷ್ಟು ಸದೃಢಗೊಳಿಸಲು ಪ್ರತ್ಯೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರೆಸಿಡೆನ್ಸಿಯಲ್ ಕಮಿಷನರ್ ಕಚೇರಿ ಕಾರ್ಯವೈಖರಿ ನನಗೆ ಸಮಾಧಾನ ತಂದಿಲ್ಲ. ಆದ ಕಾರಣಕ್ಕೆ ಅದನ್ನು ಹೊಸದಾಗಿ ಸಮೀಕರಿಸಲಾಗುತ್ತಿದೆ ಎಂದರು.

ಕೇಂದ್ರದ ಯೋಜನೆಗಳನ್ನು ರಾಜ್ಯಕ್ಕೆ ತರುವುದು ಹೇಗೆ? ಯಾವ ಯೋಜನೆಗಳಿಗೆ ಅರ್ಜಿ ಸಲ್ಲಿಸಬೇಕು. ಯಾವ ಯೋಜನೆಗಳು ಇತರೇ ರಾಜ್ಯಗಳಲ್ಲಿದೆ. ತಮಿಳುನಾಡು, ಆಂಧ್ರ ಪ್ರದೇಶ, ಗುಜರಾತ್ ಸೇರಿದಂತೆ ಇತರೇ ರಾಜ್ಯಗಳು ಯಾವ ಯೋಜನೆಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ತಿಳಿಯಲು ಹೊಸ ಅಧಿಕಾರಿಗಳ ತಂಡ ರಚಿಸಿ ನೇಮಕ ಮಾಡಲಾಗುತ್ತಿದೆ ಎಂದರು.

ಈಗಾಗಲೇ ದೆಹಲಿಗೆ ತೆರಳಿ ಕರ್ನಾಟಕದ ಅಧಿಕಾರಿಗಳ ಸಭೆ ನಡೆಸಿ ಅವರ ಸಲಹೆ ಪಡೆದಿದ್ದೇನೆ. ನಮ್ಮ ಅಧಿಕಾರಿಗಳು ಹಲವಾರು ಸಲಹೆ ನೀಡಿದ್ದು, ಕರ್ನಾಟಕದ ಏಳಿಗೆಗೆ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ. ದೆಹಲಿಯಲ್ಲಿರುವ ನಮ್ಮ ಅಧಿಕಾರಿಗಳು ತಂಡಗಳನ್ನು ರಚಿಸಿಕೊಂಡು ಇಲಾಖೆಗೆ ಅನುಗುಣವಾಗಿ ಸಲಹೆ ನೀಡಲು ಮುಂದ ಬಂದಿದ್ದಾರೆ. ಇವರ ಜೊತೆಗೆ ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳು ನಿವೃತ್ತ ಅಧಿಕಾರಿಗಳನ್ನು ಈ ತಂಡಕ್ಕೆ ನೇಮಕ ಮಾಡಲಾಗಿದೆಎಂದರು.

ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳಸಾಪೂರ ಗ್ರಾಮದಲ್ಲಿನ ಒಟ್ಟು 18 ಎಕರೆ ಜಮೀನಿನಲ್ಲಿ 50:50ರ ಅನುಪಾತದಲ್ಲಿ ರೈತರು ಹಾಗೂ ಪ್ರಾಧಿಕಾರದ ಸಹಭಾಗಿತ್ವದೊಂದಿಗೆ ರೂ.19.69 ಕೋಟಿಗಳ ಅಂದಾಜು ಮೊತ್ತದಲ್ಲಿ ವಸತಿ ಯೋಜನೆಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

ಬೆಂಗಳೂರು ಗ್ರಾಮಾಂತರದ ದೇವನಹಳ್ಳಿಯ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ 1,777 ಎಕರೆ ಜಮೀನಿನ ಪೈಕಿ ಸ್ವಯಂಪ್ರೇರಿತವಾಗಿ ಜಮೀನು ನೀಡಲು ರೈತರು ಮುಂದೆ ಬಂದಿದ್ದಾರೆ. ಇದರ ಕಾಲಾವಕಾಶವನ್ನು 31.10.2026 ರವರೆಗೆ ವಿಸ್ತರಿಸಲು ಅನುಮತಿ ನೀಡಲಾಗಿದೆ ಎಂದು ಹೇಳಿದರು.

ಒಂದಷ್ಟು ಕ್ಯಾಬಿನೆಟ್ ಉಪ ಸಮಿತಿಗಳ ಜವಾಬ್ದಾರಿ ಮುಖ್ಯಮಂತ್ರಿಗೆ ನೀಡಲಾಗಿದೆ. ಕುಡಿಯುವ ನೀರಿನ ವಿಚಾರವಾಗಿ ಸಚಿವಸಂಪುಟ ವಿಸ್ತರಣೆಯಾದ ತಕ್ಷಣ ಜವಾಬ್ದಾರಿ ನೀಡಲಾಗುವುದು. ಪ್ರಸ್ತುತ ಈಗ ಇರುವವರೇ ನೀರಿನ ಸಮಸ್ಯೆ ಬರದಂತೆ ನಿಗಾವಹಿಸಬೇಕು ಎಂದು ತಿಳಿಸಲಾಗಿದೆ ಎಂದು ಹೇಳಿದರು. ನೂತನ ಸಚಿವಾಲಯದ ಮೂಲಕ ಎಲ್ಲಾ ಇಲಾಖೆಗಳ ಸಮನ್ವಯತೆಗೆ ಯಾವ ಕ್ರಮ ಕೈಗೊಳ್ಳುವಿರಿ ಎಂದು ಕೇಳಿದಾಗ, ನಮಗೆ ಜನರ ಹಿತ ಮುಖ್ಯ. ಇಲ್ಲಿ ಯಾರೂ ಸಹ ಸರ್ವಜ್ಞರಲ್ಲ. ಸಕಾಲ, ಇ- ಆಡಳಿತ ಸೇರಿದಂತೆ ಎಲ್ಲವನ್ನು ಬಳಸಿ ಜನರ ಸಮಸ್ಯೆ ನಿವಾರಿಸಲಾಗುವುದು. ಮಾಧ್ಯಮದಲ್ಲಿ ಬಂದಂತಹ ವಿಚಾರಗಳನ್ನು ತಿಳಿದು ನಾವೂ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾಧ್ಯಮಗಳ ಗಮನಕ್ಕೆ ಬಂದಿದ್ದನ್ನು ಸರ್ಕಾರದ ಗಮನಕ್ಕೆ ತರಬೇಕು.

ಬಸ್ ಟಿಕೆಟ್ ದರ ಏರಿಕೆ; ಜನರ ಹಿತದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ

ಬಸ್ ಟಿಕೆಟ್ ದರ ಏರಿಕೆ ವಿಚಾರವಾಗಿ ಕೇಳಿದಾಗ, ಖಾಸಗಿ ಹಾಗೂ ನಿಗಮದ ಡಿಪೋಗಳಲ್ಲಿನ ಡೀಸೆಲ್ ಬೆಲೆ ವ್ಯತ್ಯಾಸ ದರ ಸುಮಾರು 40 ರೂಪಾಯಿಯಷ್ಟಿದೆ. ಇದು ಗಾಬರಿಯಾಗುವ ಸಂಖ್ಯೆ. ಡೀಸೆಲ್ ಬೆಲೆ ಹೆಚ್ಚಾದರೆ ಟಿಕೆಟ್ ಬೆಲೆ ಹೆಚ್ಚಳ ಆಗಬೇಕು ಎಂದು ಈ ಹಿಂದೆ ತೀರ್ಮಾನ ಮಾಡಲಾಗಿತ್ತು. ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಬೇಕು. ಕೆಎಸ್ ಆರ್‌ಟಿಸಿಯೂ ಉಳಿಬೇಕು. ಜನರಿಗೂ ಅನುಕೂಲವಾಗಬೇಕು. ಏಕೆಂದರೆ ಪ್ರಧಾನ ಮಂತ್ರಿಗಳೇ ಸಾರ್ವಜನಿಕ ಸಾರಿಗೆಗಳನ್ನು ಬಳಸಿ ಇಂಧನ ಉಳಿಸಿ ಎಂದು ಮಾರ್ಗದರ್ಶನ ನೀಡಿದ್ದಾರೆ. ಇದರ ಬಗ್ಗೆ ಜನರ ಹಿತ ದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡಲಾಗುವುದು. ಖಾಸಗಿಯವರು ಡಿಪೋಗಳ ಬದಲಾಗಿ ಸಾರ್ವಜನಿಕರಿಗೆ ಇರುವ ಬಂಕ್ ಗಳಲ್ಲಿ ಡಿಸೇಲ್ ಖರೀದಿ ಮಾಡುತ್ತಿದ್ದಾರೆ. ಇದರ ಬಗ್ಗೆ ವರದಿ ಕೇಳಿದ್ದೇನೆ ಎಂದರು.

ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ಡಿಕೆಶಿ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಗೊಳಿಸಿದ ಹೈಕೋರ್ಟ್



ಬೆಂಗಳೂರು,ಜೂ.20- ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡ ಬಿಜೆಪಿ ನಾಯಕರ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದ ಮೇಲೆ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿದೆ.


ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ರದ್ದತಿ ಕೋರಿ ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಪುರಸ್ಕರಿಸಿದೆ. ಶಿವಕುಮಾರ್ ಅವರನ್ನು ಪ್ರತಿನಿಧಿಸಿದ್ದ ವಕೀಲ ಎಚ್ ವಿ ಪ್ರವೀಣ್ ಗೌಡ ಅವರು ಶಿವಕುಮಾರ್ ಅವರ ಸಾಮಾಜಿಕ ಜಾಲತಾಣ ಖಾತೆಯ ಮೂಲಕ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕಲಾಗಿದೆ ಎಂಬ ಏಕೈಕ ಕಾರಣಕ್ಕೆ ಅವರ ವಿರುದ್ಧ ಐಪಿಸಿ ಸೆಕ್ಷನ್‌ಗಳಾದ 153ಎ, 505(2), 504 ಮತ್ತು 464ರ ಅಡಿ ಪ್ರಕರಣ ದಾಖಲಿಸಲಾಗಿದೆ.

ಕಾಂಗ್ರೆಸ್ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥರು ಪೋಸ್ಟ್ ಅಪ್‌ಲೋಡ್ ಮಾಡಿದ್ದಾರೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರು ಎಂಬ ಕಾರಣಕ್ಕೆ ಅವರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರು.

ಪ್ರಕರಣದ ಹಿನ್ನೆಲೆ: ಮೂರು ದಶಕಗಳ ಹಿಂದೆ ರಾಮ ಜನ್ಮಭೂಮಿ ವಿಚಾರವಾಗಿ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಶ್ರೀಕಾಂತ್ ಪೂಜಾರಿಯನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ನಡೆ ಖಂಡಿಸಿ ಬಿಜೆಪಿಯು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿತ್ತು. ಆ ಸಂದರ್ಭದಲ್ಲಿ ಬಿಜೆಪಿ ನಾಯಕರು 'ನಾನು ಕರಸೇವಕ ನನ್ನನ್ನೂ ಬಂಧಿಸಿ' ಎಂಬ ಒಕ್ಕಣೆ ಹೊಂದಿದ್ದ, ಭಿತ್ತಿಪತ್ರ ಹಿಡಿದು ಅಭಿಯಾನ ನಡೆಸಿದ್ದರು.

ಇದನ್ನು ಟೀಕಿಸುವ ಉದ್ದೇಶದಿಂದ ಕಾಂಗ್ರೆಸ್ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ ವೈ ವಿಜಯೇಂದ್ರ ಅವರ ಫೋಟೊ ಬಳಸಿ ನಾನು ಆರ್‌ಟಿಜಿಎಸ್ ಮೂಲಕ ಲಂಚ ಪಡೆದಿದ್ದೇನೆ. 40,000 ಕೋಟಿ ಅಕ್ರಮದಲ್ಲಿ ಪಾಲುದಾರ ನನ್ನನ್ನು ಬಂಧಿಸಿ; ಶಾಸಕ ವಿ ಸುನೀಲ್ ಕುಮಾರ್ ಫೋಟೊ ಬಳಸಿ ನಾನು ಪರಶುರಾಮ ಮೂರ್ತಿ ಕಂಚನ್ನು ಕದ್ದಿದ್ದೇನೆ; ಸಿಮೆಂಟ್ ಕದ್ದಿದ್ದೇನೆ ನನ್ನನ್ನು ಬಂಧಿಸಿ 'ಎಂಬ ಒಕ್ಕಣೆಯ ಚಿತ್ರಗಳನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಅಧಿಕೃತ ಫೇಸ್‌ಬುಕ್ ಪೇಜ್‌ನಲ್ಲಿ ಪೋಸ್ಟ್ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಅಂದಿನ ಉಪ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿಕೆ ಶಿವಕುಮಾರ್ ಹಾಗೂ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಬಿ ಆರ್ ನಾಯ್ಡು ವಿರುದ್ಧ ಬಿಜೆಪಿಯ ಕಾನೂನು ಘಟಕದ ಸಂಚಾಲಕ ಯೋಗೇಂದ್ರ ಹೊಡಘಟ್ಟ ನೀಡಿದ್ದ ಖಾಸಗಿ ದೂರು ಆಧರಿಸಿ ಹೈಗ್ರೌಂಡ್ಸ್ ಠಾಣೆಯ ಪೊಲೀಸರು ಐಪಿಸಿ ಸೆಕ್ಷನ್‌ಗಳಾದ 153(ಎ), 504, 505(2), 464ರ ಅಡಿ ಪ್ರಕರಣ ಪ್ರಕರಣ ದಾಖಲಿಸಿದ್ದರು.

ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ಪದಗ್ರಹಣಕ್ಕೆ ಸಿದ್ಧತೆ: ಅರಮನೆ ಮೈದಾನದಲ್ಲಿ ಭವ್ಯ ವೇದಿಕೆ ನಿರ್ಮಾಣ



ಬೆಂಗಳೂರು, ಜೂ.20- ಪಕ್ಷನಿಷ್ಠೆಯ ನಾಯಕ, ವಿಧಾನಪರಿಷತ್ ಸದಸ್ಯರೂ ಆದ ಬಿ.ಕೆ.ಹರಿಪ್ರಸಾದ್ ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಭಾನುವಾರ ಅಧಿಕಾರ ಸ್ವೀಕಾರ ಮಾಡುತ್ತಿದ್ದು, ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಭರದ ಸಿದ್ಧತೆ ನಡೆಯುತ್ತಿದೆ. ಇದಕ್ಕಾಗಿ ಭವ್ಯ ವೇದಿಕೆಯನ್ನು ಸಜ್ಜುಗೊಳಿಸಲಾಗಿದೆ.,

ಎಐಸಿಸಿ ಅಧ್ಯಕ್ಷ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎಐಸಿಸಿ ಮುಖಂಡರು, ವಿವಿಧ ರಾಜ್ಯಗಳ ಕೆಪಿಸಿಸಿ ಅಧ್ಯಕ್ಷರು, ವಿವಿಧ ಕಾಂಗ್ರೆಸ್ ಮುಖಂಡರು ನಾಳೆ ಪದಗ್ರಹಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಿಯೋಜಿತ ಕೆಪಿಸಿಸಿ ಅಧ್ಯಕ್ಷರಾದ ಬಿ.ಕೆ.ಹರಿಪ್ರಸಾದ್ ಅವರಿಗೆ ಕೆಪಿಸಿಸಿ ಹಾಲಿ ಅಧ್ಯಕ್ಷರಾದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರು ಅಧಿಕಾರ ಹಸ್ತಾಂತರ ಮಾಡಲಿದ್ದಾರೆ. ಬೆಂಗಳೂರು ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಬೃಹತ್ ಕಾರ್ಯಕ್ರಮ ಆಯೋಜನೆಗೊಂಡಿದ್ದು, ನಾಡಿನ ಮೂಲೆಮೂಲೆಗಳಿಂದ ಕಾಂಗ್ರೆಸ್ ಕಾರ್ಯಕರ್ತರು ಬೃಹತ್ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರ ಪದಗ್ರಹಣ ಕಾರ್ಯಕ್ರಮವನ್ನು ರಾಜಭವನದಲ್ಲಿ ಸರಳವಾಗಿ ಆಚರಿಸಲಾಗಿತ್ತು. ಆದರೆ ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮವನ್ನು ನಗರದ ಅರಮನೆ ಮೈದಾನದಲ್ಲಿ ಅದ್ದೂರಿಯಾಗಿ ಆಚರಿಸಲು ಕಾಂಗ್ರೆಸ್ ಪಕ್ಷ ತೀರ್ಮಾನಿಸಿದೆ. ಅದಕ್ಕೆ ಕಳೆದ ಒಂದು ವಾರದಿಂದ ಭರದ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ನಗರದ ಸುತ್ತಮುತ್ತ ಬಿ.ಕೆ.ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ವಿವಿಧ ಮುಖಂಡರ ಕಟೌಟ್‌ಗಳು, ಸ್ವಾಗತ ಫಲಕಗಳು, ಫ್ಲೆಕ್ಸ್‌ಗಳು, ಬ್ಯಾನರ್‌ಗಳು ವಿಜೃಂಭಿಸುತ್ತಿವೆ. ಕೆಪಿಸಿಸಿ ಮುಖಂಡರು ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದ ಪೂರ್ವ ಸಿದ್ಧತಾ ಕಾರ್ಯಕ್ರಮಗಳನ್ನು ಪರಿಶೀಲನೆ ನಡೆಸಿದ್ದಾರೆ. ಮುಖ್ಯಮಂತ್ರಿ ಡಿಕೆಶಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಮುಖಂಡರು, ಸೇವಾದಳ, ಎನ್.ಎಸ್.ಯು.ಐ, ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ಸೇರಿದಂತೆ ಎಲ್ಲಾ ಘಟಕಗಳ ಮುಖಂಡರು, ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ದಲಿತರಿಗೇಕೆ ಆರ್.ಎಸ್.ಎಸ್ ವಿಚಾರ: ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದ ಜಿಗಜಿಣಗಿ



ಬೆಂಗಳೂರು,ಜೂ.20- ದಲಿತ ಮನುಷ್ಯನಿಗೆ ಆರ್‌ಎಸ್‌ಎಸ್ ವಿಚಾರ ಏಕೆ ಬೇಕು, ಆರ್‌ಎಸ್‌ಎಸ್ ತಂಟೆಗೆ ಹೋದವರು ಯಾರೂ ಉಳಿದಿಲ್ಲ ಎಂಬ ಹೇಳಿಕೆ ನೀಡಿ ವಿವಾದ ಸೃಷ್ಟಿಸಿರುವ ಬಿಜೆಪಿ ಸಂಸದ ಹಾಗೂ ಕೇಂದ್ರದ ಮಾಜಿ ಸಚಿವ ರಮೇಶ್ ಜಿಗಜಿಣಗಿ ಅವರು, ಆ ವಿಚಾರ ದೊಡ್ಡದು ಮಾಡಬೇಡಿ, ನಾನು ಆ ಅರ್ಥದಲ್ಲಿ ಹೇಳಿಲ್ಲ ಎಂದು ಸ್ಪಷ್ಟೀಕರಣ ನೀಡಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ಕಾಂಗ್ರೆಸ್ ಪಾರ್ಟಿಯಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಇಷ್ಟು ವರ್ಷ ದುಡಿದಿದ್ದಾರೆ, ಅವರು ಮುಖ್ಯಮಂತ್ರಿಯಾದರೆ ಖುಷಿಯಾಗುತ್ತದೆ ಎಂದು ನಾನೇ ಮೊದಲು ಹೇಳಿದ್ದು. ಅದನ್ನೆಲ್ಲ ಅವರು ಮರೆತ್ತಿದ್ದಾರೆ. ಆರ್‌ಎಸ್‌ಎಸ್ ಶಾಖೆಗೆ ನಾನು ಹೋಗುತ್ತಿದ್ದೆ ಎಂದು ಹಿಂದೊಮ್ಮೆ ಖರ್ಗೆಯವರು ಹೇಳಿದ್ದರು. ಅದನ್ನೆಲ್ಲ ಅವರು ಮರೆತ್ತಿದ್ದಾರೆ. ನಿಮ್ಮ ತಂದೆಯವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು ಕಾರಣಕ್ಕೆ ನಿಮ್ಮ ಸ್ವಾರ್ಥಕ್ಕೋಸ್ಕರ ನಿಮಗೆ ಗೃಹ ಖಾತೆ ಕೊಟ್ಟಿದ್ದಾರೆ. ಆ ಕೆಲಸವನ್ನು ಮಾಡೋದು ಬಿಟ್ಟು, ನಾವು ದಲಿತರಿಗೆ ಏಕೆ ಸಂಘಪರಿವಾರವನ್ನು ಎದುರು ಹಾಕಿಕೊಳ್ಳುತ್ತೀರಾ ಎಂದ ಹೇಳಿದ್ದೇನೆ. ಇದು ತಪ್ಪಾ? ಎಂದು ಪ್ರಶ್ನಿಸಿದರು.

ಸಂಘಪರಿವಾರದ ವಿರುದ್ಧ ಇದ್ದ ಯಾರೇ ಆದರೂ ರಾಜಕಾರಣದಲ್ಲಿ ಉಳಿಯುವುದು ಕಷ್ಟ ಎಂದು ಹೇಳಿದ್ದೇನೆ. ಈ ಹಿಂದೆ ಹೇಳಿದ್ದನ್ನು ಈಗಿನ ಘಟನೆಗೆ ತಂದು ಜೋಡಿಸಿ ವಿವಾದ ಸೃಷ್ಟಿಸಲಾಗಿದೆ. ನಾನು ಇದಕ್ಕೆ ಏನೂ ಪ್ರತಿಕ್ರಿಯೆ ನೀಡುವುದಿಲ್ಲ. ಏನಾದರೂ ಹೇಳಿಕೊಂಡು ಅಡ್ಡಾಡಲಿ. ಎಲ್ಲ ಸಮಾಜವು ಒಟ್ಟಿಗೆ ನಡೆಯಬೇಕು ಎಂಬುದು ನನ್ನ ಜೀವನದಲ್ಲಿ ಇದೆ. ಈ ರೀತಿ ಮಾತನಾಡುವುದು ಏನು ಮಾಡಲಿ? ಇಷ್ಟು ವರ್ಷದವರೆಗೂ ನಾನು ಲೆಫ್ಟು - ರೈಟು ಎಂದು ಬೇರ್ಪಡಿಸಿಲ್ಲ.

ನಾನಂತೂ ಸ್ಪಷ್ಟವಾಗಿದ್ದೇನೆ. ಲೆಫ್ಟು ರೈಟೂ ಎರಡೂ ಸಮುದಾಯಕ್ಕೂ ಸಹಾಯ ಮಾಡುತ್ತಾ ಬಂದಿದ್ದೇನೆ. ಯಾವತ್ತೂ ತೊಂದರೆ ಮಾಡಿಲ್ಲ. ನನ್ನ ಕೈ ನಡೆದಾಗ ಅವರಿಗೂ ಟಿಕೆಟ್ ಕೊಡಿಸಿದ್ದೀನಿ, ಮಂತ್ರಿ ಮಾಡಿದ್ದೀನಿ ಅವರೇ ಕೂತು ಹಿಂಗೆ ಮಾತನಾಡಿದರೆ ಏನು ಮಾಡಲಿ?

ಅಣೆಕಟ್ಟೆಗಳಲ್ಲಿ 11 ಟಿಎಂಸಿ ನೀರು ಸಂಗ್ರಹ ; ರಾಜ್ಯದಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಿಲ್ಲ : ಸಚಿವ ರಾಮಲಿಂಗಾರೆಡ್ಡಿ



ಬೆಂಗಳೂರು,ಜೂ.20- ರಾಜ್ಯದಲ್ಲಿ ಈ ಬಾರಿ ನಿರೀಕ್ಷಿತ ಪ್ರಮಾಣದ ಮಳೆ ಬಾರದೇ ಇದ್ದರೂ, ಮುಂದಿನ ಎರಡು ತಿಂಗಳ ಕಾಲ ಕುಡಿಯುವ ನೀರಿಗೆ ಯಾವುದೇ ರೀತಿಯ ಸಮಸ್ಯೆ ಉಂಟಾಗುವುದಿಲ್ಲ ಎಂದು ಜಲ ಸಂಪನ್ಮೂಲ ಸಚಿವ ರಾಮಲಿಂಗ ರೆಡ್ಡಿ ಅವರು ರಾಜ್ಯದ ಜನತೆಗೆ ಅಭಯ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಗಾರು ಆರಂಭವಾಗಿ ಹಲವು ದಿನಗಳು ಕಳೆದರೂ ರಾಜ್ಯದಲ್ಲಿ ವಾಡಿಕೆಯಂತೆ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿಲ್ಲ. ಆದರೆ ಮುಂದಿನ ಎರಡು ತಿಂಗಳು ಕಾಲ ಕುಡಿಯುವ ನೀರಿಗೆ ಸಮಸ್ಯೆ ಇಲ್ಲ ಜನರು ಆತಂಕಕ್ಕೆ ಒಳಗಾಗಬಾರದು ಎಂದು ಅಭಯ ನೀಡಿದರು.

ಬೆಂಗಳೂರು ಸೇರಿದಂತೆ ಸುತ್ತಮುತ್ತಲಿನ ಭಾಗಗಳಿಗೆ ಕುಡಿಯುವ ನೀರು ಪೂರೈಕೆ ಮಾಡುವ ಕೆಆರ್‌ಎಸ್ ಅಣೆಕಟ್ಟಿನಲ್ಲಿ ಪ್ರಸ್ತುತ 11 ಟಿಎಂಸಿ ನೀರು ಸಂಗ್ರಹಣೆವಾಗಿದೆ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ದಿನಗಳಲ್ಲಿ ಮಳೆಯಾಗುವ ಸಂಭವವಿರುವುದರಿಂದ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಎದುರಾಗುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ವಿರೋಧ ಬೇಡ: ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಕೆ ಮಾಡುವ ಮೇಕೆದಾಟು ನದಿ ನೀರು ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸುವುದು ಸರಿಯಲ್ಲ.ಇದು ಸಂಪೂರ್ಣವಾಗಿ ಕುಡಿಯುವ ನದಿ ನೀರು ಯೋಜನೆಯ ನಾವು ನೀರನ್ನು ಬೇರೆ ಯಾವುದೇ ಉದ್ದೇಶಕ್ಕೆ ಬಳಸಿಕೊಳ್ಳುವುದಿಲ್ಲ. ಇದು ಗೊತ್ತಿದ್ದು ತಮಿಳುನಾಡಿ ಸರ್ಕಾರ ಸುಖ-ಸುಮ್ಮನೆ ಖಾತೆ ತೆಗೆಯುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ಮೇಕೆದಾಟು ನದಿ ನೀರು ಯೋಜನೆ, ಕರ್ನಾಟಕದ ಮಹತ್ವಕಾಂಕ್ಷಿಯ ನೀರಾವರಿ ಯೋಜನೆಗಳಲ್ಲಿ ಒಂದಾಗಿದೆ ಹೊಸದಾಗಿ ಅಣೆಕಟ್ಟು ಕಟ್ಟಿ ನೀರನ್ನು ಸಂಗ್ರಹಿಸಿ ಕುಡಿಯುವ ನೀರಿನ ಬಳಕೆಗೆ ಬಳಸಿಕೊಳ್ಳುತ್ತೇವೆ ಆದರೆ ತಮಿಳುನಾಡು ಸರ್ಕಾರ ಅನಗತ್ಯವಾಗಿ ಯೋಜನೆಗೆ ಅಡ್ಡಿಪಡಿಸುತ್ತದೆ ಈ ಬಗ್ಗೆ ಮನವರಿಕೆ ಮಾಡಿಕೊಡುತ್ತೇವೆ ಎಂದು ಅವರು ಹೇಳಿದರು.

ಮೇಕೆದಾಟು ನದಿ ನೀರು ಯೋಜನೆ ಜಾರಿಯಾದರೆ ರಾಜಧಾನಿ ಬೆಂಗಳೂರಿಗೆ 4.75 ಟಿಎಂಸಿ ನಮಗೆ ಲಭ್ಯವಾಗುತ್ತದೆ ಅಲ್ಲದೆ 400 ವಿದ್ಯುತ್ ಕೂಡ ಉತ್ಪಾದನೆ ಮಾಡಬಹುದು ಯೋಜನೆಗಲ್ಲಿ ನಾವು ಇದನ್ನು ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದೇವೆ. ಆದರೂ ಅಲ್ಲಿನ ರಾಜಕಾರಣಕ್ಕಾಗಿ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸುವುದು ಸರಿಯೇ ಎಂದು ಪ್ರಶ್ನೆ ಮಾಡಿದರು. ಈ ಯೋಜನೆಯಿಂದ ಕೃಷಿ ಚಟುವಟಿಕೆಗಳಿಗೆ ನೀರನ್ನು ಬಳಕೆ ಮಾಡಿಕೊಳ್ಳುವುದಿಲ್ಲ. ಈ ಭಾಗದಲ್ಲಿ ವ್ಯವಸಾಯಕ್ಕೆ ನೀರು ಲಭ್ಯವಿರುವುದಿಲ್ಲ. ಏಕೆಂದರೆ ಈ ಪ್ರದೇಶದಲ್ಲಿ 4-5 ವರ್ಷಕ್ಕೊಮ್ಮೆ ಮಳೆ ಕಮ್ಮಿಯಾಗುತ್ತದೆ. ಇದು ಸಂಪೂರ್ಣವಾಗಿ ಕುಡಿಯುವ ನೀರಿನ ಯೋಜನೆ ಎಂದು ಪುನರುಚ್ಚರಿಸಿದರು.

ತಮಿಳುನಾಡಿಗೆ ನಾವು ಕೇಂದ್ರದ ನಿರ್ದೇಶನದ ಪ್ರಕಾರ ತಿಂಗಳಿಗೊಮ್ಮೆ ನೀರು ಹರಿಸಬೇಕು. ಪ್ರತಿ ವರ್ಷ ಜೂನ್ ತಿಂಗಳಿನಲ್ಲಿ 19 ಟಿಎಂಸಿ ನೀರನ್ನು ಬಿಡಬೇಕಿದೆ. ಇದು ಹಿಂದೆಯೇ ತೀರ್ಮಾನವಾಗಿದೆ. ಜೊತೆಗೆ ಕೇಂದ್ರದ ಜಲ ಆಯೋಗದ ತೀರ್ಮಾನವೂ ಇದೇ ಆಗಿದೆ.ಪ್ರಸ್ತುತ ನಮ್ಮ ಬಳಿ 16 ಟಿಎಂ ಸಿ ನೀರು ಸಂಗ್ರಹವಾಗಿದೆ. ಕುಡಿಯುವ ನೀರು ಬಿಟ್ಟು ಬರೀ 3 ಟಿಎಂಸಿ ಇದೆ. ಸಂಕಷ್ಟದಸಂದರ್ಭದಲ್ಲಿ ನೀರು ಹರಿಸುವ ಬಗ್ಗೆ ಸಲಹೆಪಡೆಯಲು ಚಿಂತನೆ ಇದೆ ಎಂದು ರಾಮಲಿಂಗಾರೆಡ್ಡಿ ಹೇಳಿದರು.ಜೂನ್‌ನಲ್ಲಿ 9.19 ಟಿಎಂಸಿ ಬಿಡಬೇಕು ನಾವು, ಇಲ್ಲಿಯವರೆಗೂ 2 ಟಿಎಂಸಿ ನೀರು ಹರಿಸಿದ್ದೇವೆ. ನಮ್ಮ ಬಳಿ 3 ಟಿಎಂಸಿ ನೀರು ಇದೆ ಅಷ್ಟೇ. ಅಣೆಕಟ್ಟು ಕಟ್ಟಿ ನೀರು ಸಂಗ್ರಹ ಮಾಡಿದರೆ ಅವರಿಗೆ ಅನುಕೂಲ. ಮಳೆ ಬಂದು ಅಣೆಕಟ್ಟುಗಳು ತುಂಬಿದರೆ ಯಾವುದೇ ತೊಂದರೆ ಇರುವುದಿಲ್ಲ. ನೆಲ, ಜಲ, ಭಾಷೆಯ ವಿಚಾರದಲ್ಲಿ ಎಲ್ಲರೂ ಕೂಡ ಒಗ್ಗಟ್ಟಿನಿಂದ ಹೋರಾಡಬೇಕು. ನೀರು ಸಂಗ್ರಹವಾದರೆ ತಮಿಳುನಾಡು ರೈತರಿಗೆ ಉಪಯೋಗವಾಗುತ್ತದೆ.

ನ್ಯಾಯಾಲಯಕ್ಕೆ ಹೋಗುವುದಕ್ಕಿಂತ ಕೂತು ಮಾತನಾಡುವುದು ಸೂಕ್ತ. ಕೃಷ್ಣಾ ಮೇಲ್ದಂಡೆ ಯೋಜನೆ 13-14 ವರ್ಷದಿಂದ ಪರಿಹಾರ ಆಗಿಲ್ಲ. ಅದಕ್ಕೆ ಕೂತು ಪರಿಹಾರ ಮಾಡಬೇಕು ಎಂದು ಅಭಿಪ್ರಾಯಪಟ್ಟರು.ಮೇಕೆದಾಟು ನದಿ ನೀರು ಯೋಜನೆ ವಿರೋಧಿಸಿ ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿ ಈಗಾಗಲೇ ತಿರಸ್ಕಾರವಾಗಿದೆ. ಅಲ್ಲದೆ ಪುನರ್‌ಪರಿಶೀಲನಾ ಅರ್ಜಿಯನ್ನು ಸಹ ಸುಪ್ರೀಂಕೋರ್ಟ್ ಎರಡು ಬಾರಿ ತಿರಸ್ಕಾರ ಮಾಡಿದೆ. ಕಾನೂನು ಹೋರಾಟದಲ್ಲೂ ಕರ್ನಾಟಕಕ್ಕೆ ನ್ಯಾಯ ಸಿಕ್ಕಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಆದರೂ ಅಲ್ಲಿನ ಮುಖ್ಯಮಂತ್ರಿ ಜೋಸೆಫ್ ವಿಜಯನ್ ಅವರು ಮೇಕೆದಾಟು ಯೋಜನೆ ವಿರೋಧಿಸಿ ಹೋರಾ ಮಾಡಬೇಕೆಂದು ಹೇಳಿದ್ದಾರೆ. ನಮಗೆ ನಿಗದಿಪಡಿಸಿರುವ ನೀರೇ ಸಾಕು. ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಿಸಿದರೆ ಸಂಕಷ್ಟದ ಸಂದರ್ಭದಲ್ಲಿ ನೀರು ಹರಿಸಬಹುದಲ್ಲವೇ ಎಂದು ಪ್ರಶ್ನೆ ಮಾಡಿದರು.

ಈ ಯೋಜನೆ ಅನುಷ್ಠಾನವಾದರೆ ತಮಿಳುನಾಡು ರೈತರಿಗೂ ಅನುಕೂಲವಾಗುತ್ತದೆ. ವಿರೋಧಿಸಿದರೆ ಅವರಿಗೇ ನಷ್ಟ. ಈಗಾಗಲೇ ವಿಸ್ತ್ರತ ಯೋಜನಾ ವರದಿ(ಡಿಪಿಆರ್) ತಯಾರಾಗಿದೆ. ತಮಿಳುನಾಡಿಗೆ ನಿಗದಿಪಡಿಸಿರುವ ನೀರಿನಲ್ಲಿ ನಮಗೆ ಒಂದೇ ಒಂದು ಹನಿ ನೀರೂ ಜಾಸ್ತಿ ಬೇಡ ಎಂದು ಕಡ್ಡಿ ಮುರಿದಂತೆ ಹೇಳಿದರು. ಚುನಾವಣೆ ಆದಮೇಲೆ ವಿರೋಧ ಮರೆತುಬಿಡಬೇಕು. ನೀರು ಕೊಡುವ ಮತ್ತು ತೆಗೆದುಕೊಳ್ಳುವ ವಿಚಾರದಲ್ಲಿ ಎಲ್ಲರೂ ಒಟ್ಟಿಗೆ ಕೆಲಸ ಮಾಡಬೇಕು. ಇದೇ ವಿಚಾರವಾಗಿ ಮೊನ್ನೆ ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚೆ ನಡೆಸಲಾಗಿದೆ. ಮಹದಾಯಿ ವಿಚಾರ, ಮೇಕೆದಾಟು ವಿಚಾರ ಸೇರಿದಂತೆ ಬಾಕಿ ಇರುವ ನೀರಾವರಿ ಯೋಜನೆ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ತಮಿಳುನಾಡಿನ ಮುಖ್ಯಮಂತ್ರಿ ಹಾಗೂ ನಮ್ಮನ್ನೂ ಕರೆಸಿ ಮಾತನಾಡಿ ಎಂದು ಮನವಿ ಮಾಡಿದ್ದೇವೆ ಎಂದು ರಾಮಲಿಂಗಾರಡ್ಡಿ ಅವರು ಹೇಳಿದರು.

ಯತ್ನಾಳ್ ಅವರ ತಪ್ಪನ್ನು ಮನ್ನಿಸಿ ಮತ್ತೆ ಪಕ್ಷಕ್ಕೆ ಕರೆತಂದು ವಿಪಕ್ಷ ನಾಯಕನಾಗಿ ಮಾಡಬೇಕು : ಕುಮಾರ್ ಬಂಗಾರಪ್ಪ



ಬೆಂಗಳೂರು, ಜೂ.20- ರಾಜ್ಯ ರಾಜಕೀಯದಲ್ಲಿ ಹೊಸ ಚರ್ಚೆಗೆ ಕಾರಣವಾದ ಬೆಳವಣಿಗೆಯಲ್ಲಿ, ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿದರೂ ಅವರು ಬಿಜೆಪಿ ಪರವಾಗಿ ಮತ ಚಲಾಯಿಸಿರುವುದು ಗಮನ ಸೆಳೆದಿದೆ. ಈ ಹಿನ್ನೆಲೆಯಲ್ಲಿ ರೆಬೆಲ್ ನಾಯಕ ಕುಮಾರ್ ಬಂಗಾರಪ್ಪ,

ಯತ್ನಾಳ್ ಪಕ್ಷಕ್ಕೆ ನಿಷ್ಠಾವಂತರು. ಅವರ ತಪ್ಪನ್ನು ಮನ್ನಿಸಿ, ಅವರನ್ನು ಮತ್ತೆ ಪಕ್ಷಕ್ಕೆ ಕರೆತಂದು ವಿಪಕ್ಷ ನಾಯಕರನ್ನಾಗಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಶಾಸಕರ ಅಡ್ಡಮತದಾನದಿಂದ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿದ ನಂತರ, ರಾಜ್ಯ ಬಿಜೆಪಿ ನಾಯಕತ್ವದ ವಿರುದ್ಧ ಭಿನ್ನಮತೀಯರು ದನಿ ಎತ್ತಿದ್ದಾರೆ. ವಿಡಿಯೋ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ ಕುಮಾರ್‌ಬಂಗಾರಪ್ಪ, ರಾಜ್ಯ ಬಿಜೆಪಿ ಸಂಘಟನೆಯಲ್ಲಿ ಆಮೂಲಾಗ್ರ ಬದಲಾವಣೆ ಅಗತ್ಯ. ಹೈಕಮಾಂಡ್ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಅವರು ಹಾಲಿ ವಿಪಕ್ಷ ಸ್ಥಾನಗಳು, ರಾಜ್ಯಾಧ್ಯಕ್ಷ ಸ್ಥಾನ ಹಾಗೂ ಪದಾಧಿಕಾರಿಗಳ ಮುಂದುವರಿಸುವ ವಿಚಾರದಲ್ಲಿ ಮರು ಅವಲೋಕನ ಮಾಡಬೇಕೆಂದು ಹೇಳಿದ್ದಾರೆ.

ಬೇರೆ ರಾಜ್ಯಗಳಲ್ಲಿ ಮಾಡಿದಂತೆ ಕರ್ನಾಟಕದಲ್ಲೂ ಬದಲಾವಣೆ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಪಕ್ಷ ಬಿಟ್ಟವರನ್ನು ಮತ್ತೆ ಕರೆತರುವ ಘರ್‌ವಾಪಸಿ ಪ್ರಕ್ರಿಯೆಗೂ ಬಂಗಾರಪ್ಪ ಮನವಿ ಮಾಡಿದ್ದಾರೆ.

ಯತ್ನಾಳ್ ಪಕ್ಷಕ್ಕೆ ನಿಷ್ಠಾವಂತರಾಗಿದ್ದಾರೆ. ಅವರ ತಪ್ಪನ್ನು ಮನ್ನಿಸಬೇಕು. ಬಿಜೆಪಿ ಪರವಾಗಿ ಮತ ಚಲಾಯಿಸಿರುವುದು ಅವರ ಬದ್ಧತೆಯ ಸಾಕ್ಷಿ. ಹೀಗಾಗಿ ಅವರನ್ನು ಪಕ್ಷಕ್ಕೆ ವಾಪಸ್ ಕರೆತಂದು ವಿಪಕ್ಷ ನಾಯಕರನ್ನಾಗಿ ಮಾಡಬೇಕು ಎಂದು ಬಂಗಾರಪ್ಪ ಸ್ಪಷ್ಟಪಡಿಸಿದ್ದಾರೆ.

ಬಿಜೆಪಿಯಲ್ಲಿ ಅನೇಕ ಶಾಸಕರು ಅಡ್ಡಮತದಾನ ಮಾಡಿದ ಹಿನ್ನೆಲೆಯಲ್ಲಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ. 2028ರ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷ ಸಂಘಟನೆಯನ್ನು ಬಲಪಡಿಸಬೇಕು. ಕಾಂಗ್ರೆಸ್ ಪಕ್ಷವನ್ನು ಕರ್ನಾಟಕದಿಂದ ಕಿತ್ತೊಗೆಯಲು ಹೈಕಮಾಂಡ್ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಬಂಗಾರಪ್ಪ ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ.

ಶಾಸಕ ಬಸನಗೌಡ ಪಾಟೀಲ್ ವಿರುದ್ಧ ದಾಖಲಾಗಿದ್ದ 4 ಕ್ರಿಮಿನಲ್ ಪ್ರಕರಣಗಳನ್ನು ರದ್ದುಪಡಿಸಿದ ಹೈಕೋರ್ಟ್

ಬೆಂಗಳೂರು, ಜೂ.20- ರಾಜ್ಯ ರಾಜಕೀಯದಲ್ಲಿ ಚರ್ಚೆಗೆ ಕಾರಣವಾದ ಪ್ರಕರಣದಲ್ಲಿ, ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ದಾಖಲಾಗಿದ್ದ ನಾಲ್ಕು ಕ್ರಿಮಿನಲ್ ಪ್ರಕರಣಗಳನ್ನು ಹೈಕೋರ್ಟ್ ರದ್ದುಪಡಿಸಿದೆ. ದಿನೇಶ್ ಗುಂಡೂರಾವ್ ಅವರ ಮನೆಯಲ್ಲಿ ಅರ್ಧ ಪಾಕಿಸ್ತಾನ ಇದೆ ಎಂಬ ಆಕ್ಷೇಪಾರ್ಹ ಹೇಳಿಕೆ ಹಾಗೂ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇಲೆ ವಿಜಯಪುರ, ಬೆಂಗಳೂರು, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಎಫ್‌ಐಆರ್‌ಗಳು ದಾಖಲಾಗಿದ್ದವು.

ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠವು, ಸುಪ್ರೀಂಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿ, ಯತ್ನಾಳ್ ಅವರ ಭಾಷಣವು ಪ್ರಚೋದನೆ ನೀಡಿದಂತಾಗುವುದಿಲ್ಲ ಎಂದು ಸ್ಪಷ್ಟಪಡಿಸಿ ಪ್ರಕರಣಗಳನ್ನು ರದ್ದುಪಡಿಸಿದೆ. ಈ ಮೂಲಕ, 2024ರ ಲೋಕಸಭೆ ಚುನಾವಣಾ ಸಮಯದಲ್ಲಿ ವಿಜಯಪುರದಲ್ಲಿ ನೀಡಿದ ವಿವಾದಾತ್ಮಕ ಹೇಳಿಕೆ ಹಾಗೂ ಬೈಲಹೊಂಗಲ ಮತ್ತು ಮುಧೋಳದಲ್ಲಿ ನಡೆದ ಹಿಂದೂ ಮಹಾಗಣಪತಿ ವಿಸರ್ಜನೆ ಕಾರ್ಯಕ್ರಮದ ಭಾಷಣಗಳಿಗೆ ಸಂಬಂಧಿಸಿದ ದೂರುಗಳು ಅಂತ್ಯಗೊಂಡಿವೆ.

ಇದೇ ವೇಳೆ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ವಿರುದ್ಧ ದಾಖಲಾಗಿದ್ದ ಮತ್ತೊಂದು ಪ್ರಕರಣವನ್ನೂ ಹೈಕೋರ್ಟ್ ರದ್ದುಪಡಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಂಚಿಕೊಂಡ ಆರೋಪದ ಮೇಲೆ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ, ಕಾಂಗ್ರೆಸ್ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥರು ಪೋಸ್ಟ್ ಅಪ್ಲೋಡ್ ಮಾಡಿದ್ದರೂ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಕಾರಣಕ್ಕೆ ಶಿವಕುಮಾರ್‌ಅವರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದು ವಕೀಲರು ವಾದಿಸಿದರು. ನ್ಯಾಯಪೀಠವು ಈ ವಾದವನ್ನು ಪುರಸ್ಕರಿಸಿ ಪ್ರಕರಣವನ್ನು ರದ್ದುಪಡಿಸಿದೆ.

ನಟಿಯೊಬ್ಬರ ಭಾವಚಿತ್ರ ಮಾರ್ಫ್ ಗೈದು ಸಾಮಾಜಿಕ ಜಾಲ ತಾಣದಲ್ಲಿ ಹರಿಬಿಟ್ಟ ಮೂವರು ಆರೋಪಿಗಳ ಬಂಧನ

ಬೆಂಗಳೂರು, ಜೂ.20- ಕನ್ನಡ ಚಿತ್ರರಂಗದಲ್ಲಿ ಭಾರಿ ಸಂಚಲನ ಮೂಡಿಸಿರುವ ಪ್ರಕರಣದಲ್ಲಿ, ಬಹುಭಾಷಾ ನಟಿ ರುಕ್ಮಿಣಿ ವಸಂತ್ ಅವರ ಭಾವಚಿತ್ರಗಳನ್ನು ಎಐ ತಂತ್ರಜ್ಞಾನ ಬಳಸಿ ಮಾರ್ಫ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿಗಳು ರವಿಕುಮಾರ್, ಚಂದ್ರಕಾಂತ್ ಹಾಗೂ ರಂಜಿತ್ ಇವರ ವಿರುದ್ಧ ನಟಿ ನೀಡಿದ ದೂರಿನ ಮೇರೆಗೆ ತನಿಖೆ ನಡೆಸಿದ ಪೊಲೀಸರು, ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ ಮೂರು ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಸದ್ಯ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಳೆದ ತಿಂಗಳು ನಟಿ ಅಭಿನಯಿಸಿದ ಕಾಂತಾರ ಮತ್ತು ಸಪ್ತ ಸಾಗರದಾಚೆ ಎಲ್ಲೋ ಚಿತ್ರಗಳ ಭಾವಚಿತ್ರಗಳನ್ನು ಆಧರಿಸಿ, ಎಐ ತಂತ್ರಜ್ಞಾನ ಬಳಸಿ ನಕಲಿ ಫೋಟೋ ಹಾಗೂ ವಿಡಿಯೋಗಳನ್ನು ಸೃಷ್ಟಿಸಿ ವೈರಲ್ ಮಾಡಲಾಗಿತ್ತು. ಈ ಕೃತ್ಯವು ನಟಿಯ ಗೌರವ ಮತ್ತು ವೈಯಕ್ತಿಕ ಗೌಪ್ಯತೆಗೆ ಗಂಭೀರ ಧಕ್ಕೆ ತಂದಿತ್ತು.

ನಟಿ ರುಕ್ಮಿಣಿ ವಸಂತ್ ತಮ್ಮ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ, ನನ್ನದು ಎಂದು ಆರೋಪಿಸಿ ಆನ್‌ಲೈನ್‌ನಲ್ಲಿ ಪ್ರಸಾರವಾಗುತ್ತಿರುವ ಎಐ-ರಚಿತ ಫೋಟೋಗಳು ಸಂಪೂರ್ಣ ನಕಲಿ. ಇದು ಗೌಪ್ಯತೆಯ ಗಂಭೀರ ಉಲ್ಲಂಘನೆ. ಕೃತ್ಯ ಎಸಗಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದ್ದರು.

ಈ ಪ್ರಕರಣದ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಅಭಿಮಾನಿಗಳು ಹಾಗೂ ಬಳಕೆದಾರರು ನಟಿಗೆ ಭಾರಿ ಬೆಂಬಲ ವ್ಯಕ್ತಪಡಿಸಿದರು. ಎಐ ತಂತ್ರಜ್ಞಾನವನ್ನು ಇಷ್ಟೊಂದು ಅಸಹ್ಯಕರವಾಗಿ ಬಳಸಿದವರಿಗೆ ಕಠಿಣ ಶಿಕ್ಷೆಯಾಗಲೇಬೇಕು ಎಂದು ಜನರು ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರ ತ್ವರಿತ ಕ್ರಮದಿಂದಾಗಿ ಆರೋಪಿಗಳು ಬಂಧಿತರಾಗಿದ್ದು, ಇದು ಎಐ ದುರುಪಯೋಗದ ವಿರುದ್ಧ ರಾಜ್ಯದಲ್ಲಿ ಮೊದಲ ದೊಡ್ಡ ಕಾನೂನು ಕ್ರಮವೆಂದು ಪರಿಗಣಿಸಲಾಗಿದೆ. ಈ ಪ್ರಕರಣವು ಎಐ ತಂತ್ರಜ್ಞಾನ ಬಳಕೆಯ ನಿಯಂತ್ರಣ ಮತ್ತು ಗೌಪ್ಯತೆ ರಕ್ಷಣೆಯ ಕುರಿತು ಹೊಸ ಚರ್ಚೆಗೆ ಕಾರಣವಾಗಿದೆ.

ಅನಧಿಕೃತ ನಿರಾಶ್ರಿತರ ಕೇಂದ್ರಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳ ದಾಳಿ ; 64 ಮಂದಿಯ ರಕ್ಷಣೆ

ತುಮಕೂರು, ಜೂ.20- ಸಿರಾ ತಾಲೂಕಿನ ಗಾಣದ ಹುಣಸೆ ಗ್ರಾಮದಲ್ಲಿ ನಡೆದ ದಾಳಿಯು ಮಾನವೀಯತೆಯನ್ನು ಮರೆತ ಪ್ರಕರಣವೊಂದು ಬೆಳಕಿಗೆ ಬಂದಿದೆ .ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಅನಧಿಕೃತವಾಗಿ ನಿರಾಶ್ರಿತರ ಕೇಂದ್ರವನ್ನು ನಡೆಸುತ್ತಿದ್ದ ಸ್ಥಳದಲ್ಲಿ ದಾಳಿ ನಡೆಸಿ, 64 ಮಂದಿಯನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದಾರೆ.

ಮಹಿಳಾ ಸಂಘಟನೆಯೊಂದರ ದೂರಿನ ಆಧಾರದ ಮೇಲೆ ನಡೆದ ಈ ಕ್ರಮದಲ್ಲಿ, 41 ಪುರುಷರು ಮತ್ತು 23 ಮಹಿಳೆಯರನ್ನು ಮೂಲಭೂತ ಸೌಕರ್ಯವಿಲ್ಲದೆ ಒಂದೇ ಶೆಡ್‌ನಲ್ಲಿ ಬಲವಂತವಾಗಿ ಇರಿಸಿಕೊಂಡಿರುವುದು ಬೆಳಕಿಗೆ ಬಂದಿದೆ. ಗೀತಾ ಎಂಬುವರ ಮಾಲೀಕತ್ವದಲ್ಲಿದ್ದ ಈ ಆಶ್ರಮದಲ್ಲಿ ಬಟ್ಟೆ, ಔಷಧಿ, ಆಹಾರ ಖನೀಡದೆ ನಿರಾಶ್ರಿತರನ್ನು ಮಾನವೀಯತೆ ಇಲ್ಲದೆ ಇರಿಸಲಾಗುತ್ತಿತ್ತು.

ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಅಂಬಿಕಾ, ಇಲ್ಲಿ ನಿರಾಶ್ರಿತರನ್ನು ಪ್ರಾಣಿಗಳಂತೆ ನೋಡಿಕೊಳ್ಳಲಾಗುತ್ತಿತ್ತು. ಯಾವುದೇ ದಾಖಲೆ ಇಲ್ಲದೆ ಆಶ್ರಮ ನಡೆಸುತ್ತಿದ್ದರು. ಎಲ್ಲರನ್ನೂ ಒಂದೇ ಶೆಡ್‌ನಲ್ಲಿ ಕೂಡಿ ಹಾಕಿದ್ದರು. ಇದು ನೋವುಂಟುಮಾಡುವ ದೃಶ್ಯ ಎಂದು ಮಾಧ್ಯಮಗಳಿಗೆ ತಿಳಿಸಿದರು.

ನಿರಾಶ್ರಿತರಲ್ಲಿ ಶಿವಗಾಮಿ ಎಂಬ ಮಹಿಳೆ, ನನ್ನ ಗಂಡನಿಗೆ ಹುಷಾರಿಲ್ಲದ ಕಾರಣ ಹಣಕ್ಕಾಗಿ ರೈಲು ನಿಲ್ದಾಣದಲ್ಲಿ ನಿಂತಿದ್ದೆ. ಆಗ ಆಶ್ರಮದವರು ಬೆಳಗ್ಗೆ ಕಳಿಸುತ್ತೇವೆ ಎಂದು ಕರೆದುಕೊಂಡು ಬಂದು, ಐದು ತಿಂಗಳುಗಳಿಂದ ಇಲ್ಲಿ ಬಲವಂತವಾಗಿ ಇರಿಸಿಕೊಂಡಿದ್ದಾರೆ ಎಂದು ಕಣ್ಣೀರಿಟ್ಟರು. ಮತ್ತೊಬ್ಬ ಅನುಸೂಯ, ನಾನು ಸರ್ಕಾರಿ ಆಸ್ಪತ್ರೆ ಬಳಿ ಇದ್ದಾಗ ನನ್ನನ್ನು ಬಲವಂತವಾಗಿ ಕರೆದುಕೊಂಡು ಬಂದು ಆಶ್ರಮದಲ್ಲಿ ಇರಿಸಿದರು. ನನಗೆ ಮಕ್ಕಳು ಇದ್ದಾರೆ ಎಂದು ಅಳಲನ್ನು ಹೊರಹಾಕಿದರು.

ಶಿರಾ ತಹಶೀಲ್ದಾರ್ ಆನಂದ್ ಕುಮಾರ್, ಇಲ್ಲಿ ಯಾವುದೇ ಮೂಲಸೌಕರ್ಯಗಳಿಲ್ಲ. ನಿರಾಶ್ರಿತರನ್ನು ಬಲವಂತವಾಗಿ ಕರೆದುಕೊಂಡು ಬಂದು ಮಾನವೀಯತೆ ಇಲ್ಲದೆ ಇರಿಸಿದ್ದಾರೆ. ತಾತ್ಕಾಲಿಕವಾಗಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿ, ಮುಂದಿನ ದಿನಗಳಲ್ಲಿ ಅವರ ಮನೆಗಳಿಗೆ ಕಳುಹಿಸುವ ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಈ ಘಟನೆ ಗ್ರಾಮದಲ್ಲಿ ಆಘಾತ ಮೂಡಿಸಿದ್ದು, ಮಾನವೀಯತೆ ಮರೆತಿರುವ ಸಮಾಜದ ಕತ್ತಲೆಯ ಮುಖವನ್ನು ತೋರಿಸಿದೆ.

ಮುಂಬೈ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರಿಗೆ ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿಯಿಂದ ಭವ್ಯ ಸ್ವಾಗತ

(ಚಿತ್ರ ,ವರದಿ: ದಿನೇಶ್ ಕುಲಾಲ್)

ಮುಂಬಯಿ, ಜೂ.20- ಮುಂಬೈಗೆ ಆಗಮಿಸಿದ ಕರ್ನಾಟಕದ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರನ್ನು ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿ (ರಿ.) ಸ್ವಯಂಸೇವಾ ಸಂಸ್ಥೆಯ ವತಿಯಿಂದ ಇಂದು ಮುಂಬೈ ವಿಮಾನ ನಿಲ್ದಾಣದಲ್ಲಿ ಅತ್ಯಂತ ಆದರದಿಂದ ಹಾಗೂ ಭವ್ಯವಾಗಿ ಸ್ವಾಗತಿಸಲಾಯಿತು. ಕರಾವಳಿ ಕರ್ನಾಟಕದ ಪರಿಸರ ಸಂರಕ್ಷಣೆ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿಯ ಸಂಸ್ಥಾಪಕ ತೋನ್ಸೆ ಜಯಕೃಷ್ಣ ಎ. ಶೆಟ್ಟಿ ಅವರ ನೇತೃತ್ವದಲ್ಲಿ ಈ ಗೌರವಾರ್ಪಣೆ ಕಾರ್ಯಕ್ರಮ ನಡೆಯಿತು.

ಈ ಸುಂದರ ಸಂದರ್ಭದಲ್ಲಿ ಸಮಿತಿಯ ಗೌರವಾನ್ವಿತ ಅಧ್ಯಕ್ಷರಾದ ನಿತ್ಯಾನಂದ ಡಿ ಕೋಟ್ಯಾನ್, ರಾಜ್ಯ ಸಂಯೋಜಕ ಕೆ. ಪಿ. ಜಗದೀಶ್ ಅಧಿಕಾರಿ ಹಾಗೂ ಉಪಾಧ್ಯಕ್ಷರುಗಳಾದ ಐ. ಆರ್. ಶೆಟ್ಟಿ ಮತ್ತು ಫೆಲಿಕ್ಸ್ ಡಿ'ಸೋಜಾ, ಗೌರವ ಪ್ರಧಾನ ಕಾರ್ಯದರ್ಶಿ ಮುಂಡ್ಕೂರು ಸುರೇಂದ್ರ ಸಾಲಿಯನ್ ಅವರು ಉಪಸ್ಥಿತರಿದ್ದು, ಡಿ. ಕೆ. ಶಿವಕುಮಾರ್‌ಅವರಿಗೆ ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು. ಮುಂಬೈ ಕನ್ನಡಿಗರ ಈ ಪ್ರೀತಿಯ ಸ್ವಾಗತವನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿದ ಮುಖ್ಯಮಂತ್ರಿ ಅವರು ಸಮಿತಿಯ ಪರಿಸರ ಕಾಳಜಿ ಮತ್ತು ಸಾಮಾಜಿಕ ಕಾರ್ಯಗಳನ್ನು ಶ್ಲಾಘಿಸಿ ಧನ್ಯವಾದಗಳನ್ನು ಅರ್ಪಿಸಿದರು. ಡಿ ಕೆ ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಿ ಆಯ್ಕೆಯಾದ ಕೂಡಲೇ ಜಯಕೃಷ್ಣ ಶೆಟ್ಟಿ ಅವರು ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಅಭಿನಂದಿಸಿ, ಕರಾವಳಿ ಕರ್ನಾಟಕದ ಒಟ್ಟಾರೆ ಅಭಿವೃದ್ಧಿಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದರು. ಜೂನ್ 19 ರಂದು ಬೆಂಗಳೂರಿನಲ್ಲಿ ಕರಾವಳಿ ಪ್ರವಾಸೋದ್ಯಮದ ಪ್ರಮುಖ ಪರಿಶೀಲನಾ ಸಭೆ ನಡೆದಿದ್ದು, ಪ್ರವಾಸೋದ್ಯಮ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಹೊಸ ವೇಗ ನೀಡಲು ಸರಕಾರವು ಶೀಘ್ರದಲ್ಲಿಯೇ ಆ ಭಾಗದಲ್ಲಿ ವಿಶೇಷ ಸಚಿವ ಸಂಪುಟ ಸಭೆಯನ್ನು ಆಯೋಜಿಸಲಿದೆ ಎಂದು ಮುಖ್ಯಮಂತ್ರಿ ಅವರು ಘೋಷಿಸಿರುವುದನ್ನು ಇಲ್ಲಿ ಪ್ರಮುಖವಾಗಿ ಸ್ಮರಿಸಬಹುದಾಗಿದೆ.



ಬಿಜೆಪಿ ಏಕನಾಥ್ ಶಿಂದೆಗೆ ಮುಖ್ಯಮಂತ್ರಿ ಹುದ್ದೆಯ ಕೊಡುಗೆ ನೀಡಿದೆ; ವಕೀಲ ಅಸಿಮ್ ಸರೋಡ್

ಮುಂಬಯಿ,ಜೂ.20 - ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ)ಯ 6 ಸಂಸದರು ಶಿಂದೆಸೇನೆ ಸೇರಲು ಸಿದ್ಧರಾಗಿರುವ ನಡುವೆ ಹಿರಿಯ ವಕೀಲ ಅಸಿಮ್ ಸರೋಡ್ ಅವರು ಅಚ್ಚರಿಯ ಹೇಳಿಕೆಯೊಂದನ್ನು ನೀಡಿ, ಬಿಜೆಪಿ ಏಕನಾಥ್ ಶಿಂದೆಗೆ ಮುಖ್ಯಮಂತ್ರಿ ಹುದ್ದೆಯ ಕೊಡುಗೆ ನೀಡಿದೆ ಎಂದು ಹೇಳಿದ್ದಾರೆ.

'ಬಿಜೆಪಿ ಏಕನಾಥ್ ಶಿಂದೆಗೆ ಮುಖ್ಯಮಂತ್ರಿ ಹುದ್ದೆಯ ಕೊಡುಗೆ ನೀಡಿದೆ ಎಂಬ ಮಾಹಿತಿಯು ಅತ್ಯಂತ ವಿಶ್ವಾಸಾರ್ಹ ಮೂಲಗಳಿಂದ ಮಾತ್ರವಲ್ಲದೆ ಕೆಲವು ದೊಡ್ಡ ಹಾಗೂ ಗೌರವಾನ್ವಿತ ಜನರಿಂದಲೂ ಬರುತ್ತಿದೆ. ನಿಜವಾದ ತಮಾಷೆಯೆಂದರೆ, ಮುಖ್ಯಮಂತ್ರಿ ಹುದ್ದೆಗೆ ಬದಲಾಗಿ ಶಿಂದೆಸೇನೆ ಬಿಜೆಪಿಯೊಂದಿಗೆ ವಿಲೀನಗೊಳ್ಳಬೇಕು ಎಂಬ ಷರತ್ತನ್ನು ಬಿಜೆಪಿ ಶಿಂದೆ ಮುಂದೆ ಇಟ್ಟಿದೆ. ದೇವೇಂದ್ರ ಫಡ್ನವೀಸ್ ರಾಜಕೀಯವು ಆಸಕ್ತಿದಾಯಕ ತಿರುವು ಪಡೆದುಕೊಂಡಂತೆ ತೋರುತ್ತಿದ್ದರೂ, ಮರಾಠ ನಾಯಕತ್ವವು ತನಗೆ ಬೆದರಿಕೆ ಎಂದು ಭಾವಿಸುತ್ತಾರೆ' ಅಸಿಮ್ ಸರೋಡ್ ಟ್ವೀಟ್ ಮಾಡಿದ್ದಾರೆ.

ಅನುಭವಿ ತಾಯಂದಿರ ಮೊದಲ ಆಯ್ಕೆ
ಡೆನ್-ಟಾನಿಕ್®
ಹೋಮಿಯೋಪತಿ ಮಾತ್ರೆಗಳು

ನಕಲಿಗಳ ಬಗ್ಗೆ ಎಚ್ಚರದಿಂದಿರಿ
Helps easy Teething
ತಯಾರಕರು : ಹೋಮಿಯೋ ಲ್ಯಾಬೋರೇಟರೀಸ್, ಪುಣೆ
ಮಾರ್ಕೆಟಿಂಗ್: ಬಿ.ಆರ್. ಎಂಟರ್‌ಪ್ರೈಸಸ್, ಮುಂಬಯಿ.
ಫೋನ್ : 8652756688 / 7219731618
ಎಲ್ಲಾ ಪ್ರಮುಖ ಕೆಮಿಸ್ಟ್‌ಗಳಲ್ಲಿ ಲಭ್ಯ

ಕರ್ನಾಟಕದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮುಂಬಯಿಯಲ್ಲಿ ಚಿಣ್ಣರ ಬಿಂಬದ ವತಿಯಿಂದ ಪ್ರಕಾಶ್ ಭಂಡಾರಿಯವರಿಂದ ಗೌರವ

(ಚಿತ್ರ, ವರದಿ : ದಿನೇಶ್ ಕುಲಾಲ್)

ಮುಂಬಯಿ, ಜೂ.20- ಮುಂಬೈ ನಗರದಲ್ಲಿ ಖಾಸಗಿ ಕಾರ್ಯಕ್ರಮಕ್ಕೆ ಆಗಮಿಸಿದ ಕರ್ನಾಟಕದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಜೂನ್ 20ರಂದು ಸಂಜೆ ಮುಂಬೈಯ ಸಾಂತಾಕ್ರೂಸ್ ವಿಮಾನ ನಿಲ್ದಾಣದಲ್ಲಿ ಚಿಣ್ಣರ ಬಿಂಬ ಟ್ರಸ್ಟಿನ ಸಂಸ್ಥಾಪಕ ,ನಿವೃತ್ತ ಪೊಲೀಸ್ ಅಧಿಕಾರಿ ಪ್ರಕಾಶ್ ಭಂಡಾರಿಯವರು ಶಾಲು ಹೊದಿಸಿ ಆತ್ಮೀಯವಾಗಿ ಅಭಿನಂದಿಸಿದರು.

ಕರ್ನಾಟಕದ ನೂತನ ಮುಖ್ಯಮಂತ್ರಿಗಳ ಖಾಸಗಿ ಕಾರ್ಯಕ್ರಮವಾಗಿರುವುದರಿಂದ ಪ್ರಕಾಶ್ ಭಂಡಾರಿಯವರು ತಮ್ಮ ಸಂಸ್ಥೆ ಚಿಣ್ಣರ ಬಿಂಬದ ಬಗ್ಗೆ ಪ್ರಸ್ತಾವಿಕ ವಿಷಯಗಳನ್ನು ತಿಳಿಸಿದ್ದರು.

ಈ ಸಂದರ್ಭ ಪ್ರಕಾಶ್ ಭಂಡಾರಿ ಅವರೊಂದಿಗೆ ಉದ್ಯಮಿ ಭರತ್ ವಿಜನ್ ಉಪಸ್ಥಿತರಿದ್ದರು.



ಪವನ್‌ರಾಜೇ ನಿಂಬಾಳ್ಕರ್ ಹತ್ಯೆ ಪ್ರಕರಣ: ಅಮಿತ್ ಶಾಹ ಜತೆಗೆ ಮಾತನಾಡಿದ ಏಕನಾಥ್ ಶಿಂದೆ

ಮುಂಬಯಿ,ಜೂ.20- ಪವನ್‌ರಾಜೇ ನಿಂಬಾಳ್ಕರ್ ಕೊಲೆ ಪ್ರಕರಣದಲ್ಲಿ 20 ವರ್ಷಗಳ ಬಳಿಕ ತೀರ್ಪು ನೀಡಿದ ನ್ಯಾಯಾಲಯವು ಪ್ರಮುಖ ಆರೋಪಿ ಪದ್ಮಸಿಂಹ ಪಾಟೀಲ್ ಮತ್ತು ಇತರ 8 ಆರೋಪಿಗಳನ್ನು ಖುಲಾಸೆಗೊಳಿಸಿದ್ದು,ಈ ತೀರ್ಪಿನ ವಿರುದ್ಧ ಹೈಕೋರ್ಟ್‌ಗೆ ಹೋಗುವ ಸಂಬಂಧ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾಹ ಅವರ ಜತೆಗೆ ಮಾತನಾಡಿದ್ದಾರೆ.

ಇಂದು ಮಹಾರಾಷ್ಟ್ರದ ಕೊಲ್ಹಾಪುರ ಭೇಟಿಯಲ್ಲಿದ್ದ ಅಮಿತ್ ಶಾಹ ಜತೆಗೆ ಶಿಂದೆ ಅವರು ಈ ವಿಚಾರವಾಗಿ ಮಾತನಾಡಿದ್ದು, ತೀರ್ಪು ವಿರುದ್ಧ ಸಿಬಿಐ ಹೈಕೋರ್ಟ್‌ಗೆ ಹೋಗುವ ಬಗ್ಗೆ ಶಿಂದೆ ಶಾಹ ಅವರಿಗೆ ತಿಳಿಸಿದರು ಎಂದು ಮೂಲಗಳು ಹೇಳಿವೆ.

ಇದೇ ವೇಳೆ ತೀರ್ಪಿನ ಬಗ್ಗೆ ಮಾತನಾಡಿದ ಪದ್ಮಸಿಂಹ ಪಾಟೀಲ್ ಅವರ ಪುತ್ರ ರಾಣಾ ಜಗಜಿತ್ ಸಿಂಗ್ 'ಪವನ್‌ರಾಜೆ ನಿಂಬಾಳ್ಕರ್ ಮತ್ತು ಅವರ ಕಾರು ಚಾಲಕ ಸಮದ್ ಕಾಜಿ ಅವರನ್ನು ದುರಂತ ರೀತಿಯಲ್ಲಿ ಹತ್ಯೆ ಮಾಡಲಾಗಿದೆ. ಇದು 20 ವರ್ಷಗಳು ಕಳೆದಿವೆ. ಈ ಕಾನೂನು ಪ್ರಕರಣ ಕಳೆದ 17 ವರ್ಷಗಳಿಂದ ನಡೆಯುತ್ತಿದೆ. ನ್ಯಾಯದ ದೇವರಲ್ಲಿ ನಮಗೆ ಸಂಪೂರ್ಣ ನಂಬಿಕೆ ಇತ್ತು. 17 ವರ್ಷಗಳ ಬಳಿಕ ನ್ಯಾಯದ ದೇವರು ನಮಗೆ ನ್ಯಾಯ ನೀಡಿದ್ದಾರೆ' ಎಂದು ಹೇಳಿದರು.

ಹೇನುಗಳು, ನಿಟ್ಸ್ ಮತ್ತು ತಲೆಹೊಟ್ಟನ್ನು ಒಂದೇ ಬಾರಿಗೆ ನಿವಾರಿಸುತ್ತದೆ
ರೆಪಲ್
ಲಿಸ್ನಿಕಿಟ್
MRP Rs. 60/-
ಶೇ. 100 ಆಯುರ್ವೇದಿಕ್ ತೈಲ


ಆಮ್ಲಾ । ಸೀತಾಫಲ ಬೀಜ ಸಲ್ಫರ್ ದೂತ್ಕಾ । ಕಾರಂಜಾ ಎಣ್ಣೆ ಕ್ಯಾಸ್ಟರ್‌ಆಯಿಲ್ । ನಿಂಬೆ ಎಣ್ಣೆ ಬೇವಿನ ಎಣ್ಣೆ । ತೆಂಗಿನ ಎಣ್ಣೆಯನ್ನು ಹೊಂದಿರುತ್ತದೆ
ಮಕ್ಕಳಿಗೆ ಶೇ. 100 ಸುರಕ್ಷಿತ
ವಿಷಕಾರಿ ರಾಸಾಯನಿಕಗಳಿಂದ ಮುಕ್ತವಾಗಿದೆ.
ಎಲ್ಲಾ ಪ್ರಮುಖ ಔಷಧಿ ಅಂಗಡಿಗಳಲ್ಲಿ ಲಭ್ಯವಿದೆ
Only Whatsapp : 8369087234

ನಾಗ್ಪುರ ವಿದ್ಯಾರ್ಥಿಗೆ ನೀಟ್ ಮರು ಪರೀಕ್ಷೆಗೆ ಅಬುಧಾಬಿ ಕೇಂದ್ರ ಸಿಕ್ಕಿದೆ: ಕುಟುಂಬದ ಆರೋಪ; ವಿದ್ಯಾರ್ಥಿಯೇ ಅದನ್ನು ಆಯ್ಕೆ ಮಾಡಿಕೊಂಡಿದ್ದಾನೆ ಎಂದ ಎನ್‌ಟಿಎ

ನಾಗ್ಪುರ, ಜೂ. 20 - ಜೂನ್ 21ರಂದು ನಿಗದಿಯಾಗಿದ್ದ ಎನ್‌ಇಇಟಿ-ಯುಜಿ ಮರು ಪರೀಕ್ಷೆಗೆ ಯುಎಇಯ ಅಬುಧಾಬಿಯಲ್ಲಿ ಪರೀಕ್ಷಾ ಕೇಂದ್ರವನ್ನು ಹಂಚಿಕೆ ಮಾಡಲಾಗಿದೆ ಎಂದು ಇಲ್ಲಿನ ವಿದ್ಯಾರ್ಥಿಯ ಕುಟುಂಬ ಆರೋಪಿಸಿದೆ, ಆದರೆ ಎನ್‌ಟಿಎ ಆತನೇ ಸ್ವತಃ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ ಮತ್ತು ಅವರ ಕೋರಿಕೆಯ ಮೇರೆಗೆ ಈಗ ನಾಗ್ಪುರದಲ್ಲಿ ಕೇಂದ್ರವನ್ನು ಹಂಚಿಕೆ ಮಾಡಲಾಗಿದೆ ಎಂದು ಹೇಳಿದೆ.

ಪರೀಕ್ಷಾ ಕೇಂದ್ರವನ್ನು ಅಬುಧಾಬಿಗೆ ಬದಲಾಯಿಸಲು ಅಭ್ಯರ್ಥಿಯು ತಮ್ಮದೇ ಆದ ಮಾಹಿತಿಯನ್ನು ಬಳಸಿದ್ದಾರೆ ಎಂದು ಎನ್‌ಟಿಎ ತಿಳಿಸಿದೆ.

ವಿದ್ಯಾರ್ಥಿ ಅಬ್ದುಲ್ಲಾ ತಾಲಿಬ್ ಪರೀಕ್ಷೆಗೆ ನಾಗ್ಪುರ, ವಾರ್ಧಾ ಮತ್ತು ಭಂಡಾರ ಕೇಂದ್ರಗಳನ್ನು ಆದ್ಯತೆ ನೀಡಿದ್ದ ಎಂದು ಅವರ ತಂದೆ ಡಾ. ಮೊಹಮ್ಮದ್ ತಾಲಿಬ್ ಹೇಳಿದರು.

''ನಿನ್ನೆ, ನಾವು ಪರೀಕ್ಷಾ ಕಾರ್ಡ್ ಡೌನ್‌ಲೋಡ್ ಮಾಡಿದಾಗ, ಯುಎಇಯ ಅಬುಧಾಬಿಯಲ್ಲಿ ಪರೀಕ್ಷಾ ಕೇಂದ್ರವನ್ನು ಹಂಚಿಕೆ ಮಾಡಲಾಗಿದೆ ಎಂದು ನೋಡಿ ನಮಗೆ ಆಘಾತವಾಯಿತು. ಇದರ ನಂತರ, ನಾವು ಎನ್‌ಟಿಎಗೆ ದೂರು ಸಲ್ಲಿಸಿದ್ದೇವೆ, ಅದು ಶನಿವಾರ ಸಂಜೆ 4 ಗಂಟೆಯೊಳಗೆ ತಿದ್ದುಪಡಿ ಮಾಡಲಾಗುವುದು ಎಂದು ನಮಗೆ ಭರವಸೆ ನೀಡಿತು'' ಎಂದು ಅವರು ಹೇಳಿದ್ದಾರೆ. ನಾಗ್ಪುರವನ್ನು ಮರು-ಪರೀಕ್ಷಾ ಕೇಂದ್ರವಾಗಿ ಹಂಚಿಕೆ ಮಾಡಿದ ನಂತರ ಎನ್‌ಟಿಎ ಶನಿವಾರ ಮಧ್ಯಾಹ್ನ ಅಭ್ಯರ್ಥಿಗೆ ಹೊಸ ಪರೀಕ್ಷಾ ಕಾರ್ಡ್ ಅನ್ನು ನೀಡಿತು. ''ನಾವು ಒತ್ತಡಕ್ಕೊಳಗಾಗಿದ್ದೆವು ಮತ್ತು ಬಹಳಷ್ಟು ಒತ್ತಡವನ್ನು ಅನುಭವಿಸುತ್ತಿದ್ದೆವು. ಆದರೆ ಈಗ ನಮಗೆ ನಿರಾಳವಾಗಿದೆ'' ಎಂದು ತಾಲಿಬ್ ತಿಳಿಸಿದ್ದಾರೆ.

ಅಭ್ಯರ್ಥಿಯು ಅಬುಧಾಬಿ ಕೇಂದ್ರವನ್ನು ಸ್ವತಃ ಆಯ್ಕೆ ಮಾಡಿಕೊಂಡಿದ್ದಾರೆ ಎಂಬ ಎನ್‌ಟಿಎ ಹೇಳಿಕೆಯ ಬಗ್ಗೆ ಕೇಳಿದಾಗ, ''ಅದನ್ನು ಹೇಗೆ ಆಯ್ಕೆ ಮಾಡಲಾಗಿದೆ ಎಂದು ನಮಗೆ ತಿಳಿದಿಲ್ಲ. ನಾವು ನಾಗ್ಪುರ, ವಾರ್ಧಾ ಮತ್ತು ಭಂಡಾರವನ್ನು ಆಯ್ಕೆ ಮಾಡಿದ್ದೇವೆ... ಈಗ, ಒತ್ತಡ ಮತ್ತು ಈ ಗೊಂದಲದಿಂದಾಗಿ, ನಮ್ಮ ಮಗ ಪರೀಕ್ಷೆಯನ್ನು ತೆಗೆದುಕೊಳ್ಳಲು ಇಷ್ಟವಿಲ್ಲ ಎನ್ನುತ್ತಿದ್ದಾನೆ. ಆದರೆ ನಾವು ಅವನನ್ನು ಮತ್ತೆ ಪರೀಕ್ಷೆ ತೆಗೆದುಕೊಳ್ಳಲು ಮನವೊಲಿಸಲು ಪ್ರಯತ್ನಿಸುತ್ತಿದ್ದೇವೆ'' ಎಂದು ಹೇಳಿದರು.

ಈ ವಿಷಯದ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಪಡಿಸಲು ಎನ್‌ಟಿಎ ಎಕ್ಸ್ ಸಹಾಯಪಡೆದುಕೊಂಡಿದೆ. ''ಎನ್‌ಟಿಎ ಯ ವೆಬ್-ಚಟುವಟಿಕೆ ದಾಖಲೆಗಳು ಈ ಪ್ರಕರಣದಲ್ಲಿ ನಗರ ಬದಲಾವಣೆಯನ್ನು ಅಭ್ಯರ್ಥಿಯ ಸ್ವಂತ ನೋಂದಾಯಿತ ಲಾಗಿನ್‌ನಿಂದ 'ಓಪನ್ ಕರೆಕ್ಷನ್ ವಿಂಡೋ' ಸಮಯದಲ್ಲಿ ಅದೇ ಬಳಕೆದಾರರಿಂದ ಸ್ಥಿರ ಪ್ರವೇಶ ಮಾದರಿಗಳೊಂದಿಗೆ ಮಾಡಲಾಗಿದೆ ಎಂದು ಸೂಚಿಸುತ್ತದೆ'' ಎಂದು ಅದು ಹೇಳಿದೆ.

ಅಭ್ಯರ್ಥಿಯು ಅಬುಧಾಬಿ ಕೇಂದ್ರವನ್ನು ಆಯ್ಕೆ ಮಾಡಿದ್ದರೂ ಸಹ, ಜೂನ್ 19 ರ ಸಂಜೆ (ಪರೀಕ್ಷೆಗೆ ನಿಖರವಾಗಿ 48 ಗಂಟೆಗಳ ಮೊದಲು) ಕೇಂದ್ರವನ್ನು ನಾಗ್ಪುರಕ್ಕೆ ಬದಲಾಯಿಸಲು ಎನ್‌ಟಿಎ ಅನೌಪಚಾರಿಕ ವಿನಂತಿಯನ್ನು ಸ್ವೀಕರಿಸಿತು. ಪರೀಕ್ಷಾ ಸಂಸ್ಥೆಯು ಎನ್‌ಟಿಎ ಸಿಬ್ಬಂದಿ ತಕ್ಷಣ ಬದಲಾವಣೆ ಪ್ರಕ್ರಿಯೆಯನ್ನು ಪ್ರಾರಂಭಿಸಿದರು ಮತ್ತು ಔಪಚಾರಿಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಭ್ಯರ್ಥಿಯ ತಂದೆಯನ್ನು 19ನೇ ತಾರೀಖಿನ ಸಂಜೆ ಸಂಪರ್ಕಿಸಿದರು ಎಂದು ಅದು ತಿಳಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾಹ ಪತ್ನಿ ಸಹಿತ ಅಂಬಾಬಾಯಿ ಮಹಾಲಕ್ಷ್ಮಿಯ ದರ್ಶನ



ಕೊಲ್ಹಾಪುರ, ಜೂ.20 - ದೇಶಾದ್ಯಂತದ ಭಕ್ತರ ಪೂಜಾ ಸ್ಥಳವಾದ ಕೊಲ್ಹಾಪುರದಲ್ಲಿರುವ ಅಂಬಾಬಾಯಿ ಮಹಾಲಕ್ಷ್ಮಿ ಶಕ್ತಿ ಪೀಠಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾಹ ತಮ್ಮ ಕುಟುಂಬದೊಂದಿಗೆ ಇಂದು ಭೇಟಿ ನೀಡಿದರು.ಮಂದಿರದ ಶಿಲಾನ್ಯಾಸ ಕಾರ್ಯಕ್ರಮಕ್ಕೆ ಮೊದಲು, ಅವರು ತಮ್ಮ ಪತ್ನಿ ಸೋನಲ್ ಶಾಹ ಅವರೊಂದಿಗೆ ಮಂದಿರಕ್ಕೆ ಭೇಟಿ ನೀಡಿದರು.

ದಕ್ಷಿಣ ಭಾರತದ ಮೂರೂವರೆ ಶಕ್ತಿ ಪೀಠಗಳಲ್ಲಿ ಒಂದೆಂದು ಪೂಜಿಸಲ್ಪಡುವ ಪ್ರಮುಖ ದೇವಾಲಯವಾದ ಈ ದೇವಾಲಯದ ಬಗ್ಗೆ ಕೇಂದ್ರ ಸಚಿವ ಅಮಿತ್ ಶಾಹ ಅವರ ಭಕ್ತಿ ಪ್ರಸಿದ್ಧವಾಗಿದೆ. ಇಂದು ದೇವಾಲಯಕ್ಕೆ ಆಗಮಿಸಿದ ಬಳಿಕ ಅವರು ದೇವಾಲಯದ ಪ್ರದೇಶದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳ ಜತೆಗೆ ಹೊಸದಾಗಿ ಸ್ಥಾಪಿಸಲಾದ ಚಿನ್ನದ ಕಲಶದ ಪರಿಶೀಲನೆ ನಡೆಸಿ ದೇವಾಲಯದ ದುರಸ್ತಿ ಮತ್ತು ಸೌಂದರ್ಯೀಕರಣದ ಬಗ್ಗೆ ವಿಚಾರಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಉಪಮುಖ್ಯಮಂತ್ರಿ ಏಕನಾಥ್ ಶಿಂದೆ, ಸಾರ್ವಜನಿಕ ಆರೋಗ್ಯ ಸಚಿವ ಹಾಗೂ ಕೊಲ್ಹಾಪುರ ಜಿಲ್ಲೆಯ ಉಸ್ತುವಾರಿ ಸಚಿವ ಪ್ರಕಾಶ್ ಅಬಿಟ್ಕರ್, ಉನ್ನತ ಹಾಗೂ ತಾಂತ್ರಿಕ ಶಿಕ್ಷಣ ಚಂದ್ರಕಾಂತ್ ಪಾಟೀಲ್, ಆಶಿಶ್ ಶೇಲಾರ್, ಇತರ ಸಚಿವರು ಶಾಹ ಜತೆಗಿದ್ದರು.

ಈ ಸಂದರ್ಭದಲ್ಲಿ, ಜಿಲ್ಲಾಧಿಕಾರಿ ಮತ್ತು ಪಶ್ಚಿಮ ಮಹಾರಾಷ್ಟ್ರ ದೇವಸ್ಥಾನ ನಿರ್ವಹಣಾ ಸಮಿತಿಯ ಅಧ್ಯಕ್ಷ ಡಾ. ವಿಜಯ್ ರಾಥೋಡ್ ಶಾಹ ಅವರನ್ನು ಅಂಬಾಬಾಯಿ ಮಹಾಲಕ್ಷ್ಮಿಯ ಪ್ರತಿಮೆ, ಶಾಲು ಮತ್ತು ಶ್ರೀಫಲ ನೀಡುವ ಮೂಲಕ ಸ್ವಾಗತಿಸಿದರು.

ಋಣಾನುಬಂಧ ಟ್ರಸ್ಟ್
Reg. No.: E 19303
40 ವರ್ಷಗಳ ಕಾಲ ಸೇವೆಯಲ್ಲಿ
ಋಣಾನುಬಂಧ ಟ್ರಸ್ಟ್ ನವನೀತ್ ಫೌಂಡೇಶನ್
संचालित ನವನೀತ ಪರಿವಾರದ ಸಹಯೋಗದಿಂದ ನಿರ್ಮಾಣ
NAVNEET
CANCER RADIATION CENTRE
PET CT SCAN CENTRE
New Building Basement 2,
Bhaktivedanta Hospital & Research
Institute, Mira Road East - 401107
Mobile: 6262 98 6060
ಒಂದು ಸಣ್ಣ ದಾನವು ವ್ಯತ್ಯಾಸವನ್ನುಂಟು ಮಾಡುತ್ತದೆ
ಸಣ್ಣ ದಾನ, ದೊಡ್ಡ ಪುಣ್ಯ.
ಈಗಲೇ ದಾನ ಮಾಡಿ
ಕ್ಯಾನ್ಸರ್ ಚಿಕಿತ್ಸೆ ನೀಡಬಹುದಾಗಿದೆ. ಆದಾಗ್ಯೂ, ಆರ್ಥಿಕ ತೊಂದರೆಗಳಿಂದಾಗಿ ಅನೇಕ ರೋಗಿಗಳು ಚಿಕಿತ್ಸೆಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಅವರಿಗೆ ಅನುಕೂಲವಾಗುವಂತೆ, ನಾವು ಅತ್ಯಾಧುನಿಕ ಉಪಕರಣಗಳನ್ನು ಹೊಂದಿರುವ ನಗರದ ಅತ್ಯಂತ ಸುಲಭವಾಗಿ ಪ್ರವೇಶಿಸಬಹುದಾದ ಕ್ಯಾನ್ಸರ್‌ಚಿಕಿತ್ಸಾ ಕೇಂದ್ರವನ್ನು ನಿರ್ವಹಿಸುತ್ತೇವೆ.
ಮುಂಬೈ ಪ್ರದೇಶದಾದ್ಯಂತ, ಹಾಗೆಯೇ ಮಹಾರಾಷ್ಟ್ರ, ಗುಜರಾತ್ ಮತ್ತು ದೇಶದ ಇತರ ಭಾಗಗಳ ರೋಗಿಗಳು ಇದರ ಪ್ರಯೋಜನವನ್ನು ಪಡೆಯುತ್ತಾರೆ. ಯಾವುದೇ ರೋಗಿಯು ಆರ್ಥಿಕ ಸಮಸ್ಯೆಯಿಂದ ಕ್ಯಾನ್ಸರ್ ಚಿಕಿತ್ಸೆಯಿಂದ ವಂಚಿತರಾಗಬಾರದು ಎಂದು ಖಚಿತಪಡಿಸಿಕೊಳ್ಳುವುದು ನಮ್ಮ ಗಂಭೀರ ಬದ್ಧತೆಯಾಗಿದೆ. ಇದನ್ನು ಸಾಧಿಸಲು, ನಮ್ಮ ದತ್ತಿ ಉಪಕ್ರಮವನ್ನು ಮುಂದುವರೆಸಲು ಆರ್ಥಿಕ ಬೆಂಬಲವನ್ನು ನೀಡುವ ದಾನಿಗಳ ಮೇಲೆ ನಾವು ಅವಲಂಬಿತರಾಗಿದ್ದೇವೆ. ದಾನಿಯಾಗಿ, ನಿಮ್ಮ ಸಾಮರ್ಥ್ಯವನ್ನು ಅವಲಂಬಿಸಿ ನೀವು ರೂ. 1,000 ಅಥವಾ ಅದಕ್ಕಿಂತ ಹೆಚ್ಚಿನದನ್ನು ಕೊಡುಗೆ ನೀಡಬಹುದು. ಈ ಕೇಂದ್ರವನ್ನು ಕ್ಯಾನ್ಸರ್ ರೋಗಿಗಳಿಗೆ ಹೆಚ್ಚು ಪ್ರವೇಶಿಸುವಂತೆ ಮಾಡಲು ಒಟ್ಟಾಗಿ ಕೆಲಸ ಮಾಡೋಣ. ನಿಮ್ಮ ದೇಣಿಗೆಯನ್ನು ನೋಂದಾಯಿಸಲು ಇಂದು ನಮ್ಮನ್ನು ಸಂಪರ್ಕಿಸಿ.
TrueBeam radiotherapy system


GE Discovery IQ Gen 2


ನೀವು ಒಬ್ಬ ಲೋಕೋಪಕಾರಿ ಎಂದು ನಾವು ನಂಬುತ್ತೇವೆ. ಬನ್ನಿ, ರೋಗಿಗಳಿಗೆ ಸಹಾಯ ಮಾಡಲು ಮತ್ತು ಸೇವಾ ಮೌಲ್ಯಗಳ ಎತ್ತಿ ಹಿಡಿಯಲು ಋಣಾನುಬಂಧ-ನವನೀತ್ ಜೊತೆ ಕೈಜೋಡಿಸಿ.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ವಸಂತ್ ಗಾಲಿಯಾ - 93222 28134
ನಿಮ್ಮ ದೇಣಿಗೆಯು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 (ಜಿ) ಅಡಿಯಲ್ಲಿ ತೆರಿಗೆ ಕಡಿತಕ್ಕೆ ಅರ್ಹವಾಗಿದೆ. ಇಂದೇ ಈ ಪ್ರಯೋಜನವನ್ನು ಪಡೆದುಕೊಳ್ಳಿ.
CSR ಕಾರ್ಯಕ್ರಮದಡಿಯಲ್ಲಿ ಕಾರ್ಪೊರೇಟ್‌ಗಳು ಸ್ವಯಂಸೇವಕರಾಗಿ ಸೇವೆ ಸಲ್ಲಿಸಲು ಅವಕಾಶಗಳಿವೆ. ನೀವು ಖಂಡಿತವಾಗಿಯೂ ಸೇರಬೇಕು.
Follow Us runanubandhtrust9 runanubandh9 runanubandhtrust.org लि. ऋणानुबंध ट्रस्ट

ಕರ್ನಾಟಕ ಮಲ್ಲ
KARNATAKA MALLA MUMBAI

ವಾರದ ಕಥೆ

ನಂಬಿಕೆ

ಸುಮಿತ್ರಾ ಗುಜರನ್

ಭೂಮಿಯಲ್ಲಿ ಹೆಣ್ಣಾಗಿ ಹುಟ್ಟಿ, ದೊಡ್ಡವಳಾಗಿ ಪ್ರಾಯಕ್ಕೆ ಬಂದ ಮೇಲೆ ಒಂದಲ್ಲ ಒಂದು ದಿನ ತನ್ನ ವಿವಾಹವಾಗುತ್ತದೆ. ವಿವಾಹದ ನಂತರ ತನ್ನನ್ನು ಅಮ್ಮ ಎಂದು ಕರೆಯುವ ಒಂದು ಸಂತಾನವಾದರೂ ಬೇಕೇ ಬೇಕು ಎಂದು ರಾತ್ರಿ ಮಲಗಿದ ಲಕ್ಷ್ಮಿಗೆ ಈ ವಿಚಾರ ಬಂತು. ಇದು ಅವಳ ಮನಸ್ಸಿಗೆ ಹೇಗೆ ಬಂತೆಂಬ ವಿಷಯವೂ ಉಂಟು. ಅವಳಿಗೆ ಹಾಗೂ ಕೃಷ್ಣನಿಗೆ ವಿವಾಹವಾಗಿ ವರ್ಷ 16 ಆಯಿತು. ಇನ್ನೂ ಅವರಿಗೆ ಸಂತಾನ ಪ್ರಾಪ್ತಿಯಾಗಲಿಲ್ಲ.

ಕೃಷ್ಣನ ತಾಯಿ ಭಾಗೀರಥಮ್ಮನಿಗೆ ಸೊಸೆ ಲಕ್ಷ್ಮಿ ಎಂದರೆ ತುಂಬಾ ಪ್ರೀತಿ. ಅವರ ಸಂಬಂಧ ತಾಯಿ-ಮಗಳಂತೆ ಇತ್ತು. ಅವರಿಗೂ ತಾನು ಇಹಲೋಕ ತ್ಯಜಿಸುವ ಮೊದಲು ತನ್ನ ಮೊಮ್ಮಗನೋ, ಮೊಮ್ಮಗಳೋ ಅವರನ್ನು ತಮ್ಮ ಮಡಿಲಲ್ಲಿ ಇಡಬೇಕೆಂಬ ಆಸೆ. ಅವರಿಗೆ ಕೆಲವೊಮ್ಮೆ ತನ್ನ ಮಗನಿಗೆ ಮರು ವಿವಾಹ ಮಾಡಿದರೆ ಅವಳಿಂದಾದರೂ ಸಂತಾನವಾಗಬಹುದೆಂಬ ನಂಬಿಕೆ. ಈ ಮಾತನ್ನು ತಾನು ತನ್ನ ಮಗನಿಗೆ ಹೇಳಿದರೆ ನನ್ನ ಸೊಸೆಗೆ ಎಷ್ಟು ದುಃಖವಾಗಬಹುದೆಂಬ ಹೆದರಿಕೆ ಅವರಿಗೆ. ತಮ್ಮ ಸೊಸೆಯ ಮನಸ್ಸನ್ನು ನೋಯಿಸಬಾರದೆಂಬ ಮನಸ್ಸು. ನಾನು ಹಣ್ಣಾದ ಎಲೆ ಅದು ಯಾವಾಗ ಕೆಳಗೆ ಉದುರುತ್ತದೆ ಎಂದು ಭಗವಂತನಿಗೆ ಗೊತ್ತು. ಅಲ್ಲದೆ ಮನುಷ್ಯನಿಗೆ ಯಾರಿಗೂ ತಿಳಿದಿಲ್ಲ. ಇನ್ನು ನಾನು ತಡ ಮಾಡದೆ ಈ ವಿಷಯವನ್ನು ಮಗನಿಗೆ ಹೇಳಿದರೆ ಒಳ್ಳೆಯದು ಎಂದು ಒಂದು ದಿವಸ ಸಮಯ ನೋಡಿ ತನ್ನ ಮಗ ಕೃಷ್ಣನನ್ನು ಕರೆದರು.

'ಕೃಷ್ಣ ನನಗೆ ನಿನ್ನೊಡನೆ ಒಂದು ಜರೂರು ವಿಷಯ ಮಾತನಾಡಲಿಕ್ಕೆ ಇದೆ' ಎಂದಾಗ ಕೃಷ್ಣ 'ಏನಮ್ಮಾ ಅಷ್ಟು ಜರೂರು ವಿಷಯ'? ಎಂದ. ಆಗ ಭಾಗೀರಥಮ್ಮ 'ನೋಡು ಮಗ, ನಾನು ಇನ್ನು ಹೆಚ್ಚು ಸಮಯ ಬದುಕಿ ಉಳಿಯುವವಳಲ್ಲ. ನಾನು ಇಹಲೋಕ ತ್ಯಜಿಸುವ ಮೊದಲು ನಿನ್ನ ಮಗನನ್ನೋ ಅಥವಾ ಮಗಳನ್ನೋ ನನ್ನ ಮಡಿಲಲ್ಲಿ ಹಾಕಿ ಅದರ ಆನಂದವನ್ನು ನೋಡಬೇಕೆಂಬ ಇಚ್ಛೆ' ಎಂದರು.

'ನೋಡಮ್ಮ ನೀನು ಹೇಳುವುದೆಲ್ಲ ಸರಿ, ನಾನು ಮರು ವಿವಾಹವಾಗುವ ಬಗ್ಗೆ ಲಕ್ಷ್ಮಿಗೆ ಸಮಾಧಾನವಿಲ್ಲದಿದ್ದರೆ ಬೇಡವೇ ಬೇಡ. ನನಗೆ ಅವಳ ಮನಸ್ಸನ್ನು ಅಸಮಾಧಾನ ಮಾಡಿ ವಿವಾಹವಾಗುವ ಇಚ್ಛೆಯಿಲ್ಲ' ಎಂದಾಗ ಭಾಗೀರಥಕ್ಕ 'ಆ ವಿಷಯವನ್ನು ನನಗೆ ಬಿಡು, ನಾನು ನನ್ನ ಸೊಸೆ ಹತ್ತಿರ ಮಾತನಾಡಿ ಅವಳಿಗೆ ಇಷ್ಟವಿದ್ದರೆ ಮಾತ್ರ ನಾನು ನಿನ್ನ ಮರು ವಿವಾಹ ಮಾಡುವುದು' ಎಂದರು.

'ಅಮ್ಮಾ ನನಗೆ ಸಂತಾನವಾಗದಿದ್ದರೆ ಬೇಡ, ನಮ್ಮ ದೇಶದಲ್ಲಿ ಲಕ್ಷಕ್ಕೂ ಮೀರಿ ಸಂತಾನವಿಲ್ಲದವರು ಇದ್ದಾರೆ. ಅವರ ಜೊತೆ ನಾವು ಕೂಡ ಎಂದು ಎಣಿಸಿದ್ದೇನೆ. ಭಗವಂತನ ಲೀಲೆಯನ್ನು ಯಾರು ನೋಡಿದ್ದಾರೆ ಹೇಳಮ್ಮ' ಎಂದಾಗ ಭಾಗಿರಥಕ್ಕ ಸುಮ್ಮನೆ ಮಾತನಾಡದೆ ಒಳಗೆ ಹೋದರು. ಮಧ್ಯಾಹ್ನದ ಊಟವಾದ ಮೇಲೆ ಹೊರಗೆ ಚಾವಡಿಯಲ್ಲಿ ತಲೆದಿಂಬು ಇಟ್ಟು ಒಂದು ಅರ್ಧ ಗಂಟೆ ನಿದ್ದೆ ಮಾಡುವ ಅಭ್ಯಾಸ ಅತ್ತೆ ಸೊಸೆಗೆ.

ಒಂದು ದಿನ ಸಮಯ ನೋಡಿ ಭಾಗಿರಥಕ್ಕ ಇವತ್ತು ಲಕ್ಷ್ಮಿಯ ಹತ್ತಿರ ಕೇಳಿಯೇ ಬಿಡುತ್ತೇನೆ ಎಂದು ಮನಸ್ಸು ಗಟ್ಟಿಮಾಡಿ 'ಲಕ್ಷ್ಮಿ ನಿದ್ದೆ ಬಂತಾ?' ಅಂದಾಗ 'ಇಲ್ಲ ಹಗಲಲ್ಲಿ ಎಂತಹ ನಿದ್ದೆ ....ಸ್ವಲ್ಪ ಆರಾಮ ಮಾಡಲಿಕ್ಕೆ ಮಲಗುವುದಲ್ಲವೇ' ಎಂದಳು.

'ಲಕ್ಷ್ಮಿ ನಿನ್ನ ಹತ್ತಿರ ನನಗೆ ಒಂದು ಜರೂರು ವಿಷಯ ಮಾತನಾಡಲಿಕ್ಕೆ ಇದೆ' ಎಂದಾಗ ಲಕ್ಷ್ಮಿ ಮಲಗಿದ್ದಲ್ಲಿಂದ ಎದ್ದು ಕುಳಿತು 'ಏನಮ್ಮ ಅಂತಹ ವಿಷಯ?' ಎಂದಾಗ ಭಾಗೀರಥಕ್ಕ 'ನಾನು ಹೇಳಿದ ವಿಷಯಕ್ಕೆ ನೀನು ಬೇಸರ ಪಡಬಾರದು, ನಿನ್ನ ಒಪ್ಪಿಗೆ ಇದ್ದರೆ ಮಾತ್ರ ನಾನು ಈ ವಿಷಯ ನಿನ್ನ ಹತ್ತಿರ ಹೇಳುತ್ತೇನೆ' ಎಂದರು.

ಆಗ ಲಕ್ಷ್ಮಿ 'ಹೇಳಿ ಅಮ್ಮ, ನಾನು ಯಾವಾಗಲೂ ನೀವು ಹೇಳಿದ ಮಾತಿಗೆ ಅಡ್ಡ ಬಂದಿದ್ದೇನೆಯೇ?' ಎಂದಾಗ ಭಾಗೀರಥಕ್ಕ ಮಲಗಿದವರು 'ನಾನು ಯಾವ ಜನ್ಮದಲ್ಲಿ ಒಳ್ಳೆಯ ಕೆಲಸ ಮಾಡಿದ್ದೇನೆಯೋ! ಈ ಜನ್ಮದಲ್ಲಿ ನನಗೆ ನನ್ನ ಸ್ವಂತ ಮಗಳಂತೆ ಇರುವ ಸೊಸೆಯನ್ನು ದೇವರು ಕರುಣಿಸಿದ್ದಾನೆ' ಎಂದರು.

'ಅದೆಲ್ಲಾ ಮಾತು ಇರಲಿ, ನಿಮಗೆ ನನ್ನ ಜೊತೆ ಜರೂರು ವಿಷಯ ಮಾತನಾಡಲಿಕ್ಕೆ ಉಂಟೆಂದು ಹೇಳಿದ್ದೀರಲ್ಲ, ಅದನ್ನು ನನಗೆ ಹೇಳಿರಿ' ಎಂದಳು. ಭಾಗೀರಥಕ್ಕ 'ನೋಡು ಲಕ್ಷ್ಮಿ.. ನನಗೆ ವಯಸ್ಸಾಗುತ್ತಾ ಬಂತು, ನಾನು ಇಹಲೋಕ ತ್ಯಜಿಸುವ ಮೊದಲು ನನಗೆ ನನ್ನ ಮೊಮ್ಮಕ್ಕಳನ್ನು ನನ್ನ ಮಡಿಲಲ್ಲಿ ಹಾಕಿ ನೋಡುವ ಭಾಗ್ಯ ಬೇಕೆಂದು ಇಚ್ಛೆ. ನಿನ್ನಿಂದ ಇಷ್ಟು ವರ್ಷ ಅದು ಸಾಧ್ಯವಾಗಲಿಲ್ಲ. ಅದರಿಂದ ನನಗೆ ಏನೂ ನಿನ್ನ ಮೇಲೆ ಬೇಸರವಿಲ್ಲ. ಅದೆಲ್ಲ ಆಗುವುದು ದೇವರ ಇಚ್ಛೆಯಿಂದ. ಈಗ ನಾನು ಹೇಳುವುದೇನೆಂದರೆ ಕೃಷ್ಣನಿಗೆ ಮರು ವಿವಾಹ ಮಾಡಿಸಿ ಅವಳಿಂದ ಒಂದು ಮಗು ಆಗಬಹುದೆಂಬ ಇಚ್ಛೆ. ನನಗೆ ನೀನು ಈ ವಿಷಯದಲ್ಲಿ ಏನು ಹೇಳುತ್ತಿ, ನಿನ್ನ ಮನಸ್ಸಿಗೆ ಸಮಾಧಾನವಿಲ್ಲದಿದ್ದರೆ ನನಗೆ ಬೇಡವೇ ಬೇಡ ಲಕ್ಷ್ಮಿ...'

'ಅಮ್ಮಾ.. ನೀವು ಇಷ್ಟು ಬೇಗ ನಮ್ಮನ್ನು ಬಿಟ್ಟು ಹೋಗಲಾರಿರಿ. ಆದರೂ ನಿಮ್ಮ ಅಂತಿಮ ಇಚ್ಛೆಯನ್ನು ನಾನು ಪೂರ್ಣಗೊಳಿಸುತ್ತೇನೆ. ನಿಮಗೆ ನನ್ನ ಪತಿಯ ಮರು ವಿವಾಹ ಮಾಡುವುದಾದರೆ ನನ್ನಿಂದ ಏನೂ ಅಡ್ಡಿಯಿಲ್ಲ. ನನಗೂ ವಿವಾಹವಾಗಿ ವರ್ಷ 16 ಆಯಿತು. ಇನ್ನು ಕಾಯುವುದಕ್ಕೆ ಏನೂ ಅರ್ಥವಿಲ್ಲ. ನಿಮ್ಮ ಮನಸ್ಸಿನಂತೆ ಆಗಲಿ' ಎಂದಾಗ ಭಾಗೀರಥಕ್ಕನ ಕಣ್ಣಲ್ಲಿ ನೀರು ಬಂತು.

ಸೊಸೆಯನ್ನು ತಬ್ಬಿ ಹಿಡಿದು 'ನನಗೆ ಗೊತ್ತಿತ್ತು ಲಕ್ಷ್ಮೀ,ನೀನು ನನ್ನ ಯಾವ ಮಾತಿಗೂ ಅಡ್ಡ ಬರುವವಳಲ್ಲವೆಂದು'. ಭಾಗೀರಥಕ್ಕನಿಗೆ ತಲೆ ಮೇಲಿನ ದೊಡ್ಡ ಭಾರವನ್ನು ಇಳಿಸಿದಂತಾಯಿತು. ರಾತ್ರಿ ಊಟವಾದ ಮೇಲೆ ಜಗಲಿಯಲ್ಲಿ ಕುಳಿತ ತಮ್ಮ ಮಗನಿಗೆ ಈ ವಿಷಯವನ್ನು ತಿಳಿಸಿದರು. ಇನ್ನು ತಡಮಾಡದೆ ಮಗನ ಮರು ವಿವಾಹ ಮಾಡಿಸಬೇಕೆಂದು ಭಾಗೀರಥಕ್ಕ ತಮ್ಮ ಪರಿಚಯದಲ್ಲಿಯೇ ಇದ್ದ ಒಬ್ಬ ಹುಡುಗಿಯನ್ನು ತಮ್ಮ ಮಗನಿಗೆ ವಿವಾಹ ಮಾಡಿಸಲು ನಿಶ್ಚಯಿಸಿದರು. ಹುಡುಗಿಯ ಹೆಸರು ಶಾಂತ. ಒಂದು ಒಳ್ಳೆಯ ದಿನ ಗೊತ್ತು ಮಾಡಿ ಸರಳ ರೀತಿಯಲ್ಲಿ ತಮ್ಮ ಮಗನ ಹಾಗೂ ಶಾಂತಳ ವಿವಾಹ ಮಾಡಿ ಮುಗಿಸಿದರು.

ಭಾಗೀರಥಕ್ಕ ಹುಡುಗಿಯನ್ನು ಮನೆ ತುಂಬಿಸುವ ಪದ್ಧತಿಗೆ ಎಲ್ಲಾ ತಯಾರು ಮಾಡಿಟ್ಟರು. ತಮ್ಮ ಸೊಸೆಯನ್ನು ಕರೆದು 'ಲಕ್ಷ್ಮೀ ನೀನೇ ಹುಡುಗಿಗೆ ಆರತಿ ಮಾಡಿ ಒಳಗೆ ಬರುವಂತೆ ಮಾಡಬೇಕೆಂದು' ಹೇಳಿದರು. ಅತ್ತೆಯ ಮಾತು ಕೇಳಿ ಲಕ್ಷ್ಮೀ ಸಂತೋಷದಿಂದ ಒಪ್ಪಿಕೊಂಡಳು. ಮದುಮಗಳು ಮನೆಗೆ ಬರಲು ಒಂದು ಐದು ನಿಮಿಷ ಇರುವ ಮೊದಲೇ ಲಕ್ಷ್ಮೀ ಆರತಿಯ ತಟ್ಟೆಯನ್ನು ಹಿಡಿದು ಮನೆಯ ಬಾಗಿಲಲ್ಲಿ ಬಂದು ನಿಂತಳು. ನಿಂತವಳಿಗೆ ಸ್ವಲ್ಪ ತಲೆ ತಿರುಗಿದಂತಾಯಿತು. ತಾನು ಆರತಿ ಬಟ್ಟಲನ್ನು ಹಿಡಿದು ನಿಂತರೆ ಎಲ್ಲಿಯಾದರೂ ಬಿದ್ದರೆ ಅಪಶಕುನವಾಗುವುದೆಂದು ಎಣಿಸಿ ತನ್ನ ನೆರೆಕರೆಯ ಸೀತಾ ಎಂಬ ಗೃಹಿಣಿಯ ಕೈಯಲ್ಲಿ ಆರತಿಯ ಬಟ್ಟಲನ್ನು ಕೊಟ್ಟು ಒಂದೆರಡು ನಿಮಿಷವಾಗಿರಬಹುದು.... ಲಕ್ಷ್ಮೀ ನಿಂತಲ್ಲೇ ಕೆಳಗೆ ಬಿದ್ದುಬಿಟ್ಟಳು.

ಕೂಡಿದವರು ಎಲ್ಲರೂ ಲಕ್ಷ್ಮಿಯನ್ನು ಎಬ್ಬಿಸಲು ಪ್ರಯತ್ನ ಮಾಡಿದರು. ಲಕ್ಷ್ಮೀ ಕಣ್ಣು ಬಿಡಲೇ ಇಲ್ಲ. ಕೃಷ್ಣನಿಗೆ ಗಾಬರಿಯಾಗಿ ಅಲ್ಲಿ ಹತ್ತಿರದಲ್ಲಿದ್ದ ಡಾಕ್ಟರ್‌ರನ್ನು ಕರೆತರಲು ಓಡಿ ಹೋದ. ಡಾಕ್ಟರ್‌ಗೆ ಲಕ್ಷ್ಮಿಯ ವಿಷಯವನ್ನೆಲ್ಲ ತಿಳಿಸಿದ ಕೃಷ್ಣ. ವಿಷಯವನ್ನೆಲ್ಲ ತಿಳಿದ ಡಾಕ್ಟರ್ ಕೃಷ್ಣನ ಮನೆಗೆ ಬಂದು ಲಕ್ಷ್ಮಿಯನ್ನು ಪರೀಕ್ಷಿಸಿ ನಗುಮುಖದಿಂದ ಹೊರಗೆ ಬಂದು 'ನೀವು ಎಲ್ಲರೂ ಲಕ್ಷ್ಮಿಯ ವಿಷಯದಲ್ಲಿ ಬೇಸರಿಸಬೇಡಿರಿ. ನಿಮಗೆಲ್ಲರಿಗೂ ನಾನೊಂದು ಸಿಹಿ ವಿಷಯ ಹೇಳುತ್ತೇನೆ. ಲಕ್ಷ್ಮೀ ಗರ್ಭಿಣಿ' ಎಂದರು.

ಆಗ ಕೃಷ್ಣ 'ಅಯ್ಯೋ ದೇವರೇ ನನ್ನಿಂದ ಇಷ್ಟು ದೊಡ್ಡ ತಪ್ಪು ಹೇಗಾಯಿತು, ನನಗೆ ಮರು ವಿವಾಹ ಆಗುವ ಮನಸ್ಸೇ ಇರಲಿಲ್ಲ. ಅಮ್ಮನ ಮಾತು ಕೇಳಿ ನಾನು ಒಪ್ಪಿದ್ದು' ಎಂದು ಒಂದೇ ಸಮನೆ ತನ್ನ ತಲೆಯನ್ನು ಗೋಡೆಗೆ ಬಡಿಯ ತೊಡಗಿದ. ಮಗನ ಈ ಅವಸ್ಥೆಯನ್ನು ನೋಡಿ ಭಾಗೀರಥಕ್ಕ ಕೂಡ ಒಂದೇ ಸಮನೆ ಅಳತೊಡಗಿದರು. ಮನೆಗೆ ಬಂದ ನೆಂಟರೆಲ್ಲ ತಾಯಿ -ಮಗನನ್ನು ಸಂತೈಸಿ, 'ಇದೆಲ್ಲ ಭಗವಂತನ ಲೀಲೆ. ಮದುವೆಯಾಗಿ ಬಂದ ಹುಡುಗಿಯನ್ನು ಕಳುಹಿಸುವಂತಿಲ್ಲ' ಎಂದರು. ಸ್ವಲ್ಪ ಹೊತ್ತಿನಲ್ಲಿ ಲಕ್ಷ್ಮೀ ಎದ್ದು ಕುಳಿತಳು.

ಕುಳಿತ ಲಕ್ಷ್ಮಿಯನ್ನು ಭಾಗೀರಥಕ್ಕ ಅಪ್ಪಿ ಹಿಡಿದು 'ನಾನು ಎಂಥ ಕೆಟ್ಟ ಕೆಲಸ ಮಾಡಿದೆ ಲಕ್ಷ್ಮಿ....' ಎಂದು ಅಳಲು ಶುರು ಮಾಡಿದರು.

ಆಗ ಲಕ್ಷ್ಮೀ 'ಅತ್ತೆ ನೀವು ಇನ್ನು ಕಣ್ಣೀರು ಹಾಕುವುದು ಬೇಡ. ನಾನು ಹಾಗೂ ಶಾಂತ ನಿಮ್ಮ ಇಬ್ಬರು ಮಗಳೆಂದು ತಿಳಿಯಿರಿ. ನಾನು ಶಾಂತಳನ್ನು ನನ್ನ ತಂಗಿಯೆಂದೇ ತಿಳಿಯುತ್ತೇನೆ' ಎಂದಾಗ ಕೃಷ್ಣ 'ನನಗೂ ತಿಳಿದಿದೆ. ಲಕ್ಷ್ಮೀ ನೀನು ಶಾಂತಳನ್ನು ಪ್ರೀತಿಯಿಂದ ನೋಡಿಕೊಳ್ಳುವೆ' ಎಂದ.

ಆಗ ಶಾಂತ 'ಅಕ್ಕ ಇನ್ನು ನಾನು ಮನೆಗೆ ಬಂದಿದ್ದೇನಲ್ಲ.. ಮನೆ ಕೆಲಸ, ಅಡುಗೆ ಕೆಲಸವನ್ನೆಲ್ಲ ನಾನೇ ಮಾಡುತ್ತೇನೆ. ನೀವು ಆರಾಮ ಮಾಡಿ ಅಕ್ಕ' ಎಂದಾಗ ಭಾಗೀರಥಿಯಕ್ಕನಿಗೆ ತುಂಬಾ ಸಂತೋಷವಾಯಿತು.

ನವಮಾಸ ಕಳೆದು ಲಕ್ಷ್ಮೀ ಒಂದು ಶುಭದಿನದಲ್ಲಿ ಒಂದು ಸುಂದರವಾದ ಗಂಡು ಮಗುವಿಗೆ ಜನ್ಮವಿತ್ತಳು. ತಾಯಿ ಮಗುವಿಗೆ ಆದ ಸಂತೋಷಕ್ಕೆ ಪಾರವೇ ಇಲ್ಲ. ಮಗುವಿಗೆ 'ಸೂರ್ಯ'ನೆಂದು ನಾಮಕರಣ ಮಾಡಿದರು ದಂಪತಿ. ಕೃಷ್ಣನಿಗೆ ಮಗುವಿನ ಜತೆ ಇದ್ದರೆ ಊಟ ತಿಂಡಿಯ ಗೊಡವೆ ಕೂಡ ಇಲ್ಲ. ಸೂರ್ಯನಿಗೆ ಐದು ವರ್ಷವಾಗುತ್ತಲೇ ಆತನನ್ನು ಶಾಲೆಗೆ ಸೇರಿಸಿದರು. ಶಾಲೆಯಲ್ಲಿ ತನ್ನ ಸಹಪಾಠಿಗಳಿಗೆ ಹಾಗೂ ಮಾಸ್ತರರಿಗೆ ಸೂರ್ಯನೆಂದರೆ ತುಂಬಾ ಪ್ರೀತಿ. ಊರಿನವರಿಗೆಲ್ಲಾ ಸೂರ್ಯನೆಂದರೆ ಮಕ್ಕಳಿಗೆಲ್ಲಾ ಒಂದು ಮಾದರಿ ಎಂದು ತಿಳಿಯುತ್ತಿದ್ದರು.

ಸೂರ್ಯನ ಮಾಧ್ಯಮಿಕ ಶಿಕ್ಷಣ ಮುಗಿದು ಈಗ ಕಾಲೇಜಿಗೆ ಹೋಗಲಾರಂಭಿಸಿದ. ಕಾಲೇಜಿಗೆ ಹೋಗುವ ಸಮಯದಲ್ಲಿ ತನ್ನ ಚಿಕ್ಕಮ್ಮ ಶಾಂತ ಗರ್ಭಿಣಿಯಾದಳು. ಇವಳು ಗರ್ಭಿಣಿಯಾದ ಸಂತೋಷ ಎಲ್ಲರಿಗಿಂತಲೂ ಲಕ್ಷ್ಮೀ ಸಂಭ್ರಮಪಟ್ಟಳು. ಯಾಕೆಂದರೆ ತನ್ನ ಮಗ ಸೂರ್ಯನಿಗೆ ತಂಗಿಯೋ, ತಮ್ಮನೋ ಬಂದರೆ ಅವರ ಜೊತೆ ಸಮಯ ಕಳೆಯಲು ಒಳ್ಳೆಯದಾಗುವುದೆಂದು.

ಶಾಂತಳಿಗೆ ನವಮಾಸ ಮುಗಿಯುವುದರೊಳಗೆ ಅಂದರೆ ಎಂಟು ತಿಂಗಳಲ್ಲಿ ಅವಳ ಹೆರಿಗೆಯಾಯಿತು. ಮಗುವಿನ ಹಾಗೂ ಬಾಣಂತಿಯ ಕೆಲಸವನ್ನು ಲಕ್ಷ್ಮಿಯೇ ಮಾಡತೊಡಗಿದಳು. ಈಗೀಗ ಭಾಗೀರಥಕ್ಕನ ಆರೋಗ್ಯ ಸರಿ ಇರುತ್ತಿರಲಿಲ್ಲ. ವಯಸ್ಸು ಕೂಡ ಆಯಿತು. ಒಂದು ದಿನ ಬಚ್ಚಲು ಮನೆಗೆ ಸ್ನಾನಕ್ಕೆ ಹೋದವರು ಕಾಲು ಜಾರಿ ಬಿದ್ದುಬಿಟ್ಟರು. ಬಿದ್ದವರು ಮೇಲೆ ಏಳಲೇ ಇಲ್ಲ.

ಅತ್ತೆಯ ನಿಧನದ ನಂತರ ಮನೆ ಕೆಲಸವೆಲ್ಲ ಲಕ್ಷ್ಮಿಯ ಹೆಗಲ ಮೇಲೆ ಬಿತ್ತು. ಶಾಂತಳ ಮಗುವಿಗೆ 'ರವಿ' ಎಂದು ನಾಮಕರಣ ಮಾಡಿದರು. ಮಕ್ಕಳು ನೋಡುತ್ತಿದ್ದಂತೆ ದೊಡ್ಡವರಾದರು. ಸೂರ್ಯ ಈಗ ಕಾಲೇಜಿನ ಕಡೆಯ ವರ್ಷದಲ್ಲಿದ್ದ. ರವಿ ಎಂಟನೇ ತರಗತಿಯಲ್ಲಿ ಓದುತ್ತಿದ್ದ.

ಒಂದು ದಿವಸ ಮನೆಯಲ್ಲಿ ಒಂದು ದುರ್ಘಟನೆ ನಡೆಯಿತು. ರಾತ್ರಿ ಊಟ ಮಾಡಿ ಮಲಗಿದ ರವಿಗೆ ಸಾಧಾರಣ 12 ಗಂಟೆಯ ಹೊತ್ತಿಗೆ ಜ್ವರ ಶುರುವಾಯಿತು. ಅವನ ಪಕ್ಕದಲ್ಲಿ ಸೂರ್ಯ ಮಲಗುತ್ತಿದ್ದ. ಗಾಢವಾದ ನಿದ್ರೆಯಲ್ಲಿದ್ದ ಸೂರ್ಯನಿಗೆ ರವಿಯ ನರಳುವ ಸ್ವರ ಕೇಳಿ ಕೂಡಲೇ ಎಚ್ಚೆತ್ತು ತಮ್ಮನ ಹೆಸರಿಡಿದು ಕರೆದಾಗ ರವಿ ಅಲುಗಾಡಲೇ ಇಲ್ಲ. ಮೈಮುಟ್ಟಿ ಎಬ್ಬಿಸಿದಾಗ ಮೈ ಕೆಂಡದಂತೆ ಉರಿಯುತ್ತಿತ್ತು. ಕೂಡಲೇ ಅಮ್ಮ, ಅಪ್ಪ ಹಾಗೂ ಚಿಕ್ಕಮ್ಮನನ್ನು ಕೂಗಿ ಕರೆದ ಸೂರ್ಯ. ಇವನ ಕರೆಯನ್ನು ಕೇಳಿ ಮೂವರೂ ಎದ್ದು ರವಿ ಮತ್ತು ಸೂರ್ಯನ ಮಲಗುವ ಕೋಣೆಗೆ ಬಂದಾಗ ಸೂರ್ಯನ ತೊಡೆಯ ಮೇಲೆ ತಲೆ ಇಟ್ಟು ರವಿ ಮಲಗಿದ್ದ. 'ಅಮ್ಮ ಅಪ್ಪ ರವಿಗೆ ಕೆಂಡದಂತೆ ಜ್ವರ ಬರುತ್ತಿದೆ' ಎಂದಾಗ ಶಾಂತ ಅಳಲು ಶುರು ಮಾಡಿದಳು.

'ಚಿಕ್ಕಮ್ಮ ನೀವು ಅಳುವುದನ್ನು ನಿಲ್ಲಿಸಿರಿ, ಬೆಳಗಾಗುತ್ತಲೇ ನಾನು ರವಿಯನ್ನು ಡಾಕ್ಟರ್‌ರಲ್ಲಿ ಕರೆದುಕೊಂಡು ಹೋಗುತ್ತೇನೆ. ಅಪ್ಪ ನೀವು ನನ್ನ ಮೇಲೆ ನಂಬಿಕೆ ಇಡಿ, ಬೇಸರಿಸಬೇಡಿ' ಎಂದು ಅವರನ್ನು ಸಮಾಧಾನ ಪಡಿಸಿದ.

ಮರುದಿನ ಬೆಳಗಾಗುತ್ತಲೇ ರವಿಯನ್ನು ಸೂರ್ಯ ಡಾಕ್ಟರ್‌ರಲ್ಲಿಗೆ ಕರೆದುಕೊಂಡು ಹೋದ. ರವಿಯನ್ನು ಪರೀಕ್ಷಿಸಿದ ಡಾಕ್ಟರ್ ಸೂರ್ಯನ ಹತ್ತಿರ 'ನೋಡು ಸೂರ್ಯ, ಇದು ಸಾಮಾನ್ಯ ಜ್ವರವಲ್ಲ. ಇವನನ್ನು ದೊಡ್ಡ ಆಸ್ಪತ್ರೆಗೆ ಸೇರಿಸು. ಅಲ್ಲಿ ಎಲ್ಲಾ ವ್ಯವಸ್ಥೆ ಹಾಗೂ ದೊಡ್ಡ ದೊಡ್ಡ ಡಾಕ್ಟರ್ ಇದ್ದಾರೆ' ಎಂದಾಗ ಸೂರ್ಯ 'ಸರಿ' ಎಂದು ಅಲ್ಲಿಂದ ಕೂಡಲೇ ಹತ್ತಿರದ ಹೆಸರಾಂತ ಆಸ್ಪತ್ರೆಗೆ ಸೇರಿಸಿದ.

ರವಿಯನ್ನು ಆಸ್ಪತ್ರೆಗೆ ದಾಖಲಿಸಿದ ಮೇಲೆ ಸೂರ್ಯ ತನ್ನ ಅಪ್ಪ ಅಮ್ಮ ಹಾಗೂ ಚಿಕ್ಕಮ್ಮನಿಗೆ ವಿಷಯ ತಿಳಿಸಿದ. ವಿಷಯ ತಿಳಿದ ಮೂವರೂ ಆಸ್ಪತ್ರೆಗೆ ಬಂದರು. ರವಿಗೆ ಜ್ವರ ಇನ್ನೂ ಬಿಟ್ಟಿರಲಿಲ್ಲ. ಹೆಸರಾಂತ ಡಾಕ್ಟರ್ ಬಂದು ಪರೀಕ್ಷಿಸಿ ಮದ್ದು ಕೊಟ್ಟರೂ ಬಂದ ಜ್ವರ ಬಿಡಲೇ ಇಲ್ಲ. 8 ದಿನದ ನಂತರ ಜ್ವರ ಸ್ವಲ್ಪ ಕಡಿಮೆ ಆಯಿತು. ಮನೆಯವರಿಗೆಲ್ಲ ಸ್ವಲ್ಪ ಸಮಾಧಾನವಾಯಿತು.

ಬೆಳಿಗ್ಗೆ ಎದ್ದ ರವಿಗೆ ಬಚ್ಚಲು ಮನೆಗೆ ಹೋಗಬೇಕಿತ್ತು. ಮಂಚದಿಂದ ಎದ್ದವನು ಕಾಲನ್ನು ಕೆಳಗೆ ಇಡುವಾಗ ಬಲಕಾಲನ್ನು ಕೆಳಗೆ ಇಡಲು ಆಗಲೇ ಇಲ್ಲ. ತನ್ನ ಅಣ್ಣನನ್ನು ಕರೆದು 'ಅಣ್ಣ ನನಗೆ ನನ್ನ ಕಾಲನ್ನು ಕೆಳಗಿಡಲು ಆಗುವುದಿಲ್ಲ. ಕಾಲಿಗೆ ಬಲವಿಲ್ಲದ ಹಾಗೆ ಆಗುತ್ತದೆ' ಎಂದಾಗ ಸೂರ್ಯನ ಎದೆ ಝಲ್ಲೆಂದಿತು. ಅವನನ್ನು ಎತ್ತಿ ಬಚ್ಚಲ ಮನೆಗೆ ಕೊಂಡುಹೋಗಿ ಬಹಿರ್ದೆಸೆ ಹಾಗೂ ಮುಖ ತೊಳೆಸಿ ಹಾಗೆ ಎತ್ತಿಕೊಂಡು ಬಂದು ಮಂಚದಲ್ಲಿ ಮಲಗಿಸಿ ಡಾಕ್ಟರ್ ಅಲ್ಲಿಗೆ ಹೋಗಿ ಈ ವಿಷಯ ತಿಳಿಸಿ ಬರುತ್ತೇನೆ ಎಂದು ಡಾಕ್ಟರ್‌ರನ್ನು ಕರೆತರಲು ಹೋದ ಸೂರ್ಯ.

ರವಿಯ ಪರಿಸ್ಥಿತಿಯನ್ನು ನೋಡಿ ಲಕ್ಷ್ಮಿ, ಕೃಷ್ಣ ಹಾಗೂ ಶಾಂತ ಅತ್ತದ್ದೇ ಅತ್ತದ್ದು. 'ಅಪ್ಪ ಅಮ್ಮ ನೀವು ರವಿಯ ವಿಷಯದಲ್ಲಿ ಏನೂ ಬೇಸರಿಸಬೇಡಿ. ಇಲ್ಲಿ ಇವನ ಶುಶ್ರೂಷೆ ಸರಿಯಾಗದಿದ್ದರೆ ನಾನು ಅವನನ್ನು ಹೊರದೇಶಕ್ಕೆ ಕರೆದುಕೊಂಡು ಹೋಗಿ ಅವನ ಕಾಲನ್ನು ಸರಿಪಡಿಸಿ ತರುತ್ತೇನೆ. ನನ್ನ ಮೇಲೆ ನಿಮಗೆ ನಂಬಿಕೆ ಇದೆಯಲ್ಲ' ಎಂದಾಗ ಲಕ್ಷ್ಮಿ ಮತ್ತು ಕೃಷ್ಣ 'ನಮಗೆ ನಿನ್ನ ಮೇಲೆ ನಂಬಿಕೆ ಇದೆ ಮಗಾ.. ನಿನಗೆ ಹೇಗೆ ಸರಿ ತೋರುತ್ತದೋ ಹಾಗೆ ಮಾಡು. ನನ್ನ ಅಪ್ಪಣೆ ಪಡೆಯುವ ಅಗತ್ಯವಿಲ್ಲ' ಎಂದರು. ಸರಿ ಎಂದ ಸೂರ್ಯ.

ಒಂದು ಬೆಳಿಗ್ಗೆ ಆಸ್ಪತ್ರೆಯ ಪ್ರಸಿದ್ಧ ಡಾಕ್ಟರ್ ಸೂರ್ಯನನ್ನು ಬರಹೇಳಿದರು. ವಿಷಯ ಏನೆಂದು ತಿಳಿದುಕೊಂಡು ಬರಲಿಕ್ಕೆ ಸೂರ್ಯ ಡಾಕ್ಟರಲ್ಲಿಗೆ ಹೋದ. ಡಾಕ್ಟರ್‌ಸೂರ್ಯನನ್ನು ನೋಡಿ 'ನಿಮ್ಮ ತಮ್ಮನ ಕಾಲು ಅವನು ಜೀವಂತವಿರುವ ತನಕ ಸರಿಹೋಗಲಿಕ್ಕಿಲ್ಲ. ಈಗೀಗ ಕಾಲು ಸರಿಯಾಗಿ ನಡೆಯಲು ಆಗದಿದ್ದರೂ ನಡೆದುಕೊಂಡು ಹೋಗಲು ವ್ಯವಸ್ಥೆ ಇದೆ. ನಿಮ್ಮ ತಮ್ಮನ ಕಾಲಿನ ಪರಿಸ್ಥಿತಿಗೆ ಪಾರ್ಶ್ವವಾಯು ಎನ್ನುತ್ತಾರೆ. ಅವನಿಗೆ ಮುಂದಕ್ಕೆ ಎಷ್ಟು ಕಲಿಯಲಿಕ್ಕೆ ಉಂಟಾ ಅಷ್ಟು ಕಲಿಯಬಹುದು' ಎಂದು ಸಮಾಧಾನ ಪಡಿಸಿದರು ಡಾಕ್ಟರ್.

ಡಾಕ್ಟರ್‌ಹೇಳಿದ ವಿಷಯವನ್ನೆಲ್ಲ ತನ್ನ ತಂದೆ ತಾಯಿಗೆ ತಿಳಿಸಿದ ಸೂರ್ಯ. ಸೂರ್ಯ ಹೇಳಿದ ವಿಷಯವನ್ನು ಕೇಳಿ ಕೃಷ್ಣ 'ನೀನು ಹೇಳುವುದೆಲ್ಲ ಸರಿ ಸೂರ್ಯ, ನಾಳೆ ನೀನು ವಿವಾಹವಾಗಿ ನಿನ್ನ ಕುಟುಂಬದ ಮೇಲ್ವಿಚಾರಣೆ ನೋಡುವುದರಲ್ಲಿ ಮಗ್ನವಾಗಿರುವಿ. ಜೀವನಪೂರ್ತಿ ರವಿಯನ್ನು ನೋಡಲಿಕ್ಕೆ ನಿನಗೆ ಆಗುತ್ತದೆಯೆ? ನಾವು ಇನ್ನು ಬದುಕಿದರೆ ಎಷ್ಟು ಸಮಯ ಬದುಕುತ್ತೇವೆ. ನಾವು ಜೀವಂತ ಇರುವಷ್ಟು ದಿನ ಅವನನ್ನು ನೋಡಿಕೊಳ್ಳುತ್ತೇವೆ. ಮತ್ತೆ ಅವನ ಜೀವನೋಪಾಯ ಹೇಗೆ ಆಗುವುದು?'ಎಂದರು.

ಆಗ 'ಅಪ್ಪ ,ನಾನು ಮೊದಲೇ ನಿಮಗೆ ಹೇಳಿದ್ದೇನೆ, ನನ್ನ ಮೇಲೆ ನಂಬಿಕೆ ಇಡಿ ಅಂತ. ನಾನು ನನ್ನ ತಮ್ಮನಿಗೆ ಏನಾದರೂ ಜೀವನೋಪಾಯ ಮಾಡದೆ ನಾನು ವಿವಾಹವಾಗುವುದಿಲ್ಲ' ಎಂದಾಗ ಕೃಷ್ಣ ಸೂರ್ಯನನ್ನು ತಬ್ಬಿ ಹಿಡಿದನು.

ವಾರದ ಕವನ

ಪ್ರತಿದಿನ ಮಾಡಿ ಯೋಗ

ಶರೀರ, ಮನಸ್ಸು ಮತ್ತು ಆತ್ಮ ಒಟ್ಟಿಗೆ ಒಂದೆಡೆ
ಸೇರಿಸಿ ಮಾಡುವ ಕಾರ್ಯವೇ ಯೋಗ
ಇದರಲ್ಲಿ ಅಡಗಿದೆ ಶರೀರದ ಪ್ರತಿಯೊಂದು ಅಂಗಾಂಗದ ಪ್ರಯೋಗ
ಇವತ್ತು ನಾವೆಲ್ಲ ನೆನಪಿಸುವ ಮಹರ್ಷಿ ಪತಂಜಲಿ ಅವರನ್ನು
ಇವರು ಸಂಕಲಿಸಿದ್ದಾರೆ ಯೋಗ ಸೂತ್ರಗಳನ್ನು
ತಿರುಮಲೈ ಕೃಷ್ಣಮಾಚಾರ್ಯ ಇದ್ದಕ್ಕೆ ಕೊಟ್ಟರು ಆಧುನಿಕ ಮರುರೂಪ
ನಮ್ಮ ಮುಖಂಡರು ದೇಶ - ವಿದೇಶದೊಳಗೆ ಇದನ್ನು ಪಸರಿಸಿ
ಜನಪ್ರಿಯಗೊಳಿಸಿದರು ಹಚ್ಚಿ ದೀಪ
ನಮ್ಮ ಮೋದಿಯವರು ಘೋಷಿಸಿದರು 21 ಜೂನ್ ಅನ್ನು
ಅಂತಾರಾಷ್ಟ್ರೀಯ ಯೋಗ ದಿನವೆಂದು
ನಾವೆಲ್ಲರೂ ಕಡ್ಡಾಯವಾಗಿ ಮಾಡಲೇಬೇಕು ಯೋಗ ಇಂದು
ಯೋಗ ಅತ್ಯಂತ ಯೋಗ್ಯ ಔಷಧ ನಮ್ಮ ಮಾನಸಿಕ ಸ್ವಾಸ್ಥ್ಯಕ್ಕೆ
ಸರಳ ಉಪಾಯ ನಮ್ಮ ಶಾರೀರಕ ಅಸ್ವಾಸ್ಥ್ಯಕ್ಕೆ
ಇದನ್ನು ದಿನನಿತ್ಯ ಮಾಡಲು ನಮ್ಮ ಶರೀರ ಆಗುತ್ತೆ ಫ್ಲೆಕ್ಸಿಬಲ್
ಮೆಡಿಟೇಶನ್‌ನಿಂದ ನಮ್ಮ ಮೆದುಳು ಇರುತ್ತೆ ಕೂಲ್
ಶೀತವಾಗಲಿ ಅಥವಾ ಹೃದಯಾಘಾತ ಯೋಗ ಕೊಡುತ್ತದೆ ತಾತ್ಕಾಲಿಕ ಪರಿಹಾರ
ನಮ್ಮ ಶರೀರ ಇರುತ್ತೆ ಮಾಡಲು ಯಾವುದೇ ರೀತಿಯ ಕೆಲಸ ಸ್ಫೂರ್ತಿಕಾರ
ಇದರ ಪರಿಕಲ್ಪನೆ ಮತ್ತು ಅಭ್ಯಾಸವು ಹುಟ್ಟಿಕೊಂಡಿದೆ
ಭಾರತದಿಂದ ಇಂದು ನಮ್ಮ ಎದೆ ಉಬ್ಬಿದೆ ಹೆಮ್ಮೆಯಿಂದ
ನಿಮ್ಮೆಲ್ಲರಲ್ಲಿ ಕೋರಿಕೆ, ಪ್ರತಿದಿನ ಮಾಡಿ ಯೋಗ
ಇಡೀ ಐದಾರು ಅಡಿ ದೂರ ಯಾವುದೇ ರೋಗ

ಡಾ। ರೇಖಾ ಕೆ. ಶೆಟ್ಟಿ, ಬೊರಿವಲಿ.

ಶಿವಸೇನೆಯ ಎರಡೂ ಬಣಗಳು ಒಗ್ಗೂಡಬೇಕು; ಬಚ್ಚು ಕಡು

ಛತ್ರಪತಿ ಸಂಭಾಜಿನಗರ, ಜೂ.20 - ಶಿವಸೇನೆಯ ಎರಡೂ ಬಣಗಳು ಮತ್ತೆ ಒಂದಾಗುವಂತೆ ಏಕನಾಥ್ ಶಿಂದೆ ನೇತೃತ್ವದ ಶಿವಸೇನೆಯ ನಾಯಕ ಬಚ್ಚು ಕಡು ಶನಿವಾರ ಮನವಿ ಮಾಡಿದರು. ಶಿಂದೆ ನೇತೃತ್ವದ ಶಿವಸೇನೆ ಮತ್ತು ಉದ್ಧವ್ ಠಾಕ್ರೆ ನೇತೃತ್ವದ ಪ್ರತಿಸ್ಪರ್ಧಿ ಶಿವಸೇನೆ (ಯುಬಿಟಿ) ಪಕ್ಷದ 60 ನೇ ಸಂಸ್ಥಾಪನಾ ದಿನವನ್ನು ಆಚರಿಸಿದ ಒಂದು ದಿನದ ಬಳಿಕ ಮಾಜಿ ಶಾಸಕ ಕಡು ಅವರು ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ವೇಳೆ ಈ ಮನವಿ ಮಾಡಿದರು.

ಮಾಜಿ ಸಚಿವರಾದ ಕಡು ಇತ್ತೀಚೆಗೆ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಪಕ್ಷವನ್ನು ಸೇರಿದ ಬಳಿಕ ವಿಧಾನ ಪರಿಷತ್ತಿಗೆ ಆಯ್ಕೆಯಾದರು.

ಎರಡೂ ಬಣಗಳ ಉನ್ನತ ನಾಯಕರು ಮತ್ತೆ ಒಂದಾಗಲು ಕೆಲವು ಹೆಜ್ಜೆಗಳನ್ನು ಮುಂದಿಡಬೇಕು.ಆದರೆ ಇದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು. ಶಿವಸೇನೆಯ ಬಲ ಹೇಗೆ ಹೆಚ್ಚಾಗುತ್ತದೆ ಎಂಬುದರ ಕುರಿತು ಎಲ್ಲರೂ ಯೋಚಿಸಬೇಕು ಎಂದು ನಾನು ಭಾವಿಸುತ್ತೇನೆ. ಉದ್ಧವ್ ಠಾಕ್ರೆ ಮತ್ತು ಏಕನಾಥ್ ಶಿಂದೆ ಕೆಲವು ವಿಷಯಗಳನ್ನು ಕೈಬಿಟ್ಟು ಒಟ್ಟಾಗಿ ಕೆಲಸ ಮಾಡಬೇಕು ಎಂದು ಅವರು ಹೇಳಿದರು. ಈಗ ಇದು ಸಾಧ್ಯವೇ ಎಂದು ಕೇಳಿದಾಗ ಕಡು ಅವರು,ಎಲ್ಲರೂ ತಮ್ಮ ಸ್ಥಾನದಲ್ಲಿ ದೃಢವಾಗಿರುವುದರಿಂದ ಅದು ಈಗ ಆಗದಿರಬಹುದು ಎಂದು ಕಡು ತಿಳಿಸಿದರು. ಶಿವಸೇನೆ ಮಣ್ಣಿನ ಮಕ್ಕಳ ಸಂಘಟನೆಯಾಗಿರುವುದರಿಂದ ಅದು ಮುಖ್ಯವಾಗಿದೆ. ಒಟ್ಟಿಗೆ ಬರುವ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮಾಡಬೇಕು. ಇದು ನನ್ನ ವೈಯಕ್ತಿಕ ಭಾವನೆ....ಇದು ಕೆಲವು ಪಕ್ಷದ ಕಾರ್ಯಕರ್ತರ ಭಾವನೆಯೂ ಆಗಿರಬಹುದು. ರಾಜ್ಯದಲ್ಲಿ 'ಮಹಾರಾಷ್ಟ್ರ ಧರ್ಮ'ಕ್ಕೆ ಪರ್ಯಾಯವಿಲ್ಲ ಎಂದು ಅವರು ಹೇಳಿದರು.

ಸುಡೊಕು 1829

4	6		3		8	9		7
	1		9		6		5	4
						8		
	4		5				8	
2		5		4		6		1
	3				1		7	
		3						
5	9		7		2		6	
7		6	4		3		9	2

MANGAL SENACHA, BANGALORE

ಸುಡೊಕು 1828

5	7	2	3	8	4	1	9	6
8	6	1	9	2	5	7	3	4
3	9	4	1	6	7	5	8	2
2	5	7	4	1	3	8	6	9
4	8	6	5	9	2	3	7	1
1	3	9	6	7	8	4	2	5
6	2	3	7	4	1	9	5	8
9	4	5	8	3	6	2	1	7
7	1	8	2	5	9	6	4	3

1ರಿಂದ 9 ರ ನರೆಗಿನ ಸಂಖ್ಯೆಗಳನ್ನು ಪ್ರತಿ 3-3 ಬಾಕ್ಸ್‌ಗೂ ತುಂಬಿ. ಪ್ರತಿ ಉದ್ದ ಹಾಗೂ ಸಾಲಿನಲ್ಲೂ 1-9 ಅಂಕಿಗಳಿರಬೇಕು.

ಪದಬಂದ - 1911



ಎಡದಿಂದ ಬಲಕ್ಕೆ


2.ಒಂದುಗೂಡುವಿಕೆ -4
4.ಎಲ್ಲಾ ಕಡೆಗೂ ಇರುವ -4
5.ದನಗಳನ್ನು ಕಾಯುವ ಗೋಪಾಲ -4
6.ಪಾಪವೇ ತುಂಬಿರುವಾಗ ಇದು ಎಲ್ಲಿಂದ ಬರಬೇಕು? -3
7.ಹರಿಯುವ ಸ್ವಭಾವದ ವಸ್ತು -2
9.ಈ ದಾಸರನ್ನು ನೆನೆದಾಗ ಚಿನ್ನ ಸಿಕ್ಕುವುದು -3
12.ಇಲ್ಲದೇ ಇರುವುದು -3
14.ಕಂಡಕಂಡವರಲ್ಲಿ ಪಡೆದ ಸಾಲ
16.ಅವನೇ? -2
18.ವಿವಿಧ ಕಾಯಿಪಲ್ಯೆ-4
20.ಅತ್ಯಂತ ಶ್ರೇಷ್ಠವಾದುದು -4
21.ಕಡ್ಡಾಯವಾಗಿ ಹಾಕಿದ ಹತೋಟಿ -4

ಮೇಲಿನಿಂದ ಕೆಳಕ್ಕೆ

1.ಜವಳಿ ಅಂಗಡಿಯಲ್ಲಿ ಸೇವಕ -3
2.ಸಂಪೂರ್ಣವಾದುದು -3
3.ಒಡವೆ ಮತ್ತು ಹಣಕ್ಕೆ ಸೇರಿ ಹೇಳುವ ಜೋಡಿಪದ -4
4.ಕಥೆ, ಕಾವ್ಯ, ಕಾದಂಬರಿ, ನಾಟಕಗಳಿಗೆ ಸಂಬಂಧಪಟ್ಟದ್ದು -4
5.ದಾರಿಯಲ್ಲಿ ಕಂಡ ಹೀನವಾದುದು-3
6.ಇದನ್ನು ಓದಿ ಮಸ್ತಕ ತುಂಬಿಕೊಳ್ಳಬೇಕು -3
8.ಇದು ಯಾವ ಒತ್ತಾಯ? -3
10.ಮಾತನಾಡುವ ಮನುಷ್ಯನಿವನು -2
11.ರುಚಿಯಾಗಿಲ್ಲ -2
13.ಇದು ತರವಲ್ಲ, ಹೆಚ್ಚು ಕಡಿಮೆಯಾಗಿದೆ -4
15.ದೊಡ್ಡ ಬಾಯಿಯ ಪಾತ್ರೆ -3
16.ಆತ ಪೂಜೆ ಮಾಡುವವ -4
17.ಮಣ ಭಾರ ಹೊತ್ತಿರುವ ರಮೆಯ ಗಂಡ -3
19.ಹೆಂಚು ಕಾಯಲಿ -3

ಉತ್ತರ - 1910

ಸು	ಮ	ಧು	ರ			ಆ	ವ	ಧಾ	ನ
ಪ್ರ			ವಿ	ಕ	ಸ	ನ			ವ
ಭಾ			ವಾ			ಸೂ			ನೀ
ತ	ರ	ತ	ರ			ಯ	ಘೋ	ಚಿ	ತ
	ಸಾ							ಕಿ	
	ಯ							ತ್ಸ	
ಮಾ	ನ	ಸಿ	ಕ			ಪ	ರಿ	ಕ	ರ
ನ			ಳಾ			ವ			ಣ
ವೀ			ಹೀ	ನಾ	ಮಾ	ನ			ವೀ
ಯ	ಜ	ಮಾ	ನ			ಜ	ನಿ	ವಾ	ರ



ಅಶೋಕ್ ಪುರೋಹಿತ್
98699 60301

ನಿಮ್ಮ ಭವಿಷ್ಯ

21-06-2026 ರಿಂದ 27-06-2026

ಮೇಷ ರಾಶಿ : ಆಕಸ್ಮಿಕ ಬಂದ ವ್ಯಕ್ತಿಗಳು ಆತಂಕ ತಂದಾರು ಎಚ್ಚರ ವಹಿಸಿರಿ. ವ್ಯಾಪಾರಸ್ಥರಿಗೆ ಅನಿರೀಕ್ಷಿತ ಮೂಲಗಳಿಂದ ಶುಭ ಫಲಗಳು ಬರುವುದು. ಆರಂಭ ಮಾಡಿದ ಕೆಲಸವನ್ನು ಅರ್ಧದಲ್ಲಿ ಕೈ ಬಿಡಬೇಡಿರಿ. ಹಣದ ವಿಚಾರದಲ್ಲಿ ಶುಭವಾಗುವುದು. ವಿದ್ಯಾರ್ಥಿಗಳಿಗೆ ಮನೋಬಲದಿಂದ ಅಭ್ಯಾಸ ಮಾಡಿದರೆ ಶುಭವಾಗುವುದು. ಸ್ತ್ರೀಯರಿಗೆ ಸ್ತ್ರೀಯರಿಂದಲೇ ಮಾನಸಿಕ ಕಿರಿಕಿರಿಯಾಗಬಹುದು. ನೌಕರಿಯಲ್ಲಿರುವವರು ಹೊಸ ನೌಕರಿಯ ಬಗ್ಗೆ ಪ್ರಯತ್ನ ಮಾಡಿರಿ. ಅವಿವಾಹಿತರಿಗೆ ವಿವಾಹ ಯೋಗ ಇದೆ. ಶಾಂತಿಯಿಂದಿರಿ.

ಶುಭದಿನ : ಸೋಮವಾರ, ಶುಭ ಸಂಖ್ಯೆ : 3. ಆದಾಯ : 6, ಖರ್ಚು : 5.

ವೃಷಭ ರಾಶಿ : ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ ಅನ್ನುವ ರೀತಿಯಲ್ಲಿ ನಡೆಯುವುದು. ಹೊರಗಿನ ದೇಶದಿಂದ ಬಂದ ವ್ಯಕ್ತಿಗಳು ಶುಭ ಫಲ ಕೊಡುತ್ತಾರೆ. ಅಪರಿಚಿತರಿಂದ ಜಾಗ್ರತೆ ವಹಿಸಿರಿ. ವ್ಯಾಪಾರಸ್ಥರು ಅನೇಕ ಸಮಯದಿಂದ ನಿರೀಕ್ಷಿಸುತ್ತಿದ್ದ ಕಾರ್ಯಕ್ಕೆ ಚಾಲನೆ ಸಿಗುವ ಸಂಭವವಿರುವುದು. ನೌಕರಿಯಲ್ಲಿರುವವರಿಗೆ ಅನವಶ್ಯಕ ಕಾರಣಗಳಿಂದ ಕಿರಿಕಿರಿಯಾಗಬಹುದು. ಪುರುಷರಿಗೆ ಆರೋಗ್ಯದಲ್ಲಿ ಎಚ್ಚರ ವಹಿಸಬೇಕು. ಸ್ತ್ರೀಯರಿಗೆ ವಾರಪೂರ್ತಿ ಅವಸರದ ಕಾರ್ಯಗಳು ಹೆಚ್ಚಾಗುವುದು. ಸುದ್ದಿಯಿಂದ ತೃಪ್ತಿ ಇದೆ.

ಶುಭದಿನ : ಶನಿವಾರ, ಶುಭ ಸಂಖ್ಯೆ : 3. ಆದಾಯ : 9, ಖರ್ಚು : 7.

ಮಿಥುನ ರಾಶಿ : ನಾನಾ ಕಾರಣ ನಿಮಿತ್ತ ಕಾರ್ಯಗಳ ಒತ್ತಡವಿರುವುದು. ಮಕ್ಕಳಿಗೆ ಶುಭವಿರುವುದು. ವಿದ್ಯಾರ್ಥಿಗಳಿಗೆ ಶುಭವಿರುವುದು. ಸ್ತ್ರೀಯರಿಗೆ ಕುಟುಂಬದ ಹಿರಿಯರ ಒತ್ತಡ ಹೆಚ್ಚಾಗುವುದು. ಪುರುಷರಿಗೆ ವಾಹನದಲ್ಲಿ ಪ್ರಯಾಣದಲ್ಲಿ ಎಚ್ಚರವಹಿಸಿರಿ. ನೌಕರಿಯಲ್ಲಿರುವವರಿಗೆ ಅನವಶ್ಯಕ ಕಾರಣಗಳಿಂದ ಕಿರಿಕಿರಿಯಾಗಬಹುದು. ಪುರುಷರಿಗೆ ಆರೋಗ್ಯದಲ್ಲಿ ಎಚ್ಚರವಹಿಸಬೇಕು. ಸ್ತ್ರೀಯರಿಗೆ ವಾರಪೂರ್ತಿ ಅವಸರದ ಕಾರ್ಯಗಳು ಹೆಚ್ಚಾಗುವುದು. ಸುದ್ದಿಯಿಂದ ತೃಪ್ತಿ.

ಶುಭದಿನ : ಶನಿವಾರ, ಶುಭ ಸಂಖ್ಯೆ : 3. ಆದಾಯ : 9, ಖರ್ಚು : 7.

ಕರ್ಕಾಟಕ ರಾಶಿ : ವ್ಯಾಪಾರಸ್ಥರಿಗೆ ಅನಿರೀಕ್ಷಿತ ಬದಲಾವಣೆಗಳು ಕಂಡು ಬರುವುದು. ಸ್ತ್ರೀಯರಿಗೆ ಅನಿರೀಕ್ಷಿತ ಸುದ್ದಿ ಸಮಾಚಾರಗಳು ಬರುವುದು. ಶುಭ ಕಾರ್ಯದ ನಿಮಿತ್ತ ಓಡಾಟವೂ ಹೆಚ್ಚಾಗುವುದು. ಪುರುಷರಿಗೆ ನಿಂತ ಕಾರ್ಯಕ್ಕೆ ಚಾಲನೆ ಸಿಗುವುದು. ವಿದ್ಯಾರ್ಥಿಗಳಿಗೆ ಈ ವಾರದಲ್ಲಿ ಶುಭವಾಗುವುದು. ವಿದೇಶ ಪ್ರಯಾಣದಲ್ಲಿ ವಿಳಂಭವಾಗಬಹುದು. ಪರಸ್ಥಳದಿಂದ ಸುದ್ದಿಗಳು ಬರುವುದು. ವಾಹನ ಖರೀದಿಸುವ ಯೋಗ ಇರುವುದು.

ಶುಭದಿನ : ಭಾನುವಾರ, ಶುಭಸಂಖ್ಯೆ : 4. ಆದಾಯ : 8, ಖರ್ಚು : 5

ಸಿಂಹ ರಾಶಿ : ಅನಿರೀಕ್ಷಿತವಾಗಿ ಬಂದಂತಹ ಸುದ್ದಿಯಿಂದ ಮಾನಸಿಕ ಸಂತೋಷವಿದೆ. ಪುರುಷರಿಗೆ ಸ್ತ್ರೀಯರಿಂದ ಶಾಂತಿ ಸಮಾಧಾನ ಸಿಗುವುದು. ವ್ಯಾಪಾರಸ್ಥರಿಗೆ ಕಾನೂನಿನ ಸಂಬಂಧ ಪಟ್ಟು ಜಾಗ್ರತೆ ವಹಿಸಿರಿ. ನೌಕರಿಯಲ್ಲಿರುವವರು ಸ್ಥಾನ ಬದಲಾವಣೆಯ ಬಗ್ಗೆ ಅಥವಾ ಹೊಸ ನೌಕರಿಯ ಬಗ್ಗೆ ಚಿಂತಿಸಿರಿ. ಪುರುಷರು ಅವಸರ ಸ್ವಭಾವದಿಂದ ನಷ್ಟವಾಗುವುದು. ಸ್ತ್ರೀಯರಿಗೆ ವಸ್ತ್ರಭರಣ ಲಾಭವಾಗುವುದು. ವಿಧ್ಯಾರ್ಥಿಗಳಿಗೆ ಆರೋಗ್ಯದಲ್ಲಿ ಎಚ್ಚರವಹಿಸಿರಿ.

ಶುಭದಿನ : ಶುಕ್ರವಾರ, ಶುಭಸಂಖ್ಯೆ : 7. ಆದಾಯ : 9, ಖರ್ಚು : 5.

ಕನ್ಯಾ ರಾಶಿ : ಆರ್ಥಿಕವಾಗಿ ಅಭಿವೃದ್ಧಿ ಇದ್ದರೂ ಸಹ ಮಾನಸಿಕವಾಗಿ ಶಾಂತಿ ಕಾಪಡಿರಿ. ಪರಸ್ಥಳ ಪ್ರಯಾಣದ ಸಂಭವವಿರುವುದು. ವಿದ್ಯಾರ್ಥಿಗಳು ಸ್ಥಿರತೆಯನ್ನು ಕಾಪಾಡಿರಿ. ಸ್ತ್ರೀಯರು ಆರೋಗ್ಯದಲ್ಲಿ ಗಮನವಿಡಿರಿ. ಪುರುಷರಿಗೆ ಅನೇಕ ಸಮಯದಿಂದ ನಿರೀಕ್ಷಿಸುತ್ತಿದ್ದ ಕಾರ್ಯ ಜಯವಿದೆ. ದಂಪತಿಗಳ ಮಧ್ಯೆ ಪ್ರೀತಿಯನ್ನು ಹೆಚ್ಚಿಸಿರಿ. ನೌಕರಿಯಲ್ಲಿರುವವರಿಗೆ ಸ್ಥಿರ ಸ್ಥಾನ ಪ್ರಾಪ್ತಿಯಾಗುವುದು. ವ್ಯಾಪಾರಸ್ಥರಿಗೆ ಧನಪ್ರಾಪ್ತಿ ಇರುವುದು.

ಶುಭದಿನ : ಸೋಮವಾರ, ಶುಭಸಂಖ್ಯೆ : 9. ಆದಾಯ : 8, ಖರ್ಚು : 8.

ತುಲಾ ರಾಶಿ : ಆತುರ ಸ್ವಭಾವದಿಂದ ಅವಕಾಶ ವಂಚಿತರಾಗುವಿರಿ. ಕೆಲಸವನ್ನು ಕಾರ್ಯವನ್ನು ಅರ್ಧದಲ್ಲಿ ಕೈ ಬಿಡಬೇಡಿರಿ. ಪುರುಷರಿಗೆ ಪರಸ್ಥಳ ಪ್ರಯಾಣದಿಂದ ಲಾಭವಾಗುವುದು. ಸ್ತ್ರೀಯರಿಗೆ ಕುಟುಂಬದಲ್ಲಿ ಸ್ಥಾನಮಾನಗಳು ದೊರಕುವುದು. ಕುಟುಂಬದಲ್ಲಿ ಮಂಗಳ ಕಾರ್ಯದ ಚಿಂತನೆ ಇರುವುದು. ನೌಕರಿಯಲ್ಲಿರುವವರಿಗೆ ಸ್ಥಿರ ಸ್ಥಾನ ಪ್ರಾಪ್ತಿಯಾಗುವುದು. ಅಪರಿಚಿತ ವ್ಯಕ್ತಿಗಳಲ್ಲಿ ಎಚ್ಚರ ಸಹೋದರರ ಮಧ್ಯೆ ಶಾಂತಿ ಕಾಪಾಡಬೇಕು. ಸುದ್ದಿಯಿಂದ ಸಂತೋಷ.

ಶುಭದಿನ : ಮಂಗಳವಾರ, ಶುಭ ಸಂಖ್ಯೆ : 3. ಆದಾಯ : 9, ಖರ್ಚು : 6.

ವೃಶ್ಚಿಕ ರಾಶಿ : ಆಕಸ್ಮಿಕ ಧನ ಲಾಭವಾಗುವುದು. ಸ್ತ್ರೀಯರಿಗೆ ದೂರ ಪ್ರಯಾಣದ ಸಂಭವವಿದೆ. ಪುರುಷರಿಗೆ ಕೆಲಸದ ಒತ್ತಡದಲ್ಲಿ ವ್ಯವಸ್ಥೆಗಳು ಅಸ್ತವ್ಯಸ್ತವಾಗುವುದು. ವಿದ್ಯಾರ್ಥಿಗಳಿಗೆ ಕಾರ್ಯ ಜಯವಾಗುವುದು. ಅವಿವಾಹಿತರಿಗೆ ವಿವಾಹ ಯೋಗ ಇರುವುದು. ವಿದೇಶ ಪ್ರಯಾಣದಲ್ಲಿ ವಿಳಂಬವಾಗುವುದು. ಕುಟುಂಬದಲ್ಲಿ ಮಂಗಳ ಕಾರ್ಯದ ಬಗ್ಗೆ ಮಾತುಕತೆ ಬರುವುದು. ವ್ಯಾಪಾರಸ್ಥರಿಗೆ ನಿರೀಕ್ಷಿಸಿದ ಕಾರ್ಯ ಜಯವಾಗುವುದು.

ಶುಭದಿನ : ಸೋಮವಾರ, ಶುಭ ಸಂಖ್ಯೆ : 3. ಆದಾಯ : 7, ಖರ್ಚು : 6.

ಧನು ರಾಶಿ : ಸ್ಥಿರ ಉದ್ಯೋಗ ಪ್ರಾಪ್ತಿಯಾಗುವ ಸಾಧ್ಯತೆ ಇರುವುದು. ವಿದೇಶದಿಂದ ಬಂಧುಗಳ ಆಗಮನವಿರುವುದು. ಪುರುಷರಿಗೆ ದೂರ ಪ್ರಯಾಣದಲ್ಲಿ ಎಚ್ಚರ ವಹಿಸಿರಿ. ವಿದೇಶ ಪ್ರಯಾಣದಲ್ಲಿ ಜಾಗ್ರತೆ ವಹಿಸಿರಿ. ವ್ಯಾಪಾರಸ್ಥರಿಗೆ ಅನಿರೀಕ್ಷಿತ ಧನ ಪ್ರಾಪ್ತಿಯಾಗುವ ಸಂಭವವಿರುವುದು. ನೌಕರಿಯಲ್ಲಿರು ವವರು ಶಾಂತತೆಯನ್ನು ಕಾಪಾಡಿರಿ. ವಿದ್ಯಾರ್ಥಿಗಳಿಗೆ ಉತ್ತಮ ಫಲವಿರುವುದು. ಕೋರ್ಟು ಕಚೇರಿಗಳಲ್ಲಿ ಜಯದ ಸೂಚನೆ ಕಾಣುವುದು. ಬಂಧುಗಳ ಆಗಮನವಿದೆ.

ಶುಭದಿನ : ಗುರುವಾರ, ಶುಭ ಸಂಖ್ಯೆ : 6. ಆದಾಯ : 9, ಖರ್ಚು : 8.

ಮಕರ ರಾಶಿ : ಉತ್ತಮ ಆದಾಯವಿದ್ದರೂ ಖರ್ಚಿನ ದಾರಿ ಹೆಚ್ಚಾಗುವುದು. ಅವಿವಾಹಿತರಿಗೆ ವಿವಾಹ ಯೋಗವಿರುವುದು. ವಿದೇಶದಿಂದ ಬಂಧುಗಳ ಆಗಮನವಿರುವುದು. ಸ್ತ್ರೀಯರಿಗೆ ಸ್ಥಿರ ಮನಸ್ಸಿನಿಂದ ಕಾರ್ಯ ಮಾಡಿದರೆ ಕಾರ್ಯ ಜಯವಾಗುವುದು. ವಿದ್ಯಾರ್ಥಿಗಳಿಗೆ ಕಠಿಣ ಪರಿಶ್ರಮದಿಂದ ಶುಭವಾಗುವುದು. ಕುಟುಂಬದಲ್ಲಿ ಮಾತಿನ ಚಕಮಕಿ ನಡೆಯುವುದು. ಆರೋಗ್ಯದಲ್ಲಿ ವ್ಯತ್ಯಾಸಗಳು ಕಂಡುಬರಬಹುದು ಎಚ್ಚರವಿರಿ.

ಶುಭದಿನ : ಸೋಮವಾರ, ಶುಭ ಸಂಖ್ಯೆ : 6. ಆದಾಯ : 7, ಖರ್ಚು : 6.

ಕುಂಭ ರಾಶಿ : ಬಂಧುಗಳ ಹತ್ತಿರ ಮಾತಿನಲ್ಲಿ ಅಸಮಾಧಾನ ಕಾಣುವುದು. ಪುರುಷರಿಗೆ ಶುಭವಿದೆ. ಸ್ತ್ರೀಯರಿಗೆ ಸ್ತ್ರೀಯರಿಂದಲೇ ಮಾನಸಿಕ ಕಿರಿಕಿರಿ ಕಾಣುವುದು. ವಿದ್ಯಾರ್ಥಿಗಳು ಶಾಂತಿಯಿಂದ ತನ್ನ ಕಾರ್ಯವನ್ನು ಮಾಡಿರಿ ಶುಭವಾಗುವುದು. ಕುಟುಂಬದಲ್ಲಿ ಮಂಗಳ ಕಾರ್ಯದ ಬಗ್ಗೆ ಚಿಂತನೆ ಮಾಡಿರಿ. ಅವಿವಾಹಿತರಿಗೆ ವಿವಾಹ ಯೋಗ ಇರುವುದು. ಆರೋಗ್ಯದಲ್ಲಿ ಜಾಗ್ರತೆ ವಹಿಸಿರಿ. ಭೂಮಿ ವಸ್ತು ವಾಹನ ಖರೀದಿಸುವ ಸಮಯದಲ್ಲಿ ಎಚ್ಚರ ವಹಿಸಿರಿ.

ಶುಭದಿನ : ಬುಧವಾರ, ಶುಭ ಸಂಖ್ಯೆ : 1. ಆದಾಯ : 8, ಖರ್ಚು : 5.

ಮೀನಾ ರಾಶಿ : ಹತ್ತಿರ ಬಂದ ಕಾರ್ಯಗಳು ಉತ್ತಮ ಫಲ ಪ್ರಾಪ್ತಿಯಾಗುವುದು. ವಿಧ್ಯಾರ್ಥಿಗಳು ಶುಭ ಫಲವನ್ನು ಕಾಣುತ್ತೀರಿ ಅವಿವಾಹಿತರಿಗೆ ವಿವಾಹ ಯೋಗ ಇರುವುದು. ಸ್ತ್ರೀಯರಿಗೆ ದೂರ ಪ್ರಯಾಣ ಸಂಭವವಿರುವುದು. ಪುರುಷರಿಗೆ ಕೆಲಸ ಕಾರ್ಯದ ಒತ್ತಡ ಹೆಚ್ಚಾಗುವುದು. ವ್ಯಾಪಾರಸ್ಥರಿಗೆ ಸರಕಾರ ಸಂಬಂಧ ಪಟ್ಟು ಎಚ್ಚರವಹಿಸಿರಿ. ನೌಕರಿಯಲ್ಲಿರುವವರಿಗೆ ಸ್ಥಿರ ಸ್ಥಾನ ಪ್ರಾಪ್ತಿಯಾಗುವ ಸಂಭವವಿರುವುದು. ಭೂಮಿ ಖರೀದಿ ಯೋಗ ಇರುವುದು.

ಶುಭದಿನ : ಸೋಮವಾರ, ಶುಭ ಸಂಖ್ಯೆ : 6. ಆದಾಯ : 9, ಖರ್ಚು : 8.

ವಿಧಾನ ಪರಿಷತ್ ಚುನಾವಣಾ ಫಲಿತಾಂಶ : ಬಿಜೆಪಿಗೆ ಮುಜುಗರ



ಕರ್ನಾಟಕದ ವಿಧಾನ ಸಭೆಯಿಂದ ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ಜೂನ್ 18ರಂದು ನಡೆದ ಚುನಾವಣಾ ಫಲಿತಾಂಶ ರಾಜಕೀಯ ವಲಯದಲ್ಲಿ ಭಾರೀ ಚರ್ಚೆ ಮತ್ತು ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ. ವಿಧಾನಸಭೆಯ ಸಂಖ್ಯಾ ಬಲದ ನೆಲೆಯಲ್ಲಿ ಆಡಳಿತ ಕಾಂಗ್ರೆಸ್ 4 ಸ್ಥಾನಗಳನ್ನು ಮತ್ತು ವಿರೋಧ ಪಕ್ಷ ಬಿಜೆಪಿ ಎರಡು ಸ್ಥಾನಗಳನ್ನು ಸುಲಭವಾಗಿ ಗೆಲ್ಲುವುದು ನಿಶ್ಚಿತ ಆಗಿತ್ತು. ಆದರೆ ಏಳನೇ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿನಯ್ ಕಾರ್ತಿಕ್ ಮತ್ತು ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಅವರು ನಾಮಪತ್ರ ಸಲ್ಲಿಕೆ ಮಾಡಿದಾಗ ಸ್ಪರ್ಧೆ ಏರ್ಪಟ್ಟಿತ್ತು. ಏಳು ಸ್ಥಾನಗಳಿಗೆ ಏಳೇ ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆ ಮಾಡಿದ್ದರೆ ಎಲ್ಲರೂ ಅವಿರೋಧ ಆಯ್ಕೆ ಆಗುತ್ತಿದ್ದರು. ಆದರೆ ವಿಧಾನ ಸಭೆಯಲ್ಲಿ 18 ಎಂಎಲ್‌ಎಗಳನ್ನು ಹೊಂದಿರುವ ಜೆಡಿಎಸ್ ಅದರ ಅಭ್ಯರ್ಥಿಯಾಗಿ ಗೋವಿಂದರಾಜು ಅವರನ್ನು ಕಣಕ್ಕೆ ಇಳಿಸಲು ನಿರ್ಧರಿಸಿದಾಗ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಅವರ ಅತ್ಯಂತ ನಿಕಟವರ್ತಿ ವಿನಯ್ ಕಾರ್ತಿಕ್ ಅವರನ್ನು ಕಾಂಗ್ರೆಸ್ಸಿನ ಐದನೇ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಿದ್ದರು. ಪರಿಣಾಮವಾಗಿ ಚುನಾವಣೆ ರೋಚಕ ರೂಪ ಪಡೆದಿತ್ತು.

ಜೂನ್ 18ರಂದು ನಡೆದ ಚುನಾವಣೆಯಲ್ಲಿ ವಿಧಾನಸಭೆಯ ಎಲ್ಲ 122 ಸದಸ್ಯರೂ ಮತದಾನ ಮಾಡುವ ಮೂಲಕ ಶೇಕಡಾ 100 ಮತದಾನ ದಾಖಲಾಗಿತ್ತು. ಸದನದ ಸಂಖ್ಯಾ ಬಲದ ಆಧಾರದಲ್ಲಿ ಒಬ್ಬ ಅಭ್ಯರ್ಥಿಯ ಗೆಲುವಿಗೆ ತಲಾ 28 ಮತಗಳ ಅವಶ್ಯಕತೆ ಇತ್ತು. ಒಂದು ವೇಳೆ ಮೊದಲ ಪ್ರಾಶಸ್ತ್ಯದ ಹಂತದಲ್ಲಿ 28 ಮತ ಸಿಗದೇ ಇದ್ದರೆ ಎರಡನೇ ಪ್ರಾಶಸ್ತ್ಯದ ಮತಗಳ ಆಧಾರದಲ್ಲಿ ಫಲಿತಾಂಶ ಪ್ರಕಟ ಘೋಷಣೆ ಆಗುತಿತ್ತು. ಆದರೆ ಮತದಾನ ಮುಗಿದು ಮತ ಎಣಿಕೆ ಪೂರ್ಣ ಆದಾಗ ಅಚ್ಚರಿ ಕಾದಿತ್ತು. ಕಾಂಗ್ರೆಸ್ ಪಕ್ಷ ಅಭ್ಯರ್ಥಿಗಳಾದ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಅದ ಬಿ. ಕೆ. ಹರಿಪ್ರಸಾದ್, ಬಿ. ಎಸ್. ಶಿವಣ್ಣ ಮತ್ತು ತಿಪ್ಪಣ್ಣಪ್ಪ ಕುಮಕನೂರ ತಲಾ 30 ಮತಗಳನ್ನು ಗೆದ್ದು ಆಯ್ಕೆ ಆದರೆ ಕಾಂಗ್ರೆಸ್ಸಿನ ಐದನೇ ಅಭ್ಯರ್ಥಿ ವಿನಯ್ ಕಾರ್ತಿಕ್ ಅತಿ ಹೆಚ್ಚು ಅಂದರೆ 32 ಮತಗಳನ್ನು ಪಡೆದು ಜಯ ಪಡೆದರೆ ಕಾಂಗ್ರೆಸ್ಸಿನ ಹಿರಿಯ ನಾಯಕ ಪಿ. ವಿ. ಮೋಹನ್ 29 ಮತ ಪಡೆದು ಗೆದ್ದರು. ಬಿಜೆಪಿಯ ರಘು ಕೌಟಿಲ್ಯ 29 ಮತಗಳನ್ನು ಮತ್ತು ಬಿಜೆಪಿಯ ಎರಡನೇ ಅಭ್ಯರ್ಥಿ ಲಿಂಗರಾಜ ಪಾಟೀಲ ಅವರು 27 ಮತಗಳನ್ನು ಪಡೆದು ಗೆದ್ದರೆ ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಕೇವಲ 14 ಮತ ಪಡೆದು ಪರಾಭವ ಪಡೆದರು.

ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಅವರ ಗೆಲುವು ಅಸಂಭವ ಎಂದು ಬಹುತೇಕವಾಗಿ ಮೊದಲೇ ಖಚಿತ ಆಗಿತ್ತು. ಆದರೂ ಜೆಡಿಎಸ್ ಮತ್ತು ಬಿಜೆಪಿ ನಾಯಕರುಗಳು ಕಾಂಗ್ರೆಸ್ ಪಕ್ಷದಲ್ಲಿ ನಾಯಕತ್ವ ಬದಲಾವಣೆ ಅಸಮಾಧಾನದ ಫಲವಾಗಿ ಕಾಂಗ್ರೆಸ್ ಪಕ್ಷದಿಂದ ಅತೃಪ್ತರು ಜೆಡಿಎಸ್ ಅಭ್ಯರ್ಥಿ ಅಥವಾ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಅಡ್ಡ ಮತದಾನ ನಡೆಸಬಹುದು ಎಂಬ ವಿಶ್ವಾಸದಲ್ಲಿ ಇದ್ದರು. ಆದರೆ ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಅವರಿಗೆ ಕೇವಲ 14 ಮತಗಳು ಬಿದ್ದಿರುವುದನ್ನು ಕಂಡರೆ ಕುಮಾರಸ್ವಾಮಿ ಅವರ ಪಕ್ಷದ ನಾಲ್ಕರು ಎಂಎಲ್‌ಎಗಳೂ ಕಾಂಗ್ರೆಸ್ ಅಭ್ಯರ್ಥಿ ವಿನಯ್ ಅವರಿಗೆ ಮತದಾನ ಮಾಡಿರುವುದು ಖಚಿತ ಆಗಿದೆ. ಅದೇ ರೀತಿಯಲ್ಲಿ ಬಿಜೆಪಿಯ 62 ಎಂಎಲ್‌ಎಗಳಲ್ಲಿ ಕನಿಷ್ಠ 7 ಎಂಎಲ್‌ಎಗಳು ಬಿಜೆಪಿ ಅಭ್ಯರ್ಥಿಗಳು ಅಥವಾ ಜೆಡಿಎಸ್ ಅಭ್ಯರ್ಥಿಗಳಿಗೆ ಮತ ಹಾಕಿಲ್ಲ ಎನ್ನುವುದನ್ನು ಫಲಿತಾಂಶ ಬೊಟ್ಟು ಮಾಡಿದೆ. ಬಿಜೆಪಿ ಸದನದಲ್ಲಿ 62 ಸದಸ್ಯರನ್ನು ಹೊಂದಿದೆ. ಪಕ್ಷದಿಂದ ವಜಾಗೊಂಡಿರುವ ಬಸನ ಗೌಡ ಪಾಟೀಲ್ ಯತ್ನಾಳ್ ಅವರು ತಾನು ಬಿಜೆಪಿ ಅಭ್ಯರ್ಥಿಗೆ ಮತ ಹಾಕುವುದಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರಿಗೇ ಪತ್ರ ಬರೆದು ತಿಳಿಸಿದ್ದಾರೆ. ಇದರಿಂದಾಗಿ ಬಿಜೆಪಿ 63 ಮತಗಳನ್ನು ಹೊಂದಿದೆ. ಆದರೆ ಬಿಜೆಪಿಯ ಇಬ್ಬರು ಅಭ್ಯರ್ಥಿಗಳು ಪಡೆದ ಒಟ್ಟು ಮತಗಳು 56 ಮಾತ್ರ. ಇದರಿಂದಾಗಿ ಬಿಜೆಪಿಯ 7 ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿ ವಿನಯ್ ಅಥವಾ ಇತರ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಹಾಕಿದ್ದಾರೆ ಎನ್ನುವುದು ಖಚಿತ. ಬಿಜೆಪಿಯಿಂದ ಉಚ್ಚಾಟಿತ ಎಸ್. ಟಿ. ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರು ಕಾಂಗ್ರೆಸ್ ಜತೆಗೆ ನಿಕಟ ಆಗಿದ್ದು ಅವರಿಬ್ಬರೂ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಹಾಕಿರುವುದು ವಾಸ್ತವ. ದೇಶದ ಇತರ ರಾಜ್ಯಗಳಲ್ಲಿ ರಾಜ್ಯಸಭೆ ಅಥವಾ ವಿಧಾನ ಪರಿಷತ್ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಎಂಎಲ್‌ಎಗಳು ಅಡ್ಡ ಮತದಾನ ಮಾಡುತ್ತಿರುವುದು ಸಾಮಾನ್ಯ ಆಗಿರುವ ಈ ಹಂತದಲ್ಲಿ ಕರ್ನಾಟಕದಲ್ಲಿ ಬಿಜೆಪಿಯ 7 ಮತ್ತು ಅದರ ಮೈತ್ರಿ ಜೆಡಿಎಸ್ ಪಕ್ಷದ ನಾಲ್ಕು ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಅಡ್ಡ ಮತದಾನ ಮಾಡಿರುವುದು ಸಾಮಾನ್ಯ ಬೆಳವಣಿಗೆ ಖಂಡಿತ ಅಲ್ಲ. ಇದು ಕರ್ನಾಟಕದ ಬಿಜೆಪಿಗೆ ದೊಡ್ಡ ಮುಜುಗರ ತಂದಿರುವ ಬೆಳವಣಿಗೆಯಾಗಿದೆ. ಬಿಜೆಪಿ ಪಕ್ಷದಲ್ಲಿ ಎಲ್ಲವೂ ಸರಿ ಇಲ್ಲ ಎನ್ನುವುದನ್ನು ಈ ವಿಧಾನ ಪರಿಷತ್ ಚುನಾವಣಾ ಫಲಿತಾಂಶ ಸ್ಪಷ್ಟಪಡಿಸಿದೆ. ಬಿಜೆಪಿ ರಾಜ್ಯ ಅಧ್ಯಕ್ಷ ವಿಜಯೇಂದ್ರ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಬಿಜೆಪಿಯ ಮೂರ್ನಾಲ್ಕು ಎಂಎಲ್‌ಎಗಳು ಅಡ್ಡ ಮತದಾನ ಮಾಡಿದರೆ ಜೆಡಿಎಸ್ ಪಕ್ಷದ ಏಳು ಎಂಎಲ್‌ಎಗಳು ಅಡ್ಡ ಮತದಾನ ಮಾಡಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಆದರೆ ಬಿಜೆಪಿ ಎಂಎಲ್‌ಎಗಳ ಅಡ್ಡ ಮತದಾನ ಇವರಿಬ್ಬರ ಸ್ಥಾನಕ್ಕೂ ಕುತ್ತು ತರದೆ ಇರುವುದಿಲ್ಲ. ಫಲಿತಾಂಶ ಪ್ರಕಟ ಆಗುತ್ತಲೇ ವಿಜಯೇಂದ್ರ ಅವರಿಗೆ ಬಿಜೆಪಿ ಹೈಕಮಾಂಡ್ ಸಮನ್ಸ್ ನೀಡಿದೆ. ವಿಜಯೇಂದ್ರ ಅವರು ತಾನೇ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಕರೆ ಮಾಡಿ ತಾನೇ ವಿಧಾನ ಪರಿಷತ್ ಚುನಾವಣೆಯ ಫಲಿತಾಂಶ ಬಗ್ಗೆ ವಿವರ ನೀಡಲು ಕಾಲಾವಕಾಶ ಕೇಳಿರುವುದಾಗಿ ಹೇಳಿಕೊಂಡಿದ್ದಾರೆ. ಆದರೆ ವಾಸ್ತವ ಪಕ್ಷಕ್ಕೆ ಆಗಿರುವ ಮುಖಭಂಗಕ್ಕೆ ವಿಜಯೇಂದ್ರ ಮತ್ತು ಅಶೋಕ್ ತಲೆದಂಡಕ್ಕೆ ಬಿಜೆಪಿ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳದೆ ಇರುವುದಿಲ್ಲ.

ಬಿಜೆಪಿಗೆ ಕರ್ನಾಟಕದಲ್ಲಿ ಆಗಿರುವ ಅವಮಾನ ಸಾಮಾನ್ಯ ಅಲ್ಲ. ಆ ಅಪಮಾನಕ್ಕೆ ಬಿಜೆಪಿ ಹೈಕಮಾಂಡ್ ಮೌನ ವಹಿಸಲು ಸಾಧ್ಯವೇ ಇಲ್ಲ. ಬಿಜೆಪಿಯ ಚುನಾವಣಾ ರಣತಂತ್ರವನ್ನೇ ತಿರುವು ಮುರುವು ಮಾಡಿರುವ ಫಲಿತಾಂಶವನ್ನು ಕರ್ನಾಟಕದ ಕಾಂಗ್ರೆಸ್ ನೀಡಿದ್ದು ಬಿಜೆಪಿ ಹೈಕಮಾಂಡನ್ನು ಕೆರಳಿಸದೆ ಇರುವುದಿಲ್ಲ. ಕರ್ನಾಟಕ ಬಿಜೆಪಿ ನಾಯಕತ್ವದಲ್ಲಿ ಪಕ್ಷದ ನಿಯಂತ್ರಣ ಇಲ್ಲ ಎನ್ನುವುದನ್ನು ಫಲಿತಾಂಶ ಸ್ಪಷ್ಟಪಡಿಸಿದ್ದು, ಬಿಜೆಪಿ ಹೈಕಮಾಂಡ್ ವಿಜಯೇಂದ್ರ ಮತ್ತು ಅಶೋಕ್ ಅವರನ್ನು ಹುದ್ದೆಯಿಂದ ಯಾವುದೇ ಕ್ಷಣದಲ್ಲೂ ಬದಲಾವಣೆ ಮಾಡಬಹುದು. ವಿಜಯೇಂದ್ರ ಅವರು ಪಕ್ಷದಲ್ಲಿ ಅವರ ಆಪ್ತರನ್ನು ಮಾತ್ರ ಹುದ್ದೆಗಳಿಗೆ ನೇಮಕ ಮಾಡಿದ್ದಾರೆ ಎಂಬ ಅಸಮಾಧಾನ ಅವರು ರಾಜ್ಯ ಬಿಜೆಪಿ ಅಧ್ಯಕ್ಷರಾದ ಕ್ಷಣದಿಂದಲೂ ಇದೆ. ಬಸನ ಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ಮತ್ತು ಇತರ ಹಲವು ಬಿಜೆಪಿ ಎಂಎಲ್‌ಎಗಳು ಮತ್ತು ನಾಯಕರು ಬಹಿರಂಗವಾಗಿ ವಿಜಯೇಂದ್ರ ಅವರ ನಾಯಕತ್ವವನ್ನು ಟೀಕೆ ಮಾಡಿದ್ದರು.

ಕೊನೆಗೆ ಬಿಜೆಪಿ ಹೈಕಮಾಂಡ್ ಪಕ್ಷ ವಿರೋಧಿ ಚಟುವಟಿಕೆ ಆರೋಪದಲ್ಲಿ ಯತ್ನಾಳ್ ಅವರನ್ನು ಪಕ್ಷದಿಂದ ವಜಾ ಮಾಡಲಾಗಿದ್ದು ಇತರ ಬಂಡಾಯಕಾರರು ಮೌನ ಆಗಿದ್ದರು. ಎಸ್. ಟಿ. ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಕಾಂಗ್ರೆಸ್ ಜತೆಗೆ ಸಂಬಂಧ ಹೊಂದಿದ್ದಾರೆ ಎಂದು ಅವರಿಬ್ಬರನ್ನೂ ಬಿಜೆಪಿಯಿಂದ ವಜಾ ಮಾಡಲಾಗಿದೆ. ಯತ್ನಾಳ್ ಅವರನ್ನು ಬಿಜೆಪಿಯಿಂದ ವಜಾ ಮಾಡಿದ್ದರೂ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಬಿಜೆಪಿ ನಾಯಕರನ್ನು ಪ್ರಶಂಸಿಸುತ್ತಾ ಬಂದಿದ್ದಾರೆ. ಅವರ ಸಿಟ್ಟು ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ವಿರುದ್ಧವಾಗಿದೆ. ಇತ್ತೀಚಿಗೆ ನಡೆದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕೂಡಾ ಯತ್ನಾಳ್ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ್ದಾರೆ. ಈಗ ವಿಧಾನ ಪರಿಷತ್ ಚುನಾವಣೆಯಲ್ಲೂ ಬಿಜೆಪಿ ಅಭ್ಯರ್ಥಿಗೆ ಮತದಾನ ಮಾಡುವುದಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಅವರಿಗೆ ಪತ್ರ ಬರೆದಿರುವ ಯತ್ನಾಳ್ ಅವರು ಆ ಪತ್ರದಲ್ಲೂ ವಿಜಯೇಂದ್ರ ವಿರುದ್ಧ ಆರೋಪ ಮಾಡಿದ್ದಾರೆ. ಇದರಿಂದಾಗಿ ವಿಜಯೇಂದ್ರ ಅವರ ನಾಯಕತ್ವ ವೈಫಲ್ಯ ಮತ್ತು ವಿಪಕ್ಷ ನಾಯಕ ಅಶೋಕ್ ಬೇಜವಾಬ್ದಾರಿ ಕಾರಣದಿಂದ ಬಿಜೆಪಿ ಎಂಎಲ್‌ಎಗಳು ಅಡ್ಡ ಮತದಾನ ಮಾಡಿದ್ದಾರೆ ಎಂದು ಬಿಜೆಪಿ ಹೈಕಮಾಂಡ್ ತೀರ್ಮಾನಕ್ಕೆ ಬಂದರೆ ಆಶ್ಚರ್ಯವಿಲ್ಲ.

ಬಿಜೆಪಿ ಎಂಎಲ್‌ಎಗಳ ಅಡ್ಡ ಮತದಾನ ಬಗ್ಗೆ ತನಿಖೆಗೆ ಪಕ್ಷ ಸಿ. ಟಿ. ರವಿ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿ ರಚನೆ ಮಾಡಿದೆ. ಮತ್ತೊಂದೆಡೆ ಜೆಡಿಎಸ್ ನಾಯಕ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಅಡ್ಡ ಮತದಾನ ಮಾಡಿರುವ ಪಕ್ಷದ ಎಂಎಲ್‌ಎಗಳು ಯಾರು ಎಂದು ತನಗೆ ತಿಳಿದಿದೆ ಎಂದು ಹೇಳಿದ್ದಾರೆ. ಇದರಿಂದಾಗಿ ಅವರು ಯಾರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಕುತೂಹಲ ಉಂಟಾಗಿದೆ. ಕಮಲ ಕಾರ್ಯಾಚರಣೆ ಮೂಲಕ ಬಿಜೆಪಿ ಸೇರಿದವರು ಮತ್ತು ಇತರ ಕೆಲವರು ಅಡ್ಡ ಮತದಾನ ಮಾಡಿದ್ದಾರೆ ಎಂದು ವಿಜಯೇಂದ್ರ ಅವರು ಹೈಕಮಾಂಡ್ ನಾಯಕರಿಗೆ ಪ್ರಾಥಮಿಕ ವರದಿಯಲ್ಲಿ ತಿಳಿಸಿದ್ದಾರೆ ಎನ್ನಲಾಗಿದೆ. ಇದರಿಂದಾಗಿ ಬಿಜೆಪಿ ಯಾರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಿದೆ ಎನ್ನುವುದನ್ನು ಕಾದು ನೋಡಬೇಕಿದೆ.

ಬೆಸ್ಟ್ ಮುಷ್ಕರ : ಮುಂದುವರೆದ ಪ್ರಯಾಣಿಕರ ಪರದಾಟ

ಇಂದು ನೀಟ್ ಮರುಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗಾಗಿ 60 ಹೆಚ್ಚುವರಿ ಬಸ್‌ಗಳ ವ್ಯವಸ್ಥೆ





ಮುಂಬಯಿ,ಜೂ.20 - ನಗರದಲ್ಲಿ ಬಸ್ ಸೇವೆಗಳನ್ನು ಒದಗಿಸುವ ಪಾಲಿಕೆ ಸ್ವಾಮ್ಯದ ಬೆಸ್ಟ್ ನೌಕರರು ನಡೆಸುತ್ತಿರುವ ಮುಷ್ಕರಕ್ಕೆ ಶನಿವಾರ ಬಹುತೇಕ ಸಂಪೂರ್ಣ ಪ್ರತಿಕ್ರಿಯೆ ವ್ಯಕ್ತವಾಗಿದ್ದರಿಂದ ಮುಂಬಯಿಯಲ್ಲಿ ಎರಡನೇ ದಿನವೂ ಪ್ರಯಾಣಿಕರು ತೀವ್ರ ಅನಾನುಕೂಲತೆಯನ್ನು ಎದುರಿಸಬೇಕಾಯಿತು.

ರವಿವಾರ ರಾಷ್ಟ್ರೀಯ ಅರ್ಹತಾ-ಪ್ರವೇಶ ಪರೀಕ್ಷೆ (ನೀಟ್)ಯ ಮರುಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, ಬೃಹನ್ಮುಂಬಯಿ ವಿದ್ಯುತ್ ಸರಬರಾಜು ಹಾಗೂ ಸಾರಿಗೆ (ಬೆಸ್ಟ್) ಮುಂಬಯಿನಾದ್ಯಂತ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಮತ್ತು ಸಂಜೆ 5 ರಿಂದ ಸಂಜೆ 7 ರವರೆಗೆ 60 ಹೆಚ್ಚುವರಿ ಬಸ್‌ಗಳನ್ನು ವ್ಯವಸ್ಥೆ ಮಾಡಿದೆ ಎಂದು ಸಾರಿಗೆ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

ರಸ್ತೆಗಳಲ್ಲಿ ಬೆಸ್ಟ್ ಬಸ್‌ಗಳು ಇಲ್ಲದ ಕಾರಣ, ವಿದ್ಯಾರ್ಥಿಗಳು ಮತ್ತು ಕಚೇರಿಗೆ ಹೋಗುವವರು ಸೇರಿದಂತೆ ಮುಂಬಯಿಯ ಸಾಮಾನ್ಯ ಜನರು ತುಲನಾತ್ಮಕವಾಗಿ ಕೈಗೆಟುಕುವ ಸಾರಿಗೆ ವಿಧಾನಗಳಿಗಾಗಿ ಶೇರ್ ಟ್ಯಾಕ್ಸಿಗಳು ಅಥವಾ ಆಟೋರಿಕ್ಷಾಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಯಿತು.ಕೆಲವರು ಬೈಕ್ ಟ್ಯಾಕ್ಸಿಗಳನ್ನು ಅವಲಂಬಿಸಿದ್ದರು.

ಅಡಚಣೆಯ ಸಮಯದಲ್ಲಿ ಸೇವೆಗಳನ್ನು ಹೆಚ್ಚಿಸಲು 100 ಬಸ್‌ಗಳನ್ನು ಒದಗಿಸುವಂತೆ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ (ಎಂಎಸ್‌ಆರ್‌ಟಿಸಿ)ವನ್ನು ಕೋರಲಾಗಿದೆ ಎಂದು ಸಾರ್ವಜನಿಕ ಸಾರಿಗೆದಾರ ತಿಳಿಸಿದ್ದಾರೆ.

ನಡೆಯುತ್ತಿರುವ ಮುಷ್ಕರದಲ್ಲಿ ಭಾಗವಹಿಸುವ ಉದ್ಯೋಗಿಗಳಿಗೆ ಮತ್ತು ವೆಟ್-ಲೀಸ್ ಗುತ್ತಿಗೆದಾರರಿಗೆ ಮಹಾರಾಷ್ಟ್ರ ಅಗತ್ಯ ಸೇವೆಗಳ ನಿರ್ವಹಣೆ ಕಾಯ್ದೆ (ಮೆಸ್ಮಾ) ಅಡಿಯಲ್ಲಿ ನೋಟಿಸ್ ನೀಡಲಾಗಿದೆ ಎಂದು ಅದು ಹೇಳಿದೆ. ಮೆಸ್ಮಾ ಅಡಿಯಲ್ಲಿ, ಮುಷ್ಕರ ನಿರತ ನೌಕರರ ವಿರುದ್ಧ ಕಾನೂನು ಕ್ರಮಗಳನ್ನು ಆರಂಭಿಸಲಾಗುವುದು.

ಅಗತ್ಯ ಸಾರಿಗೆ ಸೇವೆಗಳನ್ನು ನಿರ್ವಹಿಸಲು ಮತ್ತು ಮುಷ್ಕರದಿಂದ ಪ್ರಭಾವಿತರಾದ ಪ್ರಯಾಣಿಕರಿಗೆ ಅನಾನುಕೂಲತೆಯನ್ನು ಕಡಿಮೆ ಮಾಡುವ ಕ್ರಮವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅದು ಹೇಳಿದೆ.

ಬೆಸ್ಟ್ ಒಡೆತನದ 246 ನಿಗದಿತ ಬಸ್‌ಗಳಲ್ಲಿ ಯಾವುದೂ ಡಿಪೋಗಳನ್ನು ತೊರೆದಿಲ್ಲ, ಆದರೆ ಬೆಳಿಗ್ಗೆ 10 ಗಂಟೆಗೆ ಬೆಸ್ಟ್ ಬಿಡುಗಡೆ ಮಾಡಿದ ದತ್ತಾಂಶವು 2,521 ಬಸ್‌ಗಳ ನಿಗದಿತ ಸಂಖ್ಯೆ ವಿರುದ್ಧ ಕೇವಲ ನಾಲ್ಕು ವೆಟ್-ಲೀಸ್ ಬಸ್‌ಗಳು ರಸ್ತೆಯಲ್ಲಿ ಇದ್ದವು ಎಂದು ತೋರಿಸಿದೆ.

ಪರೇಲ್‌ನ ಎಂಡಿ ಕಾಲೇಜಿನ ವಿದ್ಯಾರ್ಥಿಯೊಬ್ಬ, ತಾನು ಸಾಮಾನ್ಯವಾಗಿ ಪ್ರತಿದಿನ ಡೊಂಗ್ರಿಯಿಂದ ಬಸ್‌ನಲ್ಲಿ ಪ್ರಯಾಣಿಸುತ್ತೇನೆ, ಆದರೆ ಮುಷ್ಕರದಿಂದಾಗಿ ಬೈಕ್ ಟ್ಯಾಕ್ಸಿಯನ್ನು ಬಳಸಬೇಕಾಯಿತು, ಇದು ತನ್ನ ಸಾಮಾನ್ಯ ಪ್ರಯಾಣಕ್ಕಿಂತ ಗಮನಾರ್ಹವಾಗಿ ಹೆಚ್ಚು ದುಬಾರಿಯಾಗಿತ್ತು ಎಂದು ಹೇಳಿದರು.

ಬೆಳಗಿನ ಜನದಟ್ಟಣೆಯ ಸಮಯದಲ್ಲಿ ಕ್ಯಾಬ್ ಹುಡುಕುವುದು ಕಷ್ಟಕರವಾದ ಕಾರಣ ಪರೇಲ್ ರೈಲು ನಿಲ್ದಾಣದಿಂದ ನಡೆದುಕೊಂಡು ಬರಬೇಕಾಯಿತು ಎಂದು ವಿದ್ಯಾರ್ಥಿನಿಯರ ಗುಂಪು ಹೇಳಿದೆ.

ಶುಕ್ರವಾರಕ್ಕಿಂತ ಇಂದಿನ ಪರಿಸ್ಥಿತಿ ಕಡಿಮೆ ಅಸ್ತವ್ಯಸ್ತವಾಗಿತ್ತು ಎಂದು ಕೆಲವು ಕಚೇರಿಗೆ ಹೋಗುವವರು ಹೇಳಿದರು, ಪ್ರಯಾಣಿಕರು ಈಗಾಗಲೇ ಮುಷ್ಕರದ ಬಗ್ಗೆ ತಿಳಿದಿದ್ದ ಕಾರಣ ಬಸ್ ನಿಲ್ದಾಣಗಳಲ್ಲಿ ಕಾಯುವುದನ್ನು ತಪ್ಪಿಸಿಕೊಂಡಿದ್ದು ಇದಕ್ಕೆ ಕಾರಣವಾಗಿದೆ. ಹೆಚ್ಚುವರಿಯಾಗಿ ಲೋಕಲ್ ರೈಲುಗಳು ಮತ್ತು ಮೆಟ್ರೋ ಸೇವೆಗಳು ಶನಿವಾರ ಕಡಿಮೆ ಜನದಟ್ಟಣೆಯಿಂದ ಕೂಡಿದ್ದವು, ಇದು ಮುಷ್ಕರದ ಪರಿಣಾಮವನ್ನು ಕಡಿಮೆ ಮಾಡಿತು. ಕಚೇರಿಗೆ ಹೋಗುವ ಅನೇಕ ಜನರು ಮನೆಯಿಂದಲೇ ಕೆಲಸ ಮಾಡಲು ಆಯ್ಕೆ ಮಾಡಿಕೊಂಡರು. 'ದಾದರ್ ನಿಲ್ದಾಣದ ಹೊರಗೆ ಕ್ಯಾಬ್‌ಗಳಿಗಾಗಿ ದೀರ್ಘ ಸರತಿ ಸಾಲು ಕಂಡುಬಂದಿತು. ಆದರೆ ಹಂಚಿಕೆಯ ಟ್ಯಾಕ್ಸಿ ಸೇವೆಗೆ ಧನ್ಯವಾದಗಳು, ಕೆಇಎಂ ಆಸ್ಪತ್ರೆಯಿಂದ ದಾದರ್‌ಗೆ ಹಿಂತಿರುಗುವುದು ಸಮಸ್ಯೆಯಾಗಿರಲಿಲ್ಲ' ಎಂದು ಥಾಣೆ ಜಿಲ್ಲೆಯ ಕಲ್ಯಾಣ ನಿವಾಸಿ ಧರ್ಮೇಶ್ ತಿವಾರಿ ವಿವರಿಸಿದರು.

ಬೆಸ್ಟ್ ಪ್ರಕಾರ, ಕಾರ್ಯಾಚರಣಾ ಸಿಬ್ಬಂದಿಯಲ್ಲಿ ಕಳಪೆ ಹಾಜರಾತಿಯನ್ನು ಕೂಡ ಡೇಟಾ ಪ್ರತಿಬಿಂಬಿಸುತ್ತದೆ. ಬೆಸ್ಟ್‌ನ ಸ್ವಂತ ನೌಕರರಲ್ಲಿ, 1,937 ನಿಗದಿತ ಸಿಬ್ಬಂದಿಗಳ ಪೈಕಿ ಕೇವಲ 26 ಬಸ್ ಚಾಲಕರು ಕರ್ತವ್ಯಕ್ಕೆ ಹಾಜರಾಗಿದ್ದರು, ಆದರೆ 2,646 ನಿಗದಿತ ಸಿಬ್ಬಂದಿಗಳ ಪೈಕಿ 9 ಕಂಡಕ್ಟರ್‌ಗಳು ಹಾಜರಾಗಿದ್ದರು. ಆರಂಭಿಕರಲ್ಲಿ, 228 ನಿಗದಿತ ಸಿಬ್ಬಂದಿಗಳ ನಿಯೋಜನೆಯ ನಡುವೆ 38 ಉದ್ಯೋಗಿಗಳು ಕೆಲಸಕ್ಕೆ ಹಾಜರಾಗಿದ್ದರು ಎಂದು ದತ್ತಾಂಶವು ತೋರಿಸಿದೆ.

ಬಸ್ ಇನ್ಸ್‌ಪೆಕ್ಟರ್‌ಗಳ ಹಾಜರಾತಿ ತುಲನಾತ್ಮಕವಾಗಿ ಉತ್ತಮವಾಗಿತ್ತು, 221 ನಿಗದಿತ ಸಿಬ್ಬಂದಿಗಳಲ್ಲಿ 119 ಮಂದಿ ಕರ್ತವ್ಯಕ್ಕೆ ಹಾಜರಾಗಿದ್ದರು.

ವೆಟ್-ಲೀಸ್ ಕಾರ್ಯಾಚರಣೆಗಳು ಇದೇ ರೀತಿ ಪರಿಣಾಮ ಬೀರಿದವು, 3,063 ನಿಗದಿತ ಸಿಬ್ಬಂದಿಗಳ ಪೈಕಿ ಕೇವಲ 8 ಚಾಲಕರು ಕರ್ತವ್ಯಕ್ಕೆ ಹಾಜರಾಗಿದ್ದರು, ಆದರೆ 1,137 ನಿಗದಿತ ಕಂಡಕ್ಟರ್‌ಗಳಲ್ಲಿ ಯಾರೂ ಹಾಜರಾತಿಯನ್ನು ದಾಖಲಿಸಿಲ್ಲ ಎಂದು ಬೆಸ್ಟ್ ತಿಳಿಸಿದೆ. ಮುಷ್ಕರವು ತನ್ನ ವಿದ್ಯುತ್ ಸರಬರಾಜು ಕಾರ್ಯಾಚರಣೆಗಳ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಮತ್ತು ವಿದ್ಯುತ್ ಸೇವೆಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಬೆಸ್ಟ್ ಹೇಳಿದೆ.

ಪ್ರಯಾಣಿಕರಿಗೆ ನಿರಂತರ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಸೇವೆಗಳನ್ನು ಒದಗಿಸುವುದು ಆಡಳಿತದ ಪ್ರಮುಖ ಆದ್ಯತೆಯಾಗಿದೆ ಮತ್ತು ಮುಷ್ಕರದ ಪರಿಣಾಮವನ್ನು ಕಡಿಮೆ ಮಾಡಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಅದು ತಿಳಿಸಿದೆ. ಮಹಾನಗರ ಸಾರಿಗೆ ಸಚಿವರ ಮನವಿ ಮತ್ತು ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆಯನ್ನು ಜಾರಿಗೆ ತಂದಿದ್ದರೂ, ಬೆಸ್ಟ್ ನೌಕರರು ಮುಷ್ಕರದಲ್ಲಿ ದೃಢವಾಗಿದ್ದಾರೆ.

'ಯಾವುದೇ ನಿರ್ದಿಷ್ಟ ನಿರ್ಧಾರವಿಲ್ಲದ ಕಾರಣ, ನಾವು ನಮ್ಮ ಆಂದೋಲನವನ್ನು ಮುಂದುವರಿಸಲು ನಿರ್ಧರಿಸಿದ್ದೇವೆ' ಎಂದು ಬೆಸ್ಟ್ ಸಂಯುಕ್ತ ಕಾಮ್ಗಾರ್ ಕೃತಿ ಸಮಿತಿ (ಒಕ್ಕೂಟಗಳ ಜಂಟಿ ಕ್ರಿಯಾ ಸಮಿತಿ)ಯ ಸಂಚಾಲಕ ಉದಯ್ ಅಂಬೋಂಕರ್ ಸುದ್ದಿಸಂಸ್ಥೆಗೆ ತಿಳಿಸಿದರು. ನೌಕರರು ಮುಷ್ಕರ ನಡೆಸುವುದನ್ನು ಮತ್ತು ಅಗತ್ಯ ಸೇವೆಗಳ ಅಡ್ಡಿಪಡಿಸುವಿಕೆಯನ್ನು ನಿಷೇಧಿಸುವ ಮಹಾರಾಷ್ಟ್ರ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ (ಮೆಸ್ಮಾ)ಯನ್ನು ಅನ್ವಯಿಸುವುದನ್ನು ತಡೆಯುವ ಕೈಗಾರಿಕಾ ನ್ಯಾಯಾಲಯದ ಮಧ್ಯಂತರ ಆದೇಶದ ಹೊರತಾಗಿಯೂ ಒಕ್ಕೂಟವು ಮುಷ್ಕರ ಆರಂಭವಾಯಿತು.

ಕೆಲವು ಉದ್ಯೋಗಿ ಸಂಘಗಳನ್ನು ಪ್ರತಿನಿಧಿಸುವ ಜಂಟಿ ಕ್ರಿಯಾ ಸಮಿತಿಯಾದ ಬೆಸ್ಟ್ ಸಂಯುಕ್ತ ಕಾಮ್ಗಾರ್ ಕೃತಿ ಸಮಿತಿಯು ತನ್ನ ದೀರ್ಘಕಾಲದಿಂದ ಬಾಕಿ ಇರುವ ಬೇಡಿಕೆಗಳನ್ನು ಈಡೇರಿಸಲು ಮುಷ್ಕರಕ್ಕೆ ಕರೆ ನೀಡಿದೆ. ಬೆಸ್ಟ್‌ನ ಬಜೆಟ್‌ನ್ನು ಬಿಎಂಸಿಯೊಂದಿಗೆ ವಿಲೀನಗೊಳಿಸುವುದು, 2016-2026 ಅವಧಿಗೆ ಏಳನೇ ವೇತನ ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸುವುದು, ನಿವೃತ್ತ ನೌಕರರ ಕಾನೂನುಬದ್ಧ ಬಾಕಿಗಳನ್ನು ಇತ್ಯರ್ಥಪಡಿಸುವುದು ಪ್ರಮುಖ ಬೇಡಿಕೆಗಳಲ್ಲಿ ಸೇರಿವೆ.

ಹಲವು ವರ್ಷಕಾಲ ದೇಶವನ್ನು ಆಳಲಿವೆ : ಅಮಿತ್ ಶಾಹ

ಮೊದಲ ಪುಟದಿಂದ

ಸಭೆಯನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ನಾಯಕ ಹೇಳಿದರು.

ಕೊಲ್ಹಾಪುರ ಜಿಲ್ಲೆಯ ಇಚಲಕರಂಜಿಯಲ್ಲಿ ನಡೆದ ಮತ್ತೊಂದು ಸಾರ್ವಜನಿಕ ರ್‍ಯಾಲಿಯಲ್ಲಿ ಮಾತನಾಡಿದ ಶಾಹ ಅವರು, ಮೋದಿಯವರ 12 ವರ್ಷಗಳ ಅಧಿಕಾರಾವಧಿಯು ಕೇವಲ ಆರಂಭ ಅಷ್ಟೇ. ಮುಂಬರುವ ಹಲವು ವರ್ಷಗಳ ಕಾಲ ಬಿಜೆಪಿ ಮತ್ತು ಎನ್‌ಡಿಎ ಆಡಳಿತ ಇರಲಿದೆ ಎಂದು ತಿಳಿಸಿದರು.

ಅಯೋಧ್ಯೆ ರಾಮ ಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಕಾರಿಡಾರ್, ಕೇದಾರನಾಥ ಮತ್ತು ಬದರಿನಾಥ ಮಂದಿರಗಳ ಪುನರಾಭಿವೃದ್ಧಿ ಹಾಗೂ ಸೋಮನಾಥ ಮತ್ತು ಕಾಮಾಖ್ಯ ದೇವಾಲಯಗಳ ಕಾಮಗಾರಿಗಳನ್ನು ಉಲ್ಲೇಖಿಸಿದ ಅವರು, ಒಂದು ಕಾಲದಲ್ಲಿ ಅಸಾಧ್ಯವೆಂದು ಪರಿಗಣಿಸಲಾಗಿದ್ದ ಕಾರ್ಯಗಳನ್ನು ಮೋದಿಯವರ ನಾಯಕತ್ವದಲ್ಲಿ ಸಾಧಿಸಲಾಗಿದೆ ಎಂದು ವಿವರಿಸಿದರು.

'ವಿಕಾಸ್ ಭಿ, ವಿರಾಸತ್ ಭಿ' (ಪರಂಪರೆ ಮತ್ತು ಅಭಿವೃದ್ಧಿ) ಎಂಬ ಮಂತ್ರದಡಿಯಲ್ಲಿ ದೇಶಾದ್ಯಂತ ಸಾಂಸ್ಕೃತಿಕ ಪುನರುಜ್ಜೀವನ ನಡೆಯುತ್ತಿದೆ ಮತ್ತು ಅಂಬಾಬಾಯಿ ಮಂದಿರ ಕಾರಿಡಾರ್‌ನ್ನು ಭಾರತದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮತ್ತೊಂದು ಹೆಜ್ಜೆ ಎಂದು ಅವರು ಬಣ್ಣಿಸಿದರು.

28,058 ಚದರ ಮೀಟರ್‌ಗಳಷ್ಟು ವಿಸ್ತೀರ್ಣದ ಈ 500 ಕೋಟಿ ರೂ.ಗಳ ಯೋಜನೆಯು 7ನೇ ಶತಮಾನದ ಐತಿಹಾಸಿಕ ಮಂದಿರವನ್ನು ಕೃತಕ ಬುದ್ಧಿಮತ್ತೆ ಆಧಾರಿತ ಭದ್ರತಾ ವ್ಯವಸ್ಥೆಗಳು, ಪಾರಂಪರಿಕ ಗ್ಯಾಲರಿಗಳು ಮತ್ತು ಬೆಳಕು ಮತ್ತು ಧ್ವನಿ ಪ್ರದರ್ಶನವನ್ನು ಹೊಂದಿರುವ ಆಧುನಿಕ ಯಾತ್ರಾ ಕೇಂದ್ರವಾಗಿ ಪರಿವರ್ತಿಸುತ್ತದೆ ಎಂದು ಅವರು ಹೇಳಿದರು.

ಮಹಾಲಕ್ಷ್ಮಿ ಮಂದಿರ ಮತ್ತು ಸುತ್ತಮುತ್ತಲಿನ 41 ಮಂದಿರಗಳನ್ನು ಪುರಾತತ್ವ ಇಲಾಖೆಯೊಂದಿಗೆ ಸಮಾಲೋಚಿಸಿ ಸಂರಕ್ಷಿಸಲಾಗುವುದು.ನಮ್ಮ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ ಇರುವ ಸ್ಥಳಗಳಿಗೆ 1,500 ಕೋಟಿ ರೂ.ಗಳನ್ನು ಖರ್ಚು ಮಾಡುವುದು ದೊಡ್ಡ ಮೊತ್ತವಲ್ಲ. ಅಂತಹ ಸ್ಥಳಗಳು ಇಡೀ ದೇಶಕ್ಕೆ ಸ್ಫೂರ್ತಿ ನೀಡುತ್ತವೆ ಎಂದು ಅವರು ಹೇಳಿದರು. ಇತ್ತೀಚೆಗೆ ಮೋದಿ ದೇಶದ ಅತ್ಯಂತ ದೀರ್ಘಾವಧಿಯ ಸೇವೆ ಸಲ್ಲಿಸಿದ ಪ್ರಧಾನಿಯಾಗಿದ್ದಾರೆ ಮತ್ತು ಮೂಲಸೌಕರ್ಯ ಹಾಗೂ ಉತ್ಪಾದನೆಯಿಂದ ಹಿಡಿದು ಅರೆವಾಹಕಗಳು, ಕ್ವಾಂಟಮ್ ಎಂಜಿನಿಯರಿಂಗ್, ಸಾಫ್ಟ್‌ವೇರ್ ಮತ್ತು ಬಾಹ್ಯಾಕಾಶ ತಂತ್ರಜ್ಞಾನದವರೆಗೆ ಭಾರತವನ್ನು ಬಲಪಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಅವರು ತಿಳಿಸಿದರು.

ಚಂದ್ರಯಾನ-3 ಕಾರ್ಯಾಚರಣೆಯ ಯಶಸ್ಸನ್ನು ನೆನಪಿಸಿಕೊಂಡ ಶಾಹ, ಭಾರತೀಯರು ಒಂದು ಕಾಲದಲ್ಲಿ ಚಂದ್ರನು ಬಹಳ ದೂರದಲ್ಲಿದ್ದಾರೆ ಎಂದು ನಂಬಿದ್ದರು, ಆದರೆ ಮೋದಿ ಚಂದ್ರಯಾನವನ್ನು ಚಂದ್ರನ ದಕ್ಷಿಣ ಧ್ರುವಕ್ಕೆ ಕೊಂಡೊಯ್ದು 'ಶಿವಶಕ್ತಿ ಬಿಂದು'ವನ್ನು ಸ್ಥಾಪಿಸಿ, ಪ್ರತಿಯೊಬ್ಬ ಭಾರತೀಯನನ್ನು ಹೆಮ್ಮೆಯಿಂದ ತುಂಬಿದರು ಎಂದು ಹೇಳಿದರು.

ಕಾಂಗ್ರೆಸ್ ವಿರುದ್ಧ ಟೀಕಾದಾಳಿ ಮಾಡಿದ ಶಾಹ, 12 ವರ್ಷಗಳ ಹಿಂದೆ ಯುಪಿಎ ಆಡಳಿತವಿದ್ದಾಗ ಬಾಂಬ್ ಸ್ಫೋಟಗಳು ಆಗಾಗ್ಗೆ ಸಂಭವಿಸುತ್ತಿದ್ದವು, ಆದರೆ ಆಗಿನ ಪ್ರಧಾನಿ ಮೌನವಾಗಿದ್ದರು.ಆದಾಗ್ಯೂ, ಮೋದಿಯವರ ಅವಧಿಯಲ್ಲಿ, ಉರಿ, ಪುಲ್ವಾಮಾ ಮತ್ತು ಪಹಲ್ಗಾಮ್‌ನಲ್ಲಿ ನಡೆದ ದಾಳಿಗಳಿಗೆ ಭಾರತವು ಸರ್ಜಿಕಲ್ ಸ್ಟ್ರೈಕ್ ಮತ್ತು ಆಪರೇಷನ್ ಸಿಂದೂರ್ ಮೂಲಕ ಪ್ರತಿಕ್ರಿಯಿಸಿತು ಎಂದು ಅವರು ತಿಳಿಸಿದರು.

ಕಳೆದ 12 ವರ್ಷಗಳಲ್ಲಿ ಭಾರತೀಯ ಸಶಸ್ತ್ರ ಪಡೆಗಳನ್ನು ಆಧುನೀಕರಿಸಲಾಗಿದೆ. ಒಂದು ಕಾಲದಲ್ಲಿ ದೇಶದಲ್ಲಿ ಗುಂಡುಗಳನ್ನು ಕೂಡ ತಯಾರಿಸಲಾಗುತ್ತಿರಲಿಲ್ಲ, ಆದರೆ ಈಗ ಕ್ಷಿಪಣಿಗಳನ್ನು ಸ್ಥಳೀಯವಾಗಿ ತಯಾರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಭದ್ರತಾ ಸಂಸ್ಥೆಗಳು ಕಾಶ್ಮೀರದಲ್ಲಿ ಭಯೋತ್ಪಾದನೆಯನ್ನು ನಿಯಂತ್ರಿಸಿವೆ, ಆದರೆ ಈಶಾನ್ಯ ಭಾರತ ಶಾಂತವಾಗಿದೆ ಮತ್ತು ನಕ್ಸಲಿಸಂ ಈಗ ಇತಿಹಾಸವಾಗಿದೆ ಎಂದು ಅವರು ವಿವರಿಸಿದರು.

ಕಾಂಗ್ರೆಸ್ ಎಂದಿಗೂ ರೈತರ ಬಗ್ಗೆ ಕಾಳಜಿ ವಹಿಸಲಿಲ್ಲ ಎಂದು ಆರೋಪಿಸಿದ ಬಿಜೆಪಿ ನಾಯಕ, 2004 ಮತ್ತು 2014ರ ನಡುವೆ, ಕಾಂಗ್ರೆಸ್ 60,000 ಕೋಟಿ ರೂ. ಮೌಲ್ಯದ ಕೃಷಿ ಸಾಲಗಳನ್ನು ಮನ್ನಾ ಮಾಡಿತು. ಪ್ರಧಾನಿ ಮೋದಿಯವರ ನೇತೃತ್ವದಲ್ಲಿ 22 ಕಂತುಗಳಲ್ಲಿ ಒಟ್ಟು 4,28,000 ಕೋಟಿ ರೂ.ಗಳನ್ನು ರೈತರ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂದರು.

ಸಕ್ಕರೆ ಕಾರ್ಖಾನೆಗಳು ಗಳಿಸುವ ಲಾಭದ ಮೇಲಿನ ತೆರಿಗೆಯಿಂದ ವಿನಾಯಿತಿ ನೀಡುವಂತೆ ರೈತರು ಮನವಿ ಮಾಡಿದ ಮೇಲೆ ಮೋದಿ ಸರಕಾರವು 46,000 ಕೋಟಿ ರೂ. ತೆರಿಗೆಯನ್ನು ಮನ್ನಾ ಮಾಡಿದೆ ಎಂದು ಅವರು ಹೇಳಿದರು.

ಎಥೆನಾಲ್ ಘಟಕಗಳನ್ನು ಸ್ಥಾಪಿಸಲು ಸಾಧ್ಯವಾಗದ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಒಂದು ಉಪಕ್ರಮವನ್ನು ಶಾಹ ಘೋಷಿಸಿದರಲ್ಲದೆ,ಕೊಲ್ಹಾಪುರದಲ್ಲಿ 1,500 ಕೋಟಿ ರೂ. ಮೌಲ್ಯದ ಯೋಜನೆಯನ್ನು ಸ್ಥಾಪಿಸಲಾಗುವುದು ಮತ್ತು ಅದು ಕಾರ್ಖಾನೆಗಳು ತಮ್ಮ ಉತ್ಪನ್ನಗಳನ್ನು ಸಂಸ್ಕರಿಸಲು ಸಹಾಯ ಮಾಡುತ್ತದೆ ಮತ್ತು ಲಾಭವನ್ನು ಅವರಿಗೆ ಹಿಂತಿರುಗಿಸಲಾಗುವುದು ಎಂದು ತಿಳಿಸಿದರು.

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಬಿಜೆಪಿಯ ಗೆಲುವಿನ ಬಗ್ಗೆ ಉಲ್ಲೇಖಿಸಿದ ಶಾಹ,ನಾವು ಬಂಗಾಳದ ಜನರ ನಂಬಿಕೆಗೆ ಋಣಿಯಾಗಿದ್ದೇವೆ ಮತ್ತು ಪ್ರತಿಯೊಬ್ಬ ನುಸುಳುಕೋರರನ್ನು ಗುರುತಿಸಿ ಅವರನ್ನು ದೇಶದಿಂದ ಹೊರಹಾಕುವ ಮೂಲಕ ಅದನ್ನು ಮರುಪಾವತಿಸುತ್ತೇವೆ ಎಂದು ಹೇಳಿದರು.

ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರನ್ನು ಟೀಕಿಸಿದ ಶಾಹ, ಠಾಕ್ರೆ ಕಾಂಗ್ರೆಸ್ ಮಡಿಲಲ್ಲಿ ಕುಳಿತು ನುಸುಳುಕೋರರನ್ನು ಮತಬ್ಯಾಂಕ್ ಆಗಿ ಪರಿವರ್ತಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರಲ್ಲದೆ, ಭಾರತ ಧರ್ಮಶಾಲೆಯಲ್ಲ ಎಂದು ಎಚ್ಚರಿಸಿದರು.

ಶಿವಸೇನಾ (ಯುಬಿಟಿ)ಯಲ್ಲಿನ ಸಂಭಾವ್ಯ ವಿಭಜನೆಯ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಿದ ಶಾಹ, ಮೊದಲು ಜನರು ಶಿಂದೆ ನೇತೃತ್ವದ ಬಣವನ್ನು ಪ್ರತ್ಯೇಕವಾಗಿ ಉಲ್ಲೇಖಿಸಬೇಕಾಗಿತ್ತು, ಆದರೆ 'ಈಗ ಯಾವುದೇ ಬಣ ಉಳಿದಿಲ್ಲ, ಮತ್ತು ಏಕನಾಥ್ ಶಿಂದೆ ನೇತೃತ್ವದ ಒಂದೇ ಒಂದು ಶಿವಸೇನೆ ಇದೆ' ಎಂದು ಹೇಳಿದರು.

ಕನಿಷ್ಠ 6 ಲೋಕಸಭಾ ಸಂಸದರು ಠಾಕ್ರೆ ವಿರುದ್ಧ ದಂಗೆ ಎದ್ದಿದ್ದು,ಅವರು ಆಡಳಿತಾರೂಢ ಶಿವಸೇನೆಗೆ ಸೇರುವ ಸಾಧ್ಯತೆಯಿದೆ ಎಂದು ನಂಬಲಾಗಿರುವುದರಿಂದ ಸೇನಾ (ಯುಬಿಟಿ) ಬಿಕ್ಕಟ್ಟನ್ನು ಎದುರಿಸುತ್ತಿದೆ.

'ಈ ಕಾಂಗ್ರೆಸ್ ನಾಯಕರು ಮತ್ತು ಕಾಂಗ್ರೆಸ್ ಮಡಿಲಲ್ಲಿ ಕುಳಿತಿರುವ ಉದ್ಧವ್ ಜಿ, ಒಳನುಸುಳುಕೋರರನ್ನು ಮತಬ್ಯಾಂಕ್ ಆಗಿ ಪರಿವರ್ತಿಸುವ ಮೂಲಕ ಬದುಕಲು ಬಯಸುತ್ತಾರೆ. ಈ ದೇಶವು ಧರ್ಮಶಾಲೆ (ದಾನ ಆಶ್ರಯ) ಅಲ್ಲ ಎಂದು ನಾನು ಅವರಿಗೆ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ' ಎಂದು ಅವರು ಹೇಳಿದರು.

ಮಹಾಲಕ್ಷ್ಮಿ ಮಂದಿರದಲ್ಲಿ ಹೊಸ ಪ್ರದಕ್ಷಿಣಾ ಮಾರ್ಗಕ್ಕೆ ಮತ್ತು ಪರಿವಾರ್ ದೇವತಾ ಮಂದಿರದ ಸಂರಕ್ಷಣಾ ಕಾರ್ಯಕ್ಕಾಗಿ ಶಾಹ ಕೊಲ್ಹಾಪುರದಲ್ಲಿದ್ದು,ಈ ಕಾರ್ಯಕ್ರಮಕ್ಕಾಗಿ ಶಾಹ,ಫಡ್ನವೀಸ್ ಮತ್ತು ಶಿಂದೆ ಕಾರಿನಲ್ಲಿ ಒಟ್ಟಿಗೆ ಪ್ರಯಾಣಿಸಿದರು.

ತಮ್ಮ ಪತ್ನಿಯೊಂದಿಗೆ ಮಹಾಲಕ್ಷ್ಮಿ ದೇವಿಯ ದರ್ಶನ ಪಡೆದ ಬಳಿಕ ಶಾಹ ದೇವಾಲಯದ ಆವರಣದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಉದ್ಘಾಟಿಸಿ,ದೇವಾಲಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಂಡ ಯೋಜನೆಗಳನ್ನು ಪರಿಶೀಲಿಸಿದರು.

ಮಹಾಲಕ್ಷ್ಮಿ ದೇವಸ್ಥಾನ ಅಭಿವೃದ್ಧಿ ಮಾಸ್ಟರ್‌ಪ್ಲಾನ್ ಕೊಲ್ಹಾಪುರದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಗುರುತನ್ನು ಹೆಚ್ಚಿಸುವ ಒಂದು ಉಪಕ್ರಮವಾಗಿದೆ.

ಇದು ಭಕ್ತರಿಗೆ ವಿಶ್ವ ದರ್ಜೆಯ ಸೌಲಭ್ಯಗಳನ್ನು ಒದಗಿಸುವ ಜೊತೆಗೆ ಕೊಲ್ಹಾಪುರದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳ ಬೆಳವಣಿಗೆಗೆ ಹೊಸ ನಿರ್ದೇಶನ ನೀಡುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ.ಬಂಗಾಳದ ಡಬಲ್-ಎಂಜಿನ್ ಸರಕಾರ ಹೆಚ್ಚಿನ ವೇಗದಲ್ಲಿ ಕಾರ್ಯನಿರ್ವಹಿಸುತ್ತಿದೆ; ಪ್ರಧಾನಿ ಮೋದಿ

ತಾರಕೇಶ್ವರ (ಪ.ಬಂಗಾಳ), ಜೂ.20 - ರಾಜ್ಯದಲ್ಲಿ ಡಬಲ್-ಎಂಜಿನ್ ಸಕಾರವು ಪಶ್ಚಿಮ ಬಂಗಾಳವನ್ನು ಚೇತರಿಕೆ ಮತ್ತು ಅಭಿವೃದ್ಧಿಯತ್ತ ಕೊಂಡೊಯ್ಯಲು 'ಸೂಪರ್‌ಫಾಸ್ಟ್ ಸ್ಪೀಡ್'ನಲ್ಲಿ ಕೆಲಸ ಮಾಡಲು ಆರಂಭಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಹೂಗ್ಲಿ ಜಿಲ್ಲೆಯ ತಾರಕೇಶ್ವರದಲ್ಲಿ ನಡೆದ 'ಪಶ್ಚಿಮಬಂಗಾ ದಿವಸ್' ಅಥವಾ ಪಶ್ಚಿಮ ಬಂಗಾಳ ದಿನಾಚರಣೆಯಲ್ಲಿ ಭಾಗವಹಿಸಿದ ಅವರು, ದೇಶಾದ್ಯಂತ 9.44 ಕೋಟಿಗೂ ಹೆಚ್ಚು ರೈತರಿಗೆ ಪ್ರಯೋಜನವನ್ನು ನೀಡುವ ಮೂಲಕ 18,880 ಕೋ.ರೂ ಮೌಲ್ಯದ ಪಿಎಂ-ಕಿಸಾನ್ ಯೋಜನೆಯ 23 ನೇ ಕಂತನ್ನು ಬಿಡುಗಡೆ ಮಾಡಿದರು.

ರಾಜ್ಯಪಾಲ ಆರ್.ಎನ್. ರವಿ, ಮುಖ್ಯಮಂತ್ರಿ ಸುವೇಂದು ಅಧಿಕಾರಿ, ಸಚಿವರು, ಶಾಸಕರು, ಸರಕಾರಿ ಅಧಿಕಾರಿಗಳು ಮತ್ತು ಸಾರ್ವಜನಿಕರೊಂದಿಗೆ ರಾಜ್ಯೋತ್ಸವವನ್ನು ಆಚರಿಸಲು ನಡೆದ ಅದ್ಧೂರಿ ಕಾರ್ಯಕ್ರಮದಲ್ಲಿ ಪ್ರಧಾನಿ ಭಾಗವಹಿಸಿದ್ದರು.

ಕಳೆದ ಹಲವು ದಶಕಗಳಲ್ಲಿ ರಾಜ್ಯದಲ್ಲಿನ ಹಿಂದಿನ ಎಡರಂಗ ಮತ್ತು ಟಿಎಂಸಿ ಸರಕಾರಗಳು ಅಭಿವೃದ್ಧಿಯ ಹಾದಿಯಲ್ಲಿ ಅಡೆತಡೆಗಳನ್ನು ಸೃಷ್ಟಿಸಿವೆ ಎಂದು ಅವರು ಆರೋಪಿಸಿದರು.

ಬಿಜೆಪಿ ಸರಕಾರ ಮಿಂಚಿನ ವೇಗದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ ಮತ್ತು ಸ್ಥಗಿತಗೊಂಡ ಯೋಜನೆಗಳಿಗೆ ಕೆಲಸ ಪುನರಾರಂಭವಾಗಿದೆ ಎಂದು ಪ್ರಧಾನಿ ಹೇಳಿದರು. ಈ ದಿಕ್ಕಿನಲ್ಲಿಯೇ ಇಂದು ಸಾವಿರಾರು ಕೋಟಿ ರೂ.ಗಳ ಯೋಜನೆಗಳಿಗೆ ಅಡಿಪಾಯ ಹಾಕಲಾಗಿದೆ ಮತ್ತು ಉದ್ಘಾಟನೆ ಮಾಡಲಾಗಿದೆ ಎಂದು ಮೋದಿ ತಿಳಿಸಿದರು. ರಸ್ತೆಗಳು, ಕೃಷಿ ಮತ್ತು ಮೀನು ಕೃಷಿಗೆ ಸಂಬಂಧಿಸಿದ ಯೋಜನೆಗಳು ಬಂಗಾಳದ ಅಭಿವೃದ್ಧಿಯನ್ನು ವೇಗಗೊಳಿಸುತ್ತವೆ. ಇವು ರಾಜ್ಯದ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುತ್ತವೆ ಎಂದು ಪ್ರಧಾನಿ ಹೇಳಿದರು,

ಪ್ರಧಾನ ಮಂತ್ರಿ-ಕಿಸಾನ್ ನಿಧಿಯ 23 ನೇ ಕಂತನ್ನು ಇಂದು ಬಿಡುಗಡೆ ಮಾಡಲಾಗಿದೆ. ಇಂದು ದೇಶಾದ್ಯಂತ 9 ಕೋಟಿಗೂ ಹೆಚ್ಚು ರೈತರ ಬ್ಯಾಂಕ್ ಖಾತೆಗಳಿಗೆ ಸುಮಾರು 19,000 ಕೋಟಿ ರೂ.ಗಳನ್ನು ನೇರವಾಗಿ ವರ್ಗಾಯಿಸಲಾಗಿದೆ ಎಂದು ಅವರು ತಿಳಿಸಿದರು. ದಶಕಗಳ ದುರಾಡಳಿತವು ಪಶ್ಚಿಮ ಬಂಗಾಳವನ್ನು ಮೈಲುಗಳಷ್ಟು ಹಿಂದಕ್ಕೆ ತಳ್ಳಿದೆ ಎಂದು ಮೋದಿ ಹೇಳಿದರು.

'ಹಿಂದಿನ ಸರಕಾರಗಳ ಅವಧಿಯಲ್ಲಿ ಬಂಗಾಳದ ಪರಿಸ್ಥಿತಿಯನ್ನು ನೀವೆಲ್ಲರೂ ನೋಡಿದ್ದೀರಿ. ಸಣ್ಣ ಉದ್ಯಮಗಳು ಕಾರ್ಯನಿರ್ವಹಿಸುವುದನ್ನು ನಿಲ್ಲಿಸಿದವು, ದೊಡ್ಡ ಉದ್ಯಮಗಳು ರಾಜ್ಯವನ್ನು ತೊರೆದವು.ಯುವಕರು ಉದ್ಯೋಗಾವಕಾಶಗಳನ್ನು ಕಳೆದುಕೊಂಡರು ಮತ್ತು ಒಳನುಗ್ಗುವವರು ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಿದರು' ಎಂದು ಅವರು ತಿಳಿಸಿದರು.

ಒಂದು ಕಾಲದಲ್ಲಿ ಅವಕಾಶಗಳ ಭೂಮಿಯಾಗಿದ್ದ ಪಶ್ಚಿಮ ಬಂಗಾಳ ವಲಸೆಯ ಮೂಲವಾಗಿ ಮಾರ್ಪಟ್ಟಿದೆ ಎಂದು ಮೋದಿ ವಿಷಾದಿಸಿದರು.

ರೈಲ್ವೆ, ಕೃಷಿ, ಗ್ರಾಮೀಣಾಭಿವೃದ್ಧಿ, ಮೀನುಗಾರಿಕೆ ಮತ್ತು ಪಶುಸಂಗೋಪನೆ ಕ್ಷೇತ್ರಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಪ್ರಧಾನಿ ಆರಂಭಿಸಿದರು, ಸಮರ್ಪಿಸಿದರು ಮತ್ತು ಅಡಿಪಾಯ ಹಾಕಿದರು. ಈ ಯೋಜನೆಗಳಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ, ಕೃಷಿ ಸ್ಟ್ಯಾಕ್, ನೈಸರ್ಗಿಕ ಕೃಷಿಯ ರಾಷ್ಟ್ರೀಯ ಮಿಷನ್ ಮತ್ತು ಪ್ರಧಾನ ಮಂತ್ರಿ ಧನ್-ಧಾನ್ಯ ಕೃಷಿ ಯೋಜನೆ ಸೇರಿವೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ. ಪಶ್ಚಿಮ ಬಂಗಾಳದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 315 ಕಿ.ಮೀ.ಗಿಂತ ಹೆಚ್ಚು ಉದ್ದವನ್ನು ಒಳಗೊಂಡ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಲಾದ 49 ರಸ್ತೆ ಮೂಲಸೌಕರ್ಯ ಯೋಜನೆಗಳನ್ನು ಅವರು ಉದ್ಘಾಟಿಸಿದರು.

ಮಾಜಿ ಸಚಿವ ಪದಮ್‌ಸಿಂಹ ಪಾಟೀಲ್ ಸೇರಿ 8 ಜನರ ಖುಲಾಸೆ

ಮೊದಲ ಪುಟದಿಂದ

ಪಿತೂರಿಯ ಸರಪಳಿ ಸಾಬೀತಾಗಿಲ್ಲ ಎಂದು ಅಭಿಪ್ರಾಯಪಟ್ಟ ವಿಶೇಷ ಸಿಬಿಐ ನ್ಯಾಯಾಲಯದ ನ್ಯಾಯಾಧೀಶ ಸತ್ಯನಾರಾಯಣ್ ನವಂದರ್ ಅವರು,ಪ್ರಕರಣದ 8 ಆರೋಪಿಗಳನ್ನು ಖುಲಾಸೆಗೊಳಿಸಿದರು. ನ್ಯಾಯಾಧೀಶರು ಇದು ಅತ್ಯಂತ ದುರಂತ ಘಟನೆ ಎಂದು ಹೇಳುವ ಮೂಲಕ ತೀರ್ಪನ್ನು ಓದಲಾರಂಭಿಸಿದರು ಮತ್ತು ನ್ಯಾಯಾಲಯವು ಕಾನೂನಿನ ಚೌಕಟ್ಟಿನೊಳಗೆ ಮಾತ್ರ ತೀರ್ಪು ನೀಡಬಹುದು ಎಂದು ಹೇಳಿದರು.

ಪ್ರಾಸಿಕ್ಯೂಷನ್ ಪ್ರಾಥಮಿಕವಾಗಿ ಆರೋಪಿಯಾಗಿ ಮಾರ್ಪಟ್ಟ ಪರಸ್ಮಲ್ ಜೈನ್ ಅವರ ಸಾಕ್ಷ್ಯದ ಹೇಳಿಕೆಯನ್ನು ಹೆಚ್ಚು ಅವಲಂಬಿಸಿತ್ತು. ಆದಾಗ್ಯೂ, ನ್ಯಾಯಾಲಯವು ಅವರ ಸಾಕ್ಷ್ಯವನ್ನು ಅನುಮಾನಾಸ್ಪದವೆಂದು ಕಂಡುಕೊಂಡು ಅದನ್ನು ತಿರಸ್ಕರಿಸಿತು.

ಸಾಂದರ್ಭಿಕ ಸಾಕ್ಷ್ಯಗಳ ಸರಪಳಿ ಪೂರ್ಣಗೊಂಡಿಲ್ಲ. ಪ್ರಾಸಿಕ್ಯೂಷನ್ ಅದನ್ನು ಅನುಮೋದಕನ ಸಾಕ್ಷ್ಯದೊಂದಿಗೆ ಎಳೆದು ತರಲು ಪ್ರಯತ್ನಿಸಿತು, ಆದರೆ ಅದು ತುಂಬಾ ದುರ್ಬಲವಾಗಿತ್ತು ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಾಧೀಶರು ಅವರ ಸಾಕ್ಷ್ಯವನ್ನು ಸಂಪೂರ್ಣವಾಗಿ ವಿಶ್ವಾಸಾರ್ಹವಲ್ಲ ಎಂದು ಸ್ಪಷ್ಟಪಡಿಸಿತು.

ಸಾಕ್ಷಿಗಳನ್ನು ಗಣನೀಯ ಅವಧಿಯವರೆಗೆ ಪೊಲೀಸರು ಅಕ್ರಮ ಬಂಧನದಲ್ಲಿ ಇರಿಸಿದ್ದರು. ಅವರ ಹೇಳಿಕೆಗಳಲ್ಲಿ ಹಲವು ವಿರೋಧಾಭಾಸಗಳಿದ್ದು, ಅದು ಪ್ರಾಸಿಕ್ಯೂಷನ್‌ನ ಸಂಪೂರ್ಣ ಕಥೆಯನ್ನು ಕುಸಿಯಲು ಕಾರಣವಾಯಿತು ಎಂದು ನ್ಯಾಯಾಲಯ ಹೇಳಿದೆ. ಅನುಮೋದಕನ ಸಾಕ್ಷ್ಯವನ್ನು 'ಯಾಂತ್ರಿಕ ರೀತಿಯಲ್ಲಿ' ದಾಖಲಿಸಿದ್ದಕ್ಕಾಗಿ ಮತ್ತು ಎಲ್ಲಾ ವಿವರಗಳನ್ನು ದಾಖಲೆಗೆ ತರಲು ಪ್ರಯತ್ನಿಸದಿದ್ದಕ್ಕಾಗಿ ನ್ಯಾಯಾಧೀಶರು ಪ್ರಾಸಿಕ್ಯೂಷನ್‌ನ್ನು ಟೀಕಿಸಿದರು. ಅವಿಭಜಿತ ಎನ್‌ಸಿಪಿಯ ಮಾಜಿ ಸಂಸದ ಹಾಗೂ ಉಪಮುಖ್ಯಮಂತ್ರಿ ಸುನೇತ್ರಾ ಪವಾರ್ ಅವರ ಮಲಸಹೋದರ ಪಾಟೀಲ್ (85) ಮತ್ತು ಇತರ 7 ಆರೋಪಿಗಳು ಕೊಲೆ ವಿಚಾರಣೆಯನ್ನು ಎದುರಿಸಿದರು.

ಪವನ್‌ರಾಜೆ ನಿಂಬಾಳ್ಕರ್ ಅವರ ಮಗ ಓಂಪ್ರಕಾಶ್ ರಾಜೆ ನಿಂಬಾಳ್ಕರ್ ಪ್ರಸ್ತುತ ಶಿವಸೇನೆ (ಯುಬಿಟಿ) ಯ ಲೋಕಸಭಾ ಸದಸ್ಯರಾಗಿದ್ದಾರೆ.

2006ರ ಜೂ.3ರಂದು, ಪವನ್‌ರಾಜೆ ನಿಂಬಾಳ್ಕರ್ ಮತ್ತು ಅವರ ಚಾಲಕ ಸಮದ್ ಕಾಜಿ ಮುಂಬಯಿನಿಂದ ಉಸ್ಮಾನಾಬಾದ್‌ಗೆ (ಈಗ ಧಾರಾಶಿವ್) ಹೋಗುತ್ತಿದ್ದರು. ನವಿಮುಂಬಯಿಯ ಕಲಾಂಬೋಲಿಯಲ್ಲಿ ಇಬ್ಬರು ಹಿಟ್‌ಮೆನ್ ಅವರ ಕಾರನ್ನು ಅಡ್ಡಗಟ್ಟಿ ಗುಂಡು ಹಾರಿಸಿದಾಗ ಇಬ್ಬರೂ ಸ್ಥಳದಲ್ಲೇ ಸಾವನ್ನಪ್ಪಿದರು.

ನವಿಮುಂಬಯಿ ಪೊಲೀಸರು ಆರಂಭದಲ್ಲಿ ಪ್ರಕರಣದ ತನಿಖೆ ನಡೆಸಿದ್ದರು, ಆದರೆ ಪವನ್‌ರಾಜೆ ನಿಂಬಾಳ್ಕರ್ ಅವರ ಪತ್ನಿ ತನಿಖೆಯ ಪ್ರಗತಿಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ ಮೇಲೆ ಬಾಂಬೇ ಹೈಕೋರ್ಟ್ ಅದನ್ನು ಸಿಬಿಐಗೆ ವರ್ಗಾಯಿಸಿತು.

ಕೇಂದ್ರ ತನಿಖಾ ಸಂಸ್ಥೆ ಪ್ರಕರಣವನ್ನು ವಹಿಸಿಕೊಂಡ ಬಳಿಕ ಪಾಟೀಲ್ ಅವರನ್ನು 2009ರ ಜೂನ್‌ನಲ್ಲಿ ಬಂಧಿಸಲಾಯಿತು, ಆದರೆ ರಾಯಗಡ್ ಜಿಲ್ಲೆಯ ಅಲಿಬಾಗ್‌ನಲ್ಲಿರುವ ಸೆಷನ್ಸ್ ನ್ಯಾಯಾಲಯವು ಆ ವರ್ಷ ಸೆಪ್ಟೆಂಬರ್‌ನಲ್ಲಿ ಅವರಿಗೆ ಜಾಮೀನು ನೀಡಿತು. ಪಾಟೀಲ್ ಜೊತೆಗೆ, ಪ್ರಕರಣದ ಇತರ ಆರೋಪಿಗಳಲ್ಲಿ ಲಾತೂರ್ ಮೂಲದ ಉದ್ಯಮಿ ಸತೀಶ್ ಮಂದಾಡೆ, ನಿವೃತ್ತ ರಾಜ್ಯ ಅಬಕಾರಿ ಇನ್ಸ್‌ಪೆಕ್ಟರ್ ಮೋಹನ್ ಶುಕ್ಲಾ ಮತ್ತು ಇತರರು - ದಿನೇಶ್ ತಿವಾರಿ, ಮಹಾತಮ್ ಚೌಧರಿ ಅಲಿಯಾಸ್ ಪಿಂಟು ಚೌಧರಿ, ಕೈಲಾಶ್ ಯಾದವ್, ಜ್ಞಾನೇಂದ್ರ ಪಾಂಡೆ ಅಲಿಯಾಸ್ ಧೀರೇಂದ್ರ ಪಾಂಡೆ ಅಲಿಯಾಸ್ ಛೋಟೆ ಪಾಂಡೆ ಮತ್ತು ಶಶಿಕಾಂತ್ ಕುಲಕರ್ಣಿ ಸೇರಿದ್ದಾರೆ.

ಸಿಬಿಐ ಪ್ರಕಾರ, ಪ್ರಕರಣದ ಪ್ರಮುಖ ಆರೋಪಿ ಪಾಟೀಲ್, ತೀವ್ರ ರಾಜಕೀಯ ಮತ್ತು ವ್ಯವಹಾರ ಪೈಪೋಟಿಯಿಂದಾಗಿ ತನ್ನ ಸೋದರಸಂಬಂಧಿ ಪವನ್‌ರಾಜೆ ನಿಂಬಾಳ್ಕರ್ ಅವರನ್ನು ಕೊಲ್ಲಲು ಕ್ರಿಮಿನಲ್ ಪಿತೂರಿ ನಡೆಸಿ ಸುಪಾರಿ ಹಣವನ್ನು ಪಾವತಿಸಿದ್ದಾಗಿ ಆರೋಪಿಸಲಾಗಿದೆ.

ಪವನ್‌ರಾಜೆ ನಿಂಬಾಳ್ಕರ್ ಅವರನ್ನು ಕೊಲ್ಲಲು ಪರಸ್ಮಲ್ ಜೈನ್ ಆರಂಭದಲ್ಲಿ ಮೋಹನ್ ಶುಕ್ಲಾ ಮತ್ತು ಸತೀಶ್ ಮಂದಾಡೆ ಅವರಿಂದ 30 ಲಕ್ಷ ರೂ.ಗಳ ಸುಪಾರಿಯನ್ನು ಒಪ್ಪಿಕೊಂಡಿದ್ದರು ಎಂದು ಪ್ರಾಸಿಕ್ಯೂಷನ್ ಆರೋಪಿಸಿದೆ. ಬಳಿಕ ಅವರಿಗೆ ಕ್ಷಮಾದಾನ ನೀಡಿ ಇತರ ಆರೋಪಿಗಳ ವಿರುದ್ಧ ಅನುಮೋದಕರಾದರು.

ಪ್ರಕರಣದ ವಿಚಾರಣೆ 2011ರ ಜುಲೈನಲ್ಲಿ ಆರಂಭವಾಯಿತು. 15 ವರ್ಷಗಳ ಸುದೀರ್ಘ ವಿಚಾರಣೆಯ ಸಮಯದಲ್ಲಿ, ವಿಶೇಷ ನ್ಯಾಯಾಲಯವು ಭ್ರಷ್ಟಾಚಾರ ವಿರೋಧಿ ಕಾರ್ಯಕರ್ತ ಅಣ್ಣಾ ಹಜಾರೆ ಸೇರಿದಂತೆ 128 ಸಾಕ್ಷಿಗಳನ್ನು ವಿಚಾರಣೆ ನಡೆಸಿತು.

ಇಂದು ನೀಟ್ - ಯುಜಿ ಮರುಪರೀಕ್ಷೆ ; ಬಿಗಿ ಭದ್ರತೆ

ಮೊದಲ ಪುಟದಿಂದ

ಎನ್‌ಟಿಎ ಪ್ರಕಾರ, ಮರುಪರೀಕ್ಷೆಯು ಬಹು ಸಂಸ್ಥೆಗಳು ಮತ್ತು ಆಡಳಿತ ಮಟ್ಟಗಳ ನಡುವೆ ನಿಕಟ ಸಮನ್ವಯವನ್ನು ಒಳಗೊಂಡಿರುತ್ತದೆ, ನಗರ ಮಟ್ಟದ ಕಾರ್ಯಾಚರಣೆಗಳನ್ನು ನೋಡಿಕೊಳ್ಳಲು 674 ನಗರ ಸಂಯೋಜಕರು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಸ್ವತಂತ್ರ ಮೇಲ್ವಿಚಾರಣೆಗಾಗಿ 6,669 ವೀಕ್ಷಕರನ್ನು ನಿಯೋಜಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಕೇಂದ್ರದ ಅಧೀಕ್ಷಕರು ಮತ್ತು ಮೇಲ್ವಿಚಾರಕರನ್ನು ನೇಮಿಸಲಾಗಿದೆ.

ಮರುಪರೀಕ್ಷೆಯ ಸುಗಮ ಮತ್ತು ನ್ಯಾಯಯುತ ನಡವಳಿಕೆಯನ್ನು ಖಚಿತಪಡಿಸಿಕೊಳ್ಳಲು ಪೊಲೀಸ್ ಹಾಗೂ ಜಿಲ್ಲಾಡಳಿತ ಅಧಿಕಾರಿಗಳು ಸೇರಿದಂತೆ 2 ಲಕ್ಷಕ್ಕೂ ಹೆಚ್ಚು ಸಿಬ್ಬಂದಿಗಳನ್ನು ಸಜ್ಜುಗೊಳಿಸಲಾಗಿದೆ ಎಂದು ಎನ್‌ಟಿಎ ತಿಳಿಸಿದೆ.

ಮೊದಲನೆಯದಾಗಿ, ವರ್ಧಿತ ಭದ್ರತಾ ಕ್ರಮಗಳ ಭಾಗವಾಗಿ ಪ್ರಶ್ನೆಪತ್ರಿಕೆಗಳನ್ನು ಸಾಗಿಸಲು ಭಾರತೀಯ ವಾಯುಪಡೆಯನ್ನು ತೊಡಗಿಸಿಕೊಳ್ಳಲಾಗಿದೆ.

ಈ ಮಧ್ಯೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮರುಪರೀಕ್ಷೆಗೆ ಸಿದ್ಧತೆಯನ್ನು ನಿರ್ಣಯಿಸಲು ಮತ್ತು ವ್ಯವಸ್ಥೆಗಳನ್ನು ಮೇಲ್ವಿಚಾರಣೆ ಮಾಡುವ ಸಂಬಂಧ ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸರಣಿ ಪರಿಶೀಲನಾ ಸಭೆಗಳ ಅಧ್ಯಕ್ಷತೆ ವಹಿಸಿದ್ದರು.

ಸರಕಾರವು ತಾತ್ಕಾಲಿಕವಾಗಿ ಟೆಲಿಗ್ರಾಮ್ ಪ್ರವೇಶವನ್ನು ನಿರ್ಬಂಧಿಸಿದೆ.ಈ ಕ್ರಮವು ವಂಚನೆ ಜಾಲಗಳನ್ನು ನಿಭಾಯಿಸುವ ಗುರಿಯನ್ನು ಹೊಂದಿದೆ ಎಂದು ಎನ್‌ಟಿಎ ಹೇಳಿದೆ.

ಅಭ್ಯರ್ಥಿಗಳಿಗೆ ನೇರವಾಗಿ ಅಧಿಕೃತ ನವೀಕರಣಗಳನ್ನು ಒದಗಿಸಲು ಎನ್‌ಟಿಎ ಪರಿಶೀಲಿಸಿದ ವಾಟ್ಸಾಪ್ ಸಂವಹನ ಚಾನಲ್‌ನ್ನು ಆರಂಭಿಸಿದೆ ಮತ್ತು ಸೋರಿಕೆಯಾದ ಪ್ರಶ್ನೆಪತ್ರಿಕೆಗಳು, ಉತ್ತರ ಕೀಗಳು ಅಥವಾ ಪಾವತಿಸಿದ ಸೇವೆಗಳ ಬಗ್ಗೆ ಸಾಮಾಜಿಕ ಮಾಧ್ಯಮ ವದಂತಿಗಳನ್ನು ನಂಬದಂತೆ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದೆ.

ಪ್ರಯಾಣ-ಸಂಬಂಧಿತ ಒತ್ತಡವನ್ನು ಕಡಿಮೆ ಮಾಡಲು ಮತ್ತು ಪರೀಕ್ಷಾ ಕೇಂದ್ರಗಳಿಗೆ ಸಕಾಲಿಕ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ರಾಜ್ಯ-ಚಾಲಿತ ಬಸ್ ಸೇವೆಗಳ ಮೂಲಕ ಉಚಿತ ಸಾರಿಗೆ ಸೌಲಭ್ಯಗಳನ್ನು ಒಳಗೊಂಡಂತೆ ಹಲವಾರು ರಾಜ್ಯಗಳು ಅಭ್ಯರ್ಥಿಗಳಿಗೆ ಬೆಂಬಲ ಕ್ರಮಗಳನ್ನು ಘೋಷಿಸಿವೆ.

ಅಸಾಧಾರಣ ಸಂದರ್ಭಗಳನ್ನು ಹೊರತುಪಡಿಸಿ, ಜೂ.20 ಮತ್ತು 21 ರಂದು ವಿದ್ಯಾರ್ಥಿಗಳಿಗೆ ರಜೆ ನೀಡದಂತೆ ರಾಷ್ಟ್ರೀಯ ವೈದ್ಯಕೀಯ ಆಯೋಗವು ತನ್ನ ವ್ಯಾಪ್ತಿಯಲ್ಲಿರುವ ಎಲ್ಲಾ ವೈದ್ಯಕೀಯ ಕಾಲೇಜುಗಳು ಮತ್ತು ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ. ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳು ಪರೀಕ್ಷಾ ಪ್ರಕ್ರಿಯೆಯ ಪಾವಿತ್ರ್ಯತೆ ಮತ್ತು ಸಮಗ್ರತೆಗೆ ಧಕ್ಕೆ ತರುವ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಕಂಡುಬಂದ ಕೆಲವು ನಿದರ್ಶನಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ನ್ಯಾಯಯುತ ಹಾಗೂ ಪಾರದರ್ಶಕ ಪರೀಕ್ಷೆಯನ್ನು ಖಚಿತಪಡಿಸಿಕೊಳ್ಳಲು,ಎನ್‌ಟಿಎ ಬಹು-ಹಂತದ ಭದ್ರತಾ ಚೌಕಟ್ಟನ್ನು ಜಾರಿಗೆ ತಂದಿದೆ, ಇದರಲ್ಲಿ ಮುಚ್ಚಿದ ಪ್ರೋಟೋಕಾಲ್‌ಗಳ ಅಡಿಯಲ್ಲಿ ಗೌಪ್ಯ ಸಾಮಗ್ರಿಗಳ ಅಂತ್ಯದಿಂದ ಕೊನೆಯವರೆಗೆ ಸುರಕ್ಷಿತ ನಿರ್ವಹಣೆ, ಪರೀಕ್ಷಾ ಸಾಮಗ್ರಿಗಳ ಚಲನೆಗೆ ಪೊಲೀಸ್ ಬೆಂಗಾವಲು ಹೊಂದಿರುವ ಜಿಪಿಎಸ್-ಸಕ್ರಿಯಗೊಳಿಸಿದ ವಾಹನಗಳು, ಕೇಂದ್ರೀಕೃತ ನಿಯಂತ್ರಣ ಕೊಠಡಿಗಳಿಗೆ ಸಂಪರ್ಕ ಹೊಂದಿದ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು ಮತ್ತು ನಕಲಿ ಮಾಡುವುದನ್ನು ತಡೆಗಟ್ಟಲು ಆಧಾರ್ ಆಧಾರಿತ ಬಯೋಮೆಟ್ರಿಕ್ ದೃಢೀಕರಣ ಸೇರಿವೆ ಎಂದು ಎನ್‌ಟಿಎ ಹೇಳಿದೆ.

ಅಭ್ಯರ್ಥಿಗಳು ಪಾರದರ್ಶಕ ನೀರಿನ ಬಾಟಲಿಯನ್ನು ತೆಗೆದುಕೊಂಡು ಹೋಗಲು ಅವಕಾಶವಿರುತ್ತದೆ, ಆದರೆ ಮಧುಮೇಹ ಅಭ್ಯರ್ಥಿಗಳು ಎನ್‌ಟಿಎ ಮಾರ್ಗಸೂಚಿಗಳಿಗೆ ಅನುಸಾರವಾಗಿ ಸಕ್ಕರೆ ಮಾತ್ರೆಗಳು ಮತ್ತು ಬಾಳೆಹಣ್ಣು, ಸೇಬು ಮತ್ತು ಕಿತ್ತಳೆ ಮುಂತಾದ ಹಣ್ಣುಗಳನ್ನು ಪಾರದರ್ಶಕ ನೀರಿನ ಬಾಟಲಿಯೊಂದಿಗೆ ತರಬಹುದು ಎಂದು ಅದು ಹೇಳಿದೆ.

ಅಮೆರಿಕ-ಇರಾನ್ ಮಾತುಕತೆ ಇಂದು ಸ್ವಿಟ್ಜರ್ಲೆಂಡ್‌ನಲ್ಲಿ ಆರಂಭ; ಲೆಬನಾನ್ ಸಂಘರ್ಷಕ್ಕಾಗಿ ಹಾರ್ಮುಜ್ ಮುಚ್ಚಿದ ಇರಾನ್

ಟೈರ್(ಲೆಬನಾನ್), ಜೂ.20 - ಲೆಬನಾನ್‌ನಲ್ಲಿ ಇಸ್ರೇಲ್‌ನ ನಿರಂತರ ದಾಳಿಯಿಂದ ಕೋಪಗೊಂಡ ಇರಾನ್ ಶನಿವಾರ ಅಮೆರಿಕದೊಂದಿಗಿನ ಮಧ್ಯಂತರ ಒಪ್ಪಂದಕ್ಕೆ ಎರಡು ತ್ವರಿತ ಹೊಡೆತಗಳನ್ನು ನೀಡಿದ್ದು, ಹಾರ್ಮುಜ್ ಜಲಸಂಧಿಯನ್ನು ಮುಚ್ಚಿರುವುದಾಗಿ ಮತ್ತು ತನ್ನ ಸಮಾಲೋಚಕರು ಮಾತುಕತೆಗಾಗಿ ಸ್ವಿಟ್ಜರ್‌ಲ್ಯಾಂಡ್‌ಗೆ ಹೋಗುತ್ತಿದ್ದರೂ, ಅಲ್ಲಿ ಹೆಚ್ಚಿನದು ಸಂಭವಿಸುವ ಸಾಧ್ಯತೆಯಿಲ್ಲ ಎಂದು ಘೋಷಿಸಿತು. ಈ ಮಧ್ಯೆ ಪ್ರಮುಖ ಮಧ್ಯವರ್ತಿ ಪಾಕಿಸ್ತಾನವು ತಾಂತ್ರಿಕ ಮಟ್ಟದ ಮಾತುಕತೆಗಳು ರವಿವಾರ ಸ್ವಿಟ್ಜರ್‌ಲ್ಯಾಂಡ್‌ನ ಬರ್ಗೆನ್‌ಸ್ಟಾಕ್‌ನಲ್ಲಿ ಆರಂಭವಾಗಲಿವೆ ಎಂದು ಹೇಳಿದೆ, ಕತಾರಿ ಮಧ್ಯವರ್ತಿಗಳು ಕೂಡ ಅದರಲ್ಲಿ ಭಾಗವಹಿಸುತ್ತಿದ್ದಾರೆ.

ಟೆಹ್ರಾನ್‌ನ ಮೊದಲ ದಾಳಿಯಲ್ಲಿ ಇರಾನ್‌ನ ಜಂಟಿ ಮಿಲಿಟರಿ ಕಮಾಂಡ್ ಇಸ್ರೇಲಿ ದಾಳಿಗಳು ಮತ್ತು ಅಮೆರಿಕದ ದುಷ್ಟ ನಂಬಿಕೆ ಹಾಗೂ ಯುದ್ಧವನ್ನು ಕೊನೆಗೊಳಿಸಲು ವಿಫಲವಾದ ಮೂಲಕ ತನ್ನ ಬದ್ಧತೆಗಳ ಸ್ಪಷ್ಟ ಉಲ್ಲಂಘನೆಯನ್ನು ಉಲ್ಲೇಖಿಸಿ ಜಲಸಂಧಿಯನ್ನು ಮುಚ್ಚಲಾಗಿದೆ ಎಂದು ಹೇಳಿದೆ.

ಆಕ್ರಮಣ ಮುಂದುವರಿದರೆ, ಮುಂದಿನ ಕ್ರಮಗಳನ್ನು ಯೋಜಿಸಲಾಗಿದೆ ಎಂದು ಟೆಹ್ರಾನ್ ಎಚ್ಚರಿಸಿದೆ.ಆದಾದ ಬಳಿಕ ಸ್ವಲ್ಪ ಸಮಯದ ಮೇಲೆ ಇರಾನ್‌ನ ಸಮಾಲೋಚನಾ ತಂಡವು ಮುಂದಿನ ನಿಮಿಷಗಳಲ್ಲಿ ಸ್ವಿಟ್ಜರ್‌ಲ್ಯಾಂಡ್‌ಗೆ ಹೋಗುತ್ತಿದೆ ಎಂದು ರಾಜ್ಯ ದೂರದರ್ಶನ ತಿಳಿಸಿದೆ.

ವ್ಯಾಯಾಮಕ್ಕೆ 6 ಲಕ್ಷ ಸಂಸ್ಥೆಗಳ ನೋಂದಣಿ

ಮೊದಲ ಪುಟದಿಂದ

ಇತ್ತೀಚಿನ ದಿನಗಳಲ್ಲಿ ಪೋರ್ಟಲ್‌ನಲ್ಲಿ ನೋಂದಣಿಗಳು ತೀವ್ರ ಏರಿಕೆ ಕಂಡಿದ್ದು, ಐಡಿವೈ 2026 ಆಚರಣೆಯ ಭಾಗವಾಗಲು ಜನರಲ್ಲಿ ಹೆಚ್ಚುತ್ತಿರುವ ಉತ್ಸಾಹವನ್ನು ಸೂಚಿಸುತ್ತದೆ ಎಂದು ಹೇಳಿಕೆ ತಿಳಿಸಿದೆ.

ದೇಶಾದ್ಯಂತ ಶಾಲೆಗಳು, ಕಾಲೇಜುಗಳು, ಸರಕಾರಿ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಎನ್‌ಜಿಓಗಳು ಮತ್ತು ಸಮುದಾಯ ಗುಂಪುಗಳು ಪ್ರಧಾನಿ ನೇತೃತ್ವದ ಯೋಗ ಆಚರಣೆಯಲ್ಲಿ ನೋಂದಾಯಿಸಲು ಮತ್ತು ಭಾಗವಹಿಸಲು ಮುಂದೆ ಬರುತ್ತಿವೆ ಎಂದು ಅದು ಹೇಳಿದೆ.

ಯೋಗ ಸಂಗಮ ಉಪಕ್ರಮವು ಭಾರತದಾದ್ಯಂತ 778 ಜಿಲ್ಲೆಗಳನ್ನು ಒಳಗೊಂಡಂತೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ತಲುಪಿದೆ.

ನೋಂದಣಿಗಳಲ್ಲಿ 3.22 ಲಕ್ಷಕ್ಕೂ ಹೆಚ್ಚು ಸರಕಾರಿ ಸಂಸ್ಥೆಗಳು, ಸುಮಾರು 2 ಲಕ್ಷ ಶಿಕ್ಷಣ ಸಂಸ್ಥೆಗಳು, 16,000 ಕ್ಕೂ ಹೆಚ್ಚು ಖಾಸಗಿ ಸಂಸ್ಥೆಗಳು, 5,000 ಕ್ಕೂ ಹೆಚ್ಚು ಎನ್‌ಜಿಓಗಳು ಮತ್ತು ಇತರ ವರ್ಗಗಳಿಂದ ಸುಮಾರು 44,000 ಸಂಸ್ಥೆಗಳು ಸೇರಿವೆ.

ರಾಜ್ಯಗಳಲ್ಲಿ, ಪಶ್ಚಿಮ ಬಂಗಾಳವು 2.76 ಲಕ್ಷಕ್ಕೂ ಹೆಚ್ಚು ನೋಂದಣಿಗಳೊಂದಿಗೆ ಅತಿ ಹೆಚ್ಚು ಭಾಗವಹಿಸುವಿಕೆಯನ್ನು ದಾಖಲಿಸಿದೆ, ಬಳಿಕ ರಾಜಸ್ಥಾನವು ಸುಮಾರು 1.50 ಲಕ್ಷದೊಂದಿಗೆ ಎರಡನೇ ಸ್ಥಾನದಲ್ಲಿದೆ.

ಮಹಾರಾಷ್ಟ್ರ, ಆಂಧ್ರಪ್ರದೇಶ, ಮಧ್ಯಪ್ರದೇಶ, ಅಸ್ಸಾಂ, ಉತ್ತರ ಪ್ರದೇಶ, ತಮಿಳುನಾಡು, ಒಡಿಶಾ ಮತ್ತು ಛತ್ತೀಸ್‌ಗಢಗಳು ಗಮನಾರ್ಹ ಭಾಗವಹಿಸುವಿಕೆಯನ್ನು ಹೊಂದಿರುವ ಇತರ ರಾಜ್ಯಗಳಲ್ಲಿ ಸೇರಿವೆ.

ಆಯುಷ್ ಸಚಿವಾಲಯವು ಹೆಚ್ಚಿನ ಸಂಸ್ಥೆಗಳು, ಸಂಸ್ಥೆಗಳು ಮತ್ತು ಸಮುದಾಯಗಳನ್ನು ತಮ್ಮ ಯೋಗ ಸಂಗಮ ಕಾರ್ಯಕ್ರಮಗಳನ್ನು ನೋಂದಾಯಿಸುವ ಮೂಲಕ ಈ ಬೆಳೆಯುತ್ತಿರುವ ಆಂದೋಲನಕ್ಕೆ ಸೇರಲು ಆಹ್ವಾನಿಸಿದೆ.

ಐವರ ಸಾವು, 18 ಮಂದಿಗೆ ಗಾಯ

ಮೊದಲ ಪುಟದಿಂದ

ಸಭಾ ಮಂಟಪ ಕುಸಿದು ಒಟ್ಟು 23 ಜನರು ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದಾರೆ ಎಂದು ವರದಿಯಾಗಿದೆ. ಅವರಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿದೆ.ಈ ಅಪಘಾತದಲ್ಲಿ ಗಾಯಗೊಂಡವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಮಧ್ಯೆ ಆಡಳಿತವು ತಕ್ಷಣದ ರಕ್ಷಣಾ ಕಾರ್ಯವನ್ನು ಆರಂಭಿಸಿದ್ದು ,ಉಸ್ತುವಾರಿ ಸಚಿವೆ ಮೇಘನಾ ಬೋರ್ಡಿಕರ್ ಎಲ್ಲಾ ರಕ್ಷಣಾ ಸಂಸ್ಥೆಗಳನ್ನು ಸ್ಥಳಕ್ಕೆ ಕಳುಹಿಸಿದ್ದಾರೆ. ಅನೇಕ ಆಂಬ್ಯುಲೆನ್ಸ್‌ಗಳು ಸ್ಥಳಕ್ಕೆ ತಲುಪಿದ್ದು,ಜಿಲ್ಲಾಡಳಿತ ಅಧಿಕಾರಿಗಳು ಮತ್ತು ಪೊಲೀಸರು ಸ್ಥಳಕ್ಕೆ ಧಾವಿಸಿದ್ದಾರೆ.

ಪ್ರತಿ ಶನಿವಾರ, 25 - 50 ಸಾವಿರ ಭಕ್ತರು ಈ ಹನುಮಾನ್ ದೇವಸ್ಥಾನಕ್ಕೆ ದರ್ಶನಕ್ಕೆ ಬರುತ್ತಾರೆ. ಈ ಸ್ಥಳದಲ್ಲಿ ಸಭಾ ಮಂಟಪದ ಕೆಲಸ ಬಹುತೇಕ ಪೂರ್ಣಗೊಂಡಿತ್ತು. ಆದರೆ ಕಲ್ಲಿನ ಕೀಲುಗಳನ್ನು ಸರಿಯಾಗಿ ಸರಿಪಡಿಸದ ಕಾರಣ ಈ ಸಭಾ ಮಂಟಪ ಕುಸಿದಿರಬಹುದು ಎಂದು ಶಾಸಕ ರಾಜೇಶ್ ವಿಟೇಕರ್ ಮಾಹಿತಿ ನೀಡಿದ್ದಾರೆ.

ಕ್ರೇನ್ ಸಹಾಯದಿಂದ ಅಲ್ಲಿನ ಕಲ್ಲುಗಳನ್ನು ತೆಗೆಯುವ ಕೆಲಸ ನಡೆಯುತ್ತಿದೆ. ಆದಾದ ಬಳಿಕ ಅದರ ಅಡಿಯಲ್ಲಿ ಎಷ್ಟು ಭಕ್ತರು ಸಿಲುಕಿಕೊಂಡಿದ್ದಾರೆ ಎಂಬುದರ ಕುರಿತು ಮಾಹಿತಿ ಪಡೆಯಲಾಗುವುದು ಎಂದು ವಿಟೇಕರ್ ಮಾಹಿತಿ ನೀಡಿದರು.

ಹನುಮಾನ್ ದೇವಾಲಯ ಪ್ರದೇಶದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ದೇವಾಲಯದ ಸಭಾ ಮಂಟಪದ ಕೆಲಸವನ್ನು ರಾಜಸ್ಥಾನಿ ಕಲ್ಲುಗಳನ್ನು ತರುವ ಮೂಲಕ ಮಾಡಲಾಯಿತು. ಇದರ ಕೆಲಸ ನಡೆಯುತ್ತಿತ್ತು ಮತ್ತು ಅನೇಕ ಸ್ಥಳಗಳಲ್ಲಿ ಅದಕ್ಕೆ ಬೆಂಬಲವನ್ನು ಒದಗಿಸಲಾಯಿತು.

ಅಪ್ರಾಪ್ತ ಬಾಲಕಿಯನ್ನು ಲೈಂಗಿಕ ದಂಧೆಗೆ ತಳ್ಳಿದ ಇಬ್ಬರು ಮಹಿಳೆಯರು ಸೇರಿದಂತೆ ಎಂಟು ಜನರ ಬಂಧನ

ಥಾಣೆ, ಜೂ. 20 - ಹರಿಯಾಣದ 14 ವರ್ಷದ ಬಾಲಕಿಯನ್ನು ಕಳ್ಳಸಾಗಣೆ ಮಾಡಿ, ವೇಶ್ಯಾವಾಟಿಕೆಗೆ ತಳ್ಳಿದ ಆರೋಪದ ಮೇಲೆ ಎರಡು ದಂಪತಿಗಳು ಸೇರಿದಂತೆ ಎಂಟು ಜನರನ್ನು ಬಂಧಿಸಲಾಗಿದೆ ಎಂದು ಮೀರಾ ಭಯಂದರ್ ವಸಾಯಿ ವಿರಾರ್(ಎಂಬಿವಿವಿ) ಪೊಲೀಸರು ಶನಿವಾರ ತಿಳಿಸಿದ್ದಾರೆ.

ಬಾಲಕಿಯ ಪೋಷಕರಂತೆ ನಟಿಸಿದ್ದ ಪ್ರಮುಖ ಆರೋಪಿಗಳಲ್ಲಿ ಒಬ್ಬ ಮಾರ್ಚ್‌ನಲ್ಲಿ ಸಲ್ಲಿಸಿದ್ದ ಅಪಹರಣ ದೂರಿನ ತನಿಖೆ ನಡೆಸುವಾಗ ಪೊಲೀಸರು ಲೈಂಗಿಕ ದಂಧೆಯನ್ನು ಬಯಲು ಮಾಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಂಬಿವಿವಿ ಪೊಲೀಸ್ ಉಪ ಆಯುಕ್ತ (ವಲಯ-1) ರಾಹುಲ್ ಚವಾಣ್ ಅವರು ಮಾಹಿತಿ ನೀಡಿ, ಆರೋಪಿಯು ಅಂಬಾಲದಿಂದ ಅಪ್ರಾಪ್ತ ಬಾಲಕಿಯನ್ನು ಶಿಕ್ಷಣ ನೀಡುವ ಸುಳ್ಳು ನೆಪದಲ್ಲಿ ಮುಂಬೈಗೆ ಕರೆತಂದಿದ್ದ ಎಂದು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಆರೋಪಿಗಳಲ್ಲಿ ಒಬ್ಬನಾದ ಭದ್ರತಾ ಸಿಬ್ಬಂದಿ ಸಂಜಯ್ ಗುಪ್ತಾ ಮಾರ್ಚ್ 3 ರಂದು ಭಯಂದರ್‌ನ ನವಘರ್‌ಪೊಲೀಸ್ ಠಾಣೆಗೆ ದೂರು ನೀಡಿದ ನಂತರ ಪ್ರಕರಣ ಬಯಲಾಗಿದೆ.

ತನ್ನ ಆರೈಕೆಯಲ್ಲಿರುವ 14 ವರ್ಷದ ಬಾಲಕಿ ಹೋಳಿಗೆ ಸಾಮಗ್ರಿಗಳನ್ನು ಖರೀದಿಸಲು ಹೊರಗೆ ಹೋದ ನಂತರ ಕಾಣೆಯಾಗಿದ್ದಾಳೆ ಮತ್ತು ಅಪಹರಿಸಲ್ಪಟ್ಟಿರಬಹುದು ಎಂದು ಆರೋಪಿಸಿ ದೂರು ದಾಖಲಿಸಿದ್ದಾನೆ.

ತನಿಖೆಯ ಸಮಯದಲ್ಲಿ ದೊರೆತ ಸುಳಿವು ಮೇರೆಗೆ ಪೊಲೀಸರು ಥಾಣೆ ಜಿಲ್ಲೆಯ ಭಯಂದರ್‌ನಿಂದ ಹದಿಹರೆಯದ ಬಾಲಕಿಯನ್ನು ಪತ್ತೆಹಚ್ಚಿ ರಕ್ಷಿಸಿದರು.

''ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರು ಬಾಲಕಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರಶ್ನಿಸಿದಾಗ, ದೌರ್ಜನ್ಯದ ಭಯಾನಕ ಕಥೆ ಬೆಳಕಿಗೆ ಬಂದಿತು. ದೂರುದಾರ ಗುಪ್ತಾ ತನ್ನ ಸಂಬಂಧಿಯಲ್ಲ ಎಂದು ಹುಡುಗಿ ಬಹಿರಂಗಪಡಿಸಿದಳು'' ಎಂದು ಡಿಸಿಪಿ ಚವಾಣ್ ಹೇಳಿದರು.

ಅಂಬಾಲಾದಲ್ಲಿರುವ ಹುಡುಗಿಯ ಸಂಬಂಧಿಕರಿಗೆ ಗುಪ್ತಾ ಅವಳನ್ನು ಸರಿಯಾಗಿ ನೋಡಿಕೊಳ್ಳುವುದಾಗಿ ಮತ್ತು ಅವಳ ಶಿಕ್ಷಣಕ್ಕೆ ಹಣಕಾಸು ಒದಗಿಸುವುದಾಗಿ ಭರವಸೆ ನೀಡಿದ್ದ. ಬದಲಾಗಿ, ಆತ ಅವಳನ್ನು ಮುಂಬೈಗೆ ಕರೆತಂದು ಲೈಂಗಿಕ ದಂಧೆಗೆ ಒತ್ತಾಯಿಸಿದ ಎಂದು ಪೊಲೀಸರು ತಿಳಿಸಿದ್ದಾರೆ.

ಗುಪ್ತ ಸೇರಿದಂತೆ ಹಲವಾರು ಆರೋಪಿಗಳು ತನ್ನ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ್ದಾರೆ, ಇದು ಅವಳನ್ನು ಅವರ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರೇರೇಪಿಸಿತು ಎಂದು ಬಲಿಪಶು ಪೊಲೀಸರಿಗೆ ತಿಳಿಸಿದ್ದಾಳೆ.

ನವಘರ್ ಪೊಲೀಸ್ ಠಾಣೆಯ ಹಿರಿಯ ಪೊಲೀಸ್ ಇನ್ಸ್‌ಪೆಕ್ಟರ್ ಮುಕುಂದ್ ಯಾದವ್ ಮಾತನಾಡಿ, ತನಿಖೆಯಲ್ಲಿ ಅಪ್ರಾಪ್ತ ವಯಸ್ಕಳನ್ನು ಲೈಂಗಿಕ ವ್ಯಾಪಾರಕ್ಕಾಗಿ 50,000 ರೂ.ಗೆ ಮಾರಾಟ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಆರಂಭಿಕ ಅಪಹರಣ ಪ್ರಕರಣದ ತನಿಖೆ ನಡೆಸುವಾಗ, ಈ ಆಳವಾಗಿ ಬೇರೂರಿರುವ ಲೈಂಗಿಕ ದಂಧೆ ನಮಗೆ ಕಂಡುಬಂದಿತು ಎಂದು ಯಾದವ್ ಹೇಳಿದರು. ಎಲ್ಲಾ ಎಂಟು ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ನ ವಿವಿಧ ವಿಭಾಗಗಳ ಅಡಿಯಲ್ಲಿ ಅಪಹರಣ, ಅತ್ಯಾಚಾರ, ಮದುವೆ ಅಥವಾ ಉದ್ಯೋಗದ ಸುಳ್ಳು ಭರವಸೆಯಡಿಯಲ್ಲಿ ಲೈಂಗಿಕ ಸಂಭೋಗ, ಜೊತೆಗೆ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮ ರೈಲ್ವೆ

ವಿವಿಧ ಕೆಲಸಗಳು

ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು, ಕ್ಯಾರೇಜ್ ರಿಪೇರಿ ಕಾರ್ಯಾಗಾರ, ಪಶ್ಚಿಮ ರೈಲ್ವೆ, ಎನ್.ಎಂ. ಜೋಶಿ ಮಾರ್ಗ್, ಲೋವರ್ ಪರೇಲ್, ಮುಂಬೈ 400013, ಟೆಂಡರ್‌ಆಹ್ವಾನಿಸಿದ್ದಾರೆ ಸೂಚನೆ ಸಂಖ್ಯೆ: WR-PL-ME-EST-739645-A, ದಿನಾಂಕ: 16.06.2026. ಕೆಲಸದ ಹೆಸರು: SS-I ಸಮಯದಲ್ಲಿ LHB ಬೋಗಿಗಳು ಮತ್ತು ಅವುಗಳ ಘಟಕಗಳನ್ನು ಸ್ಟ್ರಿಪ್ಪಿಂಗ್, ಸ್ಕ್ರ್ಯಾಪಿಂಗ್, ಸ್ವಚ್ಛಗೊಳಿಸುವಿಕೆ, ತೊಳೆಯುವುದು ಮತ್ತು ಬಣ್ಣ ಬಳಿಯುವುದು, ಲೋವರ್ ಪರೇಲ್ ಕಾರ್ಯಾಗಾರದಲ್ಲಿ ಕೆಲಸದ ವ್ಯಾಪ್ತಿಯ ಪ್ರಕಾರ LHB ಬೋಗಿಗಳಲ್ಲಿ ಏರ್ ಸ್ಪ್ರಿಂಗ್‌ಗಳನ್ನು ಅಳವಡಿಸುವುದು ಮತ್ತು ಕೋಚ್‌ಗಳನ್ನು ಎತ್ತುವ ಮೊದಲು LHB ಬೋಗಿಗಳನ್ನು ಪೂರ್ವ-ಸ್ಟ್ರಿಪ್ಪಿಂಗ್ ಮಾಡುವುದು ಸೇರಿದಂತೆ. ಜಾಹೀರಾತು ಮೌಲ್ಯ: ರೂ. 4,13,47,600.56. EMD: ರೂ. 8,27,000/-. ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: 13.07.2026 ರವರೆಗೆ, 15:00 ಗಂಟೆಗಳು. ಆನ್‌ಲೈನ್‌ನಲ್ಲಿ ತೆರೆಯಲು ಕೊನೆಯ ದಿನಾಂಕ ಮತ್ತು ಸಮಯ: 13.07.2026 ರಂದು 15:00 ಗಂಟೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್ www.ireps.gov.in ಗೆ ಭೇಟಿ ನೀಡಿ. 0280

ನಮ್ಮನ್ನು ಲೈಕ್ ಮಾಡಿ: facebook.com/WesternRly

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಹೆಚ್‌ಇ-03-2026-27

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗದ ಅಡಿಯ ವಿಜಯಪುರ (BJP) ಡಿಪೋದಲ್ಲಿ ವಿದ್ಯುತ್ ನಿರ್ವಹಣೆಯ ವಲಯ ಗುತ್ತಿಗೆ.	ರೂ. 7,50,000/-
2	ಹುಬ್ಬಳ್ಳಿ ವಿಭಾಗದ ಅಡಿಯ ಹೊಸಪೇಟೆ (HPT) ಡಿಪೋದಲ್ಲಿ ವಿದ್ಯುತ್ ನಿರ್ವಹಣೆಯ ವಲಯ ಗುತ್ತಿಗೆ.	ರೂ. 10,00,000/-
3	ಹುಬ್ಬಳ್ಳಿ ವಿಭಾಗದ ಅಡಿಯ ಹುಬ್ಬಳ್ಳಿ (UBL) ಡಿಪೋದಲ್ಲಿ ವಿದ್ಯುತ್ ನಿರ್ವಹಣೆಯ ವಲಯ ಗುತ್ತಿಗೆ.	ರೂ. 40,00,000/-
4	ಹುಬ್ಬಳ್ಳಿ ವಿಭಾಗದ ವಿಭಾಗದ ಅಡಿಯ ಬಳ್ಳಾರಿ (BAY) ಡಿಪೋದಲ್ಲಿ ವಿದ್ಯುತ್ ನಿರ್ವಹಣೆಯ ವಲಯ ಗುತ್ತಿಗೆ.	ರೂ. 10,00,000/-
5	ಹುಬ್ಬಳ್ಳಿ ವಿಭಾಗದ ಅಡಿಯ ಬೆಳಗಾವಿ (BGM) ಡಿಪೋದಲ್ಲಿ ವಿದ್ಯುತ್ ನಿರ್ವಹಣೆಯ ವಲಯ ಗುತ್ತಿಗೆ.	ರೂ. 15,00,000/-
6	ಹುಬ್ಬಳ್ಳಿ ವಿಭಾಗದ ಅಡಿಯ ವಾಸ್ಕೋ-ಡ-ಗಾಮಾ (VSG) ಡಿಪೋದಲ್ಲಿ ವಿದ್ಯುತ್ ನಿರ್ವಹಣೆಯ ವಲಯ ಗುತ್ತಿಗೆ.	ರೂ. 7,50,000/-
7	ಹುಬ್ಬಳ್ಳಿ ವಿಭಾಗದ ಅಡಿಯ ಕ್ಯಾಸೆಲ್ ರಾಕ್ (CLR) ಡಿಪೋದಲ್ಲಿ ವಿದ್ಯುತ್ ನಿರ್ವಹಣೆಯ ವಲಯ ಗುತ್ತಿಗೆ.	ರೂ. 10,00,000/-
8	ಹುಬ್ಬಳ್ಳಿ ವಿಭಾಗದ ವಿಭಾಗದ ಅಡಿಯ ಗದಗ (GDG) ಡಿಪೋದಲ್ಲಿ ವಿದ್ಯುತ್ ನಿರ್ವಹಣೆಯ ವಲಯ ಗುತ್ತಿಗೆ.	ರೂ. 15,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14-07-2026 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಸಾಮಾನ್ಯ / ಹುಬ್ಬಳ್ಳಿ

ಪಿಯುಬಿ/225/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR SWRRLY @SWRAILWAYHQ @sw_railways

Printed & Published by Mr. Pravin Murlidhar Shingote on behalf of Shree Ambika Printers & Publications and Printed at Shree Ambika Printers & Publications, Plot No. D-222/1/B, T T C Industrial Area, MIDC, Shiravane, Opp. D. Y. Patil Stadium, Near Mumbai-Pune Highway, Nerul (E), Navi Mumbai, Thane-400706. Published from 215, 2nd Flr, Narayan Udyog Bhavan, Industrial Estate, Lalbaug, Mumbai - 400012. Tel. : 24715208 To 2 471 5224. Founder : Late Murlidhar Ananta Shingote. Editor : Chandrashekhar Palethady (*Responsible for selection of News under the PRB Act) Regd.No.MH/by South 296 RNI No.: 56957/92 E-mail : shrirammalla@gmail.com

ಬಿಲ್ಲವರ ಎಸೋಸಿಯೇಶನ್ ಮುಂಬಯಿ : ನವಿಮುಂಬಯಿ ಸ್ಥಳೀಯ ಕಚೇರಿಯಲ್ಲಿ ಯುವ ಮಿಲನ, ತಾಂತ್ರಿಕ ಮಾಹಿತಿ ಹಾಗೂ ಒಬಿಸಿ ಪ್ರಮಾಣ ಪತ್ರ ಪಡೆಯುವ ಕುರಿತು ಮಾಹಿತಿ ಕಾರ್ಯಕ್ರಮ

ಸಮುದಾಯ ಭವನದಲ್ಲಿ ನಿರಂತರ ಕಾರ್ಯಕ್ರಮ ಜರಗುತ್ತಿರಲಿ - ಪುರುಷೋತ್ತಮ ಎಸ್. ಕೋಟ್ಯಾನ್





ನವಿಮುಂಬಯಿ, ಜೂ. 20- ಬಿಲ್ಲವರ ಎಸೋಸಿಯೇಶನ್ ಮುಂಬಯಿ ಇದರ ನವಿಮುಂಬಯಿ ಸ್ಥಳೀಯ ಕಚೇರಿ ವತಿಯಿಂದ ನವಿಮುಂಬಯಿ ಸಮುದಾಯ ಭವನದಲ್ಲಿ ನಿರಂತರ ಕಾರ್ಯಕ್ರಮ ಜರಗುತ್ತಿರುವುದು ತುಂಬಾ ಸಂತೋಷದ ವಿಷಯ. ಇಲ್ಲಿಯ ಕಾರ್ಯಾಧ್ಯಕ್ಷರ ಕೊಡುಗೆ ಶ್ಲಾಘನೀಯ ಎಂದು ಬಿಲ್ಲವರ ಎಸೋಸಿಯೇಶನ್ ಮುಂಬಯಿಯ ಉಪಾಧ್ಯಕ್ಷ ಹಾಗೂ ನವಿಮುಂಬಯಿ ಪ್ರತಿನಿಧಿಯಾದ ಪುರುಷೋತ್ತಮ ಎಸ್. ಕೋಟ್ಯಾನ್ ನವಿಮುಂಬಯಿ ಸ್ಥಳೀಯ ಸಮಿತಿಯ ವತಿಯಿಂದ ಆಯೋಜಿಸಿದ್ದ ಯುವಕರ ಮಿಲನ, ತಾಂತ್ರಿಕ ಮತ್ತು ಡಿಜಿಟಲ್ ಉಪಯೋಗ ಹಾಗೂ ಒಬಿಸಿ ದೃಢೀಕರಣ ಪತ್ರ ಪಡೆಯುವ ಮಾಹಿತಿ ಕೊಡುವ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅವರು ಮಾತನಾಡುತ್ತಾ, ನಮ್ಮ ಅಧ್ಯಕ್ಷರಾದ ಹರೀಶ್ ಅಮೀನ್ ಅವರ ಹತ್ತಿರ ಹಲವಾರು ಸಮಾಜೋಪಯೋಗಿ ಯೋಜನೆಗಳಿವೆ. ನಾವೆಲ್ಲರೂ ಅವರಿಗೆ ಬೆಂಬಲ ನೀಡಿ ಸಮಾಜದ ಏಳಿಗೆಗಾಗಿ ಪ್ರಯತ್ನಿಸಬೇಕು. ನಾನು ಹಲವಾರು ಸಂಸ್ಥೆಗಳಲ್ಲಿ ಹಾಗೂ ಅಧ್ಯಕ್ಷರೊಂದಿಗೆ ಕೆಲಸ ಮಾಡಿದ್ದೇನೆ. ಆದರೆ ಹರೀಶ್ ಅಮೀನ್‌ರವರ ಯೋಜನೆ ಹಾಗೂ ಕಾರ್ಯಾಚರಣೆಗಳು ಪ್ರಶಂಸನೀಯ. ಅವರೊಂದಿಗೆ ದುಡಿಯಲು ಹೆಮ್ಮೆ ಎನಿಸುತ್ತದೆ ಎಂದರು.

ನವಿಮುಂಬಯಿ ಸ್ಥಳೀಯ ಸಮಿತಿಯ ಕಾರ್ಯಾಧ್ಯಕ್ಷ ವಿಶ್ವನಾಥ ಕೆ. ಪೂಜಾರಿ ಮಾತನಾಡುತ್ತಾ, ನಮ್ಮ ಯುವಕರು ಎಸೋಸಿಯೇಶನಿನ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ನಾವು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ನೀಡುತ್ತಿದ್ದೇವೆ. ಹಲವಾರು ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದು ಈಗ ದೊಡ್ಡ ದೊಡ್ಡ ಕಂಪೆನಿಗಳಲ್ಲಿ ವಿವಿಧ ಹುದ್ದೆಗಳನ್ನು ಹೊಂದಿರುತ್ತಾರೆ. ಅವರು ಎಸೋಸಿಯೇಶನಿನೊಂದಿಗೆ ಸಂಪರ್ಕದಲ್ಲಿದ್ದು ಕಲಿಯುವ ಬಡ ಸ್ವಜಾತಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಕೊಟ್ಟು ಸಹಕರಿಸಬೇಕೆಂದು ವಿನಂತಿಸಿದರು. ಮುಂದಿನ ರವಿವಾರ ಆಗುವ ವೈದ್ಯಕೀಯ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಪಾಲ್ಗೊಂಡು ಅದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಕರೆ ಕೊಟ್ಟರು. ಇಂದಿನ ಒಬಿಸಿ ಮತ್ತು ಐಟಿ ಮಾಹಿತಿ ಕಾರ್ಯಕ್ರಮದ ಉಪಯುಕ್ತ ಮಾಹಿತಿಯ ಸದುಪಯೋಗವನ್ನು ನಮ್ಮ ಸಮಾಜ ಬಾಂಧವರು ಪಡೆಯಬೇಕು. ನಾವು ಬೇಕಾದ ಸಹಕಾರವನ್ನು ನೀಡಲು ಸದಾ ಸಿದ್ಧರಿದ್ದೇವೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ, ಸೆಪ್ಟೆಂಬರ್‌ನಲ್ಲಿ ಗುರು ಜಯಂತಿ, ನವೆಂಬರ್ ತಿಂಗಳಲ್ಲಿ ನವಿಮುಂಬಯಿಯ ಸಮಾಜ ಬಾಂಧವರಿಗೆ ಆಟೋಟ ಸ್ಪರ್ಧೆ ಆಯೋಜಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ತಿಳಿಸಿದರು.

ಎಸೋಸಿಯೇಶನಿನ ಯುವ ಅಭ್ಯುದಯ ಉಪ ಸಮಿತಿಯ ಕಾರ್ಯಾಧ್ಯಕ್ಷ ನಿಲೇಶ್ ಪೂಜಾರಿ ಪಲಿಮಾರು ಮಾತನಾಡುತ್ತಾ, ಮುಂದಿನ ದಿನಗಳಲ್ಲಿ ಯುವಕರಿಂದಲೇ ನಮ್ಮ ಸಮಾಜ ನಡೆಯಬೇಕು. ಯಾವುದೇ ಸಂದರ್ಭದಲ್ಲಿ ಅಂದರೆ ಆಟೋಟ ಸ್ಪರ್ಧೆ ಇರಲಿ, ವಿಹಾರ ಕೂಟವಿರಲಿ ಅಥವಾ ಬೇರೆ ಯಾವುದೇ ಕಾರ್ಯಕ್ರಮವಿರಲಿ, ಯುವಕರು ಮುಂದೆ ಬಂದು ಕೆಲಸ ಮಾಡಬೇಕೆಂದು ಕರೆಯಿತ್ತರು.

ಕೇಂದ್ರ ಕಚೇರಿಯ ಐಟಿ ಮತ್ತು ಪ್ರಸಾರ ಸಮಿತಿಯ ಕಾರ್ಯದರ್ಶಿ ನವೀನ್ ಕುಮಾರ್ ಅಮೀನ್ ಐಟಿ ಮತ್ತು ಡಿಜಿಟಲ್ ಉಪಯೋಗದ ಬಗ್ಗೆ ಮಾಹಿತಿ ನೀಡುತ್ತಾ, ಇಂದಿನ ದಿನಗಳಲ್ಲಿ ತಾಂತ್ರಿಕ ಮತ್ತು ಡಿಜಿಟಲ್ ಉಪಯೋಗವು ತುಂಬಾ ಉಪಯುಕ್ತವಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ತಾಂತ್ರಿಕ ಸಂಶೋಧನೆ ಬರಲಿದೆ. ಅದರಿಂದ ನಮ್ಮ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸಗಳೆಲ್ಲ ತಾಂತ್ರಿಕ ವಿಧಾನದಿಂದ ತುಂಬಾ ಸುಲಭವಾಗಲಿದೆ ಎಂದು ತಿಳಿಸಿದರು.

ಕೇಂದ್ರ ಕಚೇರಿಯ ಐಟಿ ಮತ್ತು ಪ್ರಸಾರ ಸಮಿತಿಯ ಕಾರ್ಯಾಧ್ಯಕ್ಷ ಸುರೇಶ್ ಅಂಚನ್ ಮಾತನಾಡುತ್ತಾ, ಇನ್ನೂ ಮುಂದಿನ ದಿನಗಳಲ್ಲಿ ನಮ್ಮ ಮಕ್ಕಳು ಐಟಿಯಲ್ಲಿ ಮುಂದುವರಿದಷ್ಟು ಒಳ್ಳೆಯದು. ಈಗಿನ ಕಾಲದಲ್ಲಿ ಚಿಕ್ಕ-ಚಿಕ್ಕ ಮಕ್ಕಳು ಕೂಡಾ ಮೊಬೈಲ್ ಉಪಯೋಗವನ್ನು ಕಲಿಯುತ್ತಿದ್ದಾರೆ. ಇನ್ನು ಮುಂದಿನ ದಿನಗಳಲ್ಲಿ ಯಾವ ವಿಧಗಳಲ್ಲಿ ಐಟಿ ಕ್ಷೇತ್ರ ಮುಂದುವರಿಯುತ್ತದೆ ಎಂದು ತಿಳಿಸಲು ಅಸಾಧ್ಯ. ನಮ್ಮ ಸಮಾಜದ ಯುವಕರಿಗೆ ಉಚಿತವಾಗಿ ತರಬೇತಿ ನೀಡಿ ಅದರ ಉಪಯೋಗವನ್ನು ವೈಯಕ್ತಿಕವಾಗಿಯೂ ಹಾಗೂ ಸಮಾಜದ ಏಳಿಗೆಗಾಗಿಯೂ ಬಳಸಬಹುದು.

ಕೇಂದ್ರ ಕಚೇರಿಯ ಉಪಾಧ್ಯಕ್ಷ ಮೋಹನ್ ಕೋಟ್ಯಾನ್ ಮಾತನಾಡುತ್ತಾ, ನಮ್ಮ ಸಮಾಜದ ಎಲ್ಲರೂ ಒಬಿಸಿ ಪ್ರಮಾಣಪತ್ರ ಪಡೆಯಬೇಕು. ಅದಕ್ಕೆ ಬೇಕಾದ ಸಹಕಾರ ಪ್ರೋತ್ಸಾಹವನ್ನು ಕೊಡಲಾಗುವುದು ಹಾಗೂ ಒಬಿಸಿ ಪ್ರಮಾಣ ಪತ್ರ ಪಡೆಯಲು ಬೇಕಾದ ಕಾಗದ ಪತ್ರಗಳ ವಿವರವನ್ನು ತಿಳಿಸಿದರು. ಒಬಿಸಿ ಪ್ರಮಾಣ ಪತ್ರದ ಪ್ರಯೋಜನವನ್ನು ವಿಸ್ತಾರವಾಗಿ ತಿಳಿಸಿದರು.

ಯುವ ಅಭ್ಯುದಯ ಉಪ ಸಮಿತಿಯ ಗೌ. ಕಾರ್ಯದರ್ಶಿ ಯೋಗೇಶ್ ಪೂಜಾರಿ, ಹರೀಶ್ ಕೋಟ್ಯಾನ್ ಸಂದರ್ಭೋಚಿತವಾಗಿ ಮಾತನಾಡಿದರು. ಕಾರ್ಯದರ್ಶಿ ಹರೀಶ್ ಪೂಜಾರಿ ಕಾರ್ಯಕ್ರಮವನ್ನು ನಿರೂಪಿಸಿದರು. ಅಂದಿನ ಪ್ರೀತಿ ಭೋಜನ ವ್ಯವಸ್ಥೆಯನ್ನು ಲಕ್ಷ್ಮಣ್ ಕುಂದರ್ ಆಯೋಜಿಸಿದರು. ಧನ್ಯವಾದಗಳೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಬಂಟರ ಸಂಘ ಮುಂಬಯಿ : ಮೀರಾ - ಭಾಯಂದರ್ ಪ್ರಾದೇಶಿಕ ಸಮಿತಿ ವತಿಯಿಂದ ಜೂ. 21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮೀರಾರೋಡ್, ಜೂ. 20 - ಬಂಟರ ಸಂಘ ಮುಂಬಯಿ , ಮೀರಾ -ಭಾಯಂದರ್ ಪ್ರಾದೇಶಿಕ ಸಮಿತಿ ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಜೂ. 21ರ ರವಿವಾರ ಬೆಳಿಗ್ಗೆ ಗಂಟೆ 8 ರಿಂದ 11ರ ವರೆಗೆ ಮೀರಾ -ಭಾಯಂದರ್ ದೀಪಕ್ ಹಾಸ್ಪಿಟಲ್‌ನ ಎದುರಿರುವ ಪಯ್ಯಾಡೆ ಇಂಟರ್‌ನ್ಯಾಷನಲ್ ಹೋಟೆಲ್ ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ ಪ್ರವೀಣ್ ಭೋಜ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜೊತೆ ಕಾರ್ಯದರ್ಶಿ ಗಿರೀಶ್ ಆರ್. ಶೆಟ್ಟಿ ತೆಳ್ಳಾರ್, ಮಹಿಳಾ ವಿಭಾಗ ಕಾರ್ಯಾಧ್ಯಕ್ಷೆ ಚಿತ್ರಾ ಆರ್. ಶೆಟ್ಟಿ ಮತ್ತು ಪಶ್ಚಿಮ ವಲಯ ಸಮನ್ವಯಕ ಭಾಸ್ಕರ್‌ಶೆಟ್ಟಿ ಖಾಂದೇಶ ಅವರ ಉಸ್ಥಿತಿಯಲ್ಲಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಗುತ್ತಿನಾರ್ ರವೀಂದ್ರ ಶೆಟ್ಟಿ, ಮಹಿಳಾ ವಿಭಾಗ ಕಾರ್ಯಾಧ್ಯಕ್ಷೆ ವಸಂತಿ ಎಸ್. ಶೆಟ್ಟಿ ಮುಂದಾಳುತ್ವದಲ್ಲಿ ನಡೆಯಲಿದೆ.

ಯೋಗ ಗುರು ಸಂಧ್ಯಾ ಶೆಟ್ಟಿ ಮತ್ತು ನಳಿನಿ ಶೆಟ್ಟಿ ಅವರು ಮಾರ್ಗದರ್ಶನದಲ್ಲಿ ನಡೆಯಲಿರುವ ಯೋಗ ಕಾರ್ಯಕ್ರಮಕ್ಕೆ ಸಮಾಜ ಬಾಂಧವರು ಯೋಗ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ಪ್ರಾದೇಶಿಕ ಸಮಿತಿಯ ಪದಾಧಿಕಾರಿಗಳು, ಮಹಿಳಾ ವಿಭಾಗ ಕಾರ್ಯಾಧ್ಯಕ್ಷೆ ವಸಂತಿ ಎಸ್. ಶೆಟ್ಟಿ , ಉಪಕಾರ್ಯಾಧ್ಯಕ್ಷೆ ಸುಜಾತಾ ಶೆಟ್ಟಿ, ಕಾರ್ಯದರ್ಶಿ ಸುಮಂಗಳ ಶೆಟ್ಟಿ ಕಣಂಜಾರ್, ಕೋಶಾಧಿಕಾರಿ ವಂದನಾ ಶೆಟ್ಟಿ, ಜೊತೆ ಕಾರ್ಯದರ್ಶಿ ಶಿಲ್ಪಾ ಶೆಟ್ಟಿ , ಜೊತೆ- ಕೋಶಾಧಿಕಾರಿ ಅಶ್ವಿನಿ ಶೆಟ್ಟಿ ಮತ್ತು ಯುವ ವಿಭಾಗ ಕಾರ್ಯಾಧ್ಯಕ್ಷ ವೃಷಬ್ ಕೆ. ಶೆಟ್ಟಿ ಮತ್ತಿತರ ಪದಾಧಿಕಾರಿಗಳು ವಿವಿಧ ಉಪಸಮಿತಿಯ ಪದಾಧಿಕಾರಿಗಳು ಮತ್ತು ಪ್ರಾದೇಶಿಕ ಸಮಿತಿಯ ಸರ್ವ ಸದಸ್ಯರು ಪ್ರಕಟಣೆಯಲ್ಲಿ ವಿನಂತಿಸಿಕೊಂಡಿದ್ದಾರೆ.

ಮೊಗವೀರ ಮಹಾಜನ ಸೇವಾ ಸಂಘ (ಬಗ್ವಾಡಿ ಹೋಬಳಿ) ಡೊಂಬಿವಲಿ ಸಮಿತಿ

ಜುಲೈ 5ರಂದು ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮ

ಡೊಂಬಿವಲಿ, ಜೂ. 20- ಮೊಗವೀರ ಮಹಾಜನ ಸೇವಾ ಸಂಘ (ಬಗ್ವಾಡಿ ಹೋಬಳಿ) ಡೊಂಬಿವಲಿ ಸ್ಥಳೀಯ ಸಮಿತಿಯ ವತಿಯಿಂದ ಡೊಂಬಿವಲಿ - ಕಲ್ಯಾಣ್ ಪರಿಸರದ ಸಂಘದ ಸದಸ್ಯರ ಮಕ್ಕಳಿಗಾಗಿ (ನರ್ಸರಿಯಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ) ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮವು ಜುಲೈ 5ರ ರವಿವಾರ ಸಂಜೆ 4:00 ಗಂಟೆಗೆ ಡೊಂಬಿವಲಿ ಪಶ್ಚಿಮದ ಪ್ರೀತಿ ಸಭಾಗೃಹ, ಎಂ. ಜಿ. ರೋಡ್, ರೈಲ್ವೆ ನಿಲ್ದಾಣದ ಎದುರು ಇಲ್ಲಿ ಏರ್ಪಡಿಸಲಾಗಿದೆ.

ನರ್ಸರಿಯಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳು ಜೂ. 28ರ ಆದಿತ್ಯವಾರದೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಅಂದು ಜೂ. 28ರ ಆದಿತ್ಯವಾರದಂದು ಸಂಘದ ಕಚೇರಿಯಿಂದ ಮಕ್ಕಳು ಟೋಕನ್ ಪಡೆದುಕೊಳ್ಳಬೇಕು.

ವಿದ್ಯಾರ್ಥಿಗಳ ಹೆಸರು ಮತ್ತು ತರಗತಿಯನ್ನು ತಿಳಿಸಲು ಸಂಘದ ಸದಸ್ಯರಾದ ಅಮೃತಾ ಮೊಗವೀರ (98926 94122), ಸುಮತಿ ಮೊಗವೀರ (70450 99578), ದಿನೇಶ್ ಪುತ್ರನ್ (87792 95645) ಹಾಗೂ ಸಂತೋಷ್ ಪುತ್ರನ್ (99300 23998) ಅವರನ್ನು ಸಂಪರ್ಕಿಸಬೇಕೆಂದು ಸಂಘದ ಗೌರವ ಕಾರ್ಯಾಧ್ಯಕ್ಷರು, ಕಾರ್ಯಾಧ್ಯಕ್ಷರು, ಕಾರ್ಯದರ್ಶಿ ಮತ್ತು ಕಾರ್ಯಕಾರಿ ಸಮಿತಿಯ ಸರ್ವ ಸದಸ್ಯರು ವಿನಂತಿಸಿಕೊಂಡಿದ್ದಾರೆ.

ವಸಾಯಿ ಪಶ್ಚಿಮದಲ್ಲಿ ಶುಭಾರಂಭಗೊಳ್ಳಲಿರುವ ಮಾತೃಭೂಮಿ ಕೋ - ಆಪರೇಟಿವ್ ಕ್ರೆಡಿಟ್ ಸೊಸೈಟಿಯ ನೂತನ ಶಾಖೆಯಲ್ಲಿ ವೈದಿಕ ಪೂಜಾ ಕಾರ್ಯಗಳು




ವಸಾಯಿ, ಜೂ.20- ಮುಂಬಯಿ ಬಂಟ ಸಮಾಜದ ಬಂಧುಗಳ ಆಡಳಿತದಲ್ಲಿರುವ ಬಂಟರ ಸಂಘದ ಮಾತೃಭೂಮಿ ಕೋ- ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್‌ನ ವಸಾಯಿ ಪಶ್ಚಿಮದ ಅಂಬಾಡಿ ರೋಡ್‌ನ ವಿಶ್ವಕರ್ಮ ನಗರ ಬಳಿ ಇರುವ ಬಿಲ್ಡಿಂಗ್ ನಂಬರ್ 5, ಶಾಪ್ ನಂಬರ್ 9 ಇಲ್ಲಿ ನೂತನವಾಗಿ ಪ್ರಾರಂಭಗೊಳ್ಳಲಿರುವ ಶಾಖೆಯಲ್ಲಿ ಜೂನ್ 19ರಂದು ಧಾರ್ಮಿಕ ಪೂಜಾ ಕಾರ್ಯಗಳು ಮಾತೃಭೂಮಿ ಸೊಸೈಟಿ ಕಾರ್ಯಾಧ್ಯಕ್ಷರಾಗಿರುವ ಉಳ್ತೂರು ಮೋಹನದಾಸ್ ಶೆಟ್ಟಿ ಉಪಸ್ಥಿತಿಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಸೊಸೈಟಿಯ ಕಾರ್ಯದರ್ಶಿ ಕಿಶೋರ್‌ಕುಮಾರ್‌ಕುತ್ಯಾರು, ಶಶಿಧರ್‌ಕೆ. ಶೆಟ್ಟಿ ಇನ್ನಂಜೆ, ಬಂಟರ ಸಂಘದ ವಸಾಯಿ- ಡಹಾಣು ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಮಂಜುನಾಥ್ ಶೆಟ್ಟಿ ಕೊಡ್ಲಾಡಿ ಹಾಗೂ ಮಾತೃಭೂಮಿಯ ಸಲಹಾ ಸಮಿತಿ ಸದಸ್ಯ, ಆಡಳಿತ ಸಿಬ್ಬಂದಿ ವರ್ಗ, ಡೈಲಿ ಕಲೆಕ್ಷನ್ ಏಜೆಂಟ್‌ರು ಉಪಸ್ಥಿತರಿದ್ದರು.



ಮುಂಬಯಿ ಈಗ ದೇಶದ ಅತ್ಯಾಧುನಿಕ ವೈದ್ಯಕೀಯ ಹಬ್: ಶಸ್ತ್ರಚಿಕಿತ್ಸೆರಹಿತ ಹೃದಯ ಚಿಕಿತ್ಸೆಯಲ್ಲಿ ಶೇ.25ರಷ್ಟು ಏರಿಕೆ!



ಮುಂಬಯಿ, ಜೂ.20 - ಮುಂಬಯಿ ನಗರದಲ್ಲಿ ಅತ್ಯಾಧುನಿಕ ಮತ್ತು ಶಸ್ತ್ರಚಿಕಿತ್ಸೆಯಿಲ್ಲದ ಹೃದಯ ಚಿಕಿತ್ಸೆಗಳ ಸಂಖ್ಯೆಯಲ್ಲಿ ಭಾರೀ ಹೆಚ್ಚಳ ಕಂಡುಬಂದಿದೆ. ವಿಶೇಷವಾಗಿ ತೀವ್ರತರದ 'ಅಯೋರ್ಟಿಕ್ ಸ್ಟೆನೋಸಿಸ್' (ಹೃದಯದ ಕವಾಟದ ಸಂಕೋಚನ) ಹೊಂದಿರುವ ರೋಗಿಗಳಿಗೆ 'ಟಿಎವಿಆರ್'(ಟ್ರಾನ್ಸ್‌ಕ್ಯಾತಿಟರ್‌ಅಯೋರ್ಟಿಕ್ ವಾಲ್ವ್ ರಿಪ್ಲೇಸ್‌ಮೆಂಟ್)ಚಿಕಿತ್ಸಾ ಪದ್ಧತಿಯು ಮೊದಲ ಆದ್ಯತೆಯಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಮುಂಬಯಿಯಲ್ಲಿ 'ಟಿಎವಿಆರ್' ಪ್ರಕ್ರಿಯೆಗಳ ಸಂಖ್ಯೆ ಶೇ.25ರಷ್ಟು ಹೆಚ್ಚಾಗಿದೆ.

ಅಯೋರ್ಟಿಕ್ ಸ್ಟೆನೋಸಿಸ್ ಸಾಮಾನ್ಯವಾಗಿ 60 ವರ್ಷ ಮೇಲ್ಪಟ್ಟವರಲ್ಲಿ ಕಂಡುಬರುವ ಗಂಭೀರ ಕಾಯಿಲೆಯಾಗಿದ್ದು, ಉಸಿರಾಟದ ತೊಂದರೆ, ಆಯಾಸ ಮತ್ತು ಎದೆನೋವು ಇದರ ಪ್ರಮುಖ ಲಕ್ಷಣಗಳಾಗಿವೆ. ಸಾಂಪ್ರದಾಯಿಕ ಮುಕ್ತ ಹೃದಯ ಶಸ್ತ್ರಚಿಕಿತ್ಸೆಗೆ (ಓಪನ್ ಹಾರ್ಟ್ ಸರ್ಜರಿ) ಹೋಲಿಸಿದರೆ, ಈ ಅತ್ಯಾಧುನಿಕ 'ಮಿನಿಮಲಿ ಇನ್ವೇಸಿವ್' ಚಿಕಿತ್ಸೆಯಿಂದಾಗಿ ರೋಗಿಗಳು ಕೇವಲ 2-3 ದಿನಗಳಲ್ಲಿ ಚೇತರಿಸಿಕೊಂಡು ಮನೆಗೆ ಮರಳಬಹುದಾಗಿದೆ. ಇತ್ತೀಚಿನ ತಂತ್ರಜ್ಞಾನ ಮತ್ತು ಹೈಬ್ರಿಡ್ ಕ್ಯಾಥ್ ಲ್ಯಾಬ್‌ಗಳ ನೆರವಿನಿಂದಾಗಿ ಕ್ಲಿಷ್ಟಕರ ಹೃದಯ ಕಾಯಿಲೆಗಳಿಗೆ ನಿಖರ ಹಾಗೂ ಸುರಕ್ಷಿತ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿದೆ. ಇದು ರೋಗಿಗಳ ಜೀವನದ ಗುಣಮಟ್ಟವನ್ನು ಸುಧಾರಿಸಿದೆ ಎಂದು ಎಸ್. ಎಲ್. ರಹೇಜಾ ಆಸ್ಪತ್ರೆಯ ಹೃದ್ರೋಗ ತಜ್ಞರಾದ ಡಾ. ಹರೇಶ್ ಮೆಹ್ತಾ ತಿಳಿಸಿದ್ದಾರೆ. ಜಾಗತಿಕ ಸಂಶೋಧನೆಗಳೂ ಸಹ 'ಟಿಎವಿಆರ್' ಚಿಕಿತ್ಸೆಯು ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಯಷ್ಟೇ ಪರಿಣಾಮಕಾರಿ ಮತ್ತು ಸುರಕ್ಷಿತ ಎಂದು ಸಾಬೀತುಪಡಿಸಿವೆ. ಪ್ರಸ್ತುತ ದೇಶ-ವಿದೇಶಗಳಿಂದಲೂ ರೋಗಿಗಳು ಇಲ್ಲಿಗೆ ಬರುತ್ತಿದ್ದು, ಮುಂಬಯಿ ಜಾಗತಿಕ ಮಟ್ಟದ ಕಾರ್ಡಿಯಾಕ್ ಕೇರ್ ಹಬ್ ಆಗಿ ಹೊರಹೊಮ್ಮುತ್ತಿದೆ.



ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್ ಅವರನ್ನು ಹೈದರಾಬಾದ್‌ನಲ್ಲಿರುವ ಅವರ ನಿವಾಸದಲ್ಲಿ ಇತ್ತೀಚೆಗ ಶ್ರೀಬಾಲಾಜಿ ಮತ್ತು ಆಂಜನೇಯ ಸ್ವಾಮಿ ಸನ್ನಿಧಿ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿ ಮಠ ಖಾರ್ಘರ್, ಶಾಖೆ ಇದರ ಮೇಲ್ ವಿಚಾರಕರಾದ ಹಾಗೂ ಔರಂಗಾಬಾದ್ ಕ್ರಿಕೆಟ್ ಅಸೋಸಿಯೇಷನ್‌ನ ಮಾಜಿ ಕಾರ್ಯದರ್ಶಿ ರಾಮಕೃಷ್ಣ ತೇರ್ಕರ್ ಹಾಗೂ 'ಫ್ಯುಯೆಲ್' ಸಂಸ್ಥೆಯ ನಿರ್ದೇಶಕ ಕೇತನ್ ದೇಶಪಾಂಡೆ ಅವರು ಭೇಟಿಯಾಗಿ ಗೌರವಿಸಿದರು.

ಅಪ್ರಾಪ್ತ ವಿದ್ಯಾರ್ಥಿಯ ಮೇಲೆ ಹಲ್ಲೆ; ಅಪ್ರಾಪ್ತ ಬಾಲಕನ ಸಹಿತ ಮೂವರ ಬಂಧನ

ಬೀಡ್, ಜೂ. 20 - ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಅಂಬಾಜೋಗೈ ಪಟ್ಟಣದಲ್ಲಿ 17 ವರ್ಷದ ವಿದ್ಯಾರ್ಥಿಗೆ ಮರದ ಕೋಲಿನಿಂದ ಹಲ್ಲೆ ನಡೆಸಿ ತೀವ್ರವಾಗಿ ಗಾಯಗೊಳಿಸಿದ್ದು, ಈ ಘಟನೆಯಲ್ಲಿ ಅಪ್ರಾಪ್ತ ಬಾಲಕನ ಸಹಿತ ಇಬ್ಬರು ದಾಳಿಕೋರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಗುರುವಾರ ರಾತ್ರಿ 12ನೇ ತರಗತಿಯ ವಿದ್ಯಾರ್ಥಿ ಟ್ಯೂಷನ್ ತರಗತಿಗೆ ಹಾಜರಾಗಿ ತನ್ನ ಬಾಡಿಗೆ ಮನೆಗೆ ಹಿಂತಿರುಗುತ್ತಿದ್ದಾಗ ಈ ಘಟನೆ ನಡೆದಿದೆ.

ಯಾವುದೇ ಸ್ಪಷ್ಟ ಪ್ರಚೋದನೆಯಿಲ್ಲದೆ ಮೋಟಾರ್ ಸೈಕಲ್‌ನಲ್ಲಿ ಬಂದ ಮೂವರು ವ್ಯಕ್ತಿಗಳು ವಿದ್ಯಾರ್ಥಿಯನ್ನು ತಡೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾಹಿಲ್ ಮಂಡಲೆ, ಜಿತು ಮಂಡಲೆ ಮತ್ತು ಅಪ್ರಾಪ್ತ ವಯಸ್ಕ ಎಂದು ಗುರುತಿಸಲಾದ ಆರೋಪಿಗಳು ವಿದ್ಯಾರ್ಥಿಯನ್ನು ನಿಂದಿಸಿ, ಅವರಲ್ಲಿ ಒಬ್ಬ ಮರದ ಕೋಲಿನಿಂದ ತಲೆಗೆ ಹೊಡೆದಿದ್ದಾನೆ ಎಂದು ವರದಿಯಾಗಿದೆ.

ಪ್ರಜ್ಞೆ ಕಳೆದುಕೊಳ್ಳುವ ಮೊದಲು, ಗಾಯಗೊಂಡ ವಿದ್ಯಾರ್ಥಿ ತನ್ನ ಮೊಬೈಲ್ ಫೋನ್ ಪಾಸ್‌ವರ್ಡ್ ಅನ್ನು ಸಹಾಯಕ್ಕೆ ಬಂದ ದಾರಿಹೋಕನಿಗೆ ನೀಡಿದ್ದಾನೆ, ಆ ವ್ಯಕ್ತಿ ವಿದ್ಯಾರ್ಥಿಯ ತಾಯಿಯನ್ನು ಸಂಪರ್ಕಿಸಿದರು, ನಂತರ ಅವನನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು.

ತಲೆಯ ಗಾಯಗಳ ತೀವ್ರತೆಯಿಂದಾಗಿ ಅವನನ್ನು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಲಾತೂರ್‌ನ ಆಸ್ಪತ್ರೆಗೆ ಸಾಗಿಸಲಾಯಿತು.

ಪೊಲೀಸರು ಮೂವರು ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ನ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಆಷಾಢಿ ಯಾತ್ರೆಗಾಗಿ 5,500 ವಿಶೇಷ ಬಸ್‌ಗಳ ಓಡಾಟ; ಸಾರಿಗೆ ಸಚಿವ ಸರ್ನಾಯಕ್



ಮುಂಬಯಿ,ಜೂ.19 - ಮಹಾರಾಷ್ಟ್ರ ರಾಜ್ಯ ಸಾರಿಗೆ ನಿಗಮ (ಎಂಎಸ್‌ಆರ್‌ಟಿಸಿ) ಈ ವರ್ಷವೂ ಪಂಢರಪುರದ ಕಡೆಗೆ ಹೋಗುವ ಲಕ್ಷಾಂತರ ಯಾತ್ರಾರ್ಥಿಗಳಿಗೆ ಸೇವೆ ಸಲ್ಲಿಸಲು ಸಿದ್ಧವಾಗಿದೆ. ಆಷಾಢಿ ಏಕಾದಶಿ ಯಾತ್ರೆಯ ಸಂದರ್ಭದಲ್ಲಿ ರಾಜ್ಯಾದ್ಯಂತ ಶ್ರೀಕ್ಷೇತ್ರ ಪಂಢರಪುರಕ್ಕೆ ಹೋಗುವ ಭಕ್ತರ ಸುರಕ್ಷಿತ, ಸುಲಭ ಹಾಗೂ ಆರಾಮದಾಯಕ ಪ್ರಯಾಣಕ್ಕಾಗಿ ಕಾರ್ಪೊರೇಷನ್ 5,500 ವಿಶೇಷ ಬಸ್‌ಗಳನ್ನು ಓಡಿಸಲು ಯೋಜಿಸಿದೆ. ರಾಜ್ಯದ ಯಾವುದೇ ಹಳ್ಳಿಯಿಂದ 40 ಅಥವಾ ಅದಕ್ಕಿಂತ ಹೆಚ್ಚು ಭಕ್ತರು ಜಂಟಿಯಾಗಿ ಬೇಡಿಕೆ ಇಟ್ಟರೆ, ಆ ಗ್ರಾಮದಿಂದ ನೇರವಾಗಿ ಪಂಢರಪುರಕ್ಕೆ ವಿಶೇಷ ಎಸ್‌ಟಿ ಬಸ್ ಲಭ್ಯವಾಗಲಿದೆ ಎಂದು ಸಾರಿಗೆ ಸಚಿವ ಹಾಗೂ ಎಸ್‌ಟಿ ನಿಗಮದ ಅಧ್ಯಕ್ಷ ಪ್ರತಾಪ್ ಸರ್ನಾಯಕ್ ತಿಳಿಸಿದ್ದಾರೆ.

ಆಷಾಢಿ ಯಾತ್ರೆಯ ಸಮಯದಲ್ಲಿ, ಲಕ್ಷಾಂತರ ಯಾತ್ರಿಕರು ಕಾಲ್ನಡಿಗೆಯಲ್ಲಿ, ರೈಲು, ಖಾಸಗಿ ವಾಹನಗಳು ಮತ್ತು ಎಸ್‌ಟಿ ಮೂಲಕ ಪಂಢರಪುರಕ್ಕೆ ತೆರಳುತ್ತಾರೆ. ಎಸ್‌ಟಿ ನಿಗಮವು ಈ ಭಕ್ತರ ಸೇವೆಗಳನ್ನು ಉನ್ನತ ಆದ್ಯತೆಯೊಂದಿಗೆ ಒದಗಿಸಲು ವ್ಯಾಪಕ ಯೋಜನೆಯನ್ನು ಮಾಡಿದೆ. ಭಕ್ತರು ತಮ್ಮ ಹತ್ತಿರದ ಎಸ್‌ಟಿ ಡಿಪೋವನ್ನು ಸಂಪರ್ಕಿಸಿ ವಿಶೇಷ ಬಸ್‌ಗೆ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ. ಗಮನಾರ್ಹವಾಗಿ, ಈ ವಿಶೇಷ ಬಸ್ ಸೇವೆಯಲ್ಲಿಯೂ ಎಲ್ಲಾ ಸರಕಾರಿ ಪ್ರಯಾಣಿಕರ ರಿಯಾಯಿತಿಗಳು ಮುಂದುವರಿಯುತ್ತವೆ. 75 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೆ 'ಅಮೃತ್ ಜ್ಯೇಷ್ಠ ನಾಗರಿಕ ಯೋಜನೆ'ಯಡಿಯಲ್ಲಿ ಉಚಿತ ಪ್ರಯಾಣ ನೀಡಲಾಗುವುದು ಮತ್ತು ಮಹಿಳೆಯರಿಗೆ 'ಮಹಿಳಾ ಸಮ್ಮಾನ್ ಯೋಜನೆ'ಯಡಿಯಲ್ಲಿ ಟಿಕೆಟ್ ದರದಲ್ಲಿ ಶೇ. 50ರಷ್ಟು ರಿಯಾಯಿತಿ ನೀಡಲಾಗುವುದು. ಕಳೆದ ವರ್ಷ ಎಸ್‌ಟಿ ಆಶಾಢಿ ಯಾತ್ರೆಗಾಗಿ 5,200 ವಿಶೇಷ ಬಸ್‌ಗಳನ್ನು ಓಡಿಸಿದ್ದು, ಈ ವರ್ಷ ಇನ್ನೂ ಹೆಚ್ಚು ಪರಿಣಾಮಕಾರಿ ಯೋಜನೆಯನ್ನು ಮಾಡಲಾಗಿದೆ. ಭಕ್ತರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು, ಪಂಢರಪುರದಲ್ಲಿ ಚಂದ್ರಭಾಗ, ಭೀಮ (ದೇಗಾಂವ್), ವಿಠ್ಠಲ ಕಾರ್ಖಾನಾ ಮತ್ತು ಪಾಂಡುರಂಗ (ಐಟಿಐ ಕಾಲೇಜು) ಎಂಬ ನಾಲ್ಕು ತಾತ್ಕಾಲಿಕ ಬಸ್ ನಿಲ್ದಾಣಗಳನ್ನು ಸ್ಥಾಪಿಸಲಾಗುವುದು. ಈ ನಿಲ್ದಾಣಗಳಲ್ಲಿ ಕುಡಿಯುವ ನೀರು, ಪ್ರವೇಶಿಸಬಹುದಾದ ಶೌಚಾಲಯಗಳು, ಕಂಪ್ಯೂಟರ್ ಕಾಯ್ದಿರಿಸುವಿಕೆ ಕೇಂದ್ರ, ವಿಚಾರಣಾ ಕೊಠಡಿ, ಮಾರ್ಗದರ್ಶನ ಮಂಡಳಿ ಮತ್ತು ಇತರ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು. ಸಾರಿಗೆ ಸಚಿವ ಪ್ರತಾಪ್ ಸರ್ನಾಯಕ್ ಅವರು ರಾಜ್ಯಾದ್ಯಂತ ಭಕ್ತರಿಗೆ ಎಸ್‌ಟಿಯ ಸುರಕ್ಷಿತ, ವಿಶ್ವಾಸಾರ್ಹ ಮತ್ತು ಜನ-ಆಧಾರಿತ ಸೇವೆಗಳ ಲಾಭವನ್ನು ಪಡೆಯುವ ಮೂಲಕ ವಿಠ್ಠಲನ ದರ್ಶನವನ್ನು ಆನಂದಿಸಲು ಮನವಿ ಮಾಡಿದ್ದಾರೆ.

ಮಲಾಡ್ : ಪ್ರಮೋದಾ ಶೆಟ್ಟಿ ನಿಧನ



ಮುಂಬಯಿ, ಜೂ. 20- ಮಲಾಡ್ ರಹೇಜಾ ನಿವಾಸಿ ದಿ. ಹಾವಂಜೆ ಜಯಕರ್ ಶೆಟ್ಟಿಯವರ ಪತ್ನಿ ಪ್ರಮೋದಾ ಜೆ. ಶೆಟ್ಟಿ (72) ಅಲ್ಪಕಾಲದ ಅಸೌಖ್ಯದಿಂದ ಜೂ. 19ರ ಶುಕ್ರವಾರ ನಿಧನರಾಗಿದ್ದಾರೆ.

ಮೃತರು ಮೂಲತ ಇರ್ವತ್ತೂರು ಹೊಸಮನೆಯವರಾಗಿದ್ದು, ಪುತ್ರಿ ಸೀಮಾ ಸುಧಾಕರ್ ಶೆಟ್ಟಿ ಮತ್ತು ಪುತ್ರ ಜಗತ್ ಶೆಟ್ಟಿ, ಸಹೋದರ, ಐದು ಮಂದಿ ಸಹೋದರಿಯರ ಸಹಿತ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಶ್ರೀ ಕ್ಷೇತ್ರ ದತ್ತ ಜಗದಂಬಾ ದೇವಸ್ಥಾನ ಬ್ಯಾಪ್ಟಿಸ್ಟವಾಡಿ ಅಂಧೇರಿ (ಪೂ.)

ಇಂದು 72ನೇ ವಾರ್ಷಿಕ ಮಂಗಳೋತ್ಸವ - ಏಕಾಹ ಭಜನಾ ಕಾರ್ಯಕ್ರಮ

ಮುಂಬಯಿ, ಜೂ. 20- ಅಂಧೇರಿ ಪೂರ್ವದ ಬ್ಯಾಪ್ಟಿಸ್ಟವಾಡಿಯಲ್ಲಿನ ಶ್ರೀ ಕ್ಷೇತ್ರ ದತ್ತ ಜಗದಂಬಾ ದೇವಸ್ಥಾನದ ಸನ್ನಿಧಾನದಲ್ಲಿ ಜೂ. 21ರ ರವಿವಾರ ಬೆಳಿಗ್ಗೆ 6:00ರಿಂದ ರಾತ್ರಿ 8:00ರ ವರೆಗೆ ನಗರದ ವಿವಿಧ ಭಜನಾ ಮಂಡಳಿಯವರ ಕೂಡುವಿಕೆಯಲ್ಲಿ 72ನೇ ವಾರ್ಷಿಕ ಮಂಗಳೋತ್ಸವ - ಏಕಾಹ ಭಜನಾ ಕಾರ್ಯಕ್ರಮವು ಜರಗಿದೆ ಮತ್ತು ಈ ಮೂಲಕ ಜೂ. 14ರ ಆದಿತ್ಯವಾರದಿಂದ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಮತ್ತು ಪ್ರತಿನಿತ್ಯ ಅನ್ನ ಸಂತರ್ಪಣೆಯೊಂದಿಗೆ ಬಹು ವಿಜೃಂಭಣೆಯೊಂದಿಗೆ ಜರಗಿದ ಬ್ರಹ್ಮ ಕಲಶೋತ್ಸವದ ಸಂಭ್ರಮಾಚರಣೆಯು ಮುಕ್ತಾಯಗೊಳ್ಳಲಿದೆ.

ಬ್ರಹ್ಮಕಲಶೋತ್ಸವದ ಸಂಭ್ರಮಾಚರಣೆಯ ಕೊನೆಯ ಈ ಕಾರ್ಯಕ್ರಮದಲ್ಲಿ ಬೆಳಿಗ್ಗೆ 6:00ರಿಂದ ಬೆಳಿಗ್ಗೆ 8:00ರ ವರೆಗೆ ಶ್ರೀ ದತ್ತಾತ್ರೇಯ ಭಜನಾ ಮಂಡಳಿ, ಬಾಪ್ಟಿಸ್ಟವಾಡಿ, ಬೆಳಿಗ್ಗೆ 8:00 ರಿಂದ 9:00ರ ವರೆಗೆ ಶ್ರೀ ನಿತ್ಯಾನಂದ ಭಜನಾ ಮಂಡಳಿ ಸಾಕಿನಾಕ, ಬೆಳಿಗ್ಗೆ 9:00 ರಿಂದ ಬೆಳಿಗ್ಗೆ 10:00ರ ವರೆಗೆ ಶ್ರೀ ಚಾಮುಂಡೇಶ್ವರಿ ಬಾಲ ಮಂಡಳಿ ಸಾಕಿನಾಕ, ಬೆಳಿಗ್ಗೆ 10:00 ರಿಂದ ಬೆಳಿಗ್ಗೆ 11:00ರ ವರೆಗೆ ಶ್ರೀ ರಾಮಕೃಷ್ಣ ಭಜನಾ ಮಂಡಳಿ ಕೊಂಡಿವಿತಾ, ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 12:00ರ ವರೆಗೆ ಶ್ರೀ ನಾರಾಯಣ ಗುರು ಭಜನಾ ಮಂಡಳಿ (ರಿ.) ಮುಂಬಯಿ, ಮಧ್ಯಾಹ್ನ 12:00ರಿಂದ ಮಧ್ಯಾಹ್ನ 1:00ರ ವರೆಗೆ ಶ್ರೀ ಉಮಾಮಹೇಶ್ವರಿ ಭಜನಾ ಮಂಡಳಿ ಜರಿಮರಿ, ಮಧ್ಯಾಹ್ನ 1:00 ರಿಂದ ಮಧ್ಯಾಹ್ನ 2:00ರ ವರೆಗೆ ಧರ್ಮಕ್ಷೇತ್ರ ಅಂಧೇರಿ ಪೂರ್ವ, ಮಧ್ಯಾಹ್ನ 2:00 ರಿಂದ ಮಧ್ಯಾಹ್ನ 3:00ರ ವರೆಗೆ ಶ್ರೀ ನಿತ್ಯಾನಂದ ಭಜನಾ ಮಂಡಳಿ ಭಾಂಡೂಪ್, ಮಧ್ಯಾಹ್ನ 3:00 ರಿಂದ ಸಂಜೆ 4:00ರ ವರೆಗೆ ಶ್ರೀ ಸೀತಾರಾಮ ಭಜನಾ ಮಂಡಳಿ ಕಮಾನಿ ಪ್ರೀಮಿಯರ್, ಸಂಜೆ 4:00 ರಿಂದ ಸಂಜೆ 5:00ರ ವರೆಗೆ ಬಿಲ್ಲವರ ಎಸೋಸಿಯೇಶನ್ ಅಂಧೇರಿ ಸ್ಥಳೀಯ ಕಚೇರಿ, ಸಂಜೆ 5:00 ರಿಂದ ಸಂಜೆ 6:00ರ ವರೆಗೆ ಶ್ರೀ ಜಗದಂಬಾ ಕಾಳಭೈರವ ಭಜನಾ ಮಂಡಳಿ ಜೋಗೇಶ್ವರಿ, ಸಂಜೆ 6:00 ರಿಂದ ರಾತ್ರಿ 7:00ರ ವರೆಗೆ ಶ್ರೀ ಮಹಾಕಾಳಿ ಭಜನಾ ಮಂಡಳಿ ಸಾಂತಾಕ್ರೂಜ್, ರಾತ್ರಿ 7:00 ರಿಂದ ರಾತ್ರಿ 8:00ರ ವರೆಗೆ ಶ್ರೀ ದತ್ತಾತ್ರೇಯ ಭಜನಾ ಮಂಡಳಿ ಬಾಪ್ಟಿಸ್ಟವಾಡಿ ಮೊದಲಾದ ಭಜನಾ ಮಂಡಳಿಗಳು ಪಾಲ್ಗೊಳ್ಳಲಿವೆ.

ಕಾರ್ಯಕ್ರಮದ ಕೊನೆಯಲ್ಲಿ ಸಾರ್ವಜನಿಕ ಅನ್ನ ಸಂತರ್ಪಣೆಯು ಜರಗಲಿದೆ.

ಬೆಳಗ್ಗಿನಿಂದ ರಾತ್ರಿಯವರೆಗೆ ನಿರಂತರ ಜರಗಲಿರುವ ಈ ಭಜನಾ ಧಾರ್ಮಿಕ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ತುಳು-ಕನ್ನಡಿಗರು, ಭಜನಾ ಪ್ರಿಯರು, ಧಾರ್ಮಿಕ ಚಿಂತಕರು ಬಂದು ಅನ್ನ ಪ್ರಸಾದವನ್ನು ಸ್ವೀಕರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಬ್ಯಾಪ್ಟಿಸ್ಟವಾಡಿ ಶ್ರೀ ಕ್ಷೇತ್ರ ದತ್ತ ಜಗದಂಬಾ ದೇವಸ್ಥಾನದ ವತಿಯಿಂದ ಮುಖ್ಯ ಸಲಹೆಗಾರರು ಹಾಗೂ ಗೌರವಾಧ್ಯಕ್ಷರುಗಳಾದ ಶಾಸಕ ಮುರ್ಜಿ ಪಟೇಲ್ (ಕಾಕಾ), ಕೋಟ್ಯಾನ್ ಮೇನ್ಸ್‌ವೇರ್‌ನ ಮಾಲಕ ಹರೀಶ್ ಆರ್. ಕೋಟ್ಯಾನ್, ಕನ್ನಡಿಗ ಕಲಾವಿದರ ಪರಿಷತ್ತ್ ಮಹಾರಾಷ್ಟ್ರದ ಅಧ್ಯಕ್ಷ ಡಾ. ಸುರೇಂದ್ರ ಕುಮಾರ್ ಹೆಗ್ಡೆ, ಪುನರ್ ನಿರ್ಮಾಣ ಸಮಿತಿಯ ಗೌರವ ಪ್ರಧಾನ ಕಾರ್ಯದರ್ಶಿ ದೀನದಾಸ್ ಬಿ. ಸನಿಲ್, ದೇವಾಲಯ ಆಡಳಿತ ಸಮಿತಿಯ ಅಧ್ಯಕ್ಷ ದಯಾನಂದ ಸಿ.ಅಂಚನ್, ಉಪಾಧ್ಯಕ್ಷ ಏಕನಾಥ್ ಬಂಗೇರ, ಗೌರವ ಪ್ರಧಾನ ಕಾರ್ಯದರ್ಶಿ ಯಶವಂತ್ ಸಿ. ಅಮೀನ್, ಕೋಶಾಧಿಕಾರಿ ಮೋಹನ್‌ದಾಸ್ ಶ್ರೀಯಾನ್, ಜೊತೆ ಕಾರ್ಯದರ್ಶಿ ಶಂಕರ್ ದೇವಾಡಿಗ, ಜೊತೆ ಕೋಶಾಧಿಕಾರಿ ಪ್ರಕಾಶ್ ಕೋಟ್ಯಾನ್, ಭಜನಾ ಸಮಿತಿಯ ಪ್ರಧಾನ ಭುವಾಜಿಗಳಾದ ರಾಘವೇಂದ್ರ ಅಮೀನ್, ಯೋಗೇಂದ್ರನಾಥ್, ವಾಸುದೇವ ಕೋಟ್ಯಾನ್ ಮತ್ತು ವಿವಿಧ ಕಮಿಟಿಗಳ ಪದಾಧಿಕಾರಿಗಳು, ಮಹಿಳಾ ವರ್ಗದವರು ಹಾಗೂ ಸರ್ವ ಸದಸ್ಯರು ವಿನಂತಿಸಿಕೊಂಡಿದ್ದಾರೆ.

ಶಿರ್ವ ಹಿಂದೂ ಪ್ರೌಢಶಾಲೆಯಲ್ಲಿ ಶಾಲಾ ಸಂಸತ್ತು ಉದ್ಘಾಟನೆ, ಸಾಧಕ ವಿದ್ಯಾರ್ಥಿಗಳಿಗೆ ಗೌರವಾರ್ಪಣೆ, ಸಮವಸ್ತ್ರ, ನೋಟ್‌ಬುಕ್ ವಿತರಣೆ

ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿ ಬಾಳಬೇಕು - ನಿತ್ಯಾನಂದ ಹೆಗ್ಡೆ





ಶಿರ್ವ, ಜೂ. 20- ಶಿರ್ವ ಹಿಂದೂ ಪ್ರೌಢಶಾಲೆಯ ವಿದ್ಯಾರ್ಥಿ ಸಂಸತ್ತು ಉದ್ಘಾಟನೆ, ಸಾಧಕ ವಿದ್ಯಾರ್ಥಿಗಳಿಗೆ ಗೌರವಾರ್ಪಣೆ , ಉಚಿತ ಸಮವಸ್ತ್ರ, ಮತ್ತು ಉಚಿತ ನೋಟ್‌ಬುಕ್ ವಿತರಣಾ ಕಾರ್ಯಕ್ರಮವು ಜೂನ್ 17ರಂದು ಶಿರ್ವ ಪ್ರೌಢಶಾಲಾ ಸಭಾಂಗಣದಲ್ಲಿ ಜರಗಿತು. ಶಾಲಾ ಸಂಸತ್ತನ್ನು ಉದ್ಘಾಟಿಸಿ ಸಾಧಕ ವಿದ್ಯಾರ್ಥಿಗಳನ್ನು ಗೌರವಿಸಿ ಮಾತನಾಡಿದ, ಶಿರ್ವ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಅಧ್ಯಕ್ಷ ಹಾಗೂ ಹಿಂದೂ ಹಿರಿಯ ಪ್ರಾಥಮಿಕ ಶಾಲೆಯ ಶೈಕ್ಷಣಿಕ ಸಮಿತಿಯ ಚೇರ್ಮನ್ ಎಸ್. ನಿತ್ಯಾನಂದ ಹೆಗ್ಡೆ ಅವರು ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರು ಜಾಗ್ರತರಾದರೆ ಮಾತ್ರ ದೇಶ ಸುಭದ್ರ ಸರ್ಕಾರ ಮತ್ತು ಅಭಿವೃದ್ಧಿ ಹೊಂದಲು ಸಾಧ್ಯ. ಶಾಲಾ ಹಂತದಲ್ಲಿ ಮಕ್ಕಳಿಗೆ ಈ ಬಗ್ಗೆ ತರಬೇತಿ ನೀಡಿ ಅರಿವು ಮೂಡಿಸಿದಾಗ ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿ ಅವರು ಬೆಳೆಯಲು ಸಾಧ್ಯವಾಗುತ್ತದೆ ಎಂದರು.

2025-26ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ ತೃಷಾ, ತನಿಷಾ, ಮತ್ತು ಧನುಶ್ರೀ ಇವರನ್ನು ಗೌರವಿಸಲಾಯಿತು. ಕಳೆದ ಶೈಕ್ಷಣಿಕ ವರ್ಷದಲ್ಲಿ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಾಂತ್ರಿಕ ಇಲಾಖೆ ನಡೆಸಿದ ಇನ್‌ಸ್ಪೈರ್ ಅವಾರ್ಡ್ ವಿಜ್ಞಾನ ಮಾದರಿ ಸ್ಪರ್ಧೆಯಲ್ಲಿ ಉಡುಪಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ರೂ. 10,000/- ಪಡೆದ ಸುಜನ್, ನ್ಯಾಷನಲ್ ಮೀನ್ಸ್ ಕಮ್ ಮೆರಿಟ್ ವಿದ್ಯಾರ್ಥಿವೇತನ ಪರೀಕ್ಷೆಯಲ್ಲಿ ಉಡುಪಿ ವಲಯದಲ್ಲಿ ಪ್ರಥಮ ಸ್ಥಾನ ಪಡೆದು ಮುಂದಿನ ನಾಲ್ಕು ವರ್ಷಗಳಲ್ಲಿ ರೂ. 50,000/- ವಿದ್ಯಾರ್ಥಿವೇತನ ಪಡೆಯಲಿರುವ ಆಸ್ತಿಕ್ ಪಾಟ್ಕರ್, ಹಾಗೂ ಇಕೋ ಕ್ಲಬ್ ಚಟುವಟಿಕೆಯಲ್ಲಿ ಉತ್ತಮ ಕಾರ್ಯನಿರ್ವಹಿಸಿದ ವಿದ್ಯಾರ್ಥಿ ಪ್ರಥಮ್ ಇವರನ್ನು ಆಡಳಿತ ಮಂಡಳಿ ವತಿಯಿಂದ ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು.

ಶಾಲಾ ಹಿತೈಷಿಯೊಬ್ಬರಿಂದ ನೀಡಲ್ಪಟ್ಟ ನೋಟ್‌ಪುಸ್ತಕ ಮತ್ತು ಶಾಲಾ ಹಳೆವಿದ್ಯಾರ್ಥಿ ಸಂಘದ ವತಿಯಿಂದ ನೀಡಲ್ಪಟ್ಟ ಸಮವಸ್ತ್ರವನ್ನು ವಿತರಿಸಿದ ಹಳೆವಿದ್ಯಾರ್ಥಿ ಸಂಘದ ಕೋಶಾಧಿಕಾರಿ ಹಾಗೂ ಶಿರ್ವ ರೋಟರಿ ಕ್ಲಬ್‌ನ ಅಧ್ಯಕ್ಷೆ ಜೆಸಿಂತಾ ಡಿ'ಸೋಜಾ ಮಾತನಾಡಿ , ಶಾಲಾ ಪರಿಸರ, ವಿದ್ಯಾರ್ಥಿಗಳ ಸಾಧನೆ ಮತ್ತು ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿ ಪ್ರೊ. ವೈ. ಭಾಸ್ಕರ ಶೆಟ್ಟಿ, ಶಾಲೆ ಶೇ. 100 ಫಲಿತಾಂಶ ತರಲು ವಿದ್ಯಾರ್ಥಿಗಳಿಗೆ ಕಲಿಸಿ ಮಾರ್ಗದರ್ಶನ ನೀಡಿದ ಶಾಲಾ ಶಿಕ್ಷಕ-ಶಿಕ್ಷಕಿಯರನ್ನು ಆಡಳಿತ ಮಂಡಳಿ ವತಿಯಿಂದ ಗೌರವಿಸಿ ಶಾಲಾ ಸಾಧಕ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಶುಭಹಾರೈಸಿದರು. ನಿವೃತ್ತ ಮುಖ್ಯ ಶಿಕ್ಷಕಿ ಶಕೀಲಾ, ವಿದ್ಯಾರ್ಥಿಗಳ ಹೆತ್ತವರು ಹಾಗೂ ಪೋಷಕರು ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕಿ ವಸಂತಿ ಸ್ವಾಗತಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಸುರೇಂದ್ರನಾಥ ಶೆಟ್ಟಿ ವಿದ್ಯಾರ್ಥಿ ಸಂಸತ್ತಿನ ಪದಾಧಿಕಾರಿಗಳಿಗೆ ಪ್ರಮಾಣವಚನ ಬೋಧಿಸಿದರು. ಶಿಕ್ಷಕಿಯರಾದ ವೀಣಾ ವಂದಿಸಿ, ಸುಪ್ರೀತಾ ಕಾರ್ಯಕ್ರಮ ನಿರೂಪಿಸಿದರು.

ಜೈಸ್ವಾಲ್ ಶತಕದ ವೈಭವ ; ಅಫ್ಘಾನ್ ವಿರುದ್ಧ ಭಾರತಕ್ಕೆ ಸರಣಿ ಕ್ಲೀನ್ ಸ್ವೀಪ್ ಸಾಧನೆ





ಚೆನ್ನೈ , ಜೂ.20 - ಚೆನ್ನೈನ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಭಾರತ ಹಾಗೂ ಅಫ್ಘಾನಿಸ್ತಾನ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಯ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯವನ್ನು ಆತಿಥೇಯ ಭಾರತ 9 ವಿಕೆಟ್‌ಗಳಿಂದ ಗೆದ್ದುಕೊಂಡಿದೆ. ಏಕದಿನ ಸರಣಿಗೂ ಮುನ್ನ ನಡೆದಿದ್ದ ಏಕೈಕ ಟೆಸ್ಟ್ ಪಂದ್ಯದಲ್ಲಿ ಇನ್ನಿಂಗ್ಸ್ ಜಯ ಸಾಧಿಸಿದ್ದ ಟೀಂ ಇಂಡಿಯಾ, ಇದೀಗ ಏಕದಿನ ಸರಣಿಯನ್ನು ಸಹ ಕ್ಲೀನ್ ಸ್ವೀಪ್ ಮಾಡಿದೆ. ಅಂದರೆ ಭಾರತದ ಪ್ರವಾಸದಲ್ಲಿ ಅಫ್ಘಾನಿಸ್ತಾನ ತಂಡಕ್ಕೆ ಒಂದೇ ಒಂದು ಪಂದ್ಯವನ್ನು ಗೆಲ್ಲಲು ಸಾಧ್ಯವಾಗಲಿಲ್ಲ.

ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ 218 ರನ್‌ಗಳಿಗೆ ಆಲೌಟ್ ಆಯಿತು. ಈ ಗುರಿ ಬೆನ್ನಟ್ಟಿದ ಭಾರತ ಕೇವಲ 1 ವಿಕೆಟ್ ಕಳೆದುಕೊಂಡು 28.4 ಓವರ್‌ಗಳಲ್ಲಿ ಗೆಲುವಿನ ದಡ ಮುಟ್ಟಿತು.

ಜೈಸ್ವಾಲ್ ಅಜೇಯ ಶತಕ : 219 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಭಾರತ ತಂಡ ಉತ್ತಮ ಆರಂಭ ಪಡೆದುಕೊಂಡಿತು. ಯಶಸ್ವಿ ಜೈಸ್ವಾಲ್ ಮತ್ತು ರೋಹಿತ್ ಶರ್ಮಾ ಮೊದಲ ವಿಕೆಟ್‌ಗೆ 170 ರನ್‌ಗಳನ್ನು ಸೇರಿಸುವ ಮೂಲಕ ಪಂದ್ಯವನ್ನು ಏಕಪಕ್ಷೀಯವಾಗಿ ಪರಿವರ್ತಿಸಿದರು. ರೋಹಿತ್ 69 ಎಸೆತಗಳಲ್ಲಿ ಒಂಬತ್ತು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳನ್ನು ಒಳಗೊಂಡಂತೆ 79 ರನ್ ಗಳಿಸಿ ಔಟಾದರೆ, ಯಶಸ್ವಿ ಜೈಸ್ವಾಲ್ 86 ಎಸೆತಗಳಲ್ಲಿ 14 ಬೌಂಡರಿ ಮತ್ತು ಮೂರು ಸಿಕ್ಸರ್‌ಗಳನ್ನು ಒಳಗೊಂಡಂತೆ ಅಜೇಯ 110 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಇದು ಏಕದಿನ ಕ್ರಿಕೆಟ್‌ನಲ್ಲಿ ಜೈಸ್ವಾಲ್ ಅವರ ಎರಡನೇ ಶತಕವಾಗಿದೆ. ಇನ್ನು ಶ್ರೇಯಸ್ ಅಯ್ಯರ್ ಅಜೇಯ 20 ರನ್‌ಗಳ ಕೊಡುಗೆ ನೀಡಿದರು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನ್ ತಂಡ ಪ್ರಸಿದ್ಧ್ ಕೃಷ್ಣ ದಾಳಿಗೆ ತತ್ತರಿಸಿ ಕೇವಲ 218 ರನ್‌ಗಳಿಗೆ ಆಲೌಟ್ ಆಯಿತು. ಅಫ್ಘಾನಿಸ್ತಾನ ತಂಡದ ಪರ ನಾಯಕ ಹಶ್ಮತುಲ್ಲಾ ಶಾಹಿದಿ (102) ಶತಕ ಸಿಡಿಸಿ ತಂಡದ ಮೊತ್ತ 200ರ ಗಡಿ ದಾಟಲು ನೆರವಾದರು. ಅಜ್ಮತುಲ್ಲಾ ಒಮರ್ಜಾಯ್ 50, ಮೊಹಮ್ಮದ್ ನಬಿ 21 ಹಾಗೂ ಇಬ್ರಾಹಿಂ ಜದ್ರಾನ್ 11 ರನ್ಗಳಿಸಿ ಎರಡಂಕಿ ಮೊತ್ತ ದಾಟಿದ ಬ್ಯಾಟರ್‌ಎನಿಸಿಕೊಂಡರು. ಉಳಿದವರೆಲ್ಲರೂ ಒಂದಂಕಿ ಮೊತ್ತಕ್ಕೆ ಸೀಮಿತವಾದರು. ಕನ್ನಡಿಗ ಪ್ರಸಿದ್ಧ್ ಕೃಷ್ಣ 23ಕ್ಕೆ 5 ವಿಕೆಟ್ ಪಡೆದು ಮಿಂಚಿದರು.

ಪವರ್ ಪ್ಲೇನಲ್ಲೇ 4 ವಿಕೆಟ್ ಕಳೆದುಕೊಂಡ ಅಫ್ಘಾನ್: ಮೊದಲು ಬ್ಯಾಟಿಂಗ್ ಮಾಡುವ ಮೂಲಕ ಅಫ್ಘಾನಿಸ್ತಾನ ನಿಧಾನಗತಿಯ ಆರಂಭವನ್ನು ಪಡೆದುಕೊಂಡಿತು. ಮೊದಲೆರಡು ಪಂದ್ಯದಲ್ಲಿ ಅಬ್ಬರಿಸಿದ್ದ ರಹಮಾನುಲ್ಲಾ ಗುರ್ಬಾಜ್ ಎರಡನೇ ಓವರ್‌ನಲ್ಲಿ ಔಟ್ ಆದರು. ಸ್ಟಾರ್‌ಬ್ಯಾಟರ್ ಇಂದು 7 ಎಸೆತಗಳಲ್ಲಿ 5 ರನ್ ಗಳಿಸಿ ನಿರ್ಗಮಿಸಿದರು. ಪ್ರಸಿದ್ಧ್ ಕೃಷ್ಣ ಭಾರತಕ್ಕೆ ಮೊದಲ ಬ್ರೇಕ್ ತಂದುಕೊಟ್ಟರು.

ಪ್ರಸಿದ್ಧ್ ಕೃಷ್ಣ ಕರಾರುವಾಕ್ ದಾಳಿ

ತಮ್ಮ ಕರಾರುವಾಕ್ ಬೌಲಿಂಗ್ ಮುಂದುವರಿಸಿದ ಕೃಷ್ಣ ಕ್ರಮವಾಗಿ 6, 8, 10ನೇ ಓವರ್‌ಗಳಲ್ಲಿ ರಹಮತ್ ಷಾ (5), ಇಬ್ರಾಹಿಂ ಝದ್ರಾನ್ (11) ಹಾಗೂ ದರ್ವಿಶ್ ರಸೂಲಿ (1) ವಿಕೆಟ್ ಪಡೆದರು. ಈ ನಾಲ್ಕು ವಿಕೆಟ್‌ಗಳಲ್ಲಿ ಮೂರನ್ನ ರೋಹಿತ್ ಶರ್ಮಾ ಸ್ಲಿಪ್‌ನಲ್ಲಿ ಕ್ಯಾಚ್ ಪಡೆದು ಮಿಂಚಿದರು.

ಚೇತರಿಕೆ ನೀಡಿದ ಶಾಹಿದಿ-ಒಮರ್ಜಾಯ್

ನಂತರ ಬಂದ ನಾಯಕ ಹಶ್ಮತುಲ್ಲಾ ಶಾಹಿದಿ ಹಾಗೂ ಆಲ್ ರೌಂಡರ್ ಒಮರ್ಜಾಯ್ 5ನೇ ವಿಕೆಟ್ ಜೊತೆಯಾಟದಲ್ಲಿ 105 ರನ್‌ಗಳ ಜೊತೆಯಾಟ ನಡೆಸಿ ಆರಂಭಿಕ ಆಘಾತದಿಂದ ತಂಡವನ್ನ ಪಾರು ಮಾಡಿದರು. ಈ ಜೋಡಿ ಬ್ಯಾಟಿಂಗ್ ಮಾಡುತ್ತಿದ್ದ ಸಮಯದಲ್ಲಿ ತಂಡದ ಮೊತ್ತ 260-270ರವರೆಗೆ ತಲುಪಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಪ್ರಿನ್ಸ್ ಯಾದವ್ 56 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್‌ಗಳ ಸಹಿತ 50 ರನ್‌ಗಳಿಸಿದ್ದ ಒಮರ್ಜಾಯ್ ವಿಕೆಟ್ ಪಡೆಯುವ ಮೂಲಕ ಭಾರತಕ್ಕೆ ಮತ್ತೊಂದು ಬ್ರೇಕ್ ತಂದುಕೊಟ್ಟರು.

ಚೊಚ್ಚಲ ಒಡಿಐ ಶತಕ ಬಾರಿಸಿದ ಹಶ್ಮತ್‌ವುಲ್ಲಾ

ನಂತರ ಬಂದ ನಬಿ ನಾಯಕ ಶಾಹಿದಿ ಜೊತೆ ಸೇರಿ 57 ರನ್‌ಗಳ ಜೊತೆಯಾಟ ನೀಡಿದರು. ಆದರೆ 23 ಎಸೆತಗಳಲ್ಲಿ 21 ರನ್‌ಗಳಿಸಿದ್ದ ನಬಿ ಗುರ್ನೂರ್‌ಬ್ರಾರ್‌ಬೌಲಿಂಗ್ ನಲ್ಲಿ ಕ್ಲೀನ್ ಬೌಲ್ಡ್ ಆದರು. 37.1 ಓವರ್‌ಗಳಲ್ಲಿ 198ಕ್ಕೆ6 ವಿಕೆಟ್ ಕಳೆದುಕೊಂಡಿದ್ದ ಅಫ್ಘಾನ್ ತಂಡ ಮುಂದಿನ 20 ರನ್ ಸೇರಿಸುವಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು. ರಶೀದ್ ಖಾನ್ (5), ಅಲ್ಲಾ ಘಜನ್ಫರ್(1), ಫರಿದ್ ಅಹ್ಮದ್ ಖಾನ್ 0ಗೆ ವಿಕೆಟ್ ಒಪ್ಪಿಸಿದರು.

ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ಬ್ಯಾಟ್ ಮಾಡಿದ ನಾಯಕ ಹಷ್ಮತ್‌ವುಲ್ಲಾ ಶಾಹಿಡಿ ತಮ್ಮ ಏಕದಿನ ವೃತ್ತಿಜೀವನದ ಅದ್ಭುತ ಚೊಚ್ಚಲ ಶತಕವನ್ನು ಪೂರ್ಣಗೊಳಿಸಿದರು. ಆ ಮೂಲಕ ಕಡಿಮೆ ಮೊತ್ತಕ್ಕೆ ಕುಸಿಯುತ್ತಿದ್ದ ತಂಡವನ್ನು ಮೇಲೆತ್ತಿದರು. ನಾಯಕ ಶಾಹಿದಿ 131 ಎಸೆತಗಳನ್ನಾಡಿ 13 ಬೌಂಡರಿ, 1 ಸಿಕ್ಸರ್‌ಸಹಿತ 102 ರನ್‌ಗಳಿಸಿ ಪ್ರಸಿದ್ಧ್ ಕೃಷ್ಣ ಬೌಲಿಂಗ್‌ನಲ್ಲಿ ಶ್ರೇಯಸ್ ಅಯ್ಯರ್‌ಗೆ ಕ್ಯಾಚ್ ಕೊಟ್ಟರು. ಇವರ ವಿಕೆಟ್ ಪತನದೊಂದಿಗೆ ಇನ್ನೂ 34 ಎಸೆತಗಳಿರುವಂತೆಯೇ ಅಫ್ಘಾನ್ ಇನ್ನಿಂಗ್ಸ್ ಕೊನೆಯಾಯಿತು.

ಭಾರತದ ಪರ ಕನ್ನಡಿಗ ಪ್ರಸಿದ್ಧ್ ಕೃಷ್ಣ 8.2 ಓವರ್‌ಗಳಲ್ಲಿ ಕೇವಲ 23 ರನ್ ನೀಡಿ 5 ವಿಕೆಟ್ ಪಡೆದು ಮಿಂಚಿದರು. ಇವರಿಗೆ ಸಾಥ್ ನೀಡಿದ ಗುರ್ನೂರ್ 49ಕ್ಕೆ1, ಪ್ರಿನ್ಸ್ ಯಾದವ್ 38ಕ್ಕೆ1, ಹರ್ಷ್ ದುಬೆ 38ಕ್ಕೆ1 ವಿಕೆಟ್ ಪಡೆದರು.

ಮಹಿಳಾ ಟಿ20 ವಿಶ್ವಕಪ್ : ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿ ಭಾರತ ಮಹಿಳಾ ತಂಡ; ಹರಿಣ ಪಡೆ ಎದುರಾಳಿ



ಲಂಡನ್, ಜೂ.20 - ಹಾಲಿ ಆವೃತ್ತಿಯ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಜೇಯವಾಗಿರುವ ಭಾರತ ತಂಡ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯೊಂದಿಗೆ ನಾಳೆ ನಡೆಯುವ ಪಂದ್ಯದಲ್ಲಿ ಬಲಿಷ್ಠ ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಾಡಲಿದೆ. ಹರ್ಮನ್‌ಪ್ರೀತ್ ಕೌರ್ ಬಳಗ ಈ ಪಂದ್ಯವನ್ನು ಗೆದ್ದರೆ ಸೆಮಿಫೈನಲ್‌ನಲ್ಲಿ ತನ್ನ ಸ್ಥಾನವನ್ನು ಬಹುತೇಕ ಖಚಿತಪಡಿಸಲಿದೆ. ಸದ್ಯ ಭಾರತ 'ಎ' ಗುಂಪಿನಲ್ಲಿ ಅಗ್ರಸ್ಥಾನಿಯಾಗಿದೆ.

ಭಾರತ ಆಡಿದ ಎರಡು ಪಂದ್ಯಗಳನ್ನು ದುರ್ಬಲ ತಂಡವಾದ ಪಾಕಿಸ್ತಾನ ಮತ್ತು ನೆದರ್ಲೆಂಡ್ ವಿರುದ್ಧ ಆಡಿತ್ತು. ನಿಜವಾದ ಸವಾಲು ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಿಂದ ಆರಂಭವಾಗಲಿದೆ. ಈ ಪಂದ್ಯದಲ್ಲಿ ಗೆದ್ದರೆ ತಂಡದ ಮೇಲೆ ಪ್ರಶಸ್ತಿ ಗೆಲುವೊಂದನ್ನು ಇಡಬಹುದು. ಸದ್ಯ ಭಾರತದ ಬ್ಯಾಟಿಂಗ್ ಮತ್ತು ಬೌಲಿಂಗ್ ಶ್ರೇಷ್ಠ ಮಟ್ಟದಿಂದ ಕೂಡಿದೆ. ಮಂಧಾನ ಸತತ ಎರಡು ಅರ್ಧಶತಕ ಸಿಡಿಸಿದರೆ, ಸ್ಪಿನ್ನರ್‌ಗಳಾದ ದೀಪ್ತಿ ಶರ್ಮಾ ಮತ್ತು ಶ್ರೀ ಚರಣಿ ಉತ್ತಮ ಲಯದಲ್ಲಿದ್ದಾರೆ. ಇವರ ಜತೆ ಅರೆಕಾಲಿಕ ಸ್ಪಿನ್ನರ್ ಶಫಾಲಿ ವರ್ಮಾ ಕೂಡ ಬ್ಯಾಟಿಂಗ್ ಜತೆಗೆ ಬೌಲಿಂಗ್‌ನಲ್ಲಿಯೂ ಆಲ್‌ರೌಂಡರ್ ಪ್ರದರ್ಶನ ತೋರುತ್ತಿದ್ದಾರೆ.

2025ರ ಮಹಿಳಾ ಏಕದಿನ ವಿಶ್ವಕಪ್‌ನ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾವನ್ನು ಭಾರತ ಸೋಲಿಸಿತ್ತು. ಇದೇ ವಿಶ್ವಾಸದಲ್ಲಿ ಭಾರತ ಆಡುವ ಗುರಿ ಹೊಂದಿದೆ. ದಕ್ಷಿಣ ಆಫ್ರಿಕಾ ಆಡಿದ ಎರಡು ಪಂದ್ಯಗಳ ಪೈಕಿ ತಲಾ ಒಂದು ಸೋಲು ಮತ್ತು ಗೆಲುವು ಸಾಧಿಸಿ ಮೂರನೇ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ ವಿರುದ್ಧ ಸೋಲು ಕಂಡಿತ್ತು. ಸೆಮಿ ರೇಸ್‌ನಲ್ಲಿ ಉಳಿಯಬೇಕಿದ್ದರೆ ಹರಿಣ ಪಡೆಗೆ ಗೆಲುವು ಅತ್ಯಗತ್ಯ.

ಓಲ್ಡ್ ಟ್ರಾಫರ್ಡ್ ಪಿಚ್ ಬ್ಯಾಟಿಂಗ್ ಸ್ನೇಹಿಯಾಗಿದ್ದು ದೊಡ್ಡ ಮೊತ್ತದ ನಿರೀಕ್ಷೆ ಮಾಡಬಹುದು. ಪಂದ್ಯಕ್ಕೆ ಯಾವುದೇ ಮಳೆ ಭೀತಿ ಇರದ ಕಾರಣ ಸಂಪೂರ್ಣವಾಗಿ ಪಂದ್ಯ ಸಾಗಲಿದೆ.

ಉಭಯ ತಂಡಗಳು ಟಿ20ಯಲ್ಲಿ 25 ಪಂದ್ಯಗಳಲ್ಲಿ ಮುಖಾಮುಖಿಯಾಗಿದ್ದು, ಭಾರತ 12 ಪಂದ್ಯಗಳನ್ನು ಗೆದ್ದರೆ, ದಕ್ಷಿಣ ಆಫ್ರಿಕಾ 10 ಪಂದ್ಯಗಳನ್ನು ಜಯಿಸಿದೆ. ಮೂರು ಪಂದ್ಯ ಫಲಿತಾಂಶ ಕಂಡಿಲ್ಲ.

ಸಂಭಾವ್ಯ ಆಡುವ ಬಳಗ:

ಭಾರತ: ಸ್ಮೃತಿ ಮಂಧಾನ, ಶಫಾಲಿ ವರ್ಮಾ,ಯಸ್ತಿಕಾ ಭಾಟಿಯಾ, ಜೆಮಿಮಾ ರಾಡ್ರಿಗಸ್, ಹರ್ಮನ್‌ಪ್ರೀತ್ ಕೌರ್(ನಾಯಕಿ), ರಿಚಾ ಘೋಷ್ (ವಿಕೆಟ್ ಕೀಪರ್), ದೀಪ್ತಿ ಶರ್ಮಾ, ಶ್ರೀ ಚರಣಿ, ಕ್ರಾಂತಿ ಗೌಡ್, ರಾಧಾ ಯಾದವ್, ನಂದಿನಿ ಶರ್ಮಾ.

ದಕ್ಷಿಣ ಆಫ್ರಿಕಾ: ಸುನೆ ಲೂಸ್, ಲಾರಾ ವೊಲ್ವಾರ್ಡ್ಟ್ (ನಾಯಕಿ), ಅನ್ನೇರಿ ಡೆರ್ಕ್ಸನ್, ನಾಡಿನ್ ಡಿ ಕ್ಲರ್ಕ್, ಮರಿಝನ್ನೆ ಕಪ್, ಕ್ಲೋಯ್ ಟ್ರಯಾನ್, ಕೈಲಾ ರೇನೆಕೆ, ಸಿನಾಲೊ ಜಫ್ತಾ (ವಿ.ಕೀ.),ಶಬ್ನಿಮ್ ಇಸ್ಮಾಯಿಲ್, ಅಯಾಬೊಂಗಾ ಖಾಕಾ, ನಾನ್ಕುಲುಲೇಕೋ ಮ್ಲಾಬಾ.

ಪಂದ್ಯಾರಂಭ: ಸಂಜೆ 7.00 ಕ್ಕೆ.

'ಬೌನ್ಸರ್ ಹಾಕಿದ್ದಕ್ಕೆ ಗಾಂಭೀರ್ ನನ್ನನ್ನು ದೇಶ ದ್ರೋಹಿ ಎಂದು ಕರೆದರು': ಶ್ರೀಶಾಂತ್ ಗಂಭೀರ ಆರೋಪ



ಹೊಸದಿಲ್ಲಿ, ಜೂ.20 - ಪ್ರಸ್ತುತ ಭಾರತ ಕ್ರಿಕೆಟ್ ತಂಡದ ಹೆಡ್ ಕೋಚ್ ಗೌತಮ್ ಗಾಂಭೀರ್ ಅವರ ಬಗ್ಗೆ ಮಾಜಿ ವೇಗಿ ಎಸ್ ಶ್ರೀಶಾಂತ್ ಶಾಕಿಂಗ್ ಹೇಳಿಕೆಯನ್ನು ನೀಡಿದ್ದಾರೆ. 2023ರಲ್ಲಿ ಲೆಜೆಂಡ್ಸ್ ಲೀಗ್ ಕ್ರಿಕೆಟ್‌ನಲ್ಲಿ ಗಾಂಭೀರ್ ಅವರೊಂದಿಗೆ ಪಯಣವನ್ನು ಅವರು ಬಹಿರಂಗಪಡಿಸಿದ್ದಾರೆ. ಈ ಹಿಂದೆ ನನ್ನನ್ನು ಗಾಂಭೀರ್ ಫಿಕ್ಸರ್ ಎಂದು ಆರೋಪಿಸಿದ್ದರು ಎಂದು ಹೇಳಿದ್ದ ಶ್ರೀಶಾಂತ್ ಇದೀಗ, ಅವರಿಗೆ ಇತ್ತೀಚೆಗೆ ಒಂದು ಬೌನ್ಸರ್ ಹಾಕಿದ್ದ ಕಾರಣ ಅವರು ನನ್ನನ್ನು ದೇಶ ದ್ರೋಹಿ ಎಂದು ಕರೆದಿದ್ದರು ಎಂದು ಗಂಭೀರ ಆರೋಪ ಮಾಡಿದ್ದಾರೆ.

ಇತ್ತೀಚೆಗೆ ಭಾಗವಹಿಸಿದ್ದ ಸಂದರ್ಶನದಲ್ಲಿ ಮಾತನಾಡಿದ್ದ ಶ್ರೀಶಾಂತ್, 'ನನ್ನ ಬೌಲಿಂಗ್ ಗಾಂಭೀರ್‌ಗೆ ಚೆನ್ನಾಗಿ ಗೊತ್ತಿದ್ದ ಕಾರಣ ಮೊದಲನೇ ಎಸೆತದಲ್ಲಿಯೇ ಮುಂದೆ ಬಂದು ಫ್ಲಿಕ್ ಮಾಡಿದರು ಹಾಗೂ ಅವರು ತುಂಬಾ ಒಳ್ಳೆಯ ಕ್ರಿಕೆಟಿಗ. ಅವರ ಕೋಚಿಂಗ್ ಭಾಗ ಯಾವ ರೀತಿ ಇದೆ ಎಂದು ನನಗೆ ಗೊತ್ತಿಲ್ಲ, ಆದರೆ, ಅವರು ಅತ್ಯುತ್ತಮ ಕ್ರಿಕೆಟಿಗ. ಹಾಗಾಗಿ ನಾನು ಅವರಿಗೆ ನಾನು ಒಂದು ಬೌನ್ಸರ್ ಹಾಕಿದ್ದೆ' ಎಂದು ಹೇಳಿದ್ದಾರೆ.ಅವರು ನನಗೆ ಏನು ಹೇಳಿದರು ಎಂದು ನಿಮಗೆ ಗೊತ್ತಾ? ನಾನು ನಿಮಗೆ ಹೇಳುತ್ತೇನೆ, ಅವರು ನನ್ನನ್ನ ನಿಂದಿಸಿದ್ದರು ಎಂಬುದು ಸ್ಪಷ್ಟ. ಅವರು ಈ ಮಾತನ್ನು ಹೇಳಬಾರದಿತ್ತು, ಅವರ ನನ್ನನ್ನು ಫಿಕ್ಸರ್ ಎಂದು ಕರೆದಿದ್ದರು ಎಂದು ಕೇರಳ ಮೂಲದ ಮಾಜಿ ವೇಗಿ ಬಹಿರಂಗಪಡಿಸಿದ್ದಾರೆ.

ನಾನು ಮುಂದೆ ಹೋಗಿ, ಅವರನ್ನು ಗೌತಿ ಭಾಯ್, ನೀವು ಸರಿಯಾಗಿದ್ದೀರಾ? ಎಂದು ಕೇಳಿದ್ದೆ. ನಾನು ಅವರಿಗಿಂತ ಸ್ವಲ್ಪ ದೈಹಿಕವಾಗಿ ಬಲಾಢ್ಯನಾಗಿ ಕಾಣುತ್ತಿದ್ದ ಕಾರಣ, ಅವರಿಗೆ ನಾನು ಹೊಡೆಯುತ್ತೇನೆಂದು ಅನಿಸಿರಬೇಕು. ನಂತರ ಅವರ ಎಫ್...ಎಫ್ ಎಂಬ ಪದವನ್ನು ಬಳಿಸಿದ್ದರು. ನಂತರ ನನ್ನನ್ನು ಫಿಕ್ಸರ್ ಹಾಗೂ ದೇಶ ದ್ರೋಹಿ ಎಂದರು ಎಂದು ಶ್ರೀಶಾಂತ್ ಹೇಳಿದ್ದಾರೆ.

ಗೌತಮ್ ಗಾಂಭೀರ್ ಹಾಗೂ ಶ್ರೀಶಾಂತ್ ಇಬ್ಬರೂ 2007ರಲ್ಲಿ ಟಿ20 ವಿಶ್ವಕಪ್ ಹಾಗೂ 2011ರಲ್ಲಿ ಐಸಿಸಿ ಏಕದಿನ ವಿಶ್ವಕಪ್ ಗೆದ್ದಿದ್ದ ಭಾರತ ತಂಡಗಳಲ್ಲಿ ಜೊತೆಯಲ್ಲಿ ಆಡಿದ್ದರು. ಅವರ ಅತ್ಯುತ್ತಮ ಬಾಂಧವ್ಯ ಆ ಸಂದರ್ಭದಲ್ಲಿ ಅಂತ್ಯವಾಗಿರಬೇಕು. 2013ರಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಸಂದರ್ಭದಲ್ಲಿ ಎಸ್ ಶ್ರೀಶಾಂತ್ ಅವರು ಮ್ಯಾಚ್ ಫಿಕ್ಸಿಂಗ್ ಪ್ರಕರಣದಲ್ಲಿ ಸಿಲುಕಿದ್ದರು. ಇದರ ಆಧಾರದ ಮೇಲೆ ಗಾಂಭೀರ್ ನಿಂದಿಸಿದ್ದಾರೆ.ಆರಂಭದಲ್ಲಿ ಅವರನ್ನು ಜೀವಿತಾವಧಿ ಕ್ರಿಕೆಟ್‌ನಿಂದ ಬ್ಯಾನ್ ಮಾಡಲಾಗಿತ್ತು. ಆದರೆ, 2020ರಲ್ಲಿ ಅವರ ಶಿಕ್ಷೆಯ ಪ್ರಮಾಣವನ್ನು 7 ವರ್ಷಗಳಿಗೆ ಸೀಮಿತಗೊಳಿಸಲಾಗಿತ್ತು. ಇದಾದ ಬಳಿಕ ಅವರು ಕ್ರಿಕೆಟ್‌ಗೆ ಮರಳಿದ್ದರೂ ಅವರಿಂದ ಉತ್ತಮ ಬೌಲಿಂಗ್ ಪ್ರದರ್ಶನ ಮೂಡಿಬಂದಿರಲಿಲ್ಲ.

ಆದರೆ, ಗೌತಮ್ ಗಾಂಭೀರ್ ಅವರು ಪ್ರಸ್ತುತ ಭಾರತ ಪುರುಷರ ಹಿರಿಯರ ಕ್ರಿಕೆಟ್ ತಂಡಕ್ಕೆ ಹೆಡ್ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಕೋಚಿಂಗ್ ಅವಧಿಯಲ್ಲಿ ಭಾರತ ತಂಡ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಹಾಗೂ 2026ರ ಐಸಿಸಿ ಟಿ20 ವಿಶ್ವಕಪ್ ಟ್ರೋಫಿಗಳನ್ನು ಮುಡಿಗೇರಿಸಿಕೊಂಡಿದೆ.

ಇಂಗ್ಲೆಂಡ್ ವಿರುದ್ಧದ ಸರಣಿಗೆ ಟೀಮ್ ಇಂಡಿಯಾದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಹೊರಕ್ಕೆ



ಹೊಸದಿಲ್ಲಿ, ಜೂ.20 - ಭಾರತ ಮತ್ತು ಇಂಗ್ಲೆಂಡ್ ನಡುವಣ ಸರಣಿಯು ಜುಲೈ 1 ರಿಂದ ಶುರುವಾಗಲಿದೆ. ಈ ಸರಣಿಯಿಂದ ಟೀಮ್ ಇಂಡಿಯಾದ ಸ್ಟಾರ್‌ಆಲ್ ರೌಂಡರ್‌ಹಾರ್ದಿಕ್ ಪಾಂಡ್ಯ ಹೊರಗುಳಿಯಲಿದ್ದಾರೆ. ಗಾಯದ ಸಮಸ್ಯೆಯಿಂದ ಸಂಪೂರ್ಣ ಚೇತರಿಸಿಕೊಳ್ಳಲು ಪಾಂಡ್ಯ ಮತ್ತಷ್ಟು ಸಮಯ ತೆಗೆದುಕೊಳ್ಳಲಿದ್ದು, ಹೀಗಾಗಿ ಇಂಗ್ಲೆಂಡ್ ವಿರುದ್ಧದ ಸರಣಿಗೆ ಅವರನ್ನು ಆಯ್ಕೆ ಮಾಡದಿರಲು ಬಿಸಿಸಿಐ ಆಯ್ಕೆ ಸಮಿತಿ ನಿರ್ಧರಿಸಿದೆ ಎಂದು ವರದಿಯಾಗಿದೆ.

2026ರ ಐಪಿಎಲ್ ಪಂದ್ಯದ ವೇಳೆ ಹಾರ್ದಿಕ್ ಪಾಂಡ್ಯ ಬೆನ್ನುನೋವಿನ ಸಮಸ್ಯೆಗೆ ಒಳಗಾಗಿದ್ದರು. ಈ ಸಮಸ್ಯೆಯ ಕಾರಣ ಅವರು ಮುಂಬೈ ಇಂಡಿಯನ್ಸ್ ತಂಡದ ಕೆಲ ಪಂದ್ಯಗಳನ್ನು ತಪ್ಪಿಸಿಕೊಂಡಿದ್ದರು. ಇದಾಗ್ಯೂ ಅವರನ್ನು ಅಫ್ಘಾನಿಸ್ತಾನ್ ವಿರುದ್ಧದ ಏಕದಿನ ಸರಣಿಗೆ ಆಯ್ಕೆ ಮಾಡಲಾಗಿತ್ತು. ಆದರೆ ಸಂಪೂರ್ಣ ಫಿಟ್‌ನೆಸ್ ಸಾಧಿಸದ ಕಾರಣ ಅಫ್ಘಾನಿಸ್ತಾನ್ ವಿರುದ್ಧದ ಏಕದಿನ ಸರಣಿಯಿಂದ ಅವರನ್ನು ಕೈ ಬಿಡಲಾಗಿತ್ತು. ಆದಾಗ್ಯೂ ಅವರು ಇಂಗ್ಲೆಂಡ್ ವಿರುದ್ಧದ ಸರಣಿಗೆ ಆಯ್ಕೆಯಾಗಲಿದ್ದಾರೆ ಎನ್ನಲಾಗಿತ್ತು. ಅದರಂತೆ ಬೆಂಗಳೂರಿನ ಬಿಸಿಸಿಐನ ಸೆಂಟರ್‌ಆಫ್ ಎಕ್ಸಲೆನ್ಸ್ ಕೇಂದ್ರದಲ್ಲಿ ತರಬೇತಿ ಮತ್ತು ರಿಹ್ಯಾಬ್ ಪ್ರಕ್ರಿಯೆಗೆ ಒಳಗಾಗಿದ್ದರು.

ಆದರೀಗ ಬಿಸಿಸಿಐನ ಸೆಂಟರ್‌ಆಫ್ ಎಕ್ಸಲೆನ್ಸ್‌ನಲ್ಲಿ ನಡೆಸಲಾದ ಫಿಟ್‌ನೆಸ್ ಟೆಸ್ಟ್‌ನಲ್ಲಿ ಹಾರ್ದಿಕ್ ಪಾಂಡ್ಯ ಮತ್ತೆ ವಿಫಲರಾಗಿದ್ದಾರೆ. ಹೀಗಾಗಿ ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಗೆ ಅವರನ್ನು ಪರಿಗಣಿಸದಿರಲು ನಿರ್ಧರಿಸಲಾಗಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

10 ಓವರ್ ಟಾರ್ಗೆಟ್: ಮುಂಬರುವ ಏಕದಿನ ವಿಶ್ವ ಕಪ್ ಅನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾರ್ದಿಕ್ ಪಾಂಡ್ಯ ಅವರ ಫಿಟ್‌ನೆಸ್ ಟೆಸ್ಟ್ ನಡೆಯುತ್ತಿದೆ. ಇಲ್ಲಿ ಮುಖ್ಯವಾಗಿ ಪಾಂಡ್ಯ ಅವರಿಗೆ 10 ಓವರ್‌ಗಳ ಟಾರ್ಗೆಟ್ ನೀಡಲಾಗುತ್ತಿದೆ ಎಂದು ತಿಳಿದು ಬಂದಿದೆ.

ಅಂದರೆ ಬೆನ್ನು ನೋವಿನ ಸಮಸ್ಯೆಯ ಕಾರಣ ಹಾರ್ದಿಕ್ ಪಾಂಡ್ಯಗೆ ದೀರ್ಘಾವಧಿಯವರೆಗೆ ಬೌಲಿಂಗ್ ಮಾಡಲು ಸಾಧ್ಯವಾಗುತ್ತಿಲ್ಲ. ಇತ್ತೀಚಿನ ತರಬೇತಿ ಅವಧಿಗಳಲ್ಲಿ ಅವರು ಪೂರ್ಣ 10 ಓವರ್‌ಗಳ ಬೌಲಿಂಗ್ ಕೋಟಾವನ್ನು ಪೂರೈಸಲು ವಿಫಲರಾಗಿದ್ದಾರೆ ಎಂದು ತಿಳಿದು ಬಂದಿದೆ.

ಇದೇ ಕಾರಣದಿಂದಾಗಿ ಸಂಪೂರ್ಣ ಫಿಟ್‌ನೆಸ್ ಸಾಧಿಸಿದ ಬಳಿಕ ಅವರನ್ನು ಆಲ್‌ರೌಂಡರ್‌ಆಗಿ ಏಕದಿನ ತಂಡಕ್ಕೆ ಆಯ್ಕೆ ಮಾಡಲು ನಿರ್ಧರಿಸಲಾಗಿದೆ. ಅಂದರೆ ಮುಂಬರುವ ದಿನಗಳಲ್ಲಿ ಹಾರ್ದಿಕ್ ಪಾಂಡ್ಯ ಫಿಟ್ ನೆಸ್ ಸಾಧಿಸಿದರೆ 2027ರ ಏಕದಿನ ವಿಶ್ವಕಪ್ ಆಡುವುದು ಖಚಿತ.

ಇದರ ನಡುವೆ ನಡೆಯುವ ಟಿ20 ಸರಣಿಗಳ ವೇಳೆ ಹಾರ್ದಿಕ್ ಪಾಂಡ್ಯಗೆ ವಿಶ್ರಾಂತಿ ನೀಡಲು ಬಿಸಿಸಿಐ ಆಯ್ಕೆ ಸಮಿತಿ ಪ್ಲ್ಯಾನ್ ರೂಪಿಸಿದೆ. ಇದೇ ಕಾರಣದಿಂದಾಗಿ ಅವರನ್ನು ಐರ್ಲೆಂಡ್ ಹಾಗೂ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗಳಿಗೆ ಆಯ್ಕೆ ಮಾಡಲಾಗಿಲ್ಲ. ಇನ್ನು ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಗೆ ಶೀಘ್ರದಲ್ಲೇ ಭಾರತ ತಂಡವನ್ನು ಪ್ರಕಟಿಸಲಾಗುವುದು ಬಿಸಿಸಿಐ ತಿಳಿಸಿದೆ. ಈ ತಂಡದಲ್ಲಿ ಹಾರ್ದಿಕ್ ಪಾಂಡ್ಯ ಕಾಣಿಸಿಕೊಳ್ಳುವುದಿಲ್ಲ ಎಂಬುದು ಬಹುತೇಕ ಖಚಿತವಾಗಿದೆ.

ಎಫ್‌ಐಎಚ್ ನೇಷನ್ಸ್ ಕಪ್: ಚಿಲಿ ಮಣಿಸಿ ಫೈನಲ್ ತಲುಪಿದ ಭಾರತ



ಹೊಸದಿಲ್ಲಿ, ಜೂ.20 - ಭಾರತೀಯ ಮಹಿಳಾ ಹಾಕಿ ತಂಡವು 2025-26ರ ಎಫ್‌ಐಎಚ್ ನೇಷನ್ಸ್ ಕಪ್‌ನಲ್ಲಿ ಫೈನಲ್‌ಗೆ ತಲುಪಿದೆ. ಇಂದು ನಡೆದಿದ್ದ ಸೆಮಿಫೈನಲ್ ಪಂದ್ಯದಲ್ಲಿ ಚಿಲಿಯನ್ನು 6-0 ಅಂತರದಿಂದ ಸೋಲಿಸಿ ಫೈನಲ್‌ಗೆ ಮುನ್ನಡೆದಿದೆ. ಸತತ ಗೆಲುವುಗಳನ್ನು ಸಾಧಿಸಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ಮೂಲಕ ಭಾರತ ಸೆಮಿಫೈನಲ್ ತಲುಪಿತು. ಈ ಪಂದ್ಯದಲ್ಲಿ ಭಾರತದ ವನಿತೆಯರು ಆರು ಗೋಲುಗಳನ್ನು ಗಳಿಸಿದರಲ್ಲದೇ ಎದುರಾಳಿ ತಂಡಕ್ಕೆ ಒಂದೇ ಒಂದು ಅವಕಾಶ ನೀಡಲಿಲ್ಲ ಎಂಬುದು ಗಮನಾರ್ಹ. ಭಾರತವು ಈಗ ಪ್ರಶಸ್ತಿಯ ನಿರ್ಣಾಯಕ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಭಾರತಕ್ಕೆ 6-0 ಅಂತರದ ಗೆಲುವು: ಆಕ್ಲೆಂಡ್‌ನಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಭಾರತದ ಪರ ನವನೀತ್ ಕೌರ್ ಮತ್ತು ದೀಪಿಕಾ ಗೆಲುವಿನ ಪ್ರಮುಖ ಪಾತ್ರವಹಿಸಿದ್ದರು. ಪಂದ್ಯದ 6 ಮತ್ತು 13 ನೇ ನಿಮಿಷಗಳಲ್ಲಿ ಗೋಲುಗಳನ್ನು ಗಳಿಸುವ ಮೂಲಕ ನವನೀತ್ ಕೌರ್‌ತಂಡಕ್ಕೆ ಉತ್ತಮ ಆರಂಭ ನೀಡಿದರು. ನಂತರ ದೀಪಿಕಾ 14 ಮತ್ತು 18 ನೇ ನಿಮಿಷಗಳಲ್ಲಿ ಸತತ ಎರಡು ಗೋಲುಗಳನ್ನು ಗಳಿಸಿ ಭಾರತದ ಮುನ್ನಡೆಯನ್ನು 4-0 ಕ್ಕೆ ವಿಸ್ತರಿಸಿದರು. ಇದರಿಂದಾಗಿ ಮೊದಲ ಕ್ವಾರ್ಟರ್‌ಅಂತ್ಯದ ವೇಳೆಗೆ, ಚಿಲಿ ತೀವ್ರ ಒತ್ತಡಕ್ಕೆ ಸಿಲುಕಿತ್ತು. ದ್ವಿತೀಯಾರ್ಧದಲ್ಲಿಯೂ ಭಾರತದ ತನ್ನ ಪ್ರಾಬಲ್ಯ ಮುಂದುವರಿಸಿತು. ನೇಹಾ 32ನೇ ನಿಮಿಷದಲ್ಲಿ ಗೋಲು ಗಳಿಸಿ 5-0 ಮುನ್ನಡೆ ತಂದುಕೊಟ್ಟರು, ಕೊನೆಯಲ್ಲಿ ರುತುಜಾ ದಾದಾಸೊ ಪಿಸಾಲ್ 39ನೇ ನಿಮಿಷದಲ್ಲಿ ಅದ್ಭುತ ಫೀಲ್ಡ್ ಗೋಲು ಗಳಿಸಿ ಭಾರತ 6-0 ಅಂತರದ ಗೆಲುವಿಗೆ ಕಾರಣರಾದರು.

ಈ ಅದ್ಭುತ ಗೆಲುವಿನೊಂದಿಗೆ, ಭಾರತವು 2026 ರ ಹಾಕಿ ನೇಷನ್ಸ್ ಕಪ್‌ನ ಫೈನಲ್‌ಗೆ ಸ್ಥಾನ ಪಡೆದಿದೆ. ಭಾರತ ತಂಡವು ಈಗ ಪ್ರಶಸ್ತಿಯಿಂದ ಕೇವಲ ಒಂದು ಹೆಜ್ಜೆ ದೂರದಲ್ಲಿದೆ. ಪಂದ್ಯಾವಳಿಯಾದ್ಯಂತ ತಂಡದ ಪ್ರದರ್ಶನ ಅತ್ಯುತ್ತಮವಾಗಿದ್ದು, ಮತ್ತು ಸೆಮಿಫೈನಲ್‌ನಲ್ಲಿನ ಈ ದೊಡ್ಡ ಗೆಲುವು ಆಟಗಾರ್ತಿಯರ ಆತ್ಮವಿಶ್ವಾಸವನ್ನು ಮತ್ತಷ್ಟು ಬಲಪಡಿಸುತ್ತದೆ.

ಈ ಪಂದ್ಯವು ಭಾರತೀಯ ಮಹಿಳಾ ಹಾಕಿ ತಂಡಕ್ಕೆ ಹಲವು ವಿಧಗಳಲ್ಲಿ ವಿಶೇಷವಾಗಿತ್ತು. ಒಂದೆಡೆ, ತಂಡವು ಫೈನಲ್‌ಗೆ ಟಿಕೆಟ್ ಪಡೆದುಕೊಂಡಿತು, ಆದರೆ ಮತ್ತೊಂದೆಡೆ, ಏಕಪಕ್ಷೀಯ 6-0 ಗೆಲುವು ಪ್ರಶಸ್ತಿಯನ್ನು ಗೆಲ್ಲುವ ಪ್ರಬಲ ಸ್ಪರ್ಧಿ ಎಂಬ ಸಂದೇಶವನ್ನು ರವಾನಿಸಿತು. ಇದೀಗ ಭಾನುವಾರ (ನಾಳೆ) ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಸೆಣಸಲಿದೆ.

ಫಿಫಾ ವಿಶ್ವಕಪ್: ಗೆಲುವಿನ ಖಾತೆ ತೆರೆದ ಬ್ರೆಜಿಲ್, ನಾಕೌಟ್‌ಗೆ ಲಗ್ಗೆಯಿಟ್ಟ ಅಮೆರಿಕ



ನ್ಯೂಜೆರ್ಸಿ, ಜೂ.20 - ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಬ್ರೆಜಿಲ್ ತಂಡ ಗೆಲುವಿನ ಶುಭಾರಂಭ ಕಂಡಿದೆ. ಶನಿವಾರ ಬೆಳಗಿನ ಜಾವ ಫಿಲಡೆಲ್ಫಿಯಾದಲ್ಲಿ ಹೈಟಿ ವಿರುದ್ಧ 3-0 ಅಂತರದ ಭರ್ಜರಿ ಜಯ ಸಾಧಿಸಿತು. ತಂಡದ ಪರ ಮ್ಯಾಥ್ಯೂಸ್ ಕುನ್ಹಾ ಎರಡು ಗೋಲು ಬಾರಿಸಿದರೆ, ವಿನಿಷಿಯಸ್ ಜೂನಿಯರ್‌ಒಂದು ಗೋಲು ಗಳಿಸಿದರು. ಈ ಗೆಲುವಿನೊಂದಿಗೆ ಐದು ಬಾರಿಯ ಚಾಂಪಿಯನ್ ಗ್ರೂಪ್ 'ಸಿ' ಯಲ್ಲಿ ಅಗ್ರಸ್ಥಾನಕ್ಕೆ ಏರಿತು. ತಂಡದ ಸ್ಟಾರ್ ಆಟಗಾರ ನೈಮರ್ ಈ ಪಂದ್ಯದಲ್ಲಿಯೂ ಕಣಕ್ಕಿಳಿಯಲಿಲ್ಲ.

ತಮ್ಮ ಮೊದಲ ಪಂದ್ಯದಲ್ಲಿ ಮೊರಾಕೊ ವಿರುದ್ಧ 1-1 ಗೋಲುಗಳಿಂದ ಡ್ರಾ ಮಾಡಿಕೊಂಡ ನಂತರ, ನಾಕೌಟ್ ರೇಸ್‌ನಲ್ಲಿ ಉಳಿಯಬೇಕಿದ್ದರೆ ಬ್ರೆಜಿಲ್‌ಗೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿತ್ತು. ಮೊದಲಾರ್ಧದಿಂದಲೇ ಮುನ್ನುಗ್ಗಿದ ಬ್ರೆಜಿಲ್ 23ನೇ ನಿಮಿಷದಲ್ಲಿ ಗೋಲು ಬಾರಿಸಿ ಹಿಡಿತ ಸಾಧಿಸಿತು. ಮ್ಯಾಥ್ಯೂಸ್ ಕುನ್ಹಾ ಈ ಗೋಲು ಬಾರಿಸಿದರು. ಇದಾಗಿ 36ನೇ ನಿಮಿಷದಲ್ಲಿ ಮತ್ತೊಂದು ಗೋಲು ಬಾರಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು.

ಹೈಟಿ ತಂಡದ ಆಟಗಾರರು ಗೋಲು ಬಾರಿಸಲು ಶಕ್ತಿ ಮೀರಿ ಪ್ರಯತ್ನಿಸಿದರೂ ಬ್ರೆಜಿಲ್ ರಕ್ಷಣಾ ಕೋಟೆಯನ್ನು ಭೇದಿಸಲು ಸಾಧ್ಯವಾಗಲಿಲ್ಲ. ಮೊದಲಾರ್ಧದ ಅಂತಿಮ ಹಂತದಲ್ಲಿ ವಿನಿಷಿಯಸ್ ಜೂನಿಯರ್‌ಗೋಲು ಬಾರಿಸುವ ಮೂಲಕ ಬ್ರೆಜಿಲ್ ತಂಡದ ಮುನ್ನಡೆಯನ್ನು 3ಕ್ಕೆ ಏರಿಸಿದರು. ಸೋತರೂ ದ್ವಿತೀಯಾರ್ಧದಲ್ಲಿ ಹೈಟಿ ತಂಡ ಸುಧಾರಿತ ಪ್ರದರ್ಶನ ನೀಡಿತು.

ಮೊರಾಕೊ ಇನ್ನೂ ಹೈಟಿಯನ್ನು ಎದುರಿಸಬೇಕಾಗಿರುವುದರಿಂದ ಮತ್ತು ಬ್ರೆಜಿಲ್ ಅರ್ಹತಾ ಸುತ್ತಿನಲ್ಲಿ ಸ್ಕಾಟ್ಲೆಂಡ್ ತಂಡವನ್ನು ಎದುರಿಸಬೇಕಾಗಿರುವುದರಿಂದ, ಗ್ರೂಪ್ ಸಿ ನಲ್ಲಿ ಯಾರು ಅಗ್ರಸ್ಥಾನ ಪಡೆಯುತ್ತಾರೆ ಎಂಬುದನ್ನು ನಿರ್ಧರಿಸುವಲ್ಲಿ ಗೋಲು ವ್ಯತ್ಯಾಸವು ನಿರ್ಣಾಯಕ ಅಂಶವಾಗಬಹುದು. ಸತತ ಎರಡು ಸೋಲು ಕಂಡ ಹೈಟಿ ಪಂದ್ಯಾವಳಿಯಿಂದ ಹೊರಬಿದ್ದ ಮೊದಲ ತಂಡ ಎನಿಸಿತು. ಸ್ಕಾಟ್ಲೆಂಡ್ ವಿರುದ್ಧದ ಪಂದ್ಯದಲ್ಲಿ ನೈಮರ್ ಆಡುವ ಸಾಧ್ಯತೆ ಅಧಿವಾಗಿದೆ.

ಆಸ್ಟ್ರೇಲಿಯಾಗೆ ಸೋಲುಣಿಸಿದ ಅಮೆರಿಕ.. ಆಸ್ಟ್ರೇಲಿಯಾ ವಿರುದ್ಧ 2-0 ಅಂತರದ ಗೆಲುವಿನೊಂದಿಗೆ ಸಹ-ಆತಿಥೇಯ ಮೆಕ್ಸಿಕೊ ನಂತರ ಅಮೆರಿಕ ತಂಡ ಫಿಫಾ ವಿಶ್ವಕಪ್ ನಾಕೌಟ್ ಹಂತಕ್ಕೆ ಸ್ಥಾನ ಪಡೆದ ಎರಡನೇ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಮೌರಿಸಿಯೊ ಪೊಚೆಟ್ಟಿನೊ ನೇತೃತ್ವದ ತಂಡವು ಎರಡು ಪಂದ್ಯಗಳಲ್ಲಿ ಎರಡು ಗೆಲುವುಗಳನ್ನು ಗಳಿಸಿ ಗ್ರೂಪ್ 'ಡಿ ಯಲ್ಲಿ ಅಗ್ರಸ್ಥಾನ ಪಡೆಯಿತು. ಇನ್ನೂ ಒಂದು ಪಂದ್ಯ ಬಾಕಿ ಇರುವಾಗಲೇ ಈ ಸಾಧನೆ ಮಾಡಿತು. 1929 ರ ನಂತರದಲ್ಲಿ ಸತತ ಎರಡು ಗೆಲುವುಗಳನ್ನು ದಾಖಲಿಸಿದ ಸಾಧನೆಗೈದಿತು.

ಅಮೆರಿಕ ತಂಡ ಪರಾಗ್ವೆ ವಿರುದ್ಧ 4-1 ಅಂತರದ ಭರ್ಜರಿ ಗೆಲುವಿನೊಂದಿಗೆ ತಮ್ಮ ಅಭಿಯಾನವನ್ನು ಆರಂಭಿಸಿತ್ತು. ಸತತ ಎರಡು ಗೆಲುವಿನ ಮೂಲಕ ಅಮೆರಿಕ ತಂಡವು ಗ್ರೂಪ್ ಡಿ ನಲ್ಲಿ ಆರು ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಆಸ್ಟ್ರೇಲಿಯಾ ತಂಡವು ಮೂರು ಅಂಕಗಳೊಂದಿಗೆ ಮುಂದುವರಿದಿದ್ದು, ಅರ್ಹತಾ ಸುತ್ತಿನ ಭರವಸೆಯನ್ನು ಜೀವಂತವಾಗಿರಿಸಿಕೊಳ್ಳಲು ಪರಾಗ್ವೆ ವಿರುದ್ಧ ಸಕಾರಾತ್ಮಕ ಫಲಿತಾಂಶದ ಅಗತ್ಯವಿದೆ.

ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆದ ನೀರಜ್ ಚೋಪ್ರಾ



ದೋಹಾ, ಜೂ.20 - ಭಾರತದ ಸ್ಟಾರ್ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಶುಕ್ರವಾರ ದೋಹಾ ಡೈಮಂಡ್ ಲೀಗ್ ನಲ್ಲಿ 82.77 ಮೀಟರ್ ಎಸೆಯುವ ಮೂಲಕ ಮುಂಬರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತಮ್ಮ ಸ್ಥಾನವನ್ನು ಕಾಯ್ದಿರಿಸಿದ್ದಾರೆ, 2026ರ ಋತುವಿನ ತಮ್ಮ ಮೊದಲ ಸ್ಪರ್ಧೆಯಲ್ಲಿ ಅರ್ಹತಾ ಮಾನದಂಡವನ್ನು ಪೂರೈಸಿದ್ದಾರೆ.

ದೋಹಾದಲ್ಲಿ ಚೋಪ್ರಾ ತಮ್ಮ ಎರಡನೇ ಪ್ರಯತ್ನದಲ್ಲಿ ಈ ಸಾಧನೆ ಮಾಡಿದರು, ಸ್ಪರ್ಧೆಯ ಆ ಹಂತದಲ್ಲಿ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಏರಿದರು. ಈ ಪ್ರಯತ್ನವು ಕಾಮನ್‌ವೆಲ್ತ್ ಕ್ರೀಡಾಕೂಟದ ಅರ್ಹತಾ ಮಾನದಂಡವಾದ 82.61 ಮೀ ಅನ್ನು ಸುಲಭವಾಗಿ ಮೀರಿಸಿತು. ಇದರಿಂದಾಗಿ ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್ ಬಹು-ಕ್ರೀಡಾ ಸ್ಪರ್ಧೆಗೆ ಆಯ್ಕೆಯಾದರು.28 ವರ್ಷದ ನೀರಜ್ ಮೊದಲ ಸುತ್ತಿನಲ್ಲಿ ಅನರ್ಹಗೊಂಡರು. ಆದರೆ ಅವರ ಎರಡನೇ ಎಸೆತವು ಕಾಮನ್‌ವೆಲ್ತ್‌ಗೆ ಅರ್ಹತೆ ಪಡೆಯಲು ಅವಕಾಶ ಮಾಡಿಕೊಟ್ಟಿತು, ಮೂರನೇ ಎಸೆತವು ದೋಹಾದಲ್ಲಿ ಉತ್ಸುಕನಾಗಿದ್ದಾನೆ ಎಂಬುದನ್ನು ಸಾಬೀತುಪಡಿಸಿತು. ಅವರು 85.69 ಮೀಟರ್‌ದೂರವನ್ನು ತಲುಪಿದರು ಮತ್ತು ಅದು ಓಟದಲ್ಲಿ ಮೂರನೇ ಸ್ಥಾನದಲ್ಲಿ ಉಳಿಯಲು ಸಹಾಯ ಮಾಡಿತು. ದೀರ್ಘ ಕಾಲದ ಗಾಯದಿಂದ ಚೇತರಿಕೆ ಕಂಡ ಬಳಿಕ ಅವರು ಮೊದಲ ಬಾರಿಗೆ ಇಲ್ಲಿ ಸ್ಪರ್ಧಿಸಿದ್ದರು. ನೀರಜ್ ಕಳೆದ ವರ್ಷದಲ್ಲಿ ಹೆಚ್ಚಿನ ಸಮಯವನ್ನು ಬೆನ್ನು ನೋವಿನಿಂದ ಚೇತರಿಸಿಕೊಳ್ಳುತ್ತಿದ್ದರು, ಅದು ಅವರ ಸಿದ್ಧತೆಗಳ ಮೇಲೆ ಪರಿಣಾಮ ಬೀರಿತು ಮತ್ತು ಅಂತಾರಾಷ್ಟ್ರೀಯ ಸರ್ಕ್ಯೂಟ್‌ನಲ್ಲಿ ಅವರ ಪ್ರದರ್ಶನಗಳನ್ನು ಸೀಮಿತಗೊಳಿಸಿತು. ದೋಹಾ ಟೂರ್ನಿಗೆ ಮುಂಚಿತವಾಗಿ, ಚೋಪ್ರಾ ತಮ್ಮ ಫಿಟ್ನೆಸ್ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದರು ಮತ್ತು ಉನ್ನತ ಮಟ್ಟದ ಸ್ಪರ್ಧೆಗೆ ಮರಳಲು ಸಿದ್ಧರಿರುವುದಾಗಿ ವಿವರಿಸಿದ್ದರು.

ದೋಹಾ ಡೈಮಂಡ್ ಲೀಗ್, 2026 ರ ಅಭಿಯಾನದ ಚೋಪ್ರಾ ಅವರ ಮೊದಲ ಪ್ರವಾಸವಾಗಿತ್ತು ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ಇತರ ಪ್ರಮುಖ ಅಂತರರಾಷ್ಟ್ರೀಯ ಕಾರ್ಯಕ್ರಮಗಳನ್ನು ಒಳಗೊಂಡಿರುವ ಋತುವಿನಲ್ಲಿ ಒಂದು ಪ್ರಮುಖ ಚೆಕ್‌ಪಾಯಿಂಟ್ ಆಗಿತ್ತು. ಭಾರತದ ಅತ್ಯಂತ ಯಶಸ್ವಿ ಟ್ರ್ಯಾಕ್-ಅಂಡ್-ಫೀಲ್ಡ್ ಅಥ್ಲೀಟ್ ಎಂಬ ಅವರ ಸ್ಥಾನಮಾನವನ್ನು ಗಮನದಲ್ಲಿಟ್ಟುಕೊಂಡು, ಅವರ ಪುನರಾಗಮನದ ಬಗ್ಗೆ ನಿರೀಕ್ಷೆಗಳು ಹೆಚ್ಚಾಗಿದ್ದವು.

ನೀರಜ್ ಜಾಗತಿಕ ಜಾವೆಲಿನ್‌ನಲ್ಲಿ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾಗಿ ಉಳಿದಿದ್ದಾರೆ, ಅವರು ಭಾರತದ ಅಥ್ಲೆಟಿಕ್ಸ್ ಅನ್ನು ಪರಿವರ್ತಿಸಿದ ವೃತ್ತಿಜೀವನದಲ್ಲಿ ಒಲಿಂಪಿಕ್ ಚಿನ್ನ, ವಿಶ್ವ ಚಾಂಪಿಯನ್‌ಶಿಪ್ ಗೌರವಗಳು ಮತ್ತು ಬಹು ಡೈಮಂಡ್ ಲೀಗ್ ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

ತ್ರಿಕೋನ ಸರಣಿ: ಇಂದು ಪ್ರಶಸ್ತಿಗಾಗಿ ಭಾರತ ಎ - ಶ್ರೀಲಂಕಾ ಎ ಕಾದಾಟ



ದಂಬುಲ್ಲಾ, ಜೂ.20 - ಶ್ರೀಲಂಕಾ ಪ್ರವಾಸದ ಕೊನೆಯ ಹಣಾಹಣಿಗೆ ಭಾರತ ಎ ತಂಡ ಸಜ್ಜಾಗಿದೆ. ತ್ರಿಕೋನ ಸರಣಿಯ ಭಾಗವಾಗಿ, ನಾಳೆ ದಂಬುಲ್ಲಾದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಶ್ರೀಲಂಕಾ ಎ ತಂಡವನ್ನು ಎದುರಿಸಲಿದೆ. ಸಾಮಾನ್ಯವಾಗಿ ಭಾರತ ಎ ಪಂದ್ಯಗಳು ಹೆಚ್ಚು ಗಮನ ಸೆಳೆಯುವುದಿಲ್ಲ, ಆದರೆ ಟೀಮ್ ಇಂಡಿಯಾದ ಭವಿಷ್ಯದ ಸೂಪರ್‌ಸ್ಟಾರ್‌ವೈಭವ್ ಸೂರ್ಯವಂಶಿ ಭಾಗವಹಿಸುವಿಕೆಯಿಂದಾಗಿ ಈ ಸರಣಿಯು ವಿಶೇಷ ಆಕರ್ಷಣೆಯನ್ನು ಪಡೆದುಕೊಂಡಿದೆ. ಎದುರಾಳಿ ತಂಡದ ಆಟಗಾರರು ಕೂಡ ಈ ಯುವ ಆಟಗಾರನ ಬಗ್ಗೆ ಭಯ ಹೊಂದಿವೆ. ಅವನನ್ನು ಬೇಗ ಔಟ್ ಮಾಡುವುದು ಹೇಗೆ ಎಂದು ಪ್ಲಾನ್ ಮಾಡಿಕೊಳ್ಳುತ್ತಿವೆ.

ರೋಚಕ ಹಣಾಹಣಿ ನಿರೀಕ್ಷೆ: ಹಿಂದಿನ ಪಂದ್ಯದಲ್ಲಿ ಶ್ರೀಲಂಕಾ ಎ ವಿರುದ್ಧ ಭಾರತ ಎ ತಂಡ ಸೂಪರ್ ಓವರ್‌ಸೋಲು ಮತ್ತು ವೈಭವ್ ಎದುರಾಳಿ ಆಟಗಾರರನ್ನು ತಳ್ಳಿದ ಘಟನೆಯ ನಂತರ ಫೈನಲ್ ಕುರಿತು ಕುತೂಹಲ ದುಪ್ಪಟ್ಟಾಗಿದೆ. ಶ್ರೀಲಂಕಾ ಆಟಗಾರರು ವೈಭವ್ ಅವರನ್ನು ಕೆಣಕಿದ್ದರಿಂದ ಭಾರತೀಯ ಅಭಿಮಾನಿಗಳು ಅಸಮಾಧಾನಗೊಂಡಿದ್ದರು. ಈಗ ಅವರು ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದ ಮೂಲಕ ಅವರಿಗೆ ಉತ್ತರಿಸುತ್ತಾರೆ ಎಂದು ಆಶಿಸುತ್ತಿದ್ದಾರೆ.

ಈ ತ್ರಿಕೋನ ಸರಣಿಯಲ್ಲಿ ವೈಭವ್ ಇಲ್ಲಿಯವರೆಗೆ ನಿರೀಕ್ಷಿಸಿದಷ್ಟು ಪ್ರದರ್ಶನ ನೀಡಿಲ್ಲ. ಅವರು ಮೂರು ಪಂದ್ಯಗಳಲ್ಲಿ ಕನಿಷ್ಠ ಒಂದೇ ಒಂದು ಅರ್ಧಶತಕವನ್ನು ಸಹ ದಾಖಲಿಸಲು ವಿಫಲರಾಗಿದ್ದಾರೆ. ಪರಿಣಾಮವಾಗಿ, ಈ ಪಂದ್ಯವು ಅವರಿಗೆ ನಿರ್ಣಾಯಕವಾಗಿದೆ. ಐಪಿಎಲ್ ಸಮಯದಲ್ಲಿ ವೈಭವ್ ಸೂರ್ಯವಂಶಿ ಕ್ರೀಸ್‌ನಲ್ಲಿದ್ದಾಗ ಎದುರಾಳಿ ತಂಡಗಳು ಎದುರಿಸಿದ ಅಪಾಯವನ್ನು ನಾವು ಕಣ್ಣಾರೆ ಕಂಡಿದ್ದೇವೆ. ಈಗ ಶ್ರೀಲಂಕಾ ಆಟಗಾರರು ಅವರನ್ನು ಕೆರಳಿಸಿದ್ದಾರೆ, ಈಗ ಉಗ್ರ ಪ್ರತಿಕ್ರಿಯೆಗೆ ವೇದಿಕೆ ಸಿದ್ಧವಾಗಿದೆ. ವೈಭವ್ ನಿರ್ಣಾಯಕ ಪಂದ್ಯಗಳಲ್ಲಿ ಆಕ್ರಮಣಕಾರಿಯಾಗಿ ಆಡಲು ಹೆಸರುವಾಸಿಯಾಗಿದ್ದಾರೆ. ಅಂಡರ್-19 ವಿಶ್ವಕಪ್ ಫೈನಲ್‌ನಲ್ಲಿ ಬೃಹತ್ ಶತಕದೊಂದಿಗೆ ಮಿಂಚಿದರೆ, ಎಲಿಮಿನೇಟರ್‌ಹಾಗೂ ಕ್ವಾಲಿಫೈಯರ್ ಪಂದ್ಯಗಳಲ್ಲೂ ಮಿಂಚಿದ್ದರು. ಇದೀಗ ಶ್ರೀಲಂಕಾ ಎ ವಿರುದ್ಧ ಇದೇ ರೀತಿಯ ಪ್ರದರ್ಶನ ನೀಡುತ್ತಾರೆ ಎಂದು ಅಭಿಮಾನಿಗಳು ಆಶಿಸುತ್ತಿದ್ದಾರೆ.

ವೈಭವ್ ನಮ್ಮ ಟಾರ್ಗೆಟ್ ಅಲ್ಲ: ಫೈನಲ್‌ಗೆ ಮುಂಚಿತವಾಗಿ ಮಾಧ್ಯಮಗಳೊಂದಿಗೆ ಮಾತನಾಡಿದ ಶ್ರೀಲಂಕಾ-ಎ ನಾಯಕ ಸಹನ್ ಅರಾಚಿಗೆ, ಅವರು ನಿರ್ದಿಷ್ಟವಾಗಿ ವೈಭವ್ ಸೂರ್ಯವಂಶಿಯನ್ನು ಗುರಿಯಾಗಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ನಮ್ಮ ಆಟಗಾರರು ಯಾವುದೇ ವ್ಯಕ್ತಿ ಅಥವಾ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಗಮನ ಹರಿಸುವುದಿಲ್ಲ. ನಾವು ಆಟವನ್ನು ಆನಂದಿಸುತ್ತೇವೆ. ಸೂಪರ್‌ಓವರ್‌ನಂತಹ ಸಂದರ್ಭಗಳಲ್ಲಿ ಆಟಗಾರರು ಭಾವನಾತ್ಮಕವಾಗುವುದು ಸಹಜ. ಕ್ರೀಡೆಯಲ್ಲಿ ಇಂತಹ ಘಟನೆಗಳು ಸಾಮಾನ್ಯ. ಭಾರತದ ವಿರುದ್ಧದ ಫೈನಲ್‌ಗೆ ನಾವು ಸಂಪೂರ್ಣವಾಗಿ ಸಿದ್ಧರಿದ್ದೇವೆ ಎಂದು ತಿಳಿಸಿದ್ದಾರೆ.

ನಮ್ಮ ಬ್ಯಾಟಿಂಗ್ ಬಗ್ಗೆ ನಮಗೆ ಯಾವುದೇ ಸಮಸ್ಯೆಗಳಿಲ್ಲ, ಮತ್ತು ನಮ್ಮ ಬೌಲಿಂಗ್ ಘಟಕವು ಸಹ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ನಾವು ಅಂತಿಮ ಪಂದ್ಯಕ್ಕಾಗಿ ಕುತೂಹಲದಿಂದ ಎದುರು ನೋಡುತ್ತಿದ್ದೇವೆ ಎಂದು ಅರಾಚಿಗೆ ಹೇಳಿದರು.

ಲೀಗ್ ಹಂತದಲ್ಲಿ ಎರಡೂ ತಂಡಗಳು ಎರಡು ಬಾರಿ ಮುಖಾಮುಖಿಯಾದವು, ಎರಡೂ ತಂಡಗಳು ಒಂದೊಂದು ಪಂದ್ಯವನ್ನು ಗೆದ್ದವು. ಮೊದಲ ಮುಖಾಮುಖಿಯಲ್ಲಿ ಭಾರತವು ಶ್ರೀಲಂಕಾವನ್ನು ಎಂಟು ರನ್‌ಗಳಿಂದ ಸೋಲಿಸಿದರೆ, ಶ್ರೀಲಂಕಾ ಸೂಪರ್‌ಓವರ್‌ಮೂಲಕ ಎರಡನೇ ಪಂದ್ಯವನ್ನು ಗೆದ್ದಿತು. ಅಫ್ಘಾನಿಸ್ತಾನವನ್ನು ಸೋಲಿಸಿದ ನಂತರ ಎರಡೂ ತಂಡಗಳು ಫೈನಲ್‌ನಲ್ಲಿ ತಮ್ಮ ಸ್ಥಾನಗಳನ್ನು ಖಚಿತಪಡಿಸಿದವು.

ಪಂದ್ಯಾರಂಭ : ಬೆಳಿಗ್ಗೆ 10.00 ಕ್ಕೆ.

ಕರ್ನಾಟಕ CLASSIFIED

adambika@gmail.com • 8108110772

ಬೇಕಾಗಿದ್ದಾರೆ

ಥಾಣೆ (ವಸಂತ್‌ವಿಹಾರ್) ಇಲ್ಲಿ ಮರಾಠಿ ಕುಟುಂಬಕ್ಕೆ ಸರ್ವ ಪ್ರಕಾರದ ಊಟ ತಯಾರಿಸಲು ಜಾಣ ಮತ್ತು ಅನುಭವಿ ಯುವಕ ಬೇಕಾಗಿದ್ದಾರೆ. ಮನೆಯಲ್ಲೇ ಅಡುಗೆ ಮಾಡಿರುವ ಅನುಭವ ಅಗತ್ಯ. ಅಪೇಕ್ಷೆಯೊಂದಿಗೆ ಕರೆ ಮಾಡಿರಿ (ಮಹಿಳೆಯರು ಬೇಡ) ಸಂಪರ್ಕ - 9867710014

LAL2026-06Y.5-006051

ಪ್ಯಾಂಟ್ರಿಬಾಯ್, ಹೌಸ್‌ಕೀಪಿಂಗ್, ವಸತಿ ಸೌಕರ್ಯ. ಸಿಪ್ಜ್ ಅಂಧೇರಿ (ಪೂ), ಓಟಿ, ರೂ. 18000, + PF + ಬೋನಸ್ + ರಜೆ. ಮೊ. 9821492139

LAL2026-06Y.5-006179

ಶೈಕ್ಷಣಿಕ

ಕಲ್ಯಾಣ್‌ನಲ್ಲಿ ಭಾನುವಾರ ಮಾತ್ರ ಪ್ಯಾಥೋ ಲ್ಯಾಬ್ ವ್ಯವಹಾರ ತರಬೇತಿ

D.M.L.T

ICPME(35 YEARS OLD)

ಜುಲೈ 12, 2026 ರಿಂದ ಪ್ರಾರಂಭವಾಗುತ್ತದೆ

10ನೇ/12ನೇ/ಪದವಿ (ಯಾವುದೇ ಸ್ಟ್ರೀಮ್) ಯಾವುದೇ ವಯಸ್ಸಿನ ನಿರ್ಬಂಧವಿಲ್ಲ ಶುಲ್ಕ: ರೂ. 30,000/- (ಕಂತುಗಳಲ್ಲಿ ಯೂ ಸಹ). ಯಾಂತ್ರೀಕೃತಗೊಂಡ ವೈಯಕ್ತಿಕ ಪ್ರಾಯೋಗಿಕತೆಗಳು ಉದ್ಯೋಗ ಅವಕಾಶಗಳು ಲಭ್ಯವಿದೆ

ನೂತನ್ ವಿದ್ಯಾಲಯ, ಕಾರ್ನಿಕ್ ರಸ್ತೆ, ಕಲ್ಯಾಣ್ (ಪಶ್ಚಿಮ)

9820419265

LAL2026-06Y.5-005744

ವಿಶೇಷ ಸೂಚನೆ

ಜಾಹೀರಾತಿನ ಫಾರ್ಮ್‌ನಲ್ಲಿ ನೀಡಲಾದ ಮೂಲ ಶಬ್ದಗಳ ಗೆರೆಗಳ ಪ್ರಕಾರ ಜಾಹೀರಾತಿನ ಬಿಲ್ ನೀಡಲಾಗುತ್ತದೆ. ಈ ಬಗ್ಗೆ ತಿಳಿಸುವುದೇನೆಂದರೆ ಪ್ರಕಟಿಸಲು ನೀಡಲಾದ ಜಾಹೀರಾತು ಇಂಗ್ಲೀಷ್‌ನಲ್ಲಿದ್ದಲ್ಲಿ ಜಾಹೀರಾತು ಫಾರ್ಮ್‌ನಲ್ಲಿ ಮೂಲ ಇಂಗ್ಲೀಷ್ ಗೆರೆಗಳ ಪ್ರಕಾರವೇ ಜಾಹೀರಾತಿನ ಬಿಲ್ ತೆಗೆದುಕೊಳ್ಳಲಾಗುವುದು. ಅದಕ್ಕಾಗಿ ಭಾಷಾಂತರ ಮಾಡಿದ (ಕನ್ನಡ) ಶಬ್ದಗಳ ಗೆರೆಗಳ ಪ್ರಕಾರ ತೆಗೆದುಕೊಳ್ಳಲಾಗುವುದಿಲ್ಲ. ಜಾಹೀರಾತು ಫಾರ್ಮ್‌ನಲ್ಲಿದ್ದ ಗೆರೆ ಮತ್ತು ಪ್ರಕಟಿಸಲಾದ ಜಾಹೀರಾತಿನ ಗೆರೆಗಳಲ್ಲಿ ವ್ಯತ್ಯಾಸವಿರಬಹುದು. ಇದನ್ನು ಏಜೆನ್ಸಿ ಮತ್ತು ಜಾಹೀರಾತುದಾರರು ಗಮನಿಸಬೇಕಾಗಿ ವಿನಂತಿ.

-ವ್ಯವಸ್ಥಾಪಕ

WAL2026-05SA0-000029

ಮಹಿಳಾ ಸಂಬಂಧಿ

ವೆಡಿಂಗ್ ಕಾರ್ನಿವ್ಹಲ್ ಸೆಲ್ ವಿಶೇಷ್ ಆಫರ್ 50ಅ ವರೆಗೆ ರಿಯಾಯ್ತಿ ಮಹಿಳಾ ಕಾರ್ನಿವಲ್ ಸೇಲ್ ಡಿಲೈನರ್ ಸೀರೆ , ಪೈಠಣಿ, ಬನಾರಸಿ, ಕಾಂಜೀವರಂ, ಚನಿಯಾ ಚೋಲಿ, 6 ಮತ್ತು 9 ವಾರಿ ಸೀರೆ. ಕಲ್ಯಾಣಿ- 895/-, ಒರಿಸಾ - 550/-, ನಾರಾಯಣ ಪೇಠ - 1995/-, ಪೇಶವೈ- 3995/-, ಪ್ರಯೋರ್ ನಾರಾಯಣ 3995/ ಪ್ಯೋರ ಪೈಠಣಿ, - 13595/-, ತಾನಾ ಪೈಠಣಿ, - 3995/-, ಸುರತ್ ಪೈಠಣಿ, - 1895/-, ಮಹೇಶ್ವರಿ 895/- ಪಲ್ಲರಿ - ದಾದರಕರ್ ಬಿಲ್ಡಿಂಗ್, ಇಂಡಿಯನ್ ಬ್ಯಾಂಕ್ ಹತ್ತಿರ , ಎನ್.ಸಿ. ಕೆಳ್ಕರರೋಡ್, ದಾದರ್ (ಪಶ್ಚಿಮ), ಮುಂಬೈ. G-PAY, ಪೇಟಿಎಮ್ ಸರ್ವ ಕಾರ್ಡ್ ಸ್ವೀಕರಿಸಲಾಗುವುದು

LAL2026-06Y.5-005822

ಬೇಕಾಗಿದ್ದಾರೆ

ಪುಣೆಯ ಯೂನಿನಾರ್ ಏಲಿವೇಟರ್ ಕಂಪೆನಿಗೆ ಲಿಫ್ಟ್ ಸರ್ವಿಸಿಂಗ್ ಹೆಲ್ಪರ್ ಬೇಕಾಗಿದ್ದಾರೆ ವಸತಿ ಸೌಲಭ್ಯ. 9822104094

LAL2026-06Y.5-006053

ಓದುಗರಿಗೆ ಮಾಹಿತಿ

ಓದುಗರು ಯಾವುದೇ ಹಣಕಾಸಿನ ವಹಿವಾಟುಗಳನ್ನು ಮಾಡುವ ಮೊದಲು ''ಕರ್ನಾಟಕ ಮಲ್ಲ'' ಪತ್ರಿಕೆಯಲ್ಲಿ ಪ್ರಕಟವಾಗುವ ವಿವಿಧ ಜಾಹೀರಾತುಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು.

''ಕರ್ನಾಟಕ ಮಲ್ಲ'' ಪತ್ರಿಕೆಯು ಜಾಹೀರಾತುದಾರರು ತಮ್ಮ ಉತ್ಪನ್ನಗಳು ಅಥವಾ ಸೇವೆಗಳ ಕುರಿತು ಮಾಡುವ ಯಾವುದೇ ಹಕ್ಕುಗಳನ್ನು ಖಾತರಿಪಡಿಸುವುದಿಲ್ಲ.

ಜಾಹೀರಾತುದಾರರು ಜಾಹೀರಾತಿನಲ್ಲಿ ಮಾಡಿದ ಹಕ್ಕುಗಳನ್ನು ಪೂರೈಸಲು ವಿಫಲವಾದರೆ, ಯಾವುದೇ ಪರಿಣಾಮಗಳಿಗೆ ದೈನಂದಿನ ''ಕರ್ನಾಟಕ ಮಲ್ಲ'' ಪತ್ರಿಕೆ ಗುಂಪಿನ ಮುದ್ರಕ, ಪ್ರಕಾಶಕರು, ಸಂಪಾದಕರು ಮತ್ತು ಮಾಲೀಕರು ಜವಾಬ್ದಾರರಾಗಿರುವುದಿಲ್ಲ.

ಓದುಗರು ದಯವಿಟ್ಟು ಇದನ್ನು ಗಮನಿಸಬೇಕು.

WAL2026-05SA0-000028

'ಕಲ್ಕಿ 2898 ಎಡಿ' ಪಾರ್ಟ್ 2 ಪ್ರಭಾಸ್ ಸಿನಿಮಾ ಅಲ್ಲ,ಕಮಲ್ ಹಾಸನ್ ಸಿನಿಮಾ



ಪ್ರಭಾಸ್ ಮುಖ್ಯ ಪಾತ್ರದಲ್ಲಿ ನಟಿಸಿದ್ದ 'ಕಲ್ಕಿ 2898 ಎಡಿ' ಸಿನಿಮಾ 2024 ರಲ್ಲಿ ಬಿಡುಗಡೆ ಆಗಿ ಹಿಟ್ ಎನಿಸಿಕೊಂಡಿದೆ. 2898ರ ಪ್ರಪಂಚದಲ್ಲಿ ಸಿನಿಮಾದ ಕತೆ ಸೃಷ್ಟಿಗೊಂಡಿದೆ. ಸಿನಿಮಾದಲ್ಲಿ ಪ್ರಭಾಸ್ ಮಾತ್ರವಲ್ಲದೆ ಅಮಿತಾಬ್ ಬಚ್ಚನ್,ದೀಪಿಕಾ ಪಡುಕೋಣೆ ಇನ್ನೂ ಕೆಲವು ಖ್ಯಾತನಾಮರು ನಟಿಸಿದ್ದಾರೆ. ಆದರೆ ಮುಖ್ಯ ಪಾತ್ರಗಳಿದ್ದಿದ್ದು ಪ್ರಭಾಸ್, ಅಮಿತಾಬ್ ಬಚ್ಚನ್ ಮತ್ತು ದೀಪಿಕಾ ಪಡುಕೋಣೆ ಮಾತ್ರವೇ.ಕಮಲ್ ಹಾಸನ್ ಅವರೂ ಸಿನಿಮಾದಲ್ಲಿದ್ದರಾದರೂ ಅವರ ಪಾತ್ರಕ್ಕೆ ಮೊದಲ ಭಾಗದಲ್ಲಿ ಹೆಚ್ಚು ಪ್ರಾಮುಖ್ಯತೆ ಇರಲಿಲ್ಲ. ಇದೀಗ ಸಿನಿಮಾದ ಎರಡನೇ ಭಾಗ ಚಿತ್ರೀಕರಣಗೊಳ್ಳುತ್ತಿದ್ದು, ಈ ಸಿನಿಮಾದಲ್ಲಿ ಪ್ರಭಾಸ್‌ಗಿಂತಲೂ ಕಮಲ್ ಹಾಸನ್ ಪಾತ್ರವೇ ಹೆಚ್ಚು ಹೈಲೆಟ್ ಆಗಲಿದೆಯಂತೆ.

ಕಮಲ್ ಹಾಸನ್ ಅವರು ಯಾಸ್ಕಿನ್ ಹೆಸರಿನ ವಿಲನ್ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಮೊದಲ ಭಾಗದಲ್ಲಿ ವಯಸ್ಸಾದ, ಮೂಳೆ-ಚಕ್ಕಳೆಗಳೇ ಎದ್ದು ಕಾಣುವ ಕಡು ಮುದುಕನ ರೀತಿ ಕಮಲ್ ಪಾತ್ರವನ್ನು ತೋರಿಸಲಾಗಿತ್ತು. ಆದರೆ ಈಗ ಬರಲಿರುವ 'ಕಲ್ಕಿ 2898 ಎಡಿ' ಎರಡನೇ ಭಾಗದಲ್ಲಿ ಕಮಲ್ ಹಾಸನ್ ಅವರನ್ನು ಭಾರಿ ಬಲಿಷ್ಠ ಮತ್ತು ಸರ್ವ ಶಕ್ತಿಶಾಲಿ ಪಾತ್ರದಲ್ಲಿ ತೋರಿಸಲಾಗುತ್ತಿದೆಯಂತೆ. ಮೊದಲ ಭಾಗದ ಅಂತ್ಯದಲ್ಲಿ ಈ ಬಗ್ಗೆ ಸುಳಿವನ್ನು ನಿರ್ದೇಶಕ ನಾಗ್ ಅಶ್ವಿನ್ ನೀಡಿದ್ದರು.

ಮೊದಲ ಭಾಗದ ಕೊನೆಯಲ್ಲಿ ಕಮಲ್ ಪಾತ್ರವಾದ ಯಾಸ್ಕಿನ್, ಸುಮತಿಯ ಗರ್ಭದಿಂದ ತೆಗೆಯಲಾಗಿದ್ದ ಸಿರಮ್ ಒಂದನ್ನು ಕುಡಿದು ಚೈತನ್ಯ ಪಡೆಯುತ್ತಾನೆ. ಎಷ್ಟು ಬಲಶಾಲಿ ಆಗುತ್ತಾನೆಂದರೆ ಅರ್ಜುನನ ಗಾಂಢೀವವನ್ನು ಮೀಟಿ, ತಾನು ಪ್ರಪಂಚವನ್ನು ಬದಲಾಯಿಸುವ ಶಪಥ ಮಾಡುತ್ತಾನೆ. ಇದೀಗ ಎರಡನೇ ಭಾಗದಲ್ಲಿ ಕಮಲ್ ಹಾಸನ್ ಪಾತ್ರ ಇನ್ನಷ್ಟು ಶಕ್ತಿ ಗಳಿಸಿಕೊಂಡಿದ್ದು, ಇನ್ನಷ್ಟು ದೈತ್ಯವಾಗಿಯೂ ಧೃಡ ದೇಹಿಯಾಗಿಯೂ ಕಮಲ್ ಅವರನ್ನು ಚಿತ್ರಿಸಲಾಗಿದೆ. ಕಮಲ್ ಅವರ ಪಾತ್ರದ ಕೆಲವು ಚಿತ್ರಗಳು ಈಗಾಗಲೇ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು,ಹಾಲಿವುಡ್‌ನ 'ದಿ ಮಮ್ಮಿ' ಸಿನಿಮಾದ ವಿಲನ್ ರೀತಿ ಬಲಿಷ್ಠ ದೈತ್ಯವಾಗಿ, ಅದ್ಭುತವಾಗಿ ಕಮಲ್ ಹಾಸನ್ ಕಾಣುತ್ತಿದ್ದಾರೆ. ಕಮಲ್ ಹಾಸನ್ ಪಾತ್ರದ ಪೋಸ್ಟರ್ ಅನ್ನು ಚಿತ್ರತಂಡ ಅಧಿಕೃತವಾಗಿ ಹಂಚಿಕೊಂಡಿಲ್ಲವಾದರೂ ಕೆಲ ಚಿತ್ರಗಳು ಈಗಾಗಲೇ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.'ಕಲ್ಕಿ 2898 ಎಡಿ' ಸಿನಿಮಾವು 2898ರ ವರ್ಷದಲ್ಲಿ ಸ್ಥಿತವಾಗಿರುವ ಕತೆಯಾಗಿದೆ.ಅಮಿತಾಬ್ ಬಚ್ಚನ್ ಅವರು ಅಶ್ವತ್ಥಾಮನ ಪಾತ್ರದಲ್ಲಿ ನಟಿಸಿದ್ದಾರೆ.ಮೊದಲ ಭಾಗದಲ್ಲಿ ಮಹಾಭಾರತದ ಕತೆಯನ್ನು ಸಹ ಹೇಳಲಾಗಿತ್ತು.ಈಗ ಪಾರ್ಟ್ 2ನಲ್ಲೂ ಕತೆ ಮುಂದುವರೆಯಲಿದೆ.ಸಿನಿಮಾವನ್ನು ನಾಗ್ ಅಶ್ವಿನ್ ನಿರ್ದೇಶನ ಮಾಡಿದ್ದಾರೆ.

ರೂ.600 ಕೋಟಿ ಗಳಿಕೆಯ 'ಗದರ್2' ನಂತರ,'ಗದರ್ 3' ಚಿತ್ರೀಕರಣ ಮುಂದಿನ ವರ್ಷ ಆರಂಭ



ಸನ್ನಿ ಡಿಯೋಲ್ ಅವರ ಸೂಪರ್‌ಹಿಟ್ ಚಿತ್ರ 'ಗದರ್' 25 ವರ್ಷಗಳನ್ನು ಪೂರೈಸಿದೆ,ಆದರೂ ಇದು ಪ್ರೇಕ್ಷಕರಿಗೆ ನಂಬಲಾಗದಷ್ಟು ವಿಶೇಷವಾಗಿ ಉಳಿದಿದೆ.ಅನಿಲ್ ಶರ್ಮಾ ನಿರ್ದೇಶಿಸಿದ ಈ ಚಿತ್ರದಲ್ಲಿ ಸನ್ನಿ ಡಿಯೋಲ್ ಮತ್ತು ಅಮೀಶಾ ಪಟೇಲ್ ಜೋಡಿ ಕಾಣಿಸಿಕೊಂಡಿದೆ. ಬಾಕ್ಸ್ ಆಫೀಸ್‌ನಲ್ಲಿ ಅದ್ಭುತವಾದ ಗಳಿಕೆಯನ್ನು ಗಳಿಸಿದ 'ಗದರ್' 2001ರ ಎರಡನೇ ಅತಿ ಹೆಚ್ಚು ಗಳಿಕೆಯ ಚಿತ್ರವಾಯಿತು. 'ಗದರ್ 2' 22 ವರ್ಷಗಳ ನಂತರ ಬಿಡುಗಡೆಯಾಯಿತು,ಮೂಲ ಚಿತ್ರವು ಸ್ಥಾಪಿಸಿದ ದಾಖಲೆಗಳನ್ನು ಮುರಿದಿದೆ.'ಗದರ್' ತನ್ನ 25 ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವಾಗ,ನಿರ್ದೇಶಕರು 'ಗದರ್3' ಬಗ್ಗೆ ಪ್ರಮುಖ ನವೀಕರಣವನ್ನು ಹಂಚಿಕೊಂಡಿದ್ದಾರೆ.ಈ ಸುದ್ದಿಗಾಗಿ ಅಭಿಮಾನಿಗಳು ಬಹಳ ದಿನಗಳಿಂದ ಕಾಯುತ್ತಿದ್ದರು.'ಗದರ್3' ಚಿತ್ರೀಕರಣ ಮುಂದಿನ ವರ್ಷ ಪ್ರಾರಂಭವಾಗಲಿದೆ ಎಂದು ಅನಿಲ್ ಶರ್ಮಾ ಹೇಳಿದ್ದಾರೆ.

'ಗದರ್3' ಬಹಳ ಸಮಯದಿಂದ ಚರ್ಚಾಸ್ಪದ ವಿಷಯವಾಗಿದೆ,ಆದರೂ ತಯಾರಕರು ಈ ವಿಷಯದ ಬಗ್ಗೆ ಮೌನವಾಗಿದ್ದರು.ಆದಾಗ್ಯೂ,'ಗದರ್'25 ವರ್ಷಗಳನ್ನು ಪೂರೈಸುತ್ತಿರುವುದರಿಂದ, ನಿರ್ದೇಶಕರು ವೈಯಕ್ತಿಕವಾಗಿ 'ಗದರ್3' ಅನ್ನು ದೃಢಪಡಿಸಿದ್ದಾರೆ. ಮೂರನೇ ಕಂತಿನ ಕಥೆ ಇನ್ನಷ್ಟು ಸ್ಫೋಟಕವಾಗಲಿದೆ ಎಂದು ಅನಿಲ್ ಶರ್ಮಾ ಹೇಳಿದರು.ನಿರ್ದೇಶಕರು ಗದರ್ 3 ಕುರಿತು ನವೀಕರಣವನ್ನು ಹಂಚಿಕೊಂಡಿದ್ದಾರೆ

'ಗದರ್' ಫ್ರಾಂಚೈಸಿಯ ಮೂರನೇ ಕಂತಿನ ಬಗ್ಗೆ ಮಾತನಾಡುತ್ತಾ, ಅನಿಲ್ ಶರ್ಮಾ,'ಗದರ್3' ಖಂಡಿತವಾಗಿಯೂ ನಿರ್ಮಾಣವಾಗಲಿದೆ,ಮತ್ತು ಇದು ಮೊದಲಿಗಿಂತ ದೊಡ್ಡದಾಗಿರುತ್ತದೆ. ಈ ಚಿತ್ರವು ಸ್ವತಃ ಒಂದು ದೊಡ್ಡ ಜವಾಬ್ದಾರಿಯಾಗಿದೆ ಏಕೆಂದರೆ ಜನರು ಫ್ರಾಂಚೈಸಿಯಿಂದ ಹೆಚ್ಚಿನ ನಿರೀಕ್ಷೆಗಳನ್ನು ಹೊಂದಿದ್ದಾರೆ. ನನಗೆ,'ಗದರ್' ಕಥೆ 'ಬಾಂಬ್' ಆಗಿದ್ದರೆ, ಆಗ ಮಾತ್ರ ನಾನು 'ಗದರ್2' ಅನ್ನು 'ಆಟಂ ಬಾಂಬ್' ಆಗಿ ಪರಿವರ್ತಿಸಬಲ್ಲೆ - ಮತ್ತು ಅದು ಇತಿಹಾಸವನ್ನು ಸೃಷ್ಟಿಸಿತು.ಈಗ, ನನ್ನ ಬಳಿ ಕಥೆಯ 'ನ್ಯೂಕ್ಲಿಯರ್‌ಬಾಂಬ್' ಇದ್ದರೆ ಮಾತ್ರ ನಾನು ಮೂರನೇ ಭಾಗವನ್ನು ಮಾಡುತ್ತೇನೆ.ನಾವು ಪ್ರಸ್ತುತ ಸ್ಕ್ರಿಪ್ಟ್‌ನಲ್ಲಿ ಕೆಲಸ ಮಾಡುತ್ತಿದ್ದೇವೆ ಮತ್ತು ಎಲ್ಲವೂ ಸರಿಯಾಗಿದ್ದರೆ,ನಾವು 2027ರಲ್ಲಿ 'ಗದರ್ 3' ಚಿತ್ರೀಕರಣವನ್ನು ಪ್ರಾರಂಭಿಸುತ್ತೇವೆ.

ಸನ್ನಿ ಡಿಯೋಲ್ ಮತ್ತು ಅಮೀಷಾ ಪಟೇಲ್ ನಟಿಸಿ 2001ರಲ್ಲಿ ಬಿಡುಗಡೆಯಾದ ಬ್ಲಾಕ್ ಬಸ್ಟರ್ ಚಿತ್ರ 'ಗದರ್:ಏಕ್ ಪ್ರೇಮ್ ಕಥಾ' ರೂ.18 ಕೋಟಿ ಬಜೆಟ್‌ನಲ್ಲಿ ನಿರ್ಮಿಸಲ್ಪಟ್ಟಿತು. ಇದು ವಿಶ್ವಾದ್ಯಂತ ರೂ.132 ಕೋಟಿ ಸಂಗ್ರಹ ಮಾಡುವ ಮೂಲಕ ಬಾಕ್ಸ್ ಆಫೀಸ್‌ನಲ್ಲಿ ಇತಿಹಾಸ ಸೃಷ್ಟಿಸಿತು. ಏತನ್ಮಧ್ಯೆ, 2023ರಲ್ಲಿ ಬಿಡುಗಡೆಯಾದ 'ಗದರ್2' ರೂ.60 ಕೋಟಿ ಬಜೆಟ್ ಹೊಂದಿತ್ತು ಮತ್ತು ವಿಶ್ವಾದ್ಯಂತ ರೂ.686 ಕೋಟಿ ಬಾಕ್ಸ್ ಆಫೀಸ್ ಸಂಗ್ರಹವನ್ನು ಸಾಧಿಸಿತು.

ಮಲಯಾಳಂ ಚಿತ್ರರಂಗಕ್ಕೆ ಕರಣ್ ಜೋಹರ್ ಪ್ರವೇಶ; ಪ್ಯಾನ್-ಇಂಡಿಯಾ ಚಿತ್ರ ಘೋಷಣೆ




ಚಲನಚಿತ್ರ ನಿರ್ಮಾಪಕ ಕರಣ್ ಜೋಹರ್ ತಮ್ಮ ಧರ್ಮ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ,'ಕಲ್ ಹೋ ನಾ ಹೋ','ಯೇ ಜವಾನಿ ಹೈ ದಿವಾನಿ', ಮತ್ತು 'ರಾಝಿ'ನಂತಹ ಹಲವಾರು ಅತ್ಯುತ್ತಮ ಮತ್ತು ಯಶಸ್ವಿ ಬಾಲಿವುಡ್ ಚಿತ್ರಗಳನ್ನು ನಿರ್ಮಿಸಿದ್ದಾರೆ. ಬಾಲಿವುಡ್ ನಂತರ, ಕರಣ್ ಈಗ ಮಲಯಾಳಂ ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟಿದ್ದಾರೆ. ಅವರು ತಮ್ಮ ಕಂಪನಿಯ ಮೂಲಕ 'ಓಡಿಯನ್' ಎಂಬ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.ಕರಣ್ ಜೂನ್ 16 ರಂದು ಸಾಮಾಜಿಕ ಮಾಧ್ಯಮದ ಮೂಲಕ ಚಿತ್ರವನ್ನು ಘೋಷಿಸಿದರು.

ಈ ಚಿತ್ರಕ್ಕಾಗಿ,ಕರಣ್ ಪೃಥ್ವಿರಾಜ್ ಸುಕುಮಾರನ್ ಅವರ ನಿರ್ಮಾಣ ಕಂಪನಿಯೊಂದಿಗೆ ಪಾಲುದಾರಿಕೆ ಹೊಂದಿದ್ದಾರೆ. ನಿರ್ಮಾಪಕರಾಗುವುದರ ಜೊತೆಗೆ, ಪೃಥ್ವಿರಾಜ್ ಸುಕುಮಾರನ್ ಸಹ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.ಚಿತ್ರದಲ್ಲಿ ಮಂಜು ವಾರಿಯರ್ ಅವರೊಂದಿಗೆ ಸೇರಲಿದ್ದಾರೆ. 'ಓಡಿಯನ್' ಚಿತ್ರವನ್ನು ರಾಹುಲ್ ಸದಾಶಿವನ್ ನಿರ್ದೇಶಿಸಲಿದ್ದಾರೆ. ಚಿತ್ರದ ಬಿಡುಗಡೆ ದಿನಾಂಕದ ಬಗ್ಗೆ ಇನ್ನೂ ಯಾವುದೇ ಮಾಹಿತಿಯನ್ನು ಹಂಚಿಕೊಂಡಿಲ್ಲ. ನಿರ್ದೇಶಕ ಎಸ್.ಎಸ್.ರಾಜಮೌಳಿ ಅವರ ರೂ.1,300 ಕೋಟಿ ಬಜೆಟ್‌ನಲ್ಲಿ ತಯಾರಾಗುತ್ತಿರುವ ಮುಂಬರುವ ಚಿತ್ರ 'ವಾರಣಾಸಿ'ಯಲ್ಲಿ ಪೃಥ್ವಿರಾಜ್ ಸುಕುಮಾರನ್ ಕೂಡ ಇದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ.

'ಓಡಿಯನ್' ಪ್ಯಾನ್-ಇಂಡಿಯಾ ಚಿತ್ರ. ಇದು ಮಲಯಾಳಂ ಸೇರಿದಂತೆ ಐದು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ. ಪ್ರೇಕ್ಷಕರು ಹಿಂದಿ,ತಮಿಳು, ತೆಲುಗು ಮತ್ತು ಕನ್ನಡದಲ್ಲಿಯೂ ಚಿತ್ರವನ್ನು ವೀಕ್ಷಿಸಲು ಸಾಧ್ಯವಾಗುತ್ತದೆ.ಚಿತ್ರದ ಬಗ್ಗೆ ಮಾತನಾಡಿದ ಕರಣ್ ಜೋಹರ್, 'ನಾವು ಮಲಯಾಳಂ ಸಿನಿಮಾ ಜಗತ್ತಿನಲ್ಲಿ ನಮ್ಮ ಮೊದಲ ಹೆಜ್ಜೆ ಇಡುತ್ತಿದ್ದೇವೆ ಮತ್ತು ಈ ಚಿತ್ರಕ್ಕಾಗಿ ನಮಗೆ ಉತ್ತಮ ಪಾಲುದಾರ ಪೃಥ್ವಿರಾಜ್ ಸುಕುಮಾರನ್ ಇದ್ದಾರೆ ಎಂದು ಹಂಚಿಕೊಳ್ಳಲು ನನಗೆ ಹೆಮ್ಮೆ ಇದೆ. ನಾವು ಹಿಂದೆ ಹಲವಾರು ಯೋಜನೆಗಳಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೇವೆ ಮತ್ತು ಭವಿಷ್ಯದಲ್ಲಿ ಇನ್ನೂ ಅನೇಕ ಯೋಜನೆಗಳಲ್ಲಿ ಸಹಕರಿಸಲು ಆಶಿಸುತ್ತೇವೆ' ಎಂದು ಬರೆದಿದ್ದಾರೆ. 'ಪ್ರತಿಭಾನ್ವಿತ ರಾಹುಲ್ ಸದಾಶಿವನ್ ನಿರ್ದೇಶನದ ನಮ್ಮ 'ಓಡಿಯನ್' ಚಿತ್ರವನ್ನು ಘೋಷಿಸಲು ನಮಗೆ ತುಂಬಾ ಹೆಮ್ಮೆಯಿದೆ. ಜಾನಪದವನ್ನು ಆಧರಿಸಿದ ಭಯಾನಕ ಕಥೆಗಳನ್ನು ಹೇಳುವ ಅವರ ಕೌಶಲ್ಯ ಇಂದಿನ ಸಿನಿಮೀಯ ಭೂದೃಶ್ಯದಲ್ಲಿ ಗಮನಾರ್ಹವಾಗಿದೆ.ಮಂಜು ವಾರಿಯರ್ ಮತ್ತು ನಮ್ಮ ನೆಚ್ಚಿನ ಪೃಥ್ವಿರಾಜ್ ಇದನ್ನು ತೆರೆಗೆ ತರುತ್ತಿದ್ದಾರೆ. ಚಿತ್ರ ಶೀಘ್ರದಲ್ಲೇ ಬರಲಿದೆ' ಎಂದು ಕರಣ್ ಬರೆದಿದ್ದಾರೆ.

ತಮಿಳು ಸಿನಿಮಾ ನಿರ್ಮಾಪಕನ ಜತೆ ಹಸೆಮಣೆ ಏರಲಿದ್ದಾರೆ ಶರ್ಮಿಳಾ ಮಾಂಡ್ರೆ





2007 ರಲ್ಲಿ ಬಿಡುಗಡೆ ಆದ 'ಸಜನಿ' ಸಿನಿಮಾ ಮೂಲಕ ನಟನೆ ಆರಂಭಿಸಿದ ಶರ್ಮಿಳಾ ಮಾಂಡ್ರೆ ಹಲವು ಕನ್ನಡ, ತೆಲುಗು ಮತ್ತು ತಮಿಳು ಸಿನಿಮಾಗಳಲ್ಲಿ ನಟಿಸಿದ್ದಾರೆ. ಪ್ರಸ್ತುತ ತಮಿಳಿನ 'ಅದೃಷ್ಟಶಾಲಿ' ಮತ್ತು 'ದಸರಾ' ಹೆಸರಿನ ಕನ್ನಡ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಶರ್ಮಿಳಾ ಮಾಂಡ್ರೆ ನಟಿ ಮಾತ್ರವೇ ಅಲ್ಲದೆ ನಿರ್ಮಾಪಕಿಯೂ ಆಗಿದ್ದು ತಮಿಳಿನಲ್ಲಿ ನಾಲ್ಕು ಸಿನಿಮಾ ನಿರ್ಮಿಸಿದ್ದಾರೆ. ಕನ್ನಡದಲ್ಲಿ 'ದಸರಾ' ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಜೊತೆಗೆ ತಮಿಳಿನ 'ಕಾದಲ್ ಕೊಂಜಂ ತೂಕಲಾ' ಹೆಸರಿನ ತಮಿಳು ಸಿನಿಮಾವನ್ನೂ ಸಹ ನಿರ್ಮಾಣ ಮಾಡುತ್ತಿದ್ದಾರೆ.

ಕನ್ನಡದ ಜನಪ್ರಿಯ ನಟಿ ಶರ್ಮಿಳಾ ಮಾಂಡ್ರೆ ಮದುವೆ ಆಗಲಿದ್ದಾರೆ. ಕನ್ನಡ ಮಾತ್ರವಲ್ಲದೆ ಹಲವು ಭಾಷೆಗಳಲ್ಲಿ ನಟಿಸಿರುವ ಶರ್ಮಿಳಾ ಮಾಂಡ್ರೆ ಇದೀಗ ತಮಿಳುನಾಡಿನ ಸೊಸೆ ಆಗಲಿದ್ದಾರೆ. ಶರ್ಮಿಳಾ ಮಾಂಡ್ರೆ ಅವರ ನಿಶ್ಚಿತಾರ್ಥ ನಿಶ್ಚಯವಾಗಿದ್ದು, ಇದೇ ತಿಂಗಳ 25ನೇ ತಾರೀಖಿನಂದು ಕುಟುಂಬಸ್ಥರ ಸಮ್ಮುಖದಲ್ಲಿ ಶರ್ಮಿಳಾ ಮಾಂಡ್ರೆ ನಿಶ್ಚಿತಾರ್ಥ ನಡೆಯಲಿದೆ.

ಶರ್ಮಿಳಾ ಮಾಂಡ್ರೆ ಅವರು ತಮಿಳುನಾಡಿನ ಸೊಸೆಯಾಗಿ ಹೋಗಲಿದ್ದು, ತಮಿಳು ಚಿತ್ರರಂಗದ ನಿರ್ಮಾಪಕ ಸುಧನ್ ಸುಂದರಮ್ ಅವರ ಕೈ ಹಿಡಿಯಲಿದ್ದಾರೆ. ಸುಧನ್ ಅವರು ಕೆಲ ವರ್ಷಗಳ ಹಿಂದೆ ಬಿಡುಗಡೆ ಆಗ ಬ್ಲಾಕ್ ಬಸ್ಟರ್‌ಸಿನಿಮಾ 'ಮಹಾರಾಜ'ದ ನಿರ್ಮಾಪಕ ಆಗಿದ್ದಾರೆ. 'ಮಹಾರಾಜ' ಮಾತ್ರವಲ್ಲದೆ ಇತ್ತೀಚೆಗೆ ಸೂಪರ್‌ಹಿಟ್ ಆದ ತಮಿಳು ಸಿನಿಮಾ 'ತಾಕ್ ಕಿಳವಿ'ಗೂ ಇವರು ಸಹ ನಿರ್ಮಾಪಕರು.ಕೆಲವೇ ದಿನಗಳಲ್ಲಿ ಇವರ ನಿಶ್ಚಿತಾರ್ಥ ನಡೆಯಲಿದ್ದು,ಮದುವೆ ಸಹ ಇದೇ ವರ್ಷದಲ್ಲಿ ನೆರವೇರಲಿದೆ.

ಸುಧನ್ ಅವರು ಪ್ಯಾಷನ್ ಸ್ಟುಡಿಯೋಸ್ ಹೆಸರಿನ ನಿರ್ಮಾಣ ಸಂಸ್ಥೆ ಹೊಂದಿದ್ದು, ಸಿನಿಮಾ ನಿರ್ಮಾಣ ಮತ್ತು ವಿತರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 'ಮಹಾರಾಜ'ಮಾತ್ರವಲ್ಲದೆ, ತಮಿಳಿನ ಬೆಂಚ್, ಇರೈವನ್, ಇನ್ನೂ ಕೆಲ ಸಿನಿಮಾಗಳನ್ನು ನಿರ್ಮಿಸಿದ್ದಾರೆ. ಇದೀಗ ನಟಿ ಶರ್ಮಿಳಾ ಮಾಂಡ್ರೆ ಅವರನ್ನು ವಿವಾಹವಾಗುತ್ತಿದ್ದಾರೆ.


ಮಗನ ಸಿನಿಮಾಕ್ಕೆ ಕರೆತರಲು ಸಜ್ಜಾದ ಧನುಶ್,ಅವರದ್ದೇ ನಿರ್ದೇಶನ



ಧನುಶ್ ಭಾರತೀಯ ಚಿತ್ರರಂಗದ ಸೂಪರ್ ಸ್ಟಾರ್‌ಗಳಲ್ಲಿ ಒಬ್ಬರು,ಈಗಲೂ ಹಲವಾರು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ.ತಮಿಳು ಮಾತ್ರವಲ್ಲದೇ ಹಿಂದಿ,ತೆಲುಗು ಹಾಲಿವುಡ್ ಸಿನಿಮಾಗಳಲ್ಲಿಯೂ ಸಹ ಧನುಶ್ ಅವರು ನಟಿಸಿದ್ದಾರೆ. ಧನುಶ್ ಕೇವಲ ನಟರು ಮಾತ್ರವಲ್ಲ ಅವರು ನಿರ್ದೇಶಕರೂ ಸಹ ಹೌದು.ಈ ವರೆಗೆ ನಾಲ್ಕು ಸಿನಿಮಾಗಳನ್ನು ಅವರು ನಿರ್ದೇಶಿಸಿದ್ದಾರೆ. ಧನುಷ್ ಅವರು 2024ರಲ್ಲಿ ಪತ್ನಿ ಐಶ್ವರ್ಯ ರಜನೀಕಾಂತ್ ಅವರಿಂದ ವಿಚ್ಛೇದನ ಪಡೆದಿದ್ದಾರೆ. ಅವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ.ಇದೀಗ ಧನುಶ್ ಅವರು ತಮ್ಮ ಮಕ್ಕಳನ್ನು ಚಿತ್ರರಂಗಕ್ಕೆ ಕರೆತರಲು ಸಜ್ಜಾಗಿದ್ದು,ಮಕ್ಕಳ ಮೊದಲ ಸಿನಿಮಾವನ್ನು ಖುದ್ದು ಅವರೇ ನಿರ್ದೇಶನ ಮಾಡಲಿದ್ದಾರೆ.

ಧನುಶ್ ಅವರ ಮೊದಲ ಪುತ್ರ ಯಾತ್ರಾ ಇದೀಗ ಚಿತ್ರರಂಗಕ್ಕೆ ಬರಲು ಸಜ್ಜಾಗಿದ್ದಾರೆ. ಅವರಿಗೆ ಇನ್ನೂ 20 ವರ್ಷ ವಯಸ್ಸು.ಧನುಶ್ ಈ ಹಿಂದೆ,ತಮ್ಮ ಮಕ್ಕಳು ಸಿನಿಮಾಕ್ಕೆ ಬರಲು ಇನ್ನೂ ಸಮಯವಿದೆ ಎಂದಿದ್ದರು.ಆದರೆ ಈಗ ಖುದ್ದು ಅವರೇ ತಮ್ಮ ಮಗನಿಗಾಗಿ ಸಿನಿಮಾ ನಿರ್ದೇಶಿಸಲು ಮುಂದಾಗಿದ್ದಾರೆ.ಧನುಶ್ ನಿರ್ದೇಶನ ಮಾಡಲಿರುವ ಮುಂದಿನ ಸಿನಿಮಾದಲ್ಲಿ ಯಾತ್ರಾ ಮುಖ್ಯ ಪಾತ್ರದಲ್ಲಿ ನಟಿಸಲಿದ್ದಾರೆ.ಜಿವಿ ಪ್ರಕಾಶ್ ಈ ಚಿತ್ರಕ್ಕೆ ಸಂಗೀತ ನಿರ್ದೇಶಕರಾಗುವ ಸಾಧ್ಯತೆಯಿದೆ.ಧನುಶ್ ಅವರ ಈ ಸಿನಿಮಾ ಶಾಲೆ-ಕಾಲೇಜಿನ ಕತೆಯನ್ನು ಹೊಂದಿರಲಿದ್ದು,ಜೊತೆಗೆ ಕ್ರೀಡಾ ವಿಷಯವನ್ನೂ ಸಹ ಒಳಗೊಂಡಿರಲಿದೆಯಂತೆ. ಹಾಗಾಗಿ ಮಗನನ್ನೇ ಸಿನಿಮಾಕ್ಕೆ ನಾಯಕನನ್ನಾಗಿ ಧನುಶ್ ಆಯ್ಕೆ ಮಾಡಿಕೊಂಡಿದ್ದಾರೆ.ಅಂದಹಾಗೆ ಧನುಷ್ ಇತ್ತೀಚೆಗೆ ತಮ್ಮ ಸೋದರಳಿಯ ಪವಿಶ್ ಅವರನ್ನು 'ನಿಲವುಕ್ಕು ಎನ್ಮೆಲ್ ಎನ್ನದಿ ಕೋಪಂ' ಚಿತ್ರದ ಮೂಲಕ ಪರಿಚಯಿಸಿದ್ದಾರೆ. ಈಗ ಮಗನನ್ನೂ ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ.ಧನುಶ್ ಪ್ರಸ್ತುತ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಹಿಂದಿಯಲ್ಲಿ ಐತಿಹಾಸಿಕ ಕತೆಯುಳ್ಳ ಸಿನಿಮಾನಲ್ಲಿ ನಟಿಸಲು ಒಪ್ಪಿಗೆ ನೀಡಿದ್ದಾರೆ.ಸದ್ಯಕ್ಕೆ ತಮ್ಮ 55ನೇ ಸಿನಿಮಾನಲ್ಲಿ ಧನುಶ್ ನಟಿಸುತ್ತಿದ್ದು, ಅದೇ ಸಿನಿಮಾನಲ್ಲಿ ಧನುಶ್ ಜೊತೆಗೆ ಮಮ್ಮುಟಿ ಸಹ ನಟಿಸುತ್ತಿದ್ದಾರೆ. ಇದರ ಬಳಿಕ ತೆಲುಗಿನ ಸಿನಿಮಾ ಒಂದರಲ್ಲಿ ಧನುಶ್ ನಟಿಸಲಿದ್ದಾರೆ ಎನ್ನಲಾಗಿದೆ. ಬಳಿಕ ಅವರ ಸಹೋದರ ಸೆಲ್ವರಾಘವನ್ ನಿರ್ದೇಶನದ 'ಆಯರತ್ತಿಲ್ ಒರುವನ್ 2' ಸಿನಿಮಾನಲ್ಲಿಯೂ ನಟಿಸಲಿದ್ದಾರೆ.ಇದೆಲ್ಲದರ ನಡುವೆ ತಮ್ಮ ಮಗನಿಗಾಗಿ ಸಿನಿಮಾ ಸಹ ನಿರ್ದೇಶನ ಮಾಡಲಿದ್ದಾರೆ.

'ನಿನ್ನ ಗಂಡ ಮುದುಕ' ಎಂದವರಿಗೆ ಖಡಕ್ ತಿರುಗೇಟು ಕೊಟ್ಟ ಅರ್ಬಾಜ್ ಖಾನ್ ಪತ್ನಿ



ಬಾಲಿವುಡ್ ನಟ ಹಾಗೂ ನಿರ್ಮಾಪಕ ಅರ್ಬಾಜ್ ಖಾನ್ ಅವರ ಪತ್ನಿ,ಸೆಲೆಬ್ರಿಟಿ ಮೇಕಪ್ ಆರ್ಟಿಸ್ಟ್ ಶೂರಾ ಖಾನ್ ಅವರು ಸೋಶಿಯಲ್ ಮೀಡಿಯಾದಲ್ಲಿ ಮತ್ತೊಮ್ಮೆ ಸದ್ದು ಮಾಡಿದ್ದಾರೆ.ತಮಗೂ ಮತ್ತು ತಮ್ಮ ಪತಿಗೂ ಇರುವ ವಯಸ್ಸಿನ ವ್ಯತ್ಯಾಸದ ಬಗ್ಗೆ ವ್ಯಂಗ್ಯವಾಡಿದ ಟ್ರೋಲರ್‌ಗೆ ಅವರು ಅತ್ಯಂತ ಜಾಣತನದಲ್ಲಿ ಹಾಗೂ ಖಡಕ್ ಆಗಿ ಉತ್ತರ ನೀಡುವ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ನೆಟ್ಟಿಗರ ಗಮನ ಸೆಳೆದಿದ್ದಾರೆ.ಇತ್ತೀಚೆಗೆ ಶೂರಾ ಖಾನ್ ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಅಭಿಮಾನಿಗಳ ಪ್ರಶ್ನೆಗೆ ಉತ್ತರಿಸುತ್ತಿದ್ದರು.ಈ ವೇಳೆ ನೆಟ್ಟಿಗನೊಬ್ಬ,ಅರ್ಬಾಜ್ ಖಾನ್ ಅವರ ವಯಸ್ಸನ್ನು ಉಲ್ಲೇಖಿಸಿ,'ನೀವು ಆ ಮುದುಕನ ಜೊತೆ ಖುಷಿಯಾಗಿದ್ದೀರಾ?' ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ್ದಾನೆ.

ಈ ಉದ್ಧಟತನದ ಪ್ರಶ್ನೆಗೆ ಕಿಡಿಕಾರದೆ, ಅತ್ಯಂತ ಶಾಂತವಾಗಿ ಮತ್ತು ಹಾಸ್ಯಭರಿತವಾಗಿ ಉತ್ತರಿಸಿದ ಶೂರಾ ಖಾನ್,'ನೀವು ನಿಜವಾಗಿಯೂ ಕೇಳ್ತಿದ್ದೀರಾ? ಅವರು ಮುದುಕನಲ್ಲ, ಬದಲಿಗೆ, ಲಿಮಿಟೆಡ್ ಎಡಿಷನ್ ವಿಂಟೇಜ್ ಮಾಡೆಲ್'ಎಂದು ಬರೆದುಕೊಂಡು ನೆಟ್ಟಿಗನ ಬಾಯಿ ಮುಚ್ಚಿಸಿದ್ದಾರೆ. ಅವರ ಈ ಖಡಕ್ ತಿರುಗೇಟು ಸದ್ಯ ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದೆ.

ಇದೇ ವೇಳೆ ತಮ್ಮ ವೈವಾಹಿಕ ಜೀವನದ ಬಗ್ಗೆ ಕೇಳಲಾದ ಪ್ರಶ್ನೆಗೆ 'ಮಸ್ತ್ ಆಗಿದೆ' ಎಂದು ಉತ್ತರಿಸಿದ ಶೂರಾ,ಅರ್ಬಾಜ್ ಖಾನ್ ಅವರೊಂದಿಗಿನ ಮೊದಲ ಡೇಟಿಂಗ್ ಬಗ್ಗೆಯೂ ಮುಕ್ತವಾಗಿ ಮಾತನಾಡಿದ್ದಾರೆ.'ನಾನು ಅವರೊಂದಿಗೆ ಒಂದು ಶರತ್ತು ಸೋತಿದ್ದೆ,ಹಾಗಾಗಿ ಮೊದಲ ಡೇಟ್‌ನಲ್ಲಿ ಅವರಿಗೆ ನಾನೇ ಡಿನ್ನರ್ ಟ್ರೀಟ್ ನೀಡಬೇಕಾಗಿ ಬಂತು' ಎಂದು ತಮಾಷೆಯಾಗಿ ನೆನಪಿಸಿಕೊಂಡಿದ್ದಾರೆ.

ತಮ್ಮ ತಾಯ್ತನದ ಜರ್ನಿ ಬಗ್ಗೆ ಪ್ರತಿಕ್ರಿಯೆ ನೀಡಿರುವ ಶೂರಾ, 'ಇದು ಒಂದು ಅದ್ಭುತವಾದ ಪ್ರಯಾಣ.ಇದು ದಣಿವು ತರುತ್ತದೆ, ಜೊತೆಗೆ ಅಷ್ಟೇ ಖುಷಿಯನ್ನೂ ನೀಡುತ್ತದೆ' ಎಂದಿದ್ದಾರೆ.ಅಲ್ಲದೆ ಅಭಿಮಾನಿಯೊಬ್ಬರು ಮಗಳ ಹೆಸರನ್ನು ಯಾರು ಆಯ್ಕೆ ಮಾಡಿದ್ದು ಎಂದು ಕೇಳಿದ್ದಕ್ಕೆ, 'ಅರ್ಬಾಜ್ ಅವರ ತಂದೆ ಸಲೀಂ ಖಾನ್ ಅವರೇ ನಮ್ಮ ಮಗಳ ಹೆಸರನ್ನು ಆಯ್ಕೆ ಮಾಡಿದರು' ಎಂದು ಪ್ರೀತಿಯಿಂದ ತಿಳಿಸಿದ್ದಾರೆ.

ಶೂರಾ ಖಾನ್ ಮತ್ತು ಅರ್ಬಾಜ್ ಖಾನ್ ಅವರು 'ಪಟ್ನಾ ಶುಕ್ಲಾ' ಚಿತ್ರದ ಶೂಟಿಂಗ್ ಸೆಟ್‌ನಲ್ಲಿ ಮೊದಲ ಬಾರಿಗೆ ಭೇಟಿಯಾಗಿದ್ದರು.ಅಲ್ಲಿ ಇವರಿಬ್ಬರ ನಡುವೆ ಪ್ರೀತಿ ಚಿಗುರಿತ್ತು.ಕೆಲಕಾಲ ತಮ್ಮ ಸಂಬಂಧವನ್ನು ರಹಸ್ಯವಾಗಿಟ್ಟಿದ್ದ ಈ ಜೋಡಿ 2023ರ ಡಿಸೆಂಬರ್24ರಂದು ಮುಂಬೈನಲ್ಲಿರುವ ಸಲ್ಮಾನ್ ಖಾನ್ ಸಹೋದರಿ ಅರ್ಪಿತಾ ಖಾನ್ ಶರ್ಮಾ ಅವರ ನಿವಾಸದಲ್ಲಿ ಅತ್ಯಂತ ಸರಳವಾಗಿ ವಿವಾಹವಾದ್ದರು.ಇದು ಅರ್ಬಾಜ್ ಖಾನ್ ಅವರ ಎರಡನೇ ವಿವಾಹವಾಗಿದ್ದು,ಇದಕ್ಕೂ ಮುನ್ನ ಅವರು ನಟಿ ಮಲೈಕಾ ಅರೋರಾ ಅವರನ್ನು ವಿವಾಹವಾಗಿದ್ದರು.

ಮಿಥುನ್ ಚಕ್ರವರ್ತಿ ಮಗಳಿಗೆ ಎಂಗೇಜ್‌ಮೆಂಟ್!



ಬಾಲಿವುಡ್‌ನಲ್ಲಿ ಮತ್ತೊಂದು ಮದುವೆ ಸಂಭ್ರಮಕ್ಕೆ ವೇದಿಕೆ ಸಿದ್ಧವಾಗಿದೆ.ಹಿರಿಯ ನಟ ಮಿಥುನ್ ಚಕ್ರವರ್ತಿ ಮನೆಯಲ್ಲಿ ಸದ್ಯದಲ್ಲೇ ಶಹನಾಯಿ ಸದ್ದು ಕೇಳಿಬರಲಿದೆ.ಅವರ ಮಗಳು ದಿಶಾನಿ ಚಕ್ರವರ್ತಿ,ತಮ್ಮ ಬಹು ಕಾಲದ ಬಾಯ್‌ಫ್ರೆಂಡ್ ಜೊತೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ. ದಿಶಾನಿ ತಮ್ಮ ಎಂಗೇಜ್‌ಮೆಂಟ್ ಫೋಟೋಗಳನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದು, ಇವು ಸೋಷಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗುತ್ತಿವೆ.ಈ ರೊಮ್ಯಾಂಟಿಕ್ ಫೋಟೋಗಳನ್ನು ನೋಡಿದ ಅಭಿಮಾನಿಗಳು ಫುಲ್ ಖುಷ್ ಆಗಿದ್ದು,ಜೋಡಿಗೆ ಶುಭಾಶಯಗಳ ಸುರಿಮಳೆಗೈಯುತ್ತಿದ್ದಾರೆ.ನಿಶ್ಚಿತಾರ್ಥದ ಜೊತೆಗೆ ದಿಶಾನಿ ತಮ್ಮ ಮದುವೆ ದಿನಾಂಕವನ್ನೂ ಬಹಿರಂಗ ಪಡಿಸಿದ್ದಾರೆ.

ಬಾಲಿವುಡ್‌ನ ಹಿರಿಯ ನಟ ಮಿಥುನ್ ಚಕ್ರವರ್ತಿ ಅವರ ಪುತ್ರಿ ದಿಶಾನಿ ಚಕ್ರವರ್ತಿ ತಮ್ಮ ಜೀವನದ ಹೊಸ ಅಧ್ಯಾಯ ಆರಂಭಿಸಲು ಸಿದ್ಧರಾಗಿದ್ದಾರೆ.ಈ ಸ್ಟಾರ್‌ಕಿಡ್ ಇತ್ತೀಚೆಗೆ ತಮ್ಮ ಬಹುಕಾಲದ ಗೆಳೆಯ ಮೈಲ್ಸ್ ಮ್ಯಾಂಟ್ಝಾರಿಸ್ ಜೊತೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ. ಸೋಮವಾರ ಇನ್‌ಸ್ಟಾಗ್ರಾಮ್‌ನಲ್ಲಿ ಈ ಖುಷಿ ಸುದ್ದಿ ಹಂಚಿಕೊಂಡ ದಿಶಾನಿ, ಪ್ರಪೋಸಲ್‌ನ ಹಲವು ಫೋಟೋಗಳನ್ನು ಪೋಸ್ಟ್ ಮಾಡಿದ್ದಾರೆ.

ಫೋಟೋದಲ್ಲಿ ದಿಶಾನಿ ತಮ್ಮ ನಿಶ್ಚಿತಾರ್ಥದ ಉಂಗುರವನ್ನು ತೋರಿಸುತ್ತಾ ಸಂಭ್ರಮಿಸಿದ್ದಾರೆ.

ದಿಶಾನಿ, ಮೈಲ್ಸ್ ಮ್ಯಾಂಟ್ಝಾರಿಸ್ ಎಂಬುವವರನ್ನು ವರಿಸಲಿದ್ದಾರೆ. ಮೈಲ್ಸ್ ಅವರ ಇನ್‌ಸ್ಟಾ ಬಯೋ ಪ್ರಕಾರ, ಅವರು ಒಬ್ಬ ಸ್ಟೆಡಿಕಾಮ್ ಆಪರೇಟರ್ ಮತ್ತು ಕಲರಿಸ್ಟ್ ಆಗಿ ಕೆಲಸ ಮಾಡುತ್ತಾರೆ. ಈ ಜೋಡಿ ತಮ್ಮ ಸಂಬಂಧವನ್ನು ಹೆಚ್ಚು ಬಹಿರಂಗಪಡಿಸಿರಲಿಲ್ಲ. ಅವರು ಮಿಥುನ್ ಮತ್ತು ಅವರ ಪತ್ನಿ, ನಟಿ ಯೋಗಿತಾ ಬಾಲಿ ಅವರ ದತ್ತು ಪುತ್ರಿ. ಈ ದಂಪತಿಗೆ ದಿಶಾನಿ ಸೇರಿ ಒಟ್ಟು ನಾಲ್ಕು ಮಕ್ಕಳು.

ಕಾರ್ತಿಕ್ ಆರ್ಯನ್ ಜೊತೆ ಲವ್ ರಂಜನ್ ಅವರ ಮುಂದಿನ ಚಿತ್ರಕ್ಕೆ ಶಾರ್ವರಿ ಜತೆ ಮಾತುಕತೆ

ಇಮ್ತಿಯಾಜ್ ಅಲಿ ನಿರ್ದೇಶನದ 'ಮೈ ವಾಪಸ್ ಆವುಂಗಾ' ಚಿತ್ರಕ್ಕೆ ಮೆಚ್ಚುಗೆ ಗಳಿಸಿದ ನಂತರ,ನಟಿ ಶಾರ್ವರಿ ವೈಆರ್‌ಎಫ್ ಸ್ಪೈ ಯೂನಿವರ್ಸ್ ಚಿತ್ರ 'ಆಲ್ಫಾ'ದಲ್ಲಿ ತಮ್ಮ ಆಕ್ಷನ್ ಅವತಾರವನ್ನು ತೋರಿಸಲು ಸಿದ್ಧರಾಗಿದ್ದಾರೆ. ಅಷ್ಟೇ ಅಲ್ಲ, ಸೂರಜ್ ಬರ್ಜಾತ್ಯ ನಿರ್ದೇಶನದ 'ಯೇ ಪ್ರೇಮ್ ಮೋಲ್ ಲಿಯಾ' ಚಿತ್ರವೂ 2026 ರ ಕೊನೆಯಲ್ಲಿ ಬಿಡುಗಡೆಯಾಗಲಿದೆ.

ಶಾರ್ವರಿ ಈಗ ಮತ್ತೊಬ್ಬ ಉನ್ನತ ನಿರ್ದೇಶಕರ ಮುಂದಿನ ಚಿತ್ರದಲ್ಲಿ ಕಾಣಿಸಿಕೊಳ್ಳಲು ಮಾತುಕತೆಯಲ್ಲಿದ್ದಾರೆ ಎಂದು ತಿಳಿದುಬಂದಿದೆ.ಲವ್ ರಂಜನ್ ತಮ್ಮ ಮುಂದಿನ ನಿರ್ದೇಶನದ ಚಿತ್ರಕ್ಕೆ ಮಹಿಳಾ ನಾಯಕಿಯಾಗಿ ಶಾರ್ವರಿಯನ್ನು ಆಯ್ಕೆ ಮಾಡಲು ಉತ್ಸುಕರಾಗಿದ್ದಾರೆ ಎಂದುವಿಶ್ವಾಸಾರ್ಹ ಮೂಲ ಗಳು ತಿಳಿಸಿವೆ.ಇದರಲ್ಲಿ ಕಾರ್ತಿಕ್ ಆರ್ಯನ್ ನಾಯಕನಾಗಿ ನಟಿಸಲಿದ್ದಾರೆ. ಶಾರ್ವರಿ ಉತ್ಸಾಹ ತೋರಿಸಿ ದ್ದಾರೆ ಮತ್ತು ಕಳೆದ 10 ವರ್ಷಗಳ ಕೆಲವು ಅತ್ಯುತ್ತಮ ಜೆನ್-ಝೀ ಚಿತ್ರಗಳ ಹಿಂದಿನ ವ್ಯಕ್ತಿ ಲವ್ ರಂಜನ್ ಅವರೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿದ್ದಾರೆ' ಎಂದು ಮೂಲವೊಂದು ತಿಳಿಸಿದೆ.

ಈ ಲವ್ ರಂಜನ್ ಚಿತ್ರದ ತಾರಾಗಣದ ಬಗ್ಗೆ ಶೀಘ್ರದಲ್ಲೇ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.ಅವರು ಇನ್ನೂ ಸ್ಕ್ರಿಪ್ಟ್ ಬರೆಯುತ್ತಿದ್ದಾರೆ ಮತ್ತು ಡಿಸೆಂಬರ್ 2026 ರ ವೇಳೆಗೆ ತಮ್ಮ ನಿರ್ದೇಶನದೊಂದಿಗೆ ಕೆಲಸ ಮಾಡಲು ಉದ್ದೇಶಿಸಿದ್ದಾರೆ.ಅವರು ಮೊದಲು ಕಾರ್ತಿಕ್‌ಗೆ ತಮ್ಮ ಪೂರ್ಣ ಚಿತ್ರವನ್ನು ವಿವರಿಸುತ್ತಾರೆ,ನಂತರ ಆಗಸ್ಟ್ 2026ರಲ್ಲಿ ಶಾರ್ವರಿ ನಟಿಸುತ್ತಾರೆ. ಪೂರ್ಣ ನಿರೂಪಣೆ ಮುಗಿದ ನಂತರ ದಾಖಲೆಗಳು ಪ್ರಾರಂಭವಾಗುತ್ತವೆ ಎಂದು ಮೂಲಗಳು ತಿಳಿಸಿವೆ. ಶಾರ್ವರಿಯ 'ಆಲ್ಫಾ' ಜುಲೈ 3 ರಂದು ಬಿಡುಗಡೆಯಾಗಲಿದೆ.



ಜುಲೈ 5ಕ್ಕೆ ಬೆಂಗಳೂರು ಬೆಡಗಿಯ ಜೊತೆ ಆಮಿರ್ ಖಾನ್ ಮೂರನೇ ಕಲ್ಯಾಣ!

ಬಾಲಿವುಡ್‌ನ'ಮಿಸ್ಟರ್ ಪರ್ಫೆಕ್ಷನಿಸ್ಟ್' ಎಂದೇ ಖ್ಯಾತರಾಗಿರುವ ನಟ ಆಮಿರ್ ಖಾನ್ ಅವರು ಮೂರನೇ ಬಾರಿಗೆ ವೈವಾಹಿಕ ಜೀವನಕ್ಕೆ ಕಾಲಿಡಲು ಸಜ್ಜಾಗಿದ್ದಾರೆ.ಕಳೆದ ಕೆಲವು ಸಮಯದಿಂದ ಹರಿದಾಡುತ್ತಿದ್ದ ಮದುವೆಯ ವದಂತಿಗಳಿಗೆ ಸ್ವತಃ ಆಮಿರ್ ಖಾನ್ ಅವರೇ ಅಧಿಕೃತವಾಗಿ ಮುದ್ರೆ ಒತ್ತಿದ್ದಾರೆ.ಬೆಂಗಳೂರು ಮೂಲದ ತಮ್ಮ ಪ್ರೇಯಸಿ ಗೌರಿ ಸ್ಪ್ರಾಟ್ ಅವರೊಂದಿಗೆ ಜುಲೈ 5ರಂದು ಅತ್ಯಂತ ಆಪ್ತರ ಸಮ್ಮುಖದಲ್ಲಿ ವಿವಾಹವಾಗುತ್ತಿರುವುದಾಗಿ ಆಮಿರ್ ಖಾನ್ ಖಚಿತಪಡಿಸಿದ್ದಾರೆ.

ಇತ್ತೀಚೆಗೆ ಆಮಿರ್ ಖಾನ್ ಮತ್ತು ಗೌರಿ ಸ್ಪ್ರಾಟ್ ಜುಲೈ ತಿಂಗಳಲ್ಲಿ ಸರಳವಾಗಿ ಮದುವೆಯಾಗಲಿದ್ದಾರೆ ಎಂಬ ಸುದ್ದಿಗಳು ಹರಿದಾಡುತ್ತಿದ್ದವು.ಈ ಕುರಿತು ಅಮೆರಿಕದಿಂದಲೇ ರಿಯಾಕ್ಟ್ ಮಾಡಿರುವ ಆಮಿರ್ ಖಾನ್,'ನಾನು ಪ್ರಸ್ತುತ ಅಮೆರಿಕ ಪ್ರವಾಸದಲ್ಲಿದ್ದೇನೆ. ನನ್ನ ಮದುವೆಯ ಬಗ್ಗೆ ಕೇಳಿಬರ್ತಿರುವ ಸುದ್ದಿಗಳು ಸಂಪೂರ್ಣ ನಿಜ.ಜುಲೈ 5ರಂದು ನಮ್ಮ ವಿವಾಹ ನಡೆಯಲಿದೆ' ಎಂದು ಹೇಳಿದ್ದಾರೆ. ಇದರೊಂದಿಗೆ ಅವರ ಅಭಿಮಾನಿಗಳಲ್ಲಿ ಮತ್ತು ಬಾಲಿವುಡ್ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಪ್ರಶ್ನೆಗೆ ಉತ್ತರ ಸಿಕ್ಕಂತಾಗಿದೆ.ಈ ಹಿಂದೆ ಆಮಿರ್ ಖಾನ್ ಅವರು ಮದುವೆಯ ಬಗ್ಗೆ ಭಿನ್ನವಾದ ನಿಲುವನ್ನ ಹೊಂದಿದ್ದರು. ತಾವಿಬ್ಬರೂ ಹೊಸದಾಗಿ ಖರೀದಿಸಿದ ಮನೆಯಲ್ಲಿ ಒಟ್ಟಿಗೆ ವಾಸಿಸುತ್ತಿದ್ದು, ಸದ್ಯಕ್ಕೆ ಮದುವೆಯಾಗುವುದು ತಮ್ಮ ಆದ್ಯತೆಯಲ್ಲ ಎಂದು ಅವರು ಹೇಳಿದ್ದರು. ಆದರೆ, ಈಗ ಒಮ್ಮಿಂದೊಮ್ಮೆಲೇ ನಿರ್ಧಾರ ಬದಲಾಗಲು ಕಾರಣ ವೇನು ಅನ್ನೋ ಪ್ರಶ್ನೆಗೆ ಉತ್ತರಿ ಸಿರುವ ಅವರು,'ಹೌದು..ನಾನು ಹಿಂದೆ ಹಾಗೆ ಹೇಳಿದ್ದು ನಿಜ ಆದರೆ,ಈಗ ನಾವಿಬ್ಬರೂ ನಮ್ಮ ಸಂಬಂಧವನ್ನ ಮುಂದಿನ ಹಂತಕ್ಕೆ ಕೊಂಡೊಯ್ಯಲು ಸಂಪೂರ್ಣವಾಗಿ ಸಿದ್ಧರಾಗಿದ್ದೇವೆ ಎಂದು ನಮಗೆ ಅನಿಸುತ್ತಿದೆ' ಎಂದು ಸ್ಪಷ್ಟಪಡಿಸಿದ್ದಾರೆ.ತಮ್ಮ ಜೀವನದ ಈ ಹೊಸ ಅಧ್ಯಾಯದ ಕುರಿತು ಮಾತನಾಡಿದ ಆಮಿರ್ ಖಾನ್,'ನಾನು ಪ್ರಸ್ತುತ ಮಾನಸಿಕವಾಗಿ ಶಾಂತಿಯಿಂದ ಇದ್ದೇನೆ. ಗೌರಿ ಮತ್ತು ನಾನು ಒಬ್ಬರನೊಬ್ಬರು ತುಂಬಾ ಅರ್ಥ ಮಾಡಿಕೊಂಡಿದ್ದೇವೆ'ಎಂದು ಹೇಳಿದ್ದಾರೆ.ಆಮಿರ್‌ರ ಪ್ರೇಯಸಿ ಗೌರಿ ಸ್ಪ್ರಾಟ್ ಬೆಂಗಳೂರಿನವರಾಗಿದ್ದು, ವೆಲ್ನೆಸ್ ಮತ್ತು ಬ್ಯೂಟಿ ಉದ್ಯಮದಲ್ಲಿ ಗುರುತಿಸಿಕೊಂಡಿದ್ದಾರೆ. ಕಳೆದ ವರ್ಷ ಮಾರ್ಚ್‌ನಲ್ಲಿ ತಮ್ಮ 60ನೇ ವರ್ಷದ ಹುಟ್ಟುಹಬ್ಬದ ಆಚರಣೆಯ ಸಂದರ್ಭದಲ್ಲಿ ಆಮಿರ್ ಅವರು ಗೌರಿ ಅವರನ್ನ ಮೊದಲ ಬಾರಿಗೆ ಪರಿಚಯಿಸಿದ್ದರು.



ಬಂಟರ ಸಂಘ ಮುಂಬಯಿ : ಕುರ್ಲಾ-ಭಾಂಡೂಪ್ ಪ್ರಾದೇಶಿಕ ಸಮಿತಿಯ 15ನೇ ವಾರ್ಷಿಕೋತ್ಸವ ಉದ್ಘಾಟನೆ

ಸಂಘದ 9 ಪ್ರಾದೇಶಿಕ ಸಮಿತಿಗಳು ನವದುರ್ಗೆಯರಂತೆ ಶೋಭಿತವಾಗಿದೆ : ಪ್ರವೀಣ್ ಭೋಜ ಶೆಟ್ಟಿ











(ಚಿತ್ರ : ಭಾಸ್ಕರ್‌ಕಾಂಚನ್, ವರದಿ: ದಿನೇಶ್ ಕುಲಾಲ್)

ಮುಂಬಯಿ, ಜೂ.20- ಬಂಟರ ಸಂಘ ಮುಂಬಯಿ ಇದರ ಕುರ್ಲಾ-ಭಾಂಡೂಪ್ ಪ್ರಾದೇಶಿಕ ಸಮಿತಿಯ 15ನೇ ವಾರ್ಷಿಕೋತ್ಸವ ಸಂಭ್ರಮವು ಜೂ. 20ರಂದು ಕುರ್ಲಾ ಬಂಟರ ಭವನದ ರಾಧಾಬಾಯಿ ಟಿ. ಭಂಡಾರಿ ಸಭಾಗೃಹದ ನಿಂಜೂರು ಮಾಳಿಗೆಮನೆ ವಾರಿಜಾ ಮಾಧವ ಹೆಗ್ಡೆ ವೇದಿಕೆಯಲ್ಲಿ ದಿನಪೂರ್ತಿ ನಡೆಯುವ ವಿವಿಧ ಸಾಮಾಜಿಕ, ಸಾಂಸ್ಕೃತಿಕ ಸನ್ಮಾನದ ವೈವಿಧ್ಯಮಯ ಕಾರ್ಯಕ್ರಮಕ್ಕೆ ಬಂಟರ ಸಂಘದ ಅಧ್ಯಕ್ಷರಾದ ಪ್ರವೀಣ್ ಭೋಜ ಶೆಟ್ಟಿ ದೀಪ ಬೆಳಗಿಸಿ ವೇದಿಕೆಯ ನಾಮಫಲಕವನ್ನು ಅನಾವರಣಗೊಳಿಸಿದರು.

ಬಳಿಕ ಮಾತನಾಡಿದ ಪ್ರವೀಣ್ ಭೋಜ ಶೆಟ್ಟಿಯವರು ಬೆಳಿಗ್ಗೆ ವಿಷ್ಣುಮೂರ್ತಿ ದೇವರಿಗೆ ವಿಶೇಷ ಪೂಜೆ ನಡೆಸುವ ಮೂಲಕ ಕುರ್ಲಾ-ಭಾಂಡೂಪ್ ಪ್ರಾದೇಶಿಕ ಸಮಿತಿಯ ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿ ಪ್ರಾರಂಭಗೊಂಡಿದೆ. ಬಹಳಷ್ಟು ಜನ ಮಹಿಳೆಯರು ಬೇಗನೆ ಸೇರಿಕೊಂಡಿರುವುದು ಸಂತಸ ತಂದಿದೆ. ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಗಿರೀಶ್ ಆರ್. ಶೆಟ್ಟಿ ಇನ್ನ ಇವರ ನೇತೃತ್ವದಲ್ಲಿ ದಿನಪೂರ್ತಿ ಕಾರ್ಯಕ್ರಮ ಆಯೋಜಿಸಿಕೊಂಡಿರುವುದು ನೂರು ವರ್ಷದ ಬಂಟರ ಸಂಘದ ಸಂಭ್ರಮಕ್ಕೆ ಶೋಭೆ ತಂದಂತಾಗಿದೆ. ಸಂಘದ 9 ಪ್ರಾದೇಶಿಕ ಸಮಿತಿಗಳು ನವದುರ್ಗೆಯರಂತೆ ಶೋಭಿತಗೊಂಡು ಸಂಘದ ಅಭಿವೃದ್ಧಿ ಕಾರ್ಯಕ್ಕೆ ಶಕ್ತಿ ತುಂಬಿದೆ .ಸಂಜೆವರೆಗೆ ನಡೆಯುವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರು. ಸಂಘದ ಅಧ್ಯಕ್ಷರನ್ನು ಪ್ರಾದೇಶಿಕ ಸಮಿತಿಯ ಪದಾಧಿಕಾರಿಗಳು ಗೌರವಿಸಿದರು.

ಈ ಸಂದರ್ಭದಲ್ಲಿ ಸಂಘದ ಮುಂಬಯಿ ಉಪಾಧ್ಯಕ್ಷ ಮಹೇಶ್ ಎಸ್. ಶೆಟ್ಟಿ , ಕುರ್ಲಾ-ಭಾಂಡೂಪ್ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಗಿರೀಶ್ ಆರ್. ಶೆಟ್ಟಿ ಇನ್ನಾ, ಪ್ರಾದೇಶಿಕ ಸಮನ್ವಯ ಸಮಿತಿ ಮಧ್ಯ ವಲಯದ ಸಂಯೋಜಕ ರವೀಂದ್ರನಾಥ ಭಂಡಾರಿ, ಸಂಚಾಲಕ ಹರೀಶ್ ಎ. ಶೆಟ್ಟಿ ,ಉಪ ಕಾರ್ಯಾಧ್ಯಕ್ಷ ನಾರಾಯಣ ಕೆ. ಶೆಟ್ಟಿ ನಂದಳಿಕೆ, ಕಾರ್ಯದರ್ಶಿ ಸಂತೋಷ್ ಜಿ. ಶೆಟ್ಟಿ ,ಕೋಶಾಧಿಕಾರಿ ಸಿಎ ಸುದೇಶ್ ಶೆಟ್ಟಿ, ಜತೆ ಕಾರ್ಯದರ್ಶಿ ಸುರೇಶ್ ಶೆಟ್ಟಿ ,ಜತೆ ಕೋಶಾಧಿಕಾರಿ ಕೃಷ್ಣ ಕೆ. ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಅಮೃತಾ ಎ. ಶೆಟ್ಟಿ, ಯುವ ವಿಭಾಗದ ಕಾರ್ಯಾಧ್ಯಕ್ಷೆ ನ್ಯಾಯವಾದಿ ನಿಧಿ ವಿ. ಶೆಟ್ಟಿ , ಪ್ರಾದೇಶಿಕ ಸಮಿತಿಯ ಮಾಜಿ ಕಾರ್ಯಾಧ್ಯಕ್ಷ ಸಿಎ ವಿಶ್ವನಾಥ್ ಶೆಟ್ಟಿ, ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಪೊಲೀಸ್ ಇಲಾಖೆಯ ಎಸಿಪಿ ಮೃತ್ಯುಂಜಯ ಹೇಮಂತ್ ಪಾತಿ ಆಗಮಿಸಿದ್ದರು. ಇವರನ್ನು ಸಂಘದ ಅಧ್ಯಕ್ಷರಾದ ಪ್ರವೀಣ್ ಭೋಜ ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಚಿತ್ರಾ ಆರ್ ಶೆಟ್ಟಿ ಗೌರವಿಸಿದರು. ಇವರ ಪರಿಚಯವನ್ನು ನ್ಯಾಯವಾದಿ ಸಂತೋಷ್ ಹೆಗ್ಡೆ ಪರಿಚಯಿಸಿದರು.

ಕಾರ್ಯಕ್ರಮವನ್ನು ರಂಗ ಕಲಾವಿದ ಬಾಬಾ ಪ್ರಸಾದ ಅರಸ ನಿರೂಪಿಸಿದರು. ನಂದ್ರೊಳ್ಳಿ ಮಹೇಂದ್ರ ಶೆಟ್ಟಿ ಪ್ರಾರ್ಥನೆ ಮಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ನೃತ್ಯ ವೈಭವ ಯಕ್ಷಗಾನ ಪ್ರದರ್ಶನ, ಪ್ರಾದೇಶಿಕ ಸಮಿತಿಯ ಮಹಿಳಾ ವಿಭಾಗ, ಯುವ ಮತ್ತು ಬಾಲ ಕಲಾವಿದರಿಂದ ಆಕರ್ಷಕ ನೃತ್ಯಾವಳಿಗಳು ಹಾಗೂ ಫ್ಯಾಶನ್ ಶೋ ಜರಗಲಿವೆ. ವಿಶೇಷ ಆಕರ್ಷಣೆಯಾಗಿ ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ಕಥೆಯನ್ನು ಸಾರುವ ಮೈಮೆದಪ್ಪೆ ಮಂಗಳಾದೇವಿ ಪೌರಾಣಿಕ ನೃತ್ಯ ರೂಪಕ ಹಾಗೂ ಕುರ್ಲಾ-ಭಾಂಡೂಪ್ ಪ್ರಾದೇಶಿಕ ಸಮಿತಿಯ ಕಲಾವಿದರಿಂದ ಯಕ್ಷಗುರು ಅಜೆಕಾರು ಬಾಲಕೃಷ್ಣ ಶೆಟ್ಟಿಯವರ ನಿರ್ದೇಶನದಲ್ಲಿ 'ಅಮರ ಶಿಲ್ಪಿ ವೀರ ಶಂಭು ಕಲ್ಕುಡ' ಯಕ್ಷಗಾನ ಪ್ರದರ್ಶನಗೊಂಡಿತು.

ಮೀರಾರೋಡ್ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ 36ನೇ ವಾರ್ಷಿಕ ಮಹಾಪೂಜೆ ಭಕ್ತಿ ಸಂಭ್ರಮದೊಂದಿಗೆ ಸಂಪನ್ನ









(ಚಿತ್ರ , ವರದಿ : ದಿನೇಶ್ ಕುಲಾಲ್)

ಮೀರಾರೋಡ್, ಜೂ.20- ಮೀರಾರೋಡಿನ ಮೀರಾಗಾಂವ್, ಮೀರಾ ಸೊಸೈಟಿಯಲ್ಲಿರುವ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ 36ನೇ ವಾರ್ಷಿಕ ಮಹಾಪೂಜೆಯು ಜೂ. 14 ರಂದು ಕ್ಷೇತ್ರದ ಆಡಳಿತ ಮೊಕ್ತೇಸರ ಶಿಮಂತೂರು ಮಜಲ ಗುತ್ತು ಬಾಬಾ ರಂಜನ್ ಶೆಟ್ಟಿಯವರ ಯಜಮಾನಿಕೆಯಲ್ಲಿ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು , ವಾಮಂಜೂರು ಕೃಷ್ಣರಾಜ ಉಪಾಧ್ಯಾಯ ತಂತ್ರಿಯವರ ಮಾರ್ಗದರ್ಶನದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕರಾದ ವೇದಮೂರ್ತಿ ಸಾಣೂರು ಸಾಂತಿಂಜ ಜನಾರ್ದನ್ ಭಟ್ ನೇತೃತ್ವದಲ್ಲಿ, ಅರ್ಚಕರದ ಸಾಣೂರು ಮಾಧವ ಭಟ್ ಮತ್ತು ವಿಪ್ರವೃಂದವರು ನಡೆಸಿದರು. ಆ ಪ್ರಯುಕ್ತ ಬೆಳಗ್ಗೆ ಶ್ರೀ ಗಣಪತಿಯಾಗ, ನವಕ ಕಲಶಾಭಿಷೇಕ, ಪ್ರಸನ್ನ ಪೂಜೆ, ಸಂಜೆ ಮಹಾಲಿಂಗೇಶ್ವರ ಮಹಿಳಾ ಭಜನಾ ಮಂಡಳಿ ಮತ್ತು ಸ್ಥಳೀಯ ಭಜನಾ ತಂಡಗಳಿಂದ ಭಜನೆ, ರಾತ್ರಿ ಕುಂಟಾಡಿ ಸುರೇಶ್ ಭಟ್ ಉತ್ಸವ ಬಲಿ ನಡೆಸಿದರು. ಬಳಿಕ ಮಹಾಮಂಗಳಾರತಿ ನಡೆಯಿತು.

ಪೂಜಾ ಕಾರ್ಯಗಳು ಯಶಸ್ವಿಯಾಗುವಲ್ಲಿ ಶ್ರೀ ಮಾಲಿಂಗೇಶ್ವರ ಕ್ಷೇತ್ರದ ಸ್ಥಾಪಕ ಸದಸ್ಯರಾದ ದಿವಂಗತ ವಿಶ್ವನಾಥ್ ಪೂಂಜ ಅವರ ಪರಿವಾರದವರು , ಕೃಷ್ಣ ಶೆಟ್ಟಿ , ಕಾರ್ಯದರ್ಶಿ ಪ್ರಮೋದ್ ಮಾತ್ರೆ, ಅನಿಲ್ ಕೆ ಶೆಟ್ಟಿ, ಪ್ರಸನ್ನ ಶೆಟ್ಟಿ ಕುರ್ಕಾಲ್, ಸುಂದರ ಶೆಟ್ಟಿಗಾರ್, ಪ್ರಸನ್ನ ಬಿ ಶೆಟ್ಟಿ, ಆನಂದ್ ಶೆಟ್ಟಿ ಐಕಳ, ವೆಂಕಟೇಶ್ ಪಾಟೀಲ್,ಚಂದ್ರ ಶೆಟ್ಟಿ ಶಿಮಂತೂರು ಮಜಲ ಗುತ್ತು,ಸ ಪದಾಧಿಕಾರಿಗಳು, ಮಹಾಲಿಂಗೇಶ್ವರ ಟ್ರಸ್ಟ್‌ನ ಸರ್ವ ಸದಸ್ಯರು ಹಾಗೂ ಮೀರಾ ಸೊಸೈಟಿ ಸರ್ವ ಸದಸ್ಯರು ಸಹಕರಿಸಿದರು.

ಪೂಜೆಯಲ್ಲಿ ವಿಜಯ ಆರ್ ಭಂಡಾರಿ, ಡಾ. ಅರುಣೋದಯ ರೈ ಪರಿವಾರದವರು, ಉದಯ ಶೆಟ್ಟಿ ಪೆಲತೂರು, ರಾಜೇಶ್ ಶೆಟ್ಟಿ ಕಾಪು ,ಸುನಿಲ್ ಶೆಟ್ಟಿ ,ಹರೀಶ್ ರೈ, ಮತ್ತಿತರ ಗಣ್ಯರು ಹೋಟೆಲ್ ಉದ್ಯಮಿಗಳು, ಕಾರ್ಮಿಕರು ವಿವಿಧ ಜಾತಿಯ ಸಂಘಗಳ ಪದಾಧಿಕಾರಿಗಳು, ವಿವಿಧ ಭಜನಾ ಮಂಡಳಿಯ ಸದಸ್ಯರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡು ಮಹಾಪ್ರಸಾದವನ್ನು ಸ್ವೀಕರಿಸಿದರು.

ಶ್ರೀ ಕ್ಷೇತ್ರ ದತ್ತ ಜಗದಂಬಾ ದೇವಸ್ಥಾನ ಬ್ಯಾಪ್ಟಿಸ್ಟವಾಡಿ ಅಂಧೇರಿ; ಧಾರ್ಮಿಕ ಸಭೆ, ಸನ್ಮಾನ ಕಾರ್ಯಕ್ರಮ; ಯಕ್ಷಗಾನ ಪ್ರದರ್ಶನ

ನಮ್ಮ ಸಂಸ್ಕಾರ, ಸಂಸ್ಕೃತಿಯನ್ನು ಉಳಿಸುವಲ್ಲಿ; ಧಾರ್ಮಿಕ ಸಂದೇಶವನ್ನು ಸಾರುವಲ್ಲಿ ದೇವಾಲಯಗಳ ಪಾತ್ರ ಮಹತ್ತರ - ಸೂರ್ಯಕಾಂತ್ ಜಯ ಸುವರ್ಣ









ದೀಪ ಬೆಳಗಿಸಿ ಧಾರ್ಮಿಕ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದಾಗ (ಚಿತ್ರ : 1) ಮುಖ್ಯ ಅತಿಥಿ ಸೂರ್ಯಕಾಂತ್ ಜಯ ಸುವರ್ಣ ಗೌರವಿಸಲ್ಪಟ್ಟಾಗ (ಚಿತ್ರ : 2) ಬ್ರಹ್ಮಕಲಶೋತ್ಸವದ ಕಾರ್ಯಕ್ಕೆ ಮಹತ್ತರ ದೇಣಿಗೆಯನ್ನು ನೀಡಿ ಸಹಕರಿಸಿದ ತುಂಗಾ ಗ್ರೂಪ್ ಆಫ್ ಹೋಟೆಲ್ಸ್ ಆಡಳಿತ ನಿರ್ದೇಶಕ ಸುಧಾಕರ ಹೆಗ್ಡೆ ಮತ್ತು ರಂಜನಿ ಸುಧಾಕರ ಹೆಗ್ಡೆ ದಂಪತಿಯನ್ನು ಸನ್ಮಾನಿಸಲ್ಪಟ್ಟಾಗ (ಚಿತ್ರ : 3) ಬ್ರಹ್ಮಕಲಶೋತ್ಸವದ ಎಲ್ಲಾ ಧಾರ್ಮಿಕ ವಿಧಿ-ವಿಧಾನಗಳನ್ನು ಶಾಸ್ತ್ರೋಕ್ತವಾಗಿ ಪೂರೈಸಿದ ಬ್ರಹ್ಮಶ್ರೀ ಶಂಕರ ನಾರಾಯಣ ತಂತ್ರಿಯವರು ಸನ್ಮಾನವನ್ನು ಸ್ವೀಕರಿಸಿದಾಗ (ಚಿತ್ರ : 4)

(ಚಿತ್ರ, ವರದಿ : ಶ್ರೀಧರ್ ಉಚ್ಚಿಲ್)

ಮುಂಬಯಿ, ಜೂ. 20- ಹಿಂದೊಮ್ಮೆ ಮನೆ-ಮನೆಗಳಲ್ಲಿ ಭಜನೆ ನಡೆಯುತ್ತಿತ್ತು. ಮನೆ ಮಂದಿ ಎಲ್ಲಾ ಸೇರಿ ಭಜನೆಯನ್ನು ಮಾಡುತ್ತಿದ್ದರು. ಆದರೆ ಇಂದು ಕಾಲ ಬದಲಾಗಿದೆ. ಇಂದು ನಾವು ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸವನ್ನು ನೀಡುವಲ್ಲಿ ಹೆಚ್ಚು ಕಾಳಜಿ ವಹಿಸುತ್ತಿದ್ದೇವೆ. ವಿದ್ಯೆ ಬೇಕು ನಿಜ. ಆದರೆ ಕೇವಲ ವಿದ್ಯೆಯೇ ಮುಖ್ಯ ಅಲ್ಲ. ವಿದ್ಯೆಯ ಜೊತೆಗೆ ಸಂಸ್ಕಾರ, ಸಂಸ್ಕೃತಿವನ್ನು ಕಲಿಯುವುದು, ಮಾನವೀಯತೆಯನ್ನು ಬೆಳೆಸಿಕೊಳ್ಳುವುದು ಬಹಳ ಮುಖ್ಯವಾಗಿದೆ. ಮಾನವೀಯತೆ ಇಲ್ಲದಿದ್ದರೆ ಹಣವಿದ್ದು, ವಿದ್ಯೆ ಇದ್ದು ಯಾವ ಪ್ರಯೋಜನವೂ ಇಲ್ಲ. ಈ ನಿಟ್ಟಿನಲ್ಲಿ ಭಜನಾ ಮಂಡಳಿಗಳ ದೇವಾಲಯಗಳ ಪಾತ್ರ ಮಹತ್ತರವಾಗಿದೆ. ಇಂದು ಬ್ಯಾಪ್ಟಿಸ್ಟವಾಡಿಯ ಈ ದೇವಾಲಯವು ಅದಕ್ಕೊಂದು ನಿದರ್ಶನವಾಗಿದೆ. ಸುಮರು ಏಳು ದಶಕಗಳ ಹಿಂದೆ ಭಜನೆ ಮುಖಾಂತರ ನೆಲೆ ಕಂಡ ಈ ದೇವಾಲಯ ಇಂದು ಯುವ ಪೀಳಿಗೆಗೆ ಸಂಸ್ಕಾರ, ಸಂಸ್ಕೃತಿಯ ಅರಿವನ್ನು ಮೂಡಿಸುತ್ತಾ, ಧಾರ್ಮಿಕ ಸಂದೇಶವನ್ನು ಸಾರುತ್ತಾ ಬಂದಿದೆ. ಮುಂದೆ ಈ ಕಾರ್ಯ ನಿರಂತರವಾಗಿರಲಿ, ಭವ್ಯ ದೇಗುಲವಾಗಿ ಬೆಳಗುವಂತಾಗಲಿ ಎಂದು ಭಾರತ್ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಸೂರ್ಯಕಾಂತ್ ಜಯ ಸುವರ್ಣ ತಮ್ಮ ಅಭಿಮತವನ್ನು ವ್ಯಕ್ತಪಡಿಸಿದರು.

ಅವರು ಅಂಧೇರಿ ಪೂರ್ವ ಬ್ಯಾಪ್ಟಿಸ್ಟವಾಡಿ ಶ್ರೀ ಕ್ಷೇತ್ರ ದತ್ತ ಜಗದಂಬಾ ದೇವಾಲಯದ ಆವರಣದಲ್ಲಿ ಬ್ರಹ್ಮಕಲಶೋತ್ಸವದ ನಿಮಿತ್ತ ಜೂ. 19ರ ಶುಕ್ರವಾರ ಸಂಜೆ ಜರಗಿದ ಧಾರ್ಮಿಕ ಸಭಾ ಕಾರ್ಯಕ್ರಮದ ಮುಖ್ಯ ಅತಿಥಿ ಸ್ಥಾನವನ್ನು ವಹಿಸಿ ಮಾತನಾಡುತ್ತಿದ್ದರು.

ಬ್ರಹ್ಮಕಲಶೋತ್ಸವದ ಕಾರ್ಯವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದ ಬ್ರಹ್ಮಶ್ರೀ ಶಂಕರ ನಾರಾಯಣ ತಂತ್ರಿ ಆಶೀರ್ವಚನದ ನುಡಿಗಳನ್ನಾಡುತ್ತಾ, ಯಾವುದೇ ಕೆಲಸವನ್ನು ಮಾಡುವುದಿದ್ದರೆ ಅಲ್ಲಿ ಶ್ರದ್ಧೆ ಬೇಕು. ಶ್ರದ್ಧಾ ಮನೋಭಾವದಿಂದ ಮಾಡುವ ಕೆಲಸಕ್ಕೆ ದೇವರ ಅನುಗ್ರಹ ಸದಾ ಇರುತ್ತದೆ. ಅಂತಹ ಕೆಲಸವನ್ನು ಇಂದು ಈ ದೇವಾಲಯದ ಆಡಳಿತ ಮಂಡಳಿಯವರು ಮಾಡಿದ್ದಾರೆ. ಆದ್ದರಿಂದ ದೇವರ ಕಾರ್ಯ ಯಶಸ್ವಿಯಾಗಿದೆ ಎಂದೆನ್ನುತ್ತಾ ಯಾವ ರೀತಿ ಶಾಸ್ತ್ರೋಕ್ತವಾಗಿ ಪೂಜೆ ನಡೆಯಬೇಕು ಎನ್ನುವ ಬಗ್ಗೆಯೂ ಮಾರ್ಗದರ್ಶನ ನೀಡಿ ಶುಭ ಹಾರೈಸಿದರು.

ಶ್ರೀ ದೇವರ ನೂತನ ಬಿಂಬದ ಕೆತ್ತನೆಯ ಕೆಲಸವನ್ನು ಮಾಡಿದ ಪ್ರಶಸ್ತಿ ವಿಜೇತ ಕಾರ್ಕಳದ ಶಿಲ್ಪಿ ಸತೀಶ್ ಆಚಾರ್ಯ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾ, ಕೇವಲ ಕಲ್ಲನ್ನು ಕೆತ್ತಿದ ಮಾತ್ರಕ್ಕೆ ಶಿಲ್ಪಿ ಆಗುವುದಿಲ್ಲ. ಶಿಲ್ಪಿ ಯಾದವ ಶಾಸ್ತ್ರದ ಅಧ್ಯಾಯನ ಮಾಡಬೇಕು. ಈ ನಿಟ್ಟಿನಲ್ಲಿ ನಾನು ತಂದೆಯಿಂದ ಬಳವಳಿಯಾಗಿ ಬಂದ ಕಲೆಯನ್ನು ಶಾಸ್ತ್ರೋಕ್ತವಾಗಿ ಕರಗತಿಸಿಕೊಂಡವನಿದ್ದೇನೆ ಎನ್ನಲು ಅಭಿಮಾನವಾಗುತ್ತಿದೆ. ದೇವರ ಯಾವ ರೀತಿ ಜ್ಞಾನ ನೀಡಿದ್ದಾರೆ ಅದನ್ನು ನಾನು ಇಲ್ಲಿ ಅಳವಡಿಸಿಕೊಂಡಿದ್ದೇನೆ. ಹಾಗೇ ಈ ದೇವಾಲಯದ ಆಡಳಿತ ಮಂಡಳಿಯವರು ನನಗೆ ನನ್ನ ಕೆಲಸವನ್ನು ಮಾಡಲು ಸಂಪೂರ್ಣ ಸಮಯವನ್ನು ಕೊಟ್ಟ ಕಾರಣ ಸುಂದರ ಮೂರ್ತಿಯ ನಿರ್ಮಾಣ ಸಾಧ್ಯವಾಗಿದೆ. ಹಾಗೇ ಜೀರ್ಣೋದ್ಧಾರದಂತಹ ಪುಣ್ಯದ ಕೆಲಸ ಬೇರೆ ಯಾವುದೂ ಇಲ್ಲ. ಅಂತಹ ಪುಣ್ಯದ ಕಾರ್ಯದಲ್ಲಿ ತಾವೆಲ್ಲರೂ ಇಂದು ಕೈಜೋಡಿಸಿದ್ದೀರಿ ಎಂದೆನ್ನುತ್ತಾ, ಎಲ್ಲರಿಗೂ ಸುಖ, ಶಾಂತಿ, ನೆಮ್ಮದಿ ಪ್ರಾಪ್ತಿಯಾಗಲಿ ಎಂದರು.

ಗೌರವಾನ್ವಿತ ಅತಿಥಿಗಳಾಗಿ ಉಪಸ್ಥಿತರಿದ್ದವರಲ್ಲಿ ವೆಲ್ಕಮ್ ಪ್ಯಾಕೇಜಿಂಗ್ ಮುಂಬಯಿಯ ಆಡಳಿತ ನಿರ್ದೇಶಕ ರವೀಂದ್ರನಾಥ್ ಎಂ. ಭಂಡಾರಿ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾ, ಯಾವುದೇ ದೇವಸ್ಥಾನದಲ್ಲಿ ದೊಡ್ಡ, ದೊಡ್ಡ ಕೆಲಸವನ್ನೇ ಮಾಡಬೇಕು ಎಂದೇನಿಲ್ಲ. ಸಣ್ಣಪುಟ್ಟ ಕೆಲಸ ಮಾಡಿದರೂ ಅದು ದೇವರಿಗೆ ಅರ್ಪಣೆಯಾಗುತ್ತದೆ. ದೇವರ ಅನುಗ್ರಹ ಪ್ರಾಪ್ತಿಯಾಗುತ್ತದೆ. ಈ ಜಗತ್ತಿನಲ್ಲಿ ಕಣ್ಣಿಗೆ ಕಾಣುವ ದೇವರು ಇದ್ದರೆ ಅದು ನಾಗ ದೇವರು ಎನ್ನಬಹುದು. ಈವರೆಗೆ ಈ ದೇವಾಲಯದಲ್ಲಿ ನಾಗ ದೇವರನ್ನು ಪ್ರತಿಷ್ಠೆ ಮಾಡಲಾಗಿಲ್ಲ. ನಾಗ ದೇವರ ಪ್ರತಿಷ್ಠೆ ಮಾಡಿದಲ್ಲಿ ಈ ದೇವಾಲಯವು ಶೀಘ್ರವಾಗಿ ಅಭಿವೃದ್ಧಿ ಹೊಂದಲು ಸಾಧ್ಯ ಎಂದೆನ್ನುತ್ತಾ, ದೇವಾಲಯದ ಆಡಳಿತ ಮಂಡಳಿಯವರ ಒಮ್ಮತ ಶ್ರಮವನ್ನು, ಅವರು ತೋರಿಸುವ ನಯ-ವಿನಯ, ಪ್ರೀತಿಯ ಬಗ್ಗೆ ತಮ್ಮ ಶ್ಲಾಘನೆಯನ್ನು ವ್ಯಕ್ತಪಡಿಸಿದರು.

ಎಲ್.ಡಿ.ಎಸ್. ಇನ್ನೋವೇಟೆಜ್‌ನ ಆಡಳಿತ ನಿರ್ದೇಶಕ ಅಮರ್‌ನಾಥ್ ಶೆಟ್ಟಿ ಮಾತನಾಡುತ್ತಾ, ಒಂದು ದೇವಾಲಯದ ಬ್ರಹ್ಮಕಲಶವನ್ನು ಮಾಡುವಾಗ ಸಂಪೂರ್ಣ ದೇವಾಲಯವನ್ನು, ದೇವಾಲಯದ ಪರಿಸರವನ್ನು ಶುದ್ಧೀಕರಣ ಮಾಡಲಾಗುತ್ತದೆ. ಅದೇ ರೀತಿ ಇಲ್ಲಿ ನೆಲೆಸಿರುವ ಎಲ್ಲರ ಮನುಸ್ಸು ಕೂಡಾ ಶುದ್ಧೀಕರಣವಾಗಿ ಉತ್ತಮ ಕೆಲಸ ನಡೆಯುವಂತಾಗಲಿ. ಈ ಮೂಲಕ ದೇವರ ಅನುಗ್ರಹ ಎಲ್ಲರಿಗೂ ಪ್ರಾಪ್ತಿಯಾಗಲಿ ಎಂದರು.

ಭಾರತ್ ಬ್ಯಾಂಕ್ ನಿರ್ದೇಶಕ ಸುರೇಶ್ ಸುವರ್ಣ ಮಾತನಾಡುತ್ತಾ, ಹಿರಿಯರು ಯಾವ ರೀತಿಯ ಮಾರ್ಗದರ್ಶನವನ್ನು ನೀಡಿದ್ದಾರೋ ಅದನ್ನು ಉತ್ತಮ ರೀತಿಯಲ್ಲಿ ಇಂದಿನ ಆಡಳಿತ ಮಂಡಳಿಯವರು ನಿರ್ವಹಿಸುತ್ತಾ ಬಂದಿರುವುದರ ಜೊತೆಗೆ ಯುವ ಅರ್ಚಕ ಪೀಳಿಗೆಯನ್ನು ಅವರು ಸೃಷ್ಟಿ ಮಾಡಿದ್ದಾರೆ. ಯಾವ ದೇವಸ್ಥಾನದಲ್ಲೂ ಕಾಣಸಿಗದ ಅನೇಕ ಯುವ ಅರ್ಚಕ ವರ್ಗವನ್ನು ನಾವಿಲ್ಲಿ ಕಾಣಬಹುದು ಎಂದೆನ್ನುತ್ತಾ, ಈ ಯುವ ವರ್ಗದಿಂದ ಇನ್ನಷ್ಟು ಧಾರ್ಮಿಕ ಕಾರ್ಯಗಳು ನಡೆಯುವಂತಾಗಲಿ ಎಂದರು.

ಬಿಂದ್ರಾ ಕಾಂಪ್ಲೆಕ್ಸ್‌ನ ಸುನೀತಾ ಕಾಮತ್ ಗಣೇಶ್ ಸ್ಟೋರ್, ಪಂಪ್ ಹೌಸ್‌ನ ಉಮೇಶ್ ಕೋಟ್ಯಾನ್ ಸಂದರ್ಭೋಚಿತವಾಗಿ ಮಾತನಾಡಿ ಶುಭ ಹಾರೈಸಿದರು.

ಈ ಎಲ್ಲಾ ಅತಿಥಿ ಗಣ್ಯರನ್ನು ದೇವಾಲಯದ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷರುಗಳು, ಆಡಳಿತ ಮಂಡಳಿಯ ಅಧ್ಯಕ್ಷ ದಯಾನಂದ ಸಿ. ಅಂಚನ್ ಹಾಗೂ ಪದಾಧಿಕಾರಿಗಳು, ಇತರ ಸಮಿತಿಯವರು, ಮಹಿಳಾ ವಿಭಾಗ ಸದಸ್ಯರು ಸೇರಿ ಶಾಲು ಹೊದಿಸಿ, ಹೂಗುಚ್ಛ ನೆನಪಿನ ಕಾಣಿಕೆಯೊಂದಿಗೆ ಗೌರವಿಸಿದರು.







ಶಿಲ್ಪಿ ಸತೀಶ್ ಆಚಾರ್ಯ ಸನ್ಮಾನವನ್ನು ಸ್ವೀಕರಿಸಿದಾಗ (ಚಿತ್ರ : 1) ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಹರೀಶ್ ಕೋಟ್ಯಾನ್, ಪದ್ಮಾ ಕೋಟ್ಯಾನ್ ದಂಪತಿ ಸನ್ಮಾನವನ್ನು ಸ್ವೀಕರಿಸಿದಾಗ (ಚಿತ್ರ : 2) ಆಡಳಿತ ಮಂಡಳಿಯ ಅಧ್ಯಕ್ಷ ದಯಾನಂದ ಸಿ. ಅಂಚನ್ ಗೌರವಿಸಲ್ಪಟ್ಟಾಗ (ಚಿತ್ರ : 3)

ಎಲ್ಲರ ಒಮ್ಮತದ ಸಹಕಾರಕ್ಕೆ ನಾನು ಸದಾ ಚಿರಋಣಿ - ದಯಾನಂದ ಸಿ. ಅಂಚನ್

ಜೂ. 14ರಿಂದ ಶ್ರೀ ದೇವರ ನೂತನ ಬಿಂಬ ಶೋಭಯಾತ್ರೆಯೊಂದಿಗೆ ಮೊದಲ್ಗೊಂಡು ಜೂ. 18ರಂದು ವೈಭವದ ಬ್ರಹ್ಮಕಲಶೋತ್ಸವದ ಕಾರ್ಯವು ಸಂಪನ್ನಗೊಂಡು ಇಂದು ಧಾರ್ಮಿಕ ಸಭೆ ನಡೆಯುತ್ತಿದೆ. ಜೂ. 21ರ ವರೆಗೆ ಈ ಸಂಭ್ರಮಾಚರಣೆಯು ನಡೆಯಲಿದೆ. ಈ ನಿಟ್ಟಿನಲ್ಲಿ ಜರಗಿದ ಈ ಎಲ್ಲಾ ಕಾರ್ಯವು ಅತ್ಯಂತ ಯಶಸ್ವಿಯಾಗಿ ಜರಗಿದ್ದರೆ ಅದಕ್ಕೆ ಕಾರಣ ಭಕ್ತಾಭಿಮಾನಿಗಳಾಗಿರುವ, ದಾನಿಗಳಾಗಿರುವ, ಕಾರ್ಯಕರ್ತರಾಗಿರುವ ತಾವೆಲ್ಲರೂ ಕಾರಣಕರ್ತರಾಗಿರುವಿರಿ. ವಿಶೇಷವಾಗಿ ಗೌರವಾಧ್ಯಕ್ಷರುಗಳಾದ ಹರೀಶ್ ಕೋಟ್ಯಾನ್, ಡಾ. ಸುರೇಂದ್ರ ಕುಮಾರ್ ಹೆಗ್ಡೆ, ದೀನದಾಸ್ ಸನಿಲ್, ನಮ್ಮ ಆಡಳಿತ ಮಂಡಳಿಯ ಕಾರ್ಯದರ್ಶಿ ಯಶವಂತ ಅಮೀನ್, ಕೋಶಾಧಿಕಾರಿ ಮೋಹನ್‌ದಾಸ್ ಶ್ರೀಯಾನ್ ಊಟೋಪಾಚಾರದಲ್ಲಿ ಸಹಕರಿಸಿದ ಶಂಕರ್ ದೇವಾಡಿಗ ಸೇರಿದಂತೆ ಎಲ್ಲರ ಒಮ್ಮತ ಶ್ರಮ ಅವಿಸ್ಮರಣೀಯ ಎನ್ನುವಂತಿದೆ. ದಾನಿಗಳ ತುಂಬು ಹೃದಯದ ಸಹಕಾರ, ಶಂಕರನಾರಾಯಣ ತಂತ್ರಿಯವರ ಮಾರ್ಗದರ್ಶನ, ಶಿಲ್ಪಿ ಸುರೇಶ್ ಆಚಾರ್ಯರವರ ಸಹಕಾರ ಎಲ್ಲವೂ ಈ ಅಭೂತಪೂರ್ವ ಯಶಸ್ಸಿಗೆ ಕಾರಣವಾಗಿದೆ. ತಮ್ಮೆಲ್ಲರ ಒಮ್ಮತ ಸಹಕಾರವನ್ನು ನಾನೆಂದೂ ಮರೆಯುವಂತಿಲ್ಲ ಮತ್ತು ತಮ್ಮ ಈ ರೀತಿಯ ಸಹಕಾರಕ್ಕೆ ನಾನು ಸದಾ ತಮಗೆ ಶಿರಬಾಗಿ ವಂದಿಸುತ್ತಿದ್ದೇನೆ, ಚಿರಋಣಿಯಾಗಿದ್ದೇನೆ ಎಂದೆನ್ನುತ್ತಾ ಸಮಾರಂಭದ ಅಧ್ಯಕ್ಷ ಹಾಗೂ ದೇವಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ದಯಾನಂದ ಸಿ. ಅಂಚನ್ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ವ್ಯಕ್ತಪಡಿಸಿ, ಎಲ್ಲರ ಸಹಕಾರವನ್ನು ನೆನಪಿಸಿ ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸಿದರು.

ಹಾಗೇ ವಿಶೇಷವಾಗಿ ಬ್ರಹ್ಮಕಲಶೋತ್ಸವದ ಈ ಪುಣ್ಯ ಕಾರ್ಯಕ್ಕೆ ದೊಡ್ಡ ಮಟ್ಟದ ದೇಣಿಗೆಯನ್ನು ನೀಡಿ ಸಹಕರಿಸಿದ ತುಂಗಾ ಗ್ರೂಪ್ ಆಫ್ ಹೋಟೆಲ್ಸ್ ಆಡಳಿತ ನಿರ್ದೇಶಕ ಸುಧಾಕರ ಹೆಗ್ಡೆಯವರನ್ನು ಪತ್ನಿ ರಂಜನಿ ಸುಧಾಕರ ಹೆಗ್ಡೆ ಜೊತೆಯಲ್ಲಿ ಹಾಗೇ ದೇವಾಲಯದ ಎಲ್ಲಾ ಕೆಲಸ ಕಾರ್ಯಗಳಿಗೆ ನಿರಂತರ ಸಹಾಯ ಸಹಕಾರವನ್ನು ನೀಡುತ್ತಾ ಬಂದಿರುವ ಕೋಟ್ಯಾನ್ ಮೇನ್ಸ್‌ವೇರ್‌ನ ಮಾಲಕ ಮತ್ತು ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಹರೀಶ್ ಆರ್. ಕೋಟ್ಯಾನ್‌ರವರನ್ನು ಪತ್ನಿ ಪದ್ಮಾ ಕೋಟ್ಯಾನ್ ಜೊತೆಯಲ್ಲಿ ಹಾಗೇ ಬ್ರಹ್ಮಕಲಶದ ಕಾರ್ಯದಲ್ಲಿ ಮಹತ್ತರ ಯೋಗ ದಾನವನ್ನು ನೀಡಿದ ಜೀರ್ಣೋದ್ಧಾರ ಸಮಿತಿಯ ಗೌರವ ಪ್ರಧಾನ ಕಾರ್ಯದರ್ಶಿ ದೀನದಾಸ್ ಬಿ. ಸನಿಲ್‌ರವರನ್ನು ವಿಶೇಷವಾಗಿ ಚಿನ್ನದ ಉಂಗುರ ನೀಡಿ ಗೌರವ ಪೂರ್ವಕವಾಗಿ ಸನ್ಮಾನಿಸಲಾಯಿತು.

ಅದೇ ರೀತಿ ಬ್ರಹ್ಮಕಲಶೋತ್ಸವದ ಧಾರ್ಮಿಕ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದ ಡೊಂಬಿವಲಿಯ ಬ್ರಹ್ಮಶ್ರೀ ಶಂಕರ ನಾರಾಯಣ ತಂತ್ರಿಯವರನ್ನು, ಶಿಲ್ಪಿ ಸತೀಶ್ ಆಚಾರ್ಯರವರನ್ನು, ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷರಾಗಿ ಮಹತ್ವಪೂರ್ಣ ಕಾರ್ಯ ನಿರ್ವಹಿಸಿದ ಕನ್ನಡಿಗ ಕಲಾವಿದರ ಪರಿಷತ್ ಮಹಾರಾಷ್ಟ್ರದ ಅಧ್ಯಕ್ಷ ಡಾ. ಸುರೇಂದ್ರ ಕುಮಾರ್ ಹೆಗ್ಡೆಯವರನ್ನು ಪತ್ನಿ ವಿನೋದಿನಿ ಹೆಗ್ಡೆ ಜೊತೆಯಲ್ಲಿ, ಆಡಳಿತ ಸಮಿತಿಯ ಅಧ್ಯಕ್ಷ ದಯಾನಂದ ಸಿ. ಅಂಚನ್‌ರವರನ್ನು, ಗೌರವ ಪ್ರಧಾನ ಕಾರ್ಯಶಿಯಾಗಿ ದೇವತಾ ಕಾರ್ಯದ ಎಲ್ಲಾ ಜವಾಬ್ದಾರಿಯವನ್ನು ವಹಿಸಿ ನಿರಂತರ ಶ್ರಮಿಸಿದ ಯಶವಂತ್ ಸಿ. ಅಮೀನ್‌ರವರನ್ನು, ಕೋಶಾಧಿಕಾರಿಯ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಮೋಹನ್‌ದಾಸ್ ಶ್ರೀಯಾನ್‌ರವರನ್ನು, ದೇವಸ್ಥಾನ ದೇವಿ ಪಾತ್ರಿ ಚೇತನ್ ದೇವಾಡಿಗರವರನ್ನು, ವಿಶೇಷ ಅತಿಥಿಯಾಗಿ ಆಗಮಿಸಿ ಉಪಸ್ಥಿತರಿದ್ದ ಶಾಸಕ ಮುರ್ಜಿ ಪಟೇಲ್(ಕಾಕಾ)ರವರ ಪತ್ನಿ ನಗರಸೇವಕಿ ಕೇಸರಿ ಪಟೇಲ್‌ರವರನ್ನು, ಸಾಯಿ ಜ್ಯುವೆಲ್ಲರ್ಸ್‌ನ ಮಾಲಕ ರಾಜು ಮದನ್ ಸೋನಿಯವರನ್ನು ಮತ್ತು ದಾನಿಗಳ ರೂಪದಲ್ಲಿ ಸಹಕರಿಸಿದವರನ್ನು ಅತಿಥಿ ಗಣ್ಯರ ಹಸ್ತದಿಂದ ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಅಧ್ಯಕ್ಷ ದಯಾನಂದ ಸಿ. ಅಂಚನ್ ಹಾಗೂ ಅತಿಥಿ ಗಣ್ಯರ ಜೊತೆಯಲ್ಲಿ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಹರೀಶ್ ಕೋಟ್ಯಾನ್, ಕಾರ್ಯದರ್ಶಿ ದೀನದಾಸ್ ಬಿ. ಸನಿಲ್, ಆಡಳಿತ ಸಮಿತಿಯ ಗೌರವ ಕಾರ್ಯದರ್ಶಿ ಯಶವಂತ್ ಸಿ. ಅಮೀನ್, ಕೋಶಾಧಿಕಾರಿ ಮೋಹನ್‌ದಾಸ್ ಶ್ರೀಯನ್ ಮೊದಲಾದವರು ಉಪಸ್ಥಿತರಿದ್ದರು.

ದೀಪ ಬೆಳಗಿಸುವುದರ ಮೂಲಕ ಈ ಧಾರ್ಮಿಕ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಅಧ್ಯಕ್ಷ ದಯಾನಂದ ಸಿ. ಅಂಚನ್ ಅತಿಥಿ ಗಣ್ಯರನ್ನು ಸ್ವಾಗತಿಸಿದರು. ದೇವಾಲಯದ ಇತಿಹಾಸವನ್ನು ತೆರೆದಿಟ್ಟು, ಅತಿಥಿ ಗಣ್ಯರನ್ನು, ಸನ್ಮಾನಿತರನ್ನು, ದಾನಿಗಳನ್ನು ಪರಿಚಯಿಸಿ ಸಂಪೂರ್ಣ ಸಭಾ ಕಾರ್ಯಕ್ರಮವನ್ನು ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಡಾ. ಸುರೇಂದ್ರ ಕುಮಾರ್ ಹೆಗ್ಡೆ ನಿರೂಪಿಸಿ, ವಂದಿಸಿದರು.

ಕಾರ್ಯಕ್ರಮದ ಮೊದಲಿಗೆ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಕಲಾ ಮಿತ್ರ ಮಂಡಳಿ ಸಾಕಿನಾಕ ಅವರಿಂದ 'ಶ್ರೀ ಕಟೀಲು ಕ್ಷೇತ್ರ ಮಹಾತ್ಮೆ' ತುಳು ಯಕ್ಷಗಾನವು ಪ್ರದರ್ಶಿಸಲ್ಪಡಲ್ಪಟ್ಟಿತು. ಸಭಾ ಕಾರ್ಯಕ್ರಮದ ಬಳಿಕ ಯಕ್ಷಗಾನವನ್ನು ಮುಂದುವರಿಸಲಾಯಿತು. ಕಾರ್ಯಕ್ರಮದ ಮಧ್ಯೆ ಲಘು ಉಪಾಹಾರ ಹಾಗೇ ಕಾರ್ಯಕ್ರಮದ ಕೊನೆಯಲ್ಲಿ ಪ್ರಸಾದಾರ್ಥವಾಗಿ ಸಾರ್ವಜನಿಕ ಅನ್ನಸಂತರ್ಪಣೆಯ ವ್ಯವಸ್ಥೆಯನ್ನು ಮಾಡಲಾಗಿತ್ತು.

ಮೆಸ್ಸಿ, ಅರ್ಜೆಂಟೀನಾ ವಿರುದ್ಧ ದೂರು ದಾಖಲಿಸಿದ ಅಲ್ಜೀರಿಯಾ



ಕಾನ್ಸಾಸ್, ಜೂ. 20 - ಪ್ರಮುಖ ಬೆಳವಣಿಗೆಯೊಂದರಲ್ಲಿ, ಪ್ರಸಕ್ತ ನಡೆಯುತ್ತಿರುವ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ವಿರುದ್ಧದ ಪಂದ್ಯದಲ್ಲಿ ರೆಫರಿಯ ನಿರ್ಧಾರಾದ ಆರೋಪದ ಮೇಲೆ ಅಲ್ಜೀರಿಯಾ ಫುಟ್ಬಾಲ್ ಫೆಡರೇಶನ್(ಎಎಫ್ಎಫ್) ಅಧಿಕೃತವಾಗಿ ಫಿಫಾಗೆ ದೂರು ದಾಖಲಿಸಿದೆ.

ಈ ಪಂದ್ಯದಲ್ಲಿ ಲಿಯೋನೆಲ್ ಮೆಸ್ಸಿ ಹ್ಯಾಟ್ರಿಕ್ ಗೋಲು ಗಳಿಸಿ ವಿಶ್ವಕಪ್ ಇತಿಹಾಸದಲ್ಲಿ ಜಂಟಿಯಾಗಿ 16 ಗೋಲುಗಳನ್ನು ಗಳಿಸುವ ಮೂಲಕ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಆದಾಗ್ಯೂ, ಈ ಪಂದ್ಯದಲ್ಲಿ ಮೆಸ್ಸಿ ಮಾಡಿದ ತಪ್ಪಿಗೆ ರೆಡ್ ಕಾರ್ಡ್ ನೀಡದರ ಬಗ್ಗೆ ಎಎಫ್ಎಫ್ ದೂರು ನೀಡಿದೆ.

ಪಂದ್ಯದಲ್ಲಿ ಮೆಸ್ಸಿ ಅಲ್ಜೀರಿಯಾದ ಐಸಾ ಮಂಡಿ ಅವರ ಕಾಲಿಗೆ ತುಳಿದು ಅವರನ್ನು ನೆಲಕ್ಕೆ ಬೀಳಿಸಿದ್ದರು. ಈ ವೇಳೆ ಹಲವರು ಮೆಸ್ಸಿಗೆ ರೆಡ್ ಕಾರ್ಡ್ ನೀಡಬಹುದೆಂದು ಭಾವಿಸಿದ್ದರು. ಆದರೆ ಅರ್ಜೆಂಟೀನಾದ ನಾಯಕನ ವಿರುದ್ಧ ರೆಫರಿ ಯಾವುದೇ ಶಿಸ್ತು ಕ್ರಮ ಕೈಗೊಳ್ಳದ ಕಾರಣ, ಎಎಫ್ಎಫ್ ಫಿಫಾಗೆ ದೂರು ನೀಡಿದೆ.

ಈ ದೂರು ಮುಖ್ಯವಾಗಿ ಮೆಸ್ಸಿಯ ಸವಾಲಿಗೆ ಸಂಬಂಧಿಸಿದೆ, ಏಕೆಂದರೆ ಅವರಿಗೆ ರೆಡ್ ಕಾರ್ಡ್ ನೀಡಬೇಕೆಂದು ಎಲ್ಲರ ಅಭಿಪ್ರಾಯ. ಅರ್ಜೆಂಟೀನಾ ತಂಡ ಬಲಿಷ್ಠವಾಗಿಲ್ಲ ಎಂದು ನಾವು ಹೇಳುತ್ತಿಲ್ಲ, ಆದರೆ ಅನ್ಯಾಯದ ಎದುರು ನಾವು ಮೌನವಾಗಿರಲು ಸಾಧ್ಯವಿಲ್ಲ ಎಂದು ಎಎಫ್ಎಫ್ ದೂರಿನಲ್ಲಿ ಉಲ್ಲೇಖಿಸಿದೆ.

ಅರ್ಜೆಂಟೀನಾ ಮುಂದಿನ ಪಂದ್ಯದಲ್ಲಿ ಜೋರ್ಡಾನ್ ತಂಡವನ್ನು ಎದುರಿಸಲಿದೆ. ಜೂನ್ 28 ರಂದು ಆರ್ಲಿಂಗ್ಟನ್‌ನ ಡಲ್ಲಾಸ್ ಕ್ರೀಡಾಂಗಣದಲ್ಲಿ ಎರಡೂ ತಂಡಗಳು ಮುಖಾಮುಖಿಯಾಗಲಿದ್ದು, ಎರಡೂ ತಂಡಗಳು ತಮ್ಮ ಅತ್ಯುತ್ತಮ ಪ್ರದರ್ಶನ ನೀಡುವ ಭರವಸೆಯಲ್ಲಿವೆ. ತಮ್ಮ ಗುಂಪಿನಲ್ಲಿ ಮೊದಲ ಸ್ಥಾನದಲ್ಲಿರುವ ಅರ್ಜೆಂಟೀನಾ ತಂಡವು ಪಂದ್ಯಾವಳಿಯ ಎರಡನೇ ಗೆಲುವನ್ನು ಗುರಿಯಾಗಿಸಿಕೊಂಡಿದೆ. ಹಾಲಿ ಚಾಂಪಿಯನ್ ಆಗಿ ಕಣಕ್ಕಿಳಿದಿರುವ ಮೆಸ್ಸಿಯ ಪ್ರದರ್ಶನದ ಮೇಲೆ ಮತ್ತೆ ಹೆಚ್ಚಿನ ನಿರೀಕ್ಷೆ ಇರಿಸಲಾಗಿದೆ. ವಿಶೇಷವಾಗಿ ತನ್ನ ಮೊದಲ ಪಂದ್ಯದಲ್ಲಿ ಹ್ಯಾಟ್ರಿಕ್ ಗಳಿಸಿರುವ ಮೆಸ್ಸಿ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ.

Bharat Co-operative Bank (Mumbai) Ltd
MULTI-STATE SCHEDULED BANK

Dear Customers,


Due to unavoidable circumstances, the **shifting of our Malad (West) Branch**, originally scheduled for 23rd June, 2026 has been rescheduled to **Friday, 3rd July 2026**.

The branch will continue to operate normally from its current premises until 2nd July, 2026.

We sincerely regret the inconvenience caused and appreciate your continued cooperation.

malad@bharatbank.bank.in | 8657895514 / 15 | bharatbank.bank.in

SHRADHANJALI



SHRI N. JAYARAM HEGDE
(Ninjoor Kotrabettu)
Birth : 30-10-1942 Death : 11-06-2026

With profound grief and a heavy heart, we announce the peaceful passing of our beloved N. Jayaram Hegde. He will be deeply missed and forever remembered.

Deeply Mourned by:
Smt. Sarala Hegde (Wife)
Reena, Veena & Reeta (Daughters)
Chirag Warty (Son-in-law)
Sanya, Varish & Vihan (Grandchildren)

Kindly join us for UTTARAKRIYA on 23.06.2026 at 12 noon at Pejawar Mutt, Road No. 4, Prabhat Colony, Santacruz (E), Mumbai - 400055.

ಸವಿನೆನಪು



ಶ್ರೀಮತಿ ಜಯಶ್ರೀ ನವೀನ್ ಶೆಟ್ಟಿ
(ಬಂಟಕಲ್ಲು ಪಂಜಿಮಾರು " ಲಕ್ಷ್ಮಿ ನಿವಾಸ ")

ಜನನ: 14-06-1968 ನಿಧನ: 21-06-2020

ನೆನಪೆಂದರೆ ಜೀವಭಾವ, ನೆನಪೆಂದರೆ ಭಾವಜೀವ...
ಜೀವ ಮರೆಯಾಗಿ ಸರಿದರೂ ವರುಷ 6...
ಭಾವವೇ ಜೀವವಾಗಿ ನಮ್ಮೊಳಗಿರಲಿದೆ ಎಂದೆಂದೂ.

NAVEEN S. SHETTY (HUSBAND)
PRITHVI N. SHETTY (SON)
All Family Members
MANASA RESTO - BAR
BHANDUP, MUMBAI-400078

5th Year Remembrance



Death: 21.6.2021

Bajpe Pejavara Paddodiguthu
Shri Sanjeeva M. Shetty
Hotel Janta Restaurant & Bar, Kandivali (E) Mumbai

You have always been our source of inspiration and guidance. Your presence will always remain in our hearts and thoughts. May your departed soul rest in peace.

-: Deeply Missed & Fondly Remembered by :-
Dr. Suraj S. Shetty (Son)
Mrs. Vidhya S. Shetty (Daughter-In-Law)
Mrs. Kirthana V. Shetty (Daughter)
Mr. Vidyasagar B. Shetty (Son-In-Law)
Mrs. Sahana H. Ballal (Daughter)
Mr. Harishchandra Ballal (Son-In-Law)
Nisarg S. Shetty, Shaiv V. Shetty, Ronan V. Shetty
Yashi H. Ballal, Isham H. Ballal (Grand Children)

ಶ್ರದ್ಧಾಂಜಲಿ



ನಿಧನ : 09-06-2026

Shri Babu Chowta
Vice President :
Shree Durga Parameshwari Ayyappa Bhakta Vrinda, Dombivli

ನಮ್ಮ ಸಂಸ್ಥೆಯ ಉಪಾಧ್ಯಕ್ಷರಾಗಿ ಸಂಸ್ಥೆಯ ಏಳಿಗೆಗೆ ಬಹಳಷ್ಟು ಶ್ರಮಿಸಿದ ತಮ್ಮ ಅಗಲುವಿಕೆ ಸಂಸ್ಥೆಗೆ ತುಂಬಲಾರದ ನಷ್ಟವಾಗಿದೆ. ನಮ್ಮನ್ನಗಲಿದ ತಮ್ಮ ದಿವ್ಯಾತ್ಮಕ್ಕೆ ಶ್ರೀ ದುರ್ಗಾಪರಮೇಶ್ವರಿ ತಾಯಿ ಮತ್ತು ಶ್ರೀ ಅಯ್ಯಪ್ಪ ಸ್ವಾಮಿ ಚಿರಶಾಂತಿಯನ್ನು ಕರುಣಿಸಲಿ ನಿಮ್ಮ ಪತ್ನಿ ಮತ್ತು ಮಕ್ಕಳಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸಿ ಅರ್ಪಿಸುವ ಶ್ರದ್ಧಾಂಜಲಿ.

President & All Committee Members
Shree Durga Parameshwari Ayyappa Bhakta Vrinda, Dombivli (W)

HEARTIEST CONGRATULATIONS



Shri. K.P. Shetty Maganthady

on your election as

President of
MULUND BUNTS

Your dedication, leadership, and commitment to the community have earned you this well-deserved honour. We wish you a successful and inspiring tenure and are confident that under your guidance, the Sangha will continue to grow and achieve new milestones

WITH BEST WISHES,

Shri. Kushal C. Bhandary Hotel Samudra Restaurant &Bar Thane Ex President - Thane Bunts	Shri. Rajesh Shetty Director- Thunga Hospitals, Trustee & Ex President JAVAB	Shri. Sudarshan Hegde Trustee Bharat college of Engineering	Shri. Manmohan Konde, Aikala Bhava Sachitech Engg Company
Shri. Satish Shetty Pajir Guthu	Shri. Priyaranjan Bhandary Director -Techno drive Engg pvt ltd . Mulund	Shri. Jeevan Shetty Anagalli	Shri. Venugopal M Shetty Gen Secretary Mulund Bunts
Shri. Hariprasad shetty Verizon Industries Taloja	Shri. Sanjith Shetty Mulki	Shri. Sandarsh Chowta Mulund	Shri. Ajith Shetty Anagalli

HEARTIEST CONGRATULATIONS

BUNTAE



Shri. K.P. Shetty Maganthady

on your election as

President of
MULUND BUNTS

Your dedication, leadership, and commitment to the community have earned you this well-deserved honour. We wish you a successful and inspiring tenure and are confident that under your guidance, the Sangha will continue to grow and achieve new milestones

WITH BEST WISHES,

- Shri. NAGRIGUTHU VIVEK SHETTY — PRESIDENT
- Shri. RAJESH B. SHETTY — VICE PRESIDENT
- Shri. RATAN MADA — TREASURER
- Shri. PRAKASH ALVA — JOINT SECRETARY

Advisory board and members of
Bunts association of Architects and Engineers Mumbai